ಮಂಗಳೂರು
ಬುಧವಾರ, 18 ಮಾರ್ಚ್ 2026
ಸಂಪುಟ 47, ಸಂಚಿಕೆ 349 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ | ೦೭
ವಿಪಕ್ಷ ಸದಸ್ಯರ ಅಮಾನತು ರದ್ದು: ಬಿರ್ಲಾ | ೦೭
ಮಕ್ಕಳಿಗೆ ಉತ್ತಮ ಶಿಕ್ಷಣ ಅತ್ಯವಶ್ಯ | ೦೭

ಅಫ್ಘಾನ್ ಸೇನಾ ನೆಲೆಗಳ ಮೇಲೆ ಪಾಕ್ ವೈಮಾನಿಕ ದಾಳಿ

ಅಮಾನುಷ ದಾಳಿ



ಇಸ್ಲಾಮಾಬಾದ್: ಅಫ್ಘಾನಿಸ್ತಾನದ ಮಿಲಿಟರಿ ನೆಲೆಗಳು ಮತ್ತು ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದೆ. ಈ ವೇಳೆ ಕಾಬೂಲ್‌ನಲ್ಲಿರುವ ಆಸ್ಪತ್ರೆ ಗುರಿಯಾಗಿಸಿ ಪಾಕ್ ನಡೆಸಿದ ದಾಳಿಯಲ್ಲಿ ಕನಿಷ್ಠ 400 ಮಂದಿ ಮೃತಪಟ್ಟಿದ್ದಾರೆ. 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸುಮಾರು 2,000 ಹಾಸಿಗೆಗಳ ಸಾಮರ್ಥ್ಯವಿರುವ ದೊಡ್ಡ ಆಸ್ಪತ್ರೆಗೆ ಮಂಗಳವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ದಾಳಿ ನಡೆದಿದ್ದು, ಅಫ್ಘಾನಿಸ್ತಾನದ ಇತಿಹಾಸದಲ್ಲೇ ಇದು ಅತ್ಯಂತ ಭೀಕರ ಘಟನೆಗಳಲ್ಲಿ ಒಂದಾಗಿ ದಾಖಲಾಗಿದೆ.

ಆಪರೇಷನ್ ಗಜಬ್ ಲಿಲ್ ಹಕ್: ಫೆ.26ರಂದು ಪ್ರಾರಂಭವಾದ ಆಪರೇಷನ್ ಗಜಬ್ ಲಿಲ್ ಹಕ್‌ನ ಭಾಗವಾಗಿ ಕಾಬೂಲ್ ಮತ್ತು ನಂಗರ್‌ಹಾರ್‌ನಲ್ಲಿ ಈ ದಾಳಿ ನಡೆಸಲಾಗಿದೆ ಎಂದಿರುವ ಪಾಕ್ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್, ತಾಂತ್ರಿಕ ಬೆಂಬಲ ಮೂಲಸೌಕರ್ಯ, ಮದ್ದುಗುಂಡು ಡಿಪೋಗಳು ಮತ್ತು 252 ತಾಲಿಬಾನ್ ಪೋಸ್ಟ್‌ಗಳನ್ನು ನಾಶಪಡಿಸಲಾಗಿದೆ ಎಂದಿದ್ದಾರೆ. ಈವರೆಗೆ 684 ಅಫ್ಘಾನ್ ತಾಲಿಬಾನ್ ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ ಮತ್ತು 912 ಮಂದಿ ಗಾಯಗೊಂಡಿದ್ದಾರೆ. 229 ಟ್ಯಾಂಕ್‌ಗಳು ಮತ್ತು ಶಸ್ತ್ರಸಜ್ಜಿತ ವಾಹನಗಳು ಸೇರಿದಂತೆ ದೊಡ್ಡ ಪ್ರಮಾಣದ ಮಿಲಿಟರಿ ಆಸ್ತಿಗಳನ್ನು ನಾಶಗೈಯಲಾಗಿದೆ ಎಂದು ವರದಿಯಾಗಿದೆ.

ನಾಗರಿಕರ ಸಾವು ತಿರಸ್ಕರಿಸಿದ ಪಾಕ್: ನಾಗರಿಕ ಸಾವು–ನೋವುಗಳ ಬಗ್ಗೆ ಕೇಳಿಬಂದಿರುವ ಆರೋಪಗಳನ್ನು ಪಾಕಿಸ್ತಾನದ ಮಾಹಿತಿ ಸಚಿವಾಲಯ ತಿರಸ್ಕರಿಸಿದೆ. ➡ಪುಟ ೪

ಪ್ರತಿದಾಳಿ ಎಚ್ಚರಿಕೆ

ಪಾಕಿಸ್ತಾನದ ಬಾಂಬ್ ದಾಳಿಯು ಕಾಬೂಲ್‌ನಲ್ಲಿರುವ ಮಾದಕ ವ್ಯಸನ ಮುಕ್ತ ಕೇಂದ್ರವನ್ನು ಗುರಿಯಾಗಿಸಿ ಕೊಂಡಿದೆ ಎಂದು ಅಫ್ಘಾನ್ ಸರ್ಕಾರದ ವಕ್ತಾರ ಹಮ್ದುಲ್ಲಾ ಫಿತ್ರಾತ್ ಆರೋಪಿಸಿದ್ದಾರೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಕನಿಷ್ಠ 400 ಜನರು ಕೊಲ್ಲಲ್ಪಟ್ಟಿದ್ದಾರೆ ಮತ್ತು 250 ಜನರು ಗಾಯ ಗೊಂಡಿದ್ದಾರೆ. ಈ ದಾಳಿ 3,000 ರೋಗಿಗಳನ್ನು ಹೊಂದಿದ್ದ ಸಂಕೀರ್ಣದ ಐದು ಬ್ಲಾಕ್‌ಗಳನ್ನು ನಾಶ ಪಡಿಸಿದೆ. ಈ ಆಕ್ರಮಣಕ್ಕೆ ಬಲವಾದ ಪ್ರತಿಕ್ರಿಯೆ ನೀಡಲಾಗುವುದು ಎಂದು ತಿಳಿಸಲಾಗಿದೆ.

ಅನಾಗರಿಕ, ಹೇಡಿತನದ ಕೃತ್ಯ: ಭಾರತ ಖಂಡನೆ

ಹೊಸದಿಲ್ಲಿ: ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ಆಸ್ಪತ್ರೆ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ಈ ದಾಳಿಯನ್ನು ಅನಾಗರಿಕ ಮತ್ತು ಹೇಡಿತನದ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಆಸ್ಪತ್ರೆಯನ್ನು ಗುರಿಯಾಗಿಸಿಕೊಂಡು ನಡೆಸಿದ ಈ ದಾಳಿ ಪಾಕಿಸ್ತಾನದ ಆಕ್ರಮಣಕಾರಿ ನಡೆ ಆಗಿದ್ದು, ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲೆ ದಾಳಿ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ. ಇದು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಗಂಭೀರ ಬೆದರಿಕೆಯಾಗಿದೆ ಎಂದು ತಿಳಿಸಿದೆ. ಪವಿತ್ರ ರಂಜಾನ್ ತಿಂಗಳಲ್ಲಿ ಇಂತಹ ದಾಳಿ ನಡೆದಿರುವುದು ಅತ್ಯಂತ ಖಂಡನೀಯ. ಶಾಂತಿ, ಕರುಣೆ ಮತ್ತು ಆತ್ಮಪರಿಶೀಲನೆಯ ಕಾಲದಲ್ಲಿ ಆಸ್ಪತ್ರೆ ಹಾಗೂ ರೋಗಿಗಳನ್ನು ಗುರಿಯಾಗಿಸುವುದಕ್ಕೆ ಯಾವುದೇ ನೈತಿಕ ಸಮರ್ಥನೆ ಇಲ್ಲ ಎಂದು ಪಾಕಿಸ್ತಾನ ವಿರುದ್ಧ ಭಾರತ ಆಕ್ರೋಶ ವ್ಯಕ್ತಪಡಿಸಿದೆ.

ಪ್ರತೀಕಾರದ ಪ್ರತಿಜ್ಞೆ ಮಾಡಿದ ಇರಾನ್

ಟೆಹ್ರಾನ್: ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾವಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್‌ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ. • ವಿವರ ಪುಟ ೨

ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!

ಜೆರುಸಲೇಂ: ಇಸ್ರೇಲ್ ಮಿಲಿಟರಿ



ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. • ವಿವರ ಪುಟ ೨

ನಿಗದಿತ ಸಮಯಕ್ಕೆ ಮಾಹಿತಿ ಒದಗಿಸಲು ಸೂಚನೆ

ಸದನಕ್ಕೆ ಸಿಕ್ಕ ಉತ್ತರದ ವಿವರ ನೀಡಿದ ಸ್ಪೀಕರ್



ವಿಧಾನಸಭೆ: ಸಚಿವರು ಹಾಗೂ ಅಧಿಕಾರಿಗಳು ಶಾಸಕರಿಗೆ ಸರಿಯಾಗಿ ಉತ್ತರ ನೀಡುತ್ತಿಲ್ಲ ಎಂದು ಬೇಸರದಿಂದ ಸೋಮವಾರ ಸಭಾತ್ಯಾಗ ಮಾಡಿದ್ದ ಸ್ಪೀಕರ್ ಯು.ಟಿ. ಖಾದರ್, ಮಂಗಳವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಸಲ್ಲಿಸಲ್ಪಟ್ಟಿವೆ ಎಂದು ಸದನಕ್ಕೆ ವಿವರಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ 22 ಗಮನ ಸೆಳೆಯುವ ಸೂಚನೆಗೆ 6 ಉತ್ತರ, ಆರ್ಥಿಕ ಇಲಾಖೆ 33ಕ್ಕೆ 6 ಉತ್ತರ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇಲಾಖೆ 9ಕ್ಕೆ ಒಂದೂ ಉತ್ತರ ನೀಡಿಲ್ಲ. ಯುವ ಸಬಲೀಕರಣ ಇಲಾಖೆ 10ಕ್ಕೆ ಒಂದೇ ಒಂದು ಉತ್ತರ ನೀಡಿಲ್ಲ. ಸಹಕಾರ ಇಲಾಖೆ 12ಕ್ಕೆ ಒಂದೂ ಉತ್ತರ ನೀಡಿಲ್ಲ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಒಂದಕ್ಕೆ ಒಂದು ಉತ್ತರ ನೀಡಿದೆ. ಜಲಸಂಪನ್ಮೂಲ ಇಲಾಖೆ 33ಕ್ಕೆ 4, ನಗರಾಭಿವೃದ್ಧಿ ಇಲಾಖೆ 23ಕ್ಕೆ 8 ಉತ್ತರಗಳನ್ನು, ಒಳಾಡಳಿತ 35ಕ್ಕೆ 26 ಉತ್ತರಗಳನ್ನು, ಕಾನೂನು ಇಲಾಖೆ 5ಕ್ಕೆ 3 ಉತ್ತರಗಳನ್ನು, ಪ್ರವಾಸೋದ್ಯಮ ಇಲಾಖೆ 25ಕ್ಕೆ ಒಂದು ಉತ್ತರವನ್ನು, ಸಣ್ಣ ನೀರಾವರಿ ಇಲಾಖೆ 19ಕ್ಕೆ 13 ಉತ್ತರಗಳನ್ನು ನೀಡಿದೆ. ಮಾಹಿತಿ ತಂತ್ರಜ್ಞಾನ ಇಲಾಖೆ 2 ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ನೀಡಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಈ ಕುರಿತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ನಿಗದಿತ ಸಮಯಕ್ಕೆ ಉತ್ತರಗಳನ್ನು ನೀಡಲು ಗಮನಹರಿಸುವಂತೆ ಸೂಚಿಸಿದರು.

> ಸಚಿವರು ಹಾಗೂ ಅಧಿಕಾರಿಗಳು ಶಾಸಕರ ಪ್ರಶ್ನೆಗಳಿಗೆ ಉತ್ತರಿಸದೆ ಇರುವುದಕ್ಕೆ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಿದ್ದೇನೆ.
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಚಿವರಿಗೆ ಸಿಎಂ ಪತ್ರ

ಶಾಸಕರಿಗೆ ಸಚಿವರು ಉತ್ತರ ನೀಡದ ಹಿನ್ನೆಲೆಯಲ್ಲಿ ಸಭಾಧ್ಯಕ್ಷ ಖಾದರ್ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಎಲ್ಲ ಸಚಿವರಿಗೆ ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ 1ನೇ ಅಧಿವೇಶನದಿಂದ 9ನೇ ಅಧಿವೇಶನದವರೆಗೆ ಉತ್ತರ ಬಾರದಿರುವ ಇಲಾಖಾವಾರು ಪ್ರಶ್ನೆಗಳ ಪಟ್ಟಿಯನ್ನು ಮತ್ತು ದಿನಾಂಕ:16.03.2026ರಂದು ನಡೆದ ಸದನ ಸಭೆಯಲ್ಲಿ 245 ಪ್ರಶ್ನೆಗಳಲ್ಲಿ ಇದುವರೆಗೂ 90 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಒದಗಿಸಿರುವುದು ಕಂಡು ಬಂದಿರುತ್ತದೆ (ಪಟ್ಟಿ ಲಗತ್ತಿಸಿದೆ). ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನದಲ್ಲಿ ಚರ್ಚಿಸಲು ಅನಾನುಕೂಲತೆಯನ್ನುಂಟುಮಾಡಿರುತ್ತದೆ. ➡ಪುಟ ೪

8 ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ಜ್ಞಾನವು ಮನಸ್ಸು ಮತ್ತು ಹೃದಯವನ್ನು ಪರಿಶುದ್ಧಗೊಳಿಸುವುದು.

▲ರಾಮಕೃಷ್ಣ ಪರಮಹಂಸ

ಗೆದ್ದೋನು ಸೋತ, ಸೋತವನು ಸತ್ತು ಗೆದ್ದ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಲೋಕಾ ಬಲೆಗೆ ಬಿದ್ದ ಪಿಡಿಒ ಮಂಜುಳಾ ಆತ್ಮಹತ್ಯೆ ಯತ್ನ

ಮೈಸೂರು: ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪಿಡಿಒ) ಮಂಜುಳಾ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ದಾಳಿ ವೇಳೆ ಹರಿತವಾದ ಆಯುಧದಿಂದ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ನಡೆದಿದೆ.

• ಪುಟ ೫

ಇಂದಿನಿಂದ ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಬೆಂಗಳೂರು: ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

• ಪುಟ ೪

ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ

• ಪುಟ ೨

ಎನ್‌ಎಚ್‌ಆರ್‌ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ

• ಪುಟ ೨

ಅಕ್ರಮ ಮದ್ಯ ತಡೆಗೆ ಹೊಸ ಕಾಯ್ದೆ?

• ಪುಟ ೫

ರಾಜ್ಯಸಭೆಯಲ್ಲಿ ಬಹುಮತದತ್ತ ಎನ್‌ಡಿಎ

• ಪುಟ ೨

ಕನ್ನಡಿಗರಿಗೆ ಕೇಂದ್ರ ದ್ರೋಹ: ಸಿದ್ದರಾಮಯ್ಯ

• ಪುಟ ೪

ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್

• ಪುಟ ೪

ದಿಢೀರ್ ಬದಲಾಯ್ತು ಹವಾಮಾನ | ಸಿಡಿಲಿಗೆ ರೈತ ಬಲಿ

ಬಿರುಗಾಳಿಸಹಿತ ಆಲಿಕಲ್ಲು ಮಳೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ವಾತಾವರಣ ಏಕಾಏಕಿ ಬದಲಾವಣೆಯಾಗಿದ್ದು, ಹಲವು ಜಿಲ್ಲೆಗಳಲ್ಲಿ ಬಿರುಗಾಳಿ, ಆಲಿಕಲ್ಲು ಸಹಿತ ಭಾರೀ ಮಳೆಯಾಗಿದೆ. ಮಂಗಳವಾರ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಗಳ ಹಲವು ಭಾಗಗಳಲ್ಲಿ ಗುಡುಗುಸಹಿತ ಮಳೆಯಾಗಿದೆ. ಧಾರವಾಡ, ವಿಜಯಪುರ, ವಿಜಯನಗರ, ಕಲಬುರಗಿ, ಕೊಡಗು, ಚಾಮರಾಜನಗರ, ಬೆಂಗಳೂರಿನ ಹಲವೆಡೆ ವ್ಯಾಪಕ ಮಳೆಯಾಗಿದೆ.

ಉತ್ತರ ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. ಸಂಜೆ ಸುರಿದ ಮಳೆಯು ಈ ಪ್ರದೇಶಗಳಲ್ಲಿ ವಾತಾವಾರಣ ಸ್ವಲ್ಪ ತಂಪಾಯಿತು. ಹುಮ್ನಾಬಾದ್ ಮತ್ತು ಚಿಟಗುಪ್ಪ ತಾಲೂಕುಗಳ ಅನೇಕ ಭಾಗಗಳಲ್ಲಿ ಗುಡುಗು ಸಹಿತ ಮಧ್ಯಮ ಮಳೆಯಾಗಿದೆ. ➡ಪುಟ ೪




24 ಗಂಟೆಯಲ್ಲಿ ಮತ್ತಷ್ಟು ಮಳೆ • ಪುಟ ೪

ಗುಜರಾತ್ ತಲುಪಿದ 2ನೇ ಎಲ್‌ಪಿಜಿ ವಾಹಕ ನೌಕೆ ನಂದಾದೇವಿ

ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

ಅಹ್ಮದಾಬಾದ್: ಪಶ್ಚಿಮ ಏಷ್ಯಾದ ಸಂಘರ್ಷ ಮುಂದುವರಿದಿರುವ ನಡುವೆಯೇ, ಭಾರತದ 2ನೇ ಎಲ್‌ಪಿಜಿ ವಾಹಕ ನೌಕೆ 'ನಂದಾದೇವಿ' ಇರಾನ್ ಬಳಿಯ ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಗುಜರಾತಿನ ವಡ್ನೀರ್ ಬಂದರನ್ನು ಬಂದು ತಲುಪಿದೆ. ಈ ನೌಕೆ 46,500 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ಹೊತ್ತು ಬಂದಿದೆ. ಇದರೊಂದಿಗೆ ಭಾರತ ಹೊಂದಿದ್ದ ಅನಿಲ ಕುರಿತ ಆತಂಕ ಇನ್ನಷ್ಟು ತಗ್ಗಿದಂತಾಗಿದೆ.

ಇದಕ್ಕೂ ಮುನ್ನ ಭಾರತೀಯ ನೌಕೆ ಶಿವಾಲಿಕ್ ಸೋಮವಾರ ಮುಂದ್ರಾ ಬಂದರಿಗೆ ಆಗಮಿಸಿತ್ತು. ಇದರ ಬೆನ್ನಿಗೇ ಇದೀಗ 'ನಂದಾದೇವಿ' ಕೂಡ ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿನ ವಡ್ನೀರ್ ಬಂದರಿನಲ್ಲಿ ಲಂಗರು ಹಾಕಿದೆ. ಇದೀಗ ಈ ನೌಕೆಯಿಂದ ಎಲ್‌ಪಿಜಿ ಸರಕನ್ನು ಇನ್ನೊಂದು ನೌಕೆ ಬಿಡಬ್ಲ್ಯು ಬಿರ್ಚ್‌ಗೆ ವರ್ಗಾಯಿಸುವ ಪ್ರಕ್ರಿಯೆ ನಡೆದಿದೆ ಎಂದು ದೀನದಯಾಳ್



ಬಂದರು ಪ್ರಾಧಿಕಾರದ ಅಧ್ಯಕ್ಷ ಸುಶೀಲ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಈ ನೌಕೆ ಭಾಗಶಃ ಅನಿಲವನ್ನು ತಮಿಳುನಾಡಿನ ಎಣ್ಣೂರ್ ಬಂದರು ಮತ್ತು ಪಶ್ಚಿಮ ಬಂಗಾಳದ ಹಲ್ದಿಯಾ ಬಂದರು ಹಾಗೂ ಪೂರ್ವದ ಕರಾವಳಿಗೆ ವಿತರಿಸಲಿದೆ. ➡ಪುಟ ೪

ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

ಬೆಳಗಾವಿ: ಖಾಲಿ ಹುದ್ದೆ ಭರ್ತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಘಟನೆಯ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು. ಎಬಿವಿಪಿ ಕಾರ್ಯಕರ್ತರು ನಗರದ ಸರ್ದಾರ್ ಮೈದಾನದಿಂದ ಮಂಗಳವಾರ ಪಾದಯಾತ್ರೆ ಮೂಲಕ ಚನ್ನಮ್ಮ ವೃತ್ತಕ್ಕೆ ಆಗಮಿಸಿದ ಪ್ರತಿಭಟನಾಕಾರರು ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಸ್ಥಳಕ್ಕೆ ಬೆಳಗಾವಿ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಬರಬೇಕೆಂದು ಎಬಿವಿಪಿ ಕಾರ್ಯಕರ್ತರು ಪಟ್ಟುಹಿಡಿದರು. ಯಾವುದೇ ಅನುಮತಿ ಇಲ್ಲದೆ ಪ್ರತಿಭಟನೆಗೆ ಅವಕಾಶ ಕೊಡುವುದಿಲ್ಲ ಎಂದು ಪೊಲೀಸರು ಮನವರಿಕೆ ಮಾಡುವ ಕೆಲಸ ಮಾಡಿದರು. ➡ಪುಟ ೪

- ಸರ್ಕಾರದ ವಿರುದ್ಧ ಘೋಷಣೆ
- ವಿದ್ಯಾರ್ಥಿಗಳ ಬಂಧನ, ಬಿಡುಗಡೆ

ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಮಾಹಿತಿ

ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

ಬೆಂಗಳೂರು: ಹಿಂದು ಧರ್ಮ ಎಂದಿಗೂ ನಶಿಸುವುದಿಲ್ಲ. ಇದು ಒಳಗೊಳ್ಳುವಿಕೆಯ ತತ್ವವನ್ನು ಹೊಂದಿದೆ. ಸಾವಿರಾರು ವರ್ಷಗಳಿಂದ ಅನೇಕ ಸವಾಲುಗಳನ್ನು ಎದುರಿಸಿಯೂ ಹಿಂದು ಧರ್ಮ ಉಳಿದುಕೊಂಡಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಕೇವಲ ಧರ್ಮದ ಪುನರುತ್ಥಾನ ಮತ್ತು ಸಮಾಜ ಸಂಘಟಿಸುವ ಕೆಲಸ ಮಾಡುತ್ತಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ನೀತಿ ನಿರೂಪಕ ಮಹಾಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಕುರಿತು ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಜಯದಶಮಿ ಉತ್ಸವ ನಡೆದಿದ್ದು, ಆರ್‌ಎಸ್‌ಎಸ್‌ಗೆ ನೂರು ವರ್ಷದ ಹಿನ್ನೆಲೆಯಲ್ಲಿ ನಡೆದ ಹಿಂದು ಸಮಾಜೋತ್ಸವ ಮತ್ತು ಗೃಹಸಂಪರ್ಕ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಆರ್‌ಎಸ್‌ಎಸ್ ಕಾರ್ಯ ಚಟುವಟಿಕೆಗಳ ಬಗ್ಗೆ ಕೋಟ್ಯಂತರ ಮಂದಿ ಮೆಚ್ಚಿಕೊಂಡಿದ್ದಾರೆ. ➡ಪುಟ ೪



ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಕರ್ನಾಟಕ ದಕ್ಷಿಣ ಪ್ರಾಂತದಲ್ಲಿ 18ರಿಂದ 25 ವರ್ಷದೊಳಗಿನ ಯುವಕರಿಗಾಗಿ ನವೋನ್ವೇಷ ಕಾರ್ಯಕ್ರಮ 48 ಸ್ಥಾನಗಳಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಯುವಕರಿಗೆ ಸಂಘದ ಕುರಿತು ಮಾಹಿತಿ ನೀಡಲಾಯಿತು. ➡ಪುಟ ೪

ವಿದ್ಯುತ್ ತಗುಲಿ ಹುಲಿ ಸಾವು

ಗುಂಡ್ಲುಪೇಟೆಯ ಪಡಗೂರಲ್ಲಿ ದುರಂತ

ಗುಂಡ್ಲುಪೇಟೆ: ತಾಲೂಕಿನ ಪಡಗೂರು ಗ್ರಾಮದಲ್ಲಿನ ಅಡವಿ ಮಠಕ್ಕೆ ಹೊಂದಿಕೊಂಡಂತೆ ಇರುವ ಜಮೀನೊಂದರಲ್ಲಿ ವಿದ್ಯುತ್ ಪ್ರವಹಿಸಿ ಒಂದೂವರೆ ಅಥವಾ ಎರಡು ವರ್ಷದ ಹೆಣ್ಣು ಹುಲಿ ಮೃತಪಟ್ಟಿರುವ ಘಟನೆ ನಡೆದಿದೆ.

ಆಂಧ್ರ ಮೂಲದ ರವೀಶ್ ಎಂಬುವರಿಗೆ ಪಡಗೂರು ಗ್ರಾಮದಲ್ಲಿ ಜಮೀನು ಹೊಂದಿದ್ದು ಈ ಜಮೀನನ್ನು ಗ್ರಾಮದ ಪರಮೇಶ್ವರಪ್ಪ ಎಂಬುವರು ಗುತ್ತಿಗೆ ಪಡೆದು ವ್ಯವಸಾಯ ಮಾಡುತ್ತಿದ್ದರು. ಫಸಲು ರಕ್ಷಣೆಗಾಗಿ ಅಕ್ರಮವಾಗಿ ಜಮೀನಿನ ಸುತ್ತ ಹಾಕಲಾಗಿದ್ದ ವಿದ್ಯುತ್ ಬೇಲಿ ಸ್ಪರ್ಶಿಸಿ ಸಾವಿಗೀಡಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ➡ಪುಟ ೪





ಪರಿಹಾರ ಪ್ರತೀಕಾರ ಪ್ರತಿಜ್ಞೆ

ಮಧ್ಯಪ್ರಾಚ್ಯ ಸಂಘರ್ಷ; ಕದನ ವಿರಾಮ ಪ್ರಸ್ತಾಪ ತಿರಸ್ಕರಿಸಿದ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ

ಟೆಹ್ರಾನ್: ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾವಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್‌ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ.

ಎರಡು ಮಧ್ಯಸ್ಥಿಕೆ ರಾಷ್ಟ್ರಗಳ ಮೂಲಕ ರವಾನಿಸಲಾದ ಕದನ ವಿರಾಮ ಮತ್ತು ಉದ್ವಿಗ್ನತೆ ಶಮನದ ಪ್ರಸ್ತಾಪಗಳನ್ನು ಮಂಗಳವಾರ ಅಧಿಕೃತವಾಗಿ ತಿರಸ್ಕರಿಸಲಾಗಿದೆ. ಇರಾನ್‌ನ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಖಮೇನಿ ತಮ್ಮ ಮೊದಲ ವಿದೇಶಾಂಗ ನೀತಿ ಅಧಿವೇಶನದಲ್ಲಿ ಪ್ರತೀಕಾರಕ್ಕೆ ಸಂಬಂಧಿಸಿದಂತೆ ಅತ್ಯಂತ ಕಠಿಣ ಮತ್ತು ಗಂಭೀರ ನಿಲುವನ್ನು ವ್ಯಕ್ತಪಡಿಸಿದ್ದಾರೆ. ನೇಮಕಗೊಂಡ ನಂತರ ಹೊರಡಿಸಿದ ಮೊದಲ ಹೇಳಿಕೆಯಲ್ಲಿ, ಇರಾನ್ ಎಂದಿಗೂ ಹಿಂದೆ ಸರಿಯುವುದಿಲ್ಲ ಮತ್ತು ಯುದ್ಧದಲ್ಲಿ ಹತರಾದವರ ಸೇಡು ತೀರಿಸಿಕೊಳ್ಳಲು ಸಂಪೂರ್ಣ ಶಕ್ತಿಯೊಂದಿಗೆ ಪ್ರತಿರೋಧ ಒಡ್ಡಲಿದೆ ಎಂದು ಅವರು ಪ್ರತಿಜ್ಞೆ ಮಾಡಿದ್ದಾರೆ.

ದಿವಂಗತ ಅಯತೊಲ್ಲಾ ಅಲಿ ಖಮೇನಿ ಸೇರಿದಂತೆ ಯುದ್ಧದಲ್ಲಿ ಮಡಿದ ಪ್ರತಿಯೊಬ್ಬ ನಾಗರಿಕನಿಗಾಗಿ ಪರಿಹಾರ ಪಡೆಯುವುದು ಪ್ರಾಥಮಿಕ ನೀತಿಯಾಗಿ ಘೋಷಿಸಲಾಗಿದೆ. ಪರಿಹಾರ ನೀಡಲು ನಿರಾಕರಿಸಿದರೆ, ಇರಾನ್ ಶತ್ರು ರಾಷ್ಟ್ರಗಳ ಆಸ್ತಿಗಳನ್ನು ವಶಪಡಿಸಿಕೊಳ್ಳಲಿದೆ ಅಥವಾ ಅದೇ ಪ್ರಮಾಣದಲ್ಲಿ ನಾಶಪಡಿಸಲಿದೆ ಎಂದು ಸರ್ವೋಚ್ಚ ನಾಯಕ ಹೇಳಿದ್ದಾರೆ. ಕೆಲವು ಪ್ರತೀಕಾರ ಕ್ರಮಗಳು ಈಗಾಗಲೇ ಜಾರಿಯಾಗಿದ್ದರೂ, ಸೇಡು ತೀರಿಸಿಕೊಳ್ಳುವ ಆದೇಶ ಇನ್ನೂ ಪೂರ್ಣಗೊಂಡಿಲ್ಲ. ಇದು ಪ್ರಮುಖ ಗುರಿಯಾಗಿ ಮುಂದುವರಿಯಲಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.



ಬಾಗ್ದಾದ್‌ನಲ್ಲಿನ ಅಮೆರಿಕ ರಾಯಭಾರ ಕಚೇರಿ ಮೇಲೆ ದಾಳಿ

ಬಾಗ್ದಾದ್‌ನಲ್ಲಿನ ಅಮೆರಿಕ ರಾಯಭಾರ ಕಚೇರಿ ಪ್ರದೇಶವನ್ನು ಗುರಿಯಾಗಿಸಿಕೊಂಡು ಅನೇಕ ಡ್ರೋನ್ ಮತ್ತು ಕ್ಷಿಪಣಿಗಳ ದಾಳಿ ನಡೆದಿದೆ. ದಾಳಿ ನಡೆದ ಕೂಡಲೇ ಸ್ಫೋಟಗಳ ಶಬ್ದಗಳು ಕೇಳಿಬಂದಿದ್ದು, ಕಚೇರಿ ಆವರಣದ ಸುತ್ತಮುತ್ತ ದಟ್ಟ ಹೊಗೆ ಆವರಿಸಿಕೊಂಡಿದೆ. ಕನಿಷ್ಠ ಮೂರು ಡ್ರೋನ್‌ಗಳು ರಾಯಭಾರ ಕಚೇರಿಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಸಿ-ರಾಮ್ ವಾಯು ರಕ್ಷಣಾ ವ್ಯವಸ್ಥೆಯು ಅದರಲ್ಲಿ ಎರಡನ್ನು ಹೊಡೆದುರುಳಿಸಿದರೆ, ಮೂರನೆಯದು ರಾಯಭಾರ ಕಚೇರಿಯ ಆವರಣದೊಳಗೆ ಅಪ್ಪಳಿಸಿತು, ಇದರಿಂದ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿದೆ.

ಜಾಗತಿಕ ಆರ್ಥಿಕತೆಗೆ ಆತಂಕ

ಹಾರ್ಮುಜ್ ಜಲಸಂಧಿಯ ಪ್ರಾಯೋಗಿಕ ಮುಚ್ಚುವಿಕೆ ಜಾಗತಿಕ ಆರ್ಥಿಕತೆಯನ್ನು ಆತಂಕಗೊಳಿಸಿದೆ. ಇದರಿಂದ ಇಂಧನದ ಬೆಲೆಗಳು ಏರಿಕೆ ಕಾಣುತ್ತಿವೆ, ಬಡ ದೇಶಗಳಲ್ಲಿ ಆಹಾರ ಕೊರತೆ ಉಂಟಾಗುವ ಭೀತಿ ಇದೆ, ದುರ್ಬಲ ರಾಷ್ಟ್ರಗಳು ಅಸ್ಥಿರಗೊಳ್ಳುತ್ತಿವೆ ಮತ್ತು ಗ್ರಾಹಕರಿಗೆ ಬೆಲೆಗಳನ್ನು ಕಡಿಮೆ ಮಾಡುವ ಕೇಂದ್ರ ಬ್ಯಾಂಕ್‌ಗಳ ಪ್ರಯತ್ನಗಳನ್ನು ಸಂಕೀರ್ಣಗೊಳಿಸುತ್ತಿದೆ. ಕೆಲವು ಹಡಗುಗಳು ಮಾತ್ರ ಜಲಸಂಧಿಯನ್ನು ದಾಟುತ್ತಿವೆ. ಮುಖ್ಯವಾಗಿ ಇರಾನ್‌ನವು, ಹಾಗೆಯೇ ಭಾರತ ಮತ್ತು ಟರ್ಕಿಯಂತಹ ಇತರ ದೇಶಗಳ ಹಡಗುಗಳೂ ಸೇರಿವೆ. ಇರಾನ್ ಇದನ್ನು ತಾಂತ್ರಿಕವಾಗಿ ತೆರೆದಿಟ್ಟಿದ್ದೇವೆ ಎಂದು ಹೇಳಿದರೂ, ಅಮೆರಿಕ, ಇಸ್ರೇಲ್ ಮತ್ತು ಅವರ ಮೈತ್ರಿಕೂಟದ ರಾಷ್ಟ್ರಗಳಿಗೆ ಮಾತ್ರ ಅವಕಾಶ ಇಲ್ಲ ಎಂದು ಹೇಳಿದೆ. ಇರಾಕ್ ತನ್ನ ಹಡಗುಗಳಿಗೆ ಮಾರ್ಗ ಒದಗಿಸುವ ಕುರಿತು ಇರಾನ್ ಜತೆ ಮಾತುಕತೆ ನಡೆಸುತ್ತಿದೆ ಎಂದು ಮಂಗಳವಾರ ತಿಳಿಸಿದೆ.

ರಷ್ಯಾಗೆ ಹಾರಿದ ಮೊಜ್ತಬಾ?

ಫೆಬ್ರವರಿ 28 ರಂದು ನಡೆದ ವೈಮಾನಿಕ ದಾಳಿಯಲ್ಲಿ ತಂದೆಯ ಮರಣದ ನಂತರ, ಸರ್ವೋಚ್ಚ ನಾಯಕನ ಆರೋಗ್ಯದ ಬಗ್ಗೆ ವರದಿಗಳು ಹೊರಬಂದಿವೆ. 56 ವರ್ಷದ ಅವರು ತೀವ್ರವಾಗಿ ಗಾಯಗೊಂಡಿದ್ದು, ರಷ್ಯಾ ಮಿಲಿಟರಿ ವಿಮಾನದ ಮೂಲಕ ವೈದ್ಯಕೀಯ ಚಿಕಿತ್ಸೆಗಾಗಿ ಮಾಸ್ಕೋಗೆ ವರ್ಗಾಯಿಸಲಾಗಿದೆ ಎಂದು ಕುವೈತ್‌ನ ಅಲ್-ಜರಿದಾ ಪತ್ರಿಕೆ ವರದಿ ಮಾಡಿದೆ. ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವೈಯಕ್ತಿಕ ಪ್ರಸ್ತಾವದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್, ಈ ವರದಿಗಳನ್ನು ದೃಢಪಡಿಸಿಲ್ಲ, ಆದರೆ ನಿರಾಕರಿಸಿಯೂ ಇಲ್ಲ. ಉಕ್ರೇನ್ ಯುದ್ಧದ ನಂತರ ರಷ್ಯಾ ಮತ್ತು ಇರಾನ್ ನಡುವೆ ಮಿಲಿಟರಿ ಸಹಕಾರ ಹೆಚ್ಚಾಗಿದ್ದು, ಈಗಿನ ಪರಿಸ್ಥಿತಿಯಲ್ಲಿ ಇದು ಪಾಶ್ಚಿಮಾತ್ಯ ದೇಶಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಟ್ರಂಪ್‌ಗೆ ಮತ್ತೊಂದು ಮುಖಭಂಗ

ಮಧ್ಯಪ್ರಾಚ್ಯ ಯುದ್ಧದ ಭೀಕರತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕರೆಗೆ ಮಿತ್ರಪಕ್ಷಗಳು ಓಗೊಡದೆ ಅಮೆರಿಕ ನಗೆಪಾಟಲಿಗೀಡಾಗಿದೆ. ಈ ಬೆನ್ನಲ್ಲೇ ಇರಾನ್ ಮೇಲಿನ ದಾಳಿ ವಿರೋಧಿಸಿ ಅಮೆರಿಕ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ನಿರ್ದೇಶಕ ಜೋ ಕೆಂಟ್ ಅವರು ಮಂಗಳವಾರ ರಾಜೀನಾಮೆ ಘೋಷಿಸಿದ್ದಾರೆ.

ಅಮೆರಿಕ ಉಗ್ರ ನಿಗ್ರಹ ಕೇಂದ್ರದ ನಿರ್ದೇಶಕ ರಾಜೀನಾಮೆ



ಇರಾನ್ ಯುದ್ಧವನ್ನು ವಿರೋಧಿಸಿ ರಾಜೀನಾಮೆ ನೀಡಿದ ಮೊದಲ ಮತ್ತು ಅತ್ಯಂತ ಹಿರಿಯ ಟ್ರಂಪ್ ಆಡಳಿತದ ಅಧಿಕಾರಿಯಾಗಿದ್ದಾರೆ. ಫೆ.28ರಂದು ಅಮೆರಿಕ-ಇಸ್ರೇಲ್ ನೇತೃತ್ವದ ವಾಯುದಾಳಿಯಿಂದ ಭುಗಿಲೆದ್ದ ಇರಾನ್‌ನಲ್ಲಿನ ಯುದ್ಧವನ್ನು ತಾನು ಇನ್ನು ಮುಂದೆ ಬೆಂಬಲಿಸಲು ಸಾಧ್ಯವಿಲ್ಲ ಎಂದು ಕೆಂಟ್ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಹೇಳಿದರು. ಬಹಳ ಚಿಂತನೆಯ ನಂತರ, ನಾನು ಇಂದು ಜಾರಿಗೆ ಬರುವಂತೆ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ನಿರ್ದೇಶಕ ಹುದ್ದೆಗೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ. ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ನನ್ನ ಆತ್ಮಸಾಕ್ಷಿಯಿಂದ ಬೆಂಬಲಿಸಲು ಸಾಧ್ಯವಿಲ್ಲ ಎಂದು ಅವರು ಬರೆದಿದ್ದಾರೆ.



ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!

ಜೆರುಸಲೇಂ: ಇಸ್ರೇಲ್ ಮಿಲಿಟರಿ ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯೂರಿಟಿ ಕೌನ್ಸಿಲ್‌ನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಲಾರಿಜಾನಿ ಮತ್ತು ಬಸಿಜ್ ಪ್ರತಿರೋಧ ಪಡೆಯ ಮುಖ್ಯಸ್ಥ ಗುಲಾಮ್ ರೆಜಾ ಸುಲೈಮಾನಿ ಅವರನ್ನು ಗುರಿಯಾಗಿಸಿಕೊಂಡು ಈ ದಾಳಿಗಳನ್ನು ನಡೆಸಲಾಗಿತ್ತು. ಲಾರಿಜಾನಿ ಮತ್ತು ಸುಲೈಮಾನಿ ಹತ್ಯೆಯಾಗಿದೆ ಎಂದು ಇಸ್ರೇಲಿ ಮಾಧ್ಯಮಗಳು ವರದಿ ಮಾಡಿವೆಯಾದರೂ, ಇರಾನ್ ಅಧಿಕಾರಿಗಳು ಇದನ್ನು ಇನ್ನೂ ದೃಢಪಡಿಸಿಲ್ಲ. ಒಂದು ವೇಳೆ ಇದು ದೃಢಪಟ್ಟರೆ, ಅಯತೊಲ್ಲಾ ಅಲಿ ಖಮೇನಿ ಮರಣದ ನಂತರ ಇರಾನ್ ಆಡಳಿತ ವ್ಯವಸ್ಥೆಯಲ್ಲಿ ಸಂಭವಿಸಿದ ಅತ್ಯಂತ ಉನ್ನತ ಮಟ್ಟದ ಸಾವು ಇದಾಗಲಿದೆ. ಲಾರಿಜಾನಿ ಕಳೆದ ಶುಕ್ರವಾರ ಟೆಹ್ರಾನ್‌ನಲ್ಲಿ ನಡೆದ ಕುದ್ಸ್ ಡೇ ಮೆರವಣಿಗೆಯ ಸಂದರ್ಭದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳ ಮಾಹಿತಿಗಾಗಿ ಅಮೆರಿಕ ಘೋಷಿಸಿದ 10 ಮಿಲಿಯನ್ ಡಾಲರ್ ಬಹುಮಾನದ ಪಟ್ಟಿಯಲ್ಲಿ ಇವರ ಹೆಸರನ್ನು ಇತ್ತೀಚೆಗೆ ಸೇರಿಸಲಾಗಿತ್ತು.



ಇರಾನ್ ಸರ್ಕಾರಿ ಮಾಧ್ಯಮದ ಪ್ರತಿಕ್ರಿಯೆ: ದಾಳಿಯ ನಂತರ ಇರಾನ್ ಸರ್ಕಾರಿ ಮಾಧ್ಯಮ, ಲಾರಿಜಾನಿ ಅವರದ್ದೆಂದು ಹೇಳಲಾದ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದೆ. ಇಸ್ರೇಲ್ ವಿರೋಧಿ ಸಭೆಗಳ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಹೇಳಿಕೆಯನ್ನು ಅದರಲ್ಲಿ ಟೀಕಿಸಲಾಗಿದ್ದು, ವಿದೇಶಿ ಆಕ್ರಮಣದ ವಿರುದ್ಧ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಲಾಗಿದೆ. ಹಿಂದಿನ ಸರ್ವೋಚ್ಚ ನಾಯಕನ ಸಾವಿಗೆ ಕಾರಣವಾದ ಅಮೆರಿಕನ್-ಜಿಯೋನಿಸ್ಟ್ ಆಕ್ರಮಣವನ್ನು ಖಂಡಿಸಿ ಲಾರಿಜಾನಿ ಸೋಮವಾರ ಮುಸ್ಲಿಂ ಜಗತ್ತಿಗೆ ನೀಡಿದ ಸಂದೇಶದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.

ಬೈರೂತ್ ಮೇಲೆ ಇಸ್ರೇಲ್ ದಾಳಿ

ಇಸ್ರೇಲಿ ಸೇನೆ ಮಂಗಳವಾರ ಬೆಳಗ್ಗೆ ಟೆಹ್ರಾನ್‌ನ ವಿವಿಧ ಭಾಗಗಳ ಮೇಲೆ ಹೊಸ ದಾಳಿಗಳನ್ನು ನಡೆಸಿರುವುದಾಗಿ ಹೇಳಿದೆ. ಜತೆಗೆ ಲೆಬನಾನ್‌ನ ರಾಜಧಾನಿ ಬೈರೂತ್‌ನಲ್ಲಿ ಹೆಜ್ಬೊಲ್ಲಾ ಉಗ್ರರನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಿದೆ.ಇರಾನ್‌ನಲ್ಲಿ, ಕಮಾಂಡ್ ಕೇಂದ್ರಗಳು, ಕ್ಷಿಪಣಿ ಉಡಾವಣೆ ಸ್ಥಳಗಳು ಮತ್ತು ವಾಯು ರಕ್ಷಣಾ ವ್ಯವಸ್ಥೆಗಳನ್ನು ಗುರಿಯಾಗಿಸಲಾಗಿದೆ ಎಂದು ತಿಳಿಸಿದೆ. ಲೆಬನಾನ್‌ನ ಮೇಲಿನ ದಾಳಿಗಳ ಕುರಿತು ಇಸ್ರೇಲ್ ತಕ್ಷಣ ಯಾವುದೇ ವಿವರಗಳನ್ನು ನೀಡಿಲ್ಲ. ಆದರೆ ಲೆಬನಾನ್ ಸೇನೆ ಕಫರ್ ಸಿರ್ ಗ್ರಾಮದಲ್ಲಿ ನಡೆದ ವಾಯು ದಾಳಿಯಲ್ಲಿ ತನ್ನ ಇಬ್ಬರು ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿಸಿದೆ.ಈ ಸಂಘರ್ಷ ಪ್ರಾರಂಭವಾದ ನಂತರದಿಂದ ಇರಾನ್‌ನಲ್ಲಿ 1,300 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಇರಾನ್ ರೆಡ್ ಕ್ರೆಸೆಂಟ್ ತಿಳಿಸಿದೆ. ಕೆಲವು ಇಸ್ರೇಲಿ ಪಡೆಗಳು ದಕ್ಷಿಣ ಲೆಬನಾನ್ ಒಳಗೆ ಪ್ರವೇಶಿಸಿವೆ. ಇದರಿಂದ ದೊಡ್ಡ ಮಟ್ಟದ ಆಕ್ರಮಣಕ್ಕೆ ಇಸ್ರೇಲ್ ಸಿದ್ಧವಾಗುತ್ತಿದೆ ಎಂಬ ಆತಂಕ ಇದೆ.

ಕಿರುಸುದ್ದಿ

ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ

ಲಖನೌ: ಉತ್ತರ ಪ್ರದೇಶದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ನಿಷೇಧಿತ ಭಯೋತ್ಪಾದಕ ಸಂಘಟನೆ ಐಸಿಸ್‌ನ ಘಟಕದೊಂದಿಗೆ ನಂಟು ಹೊಂದಿದ್ದ ಬಿಡಿಎಸ್ ವಿದ್ಯಾರ್ಥಿಯನ್ನು ಬಂಧಿಸಿದೆ. ಸಹರಾನ್ಪುರ ಜಿಲ್ಲೆಯ ನಿವಾಸಿ ಹ್ಯಾರಿಸ್ ಅಲಿ (19) ಎಂಬ ಆರೋಪಿಯನ್ನು ಮೊರಾದಾಬಾದ್‌ನಿಂದ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಚಿವ ಪುರಿ ಪುತ್ರಿ ವಿಷಯ ಡಿಲೀಟ್‌ಗೆ 24 ಗಂಟೆ ಗಡುವು

ಹೊಸದಿಲ್ಲಿ: ಜೆಫ್ರಿ ಎಪ್ಸ್ಟೀನ್ ಕ್ರಿಮಿನಲ್ ಚಟುವಟಿಕೆಗಳಿಗೆ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರಿಗೆ ನಂಟು ಕಲ್ಪಿಸುವ ಮಾನಹಾನಿಕರ ವಿಷಯಗಳನ್ನು 24 ಗಂಟೆಗಳ ಒಳಗೆ ತೆಗೆದುಹಾಕುವಂತೆ ದಿಲ್ಲಿ ಹೈಕೋರ್ಟ್ ನಿರ್ದೇಶನ ನೀಡಿದೆ. ನ್ಯಾಯಮೂರ್ತಿ ಮಿನಿ ಪುಷ್ಕರ್ಣ ಅವರು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಅಂತಹ ವಿಷಯವನ್ನು ಯಾವುದೇ ರೀತಿಯಲ್ಲಿ ಪ್ರಕಟಿಸದಂತೆ, ಪ್ರಸಾರ ಮಾಡದಂತೆ ನಿರ್ಬಂಧಿಸಿದ್ದಾರೆ.

8 ವಿಪಕ್ಷ ಸದಸ್ಯರ ಅಮಾನತು ರದ್ದು : ಸ್ಪೀಕರ್ ಓಂ ಬಿರ್ಲಾ

ಹೊಸದಿಲ್ಲಿ: ಅನುಚಿತ ವರ್ತನೆಗಾಗಿ ಫೆ.3ರಂದು ಸದನದಿಂದ ಅಮಾನತುಗೊಂಡಿದ್ದ 8 ವಿಪಕ್ಷೀಯ ಸದಸ್ಯರ ಅಮಾನತನ್ನು ಲೋಕಸಭೆಯು ತಕ್ಷಣ ಅನ್ವಯಿಸುವಂತೆ ಮಂಗಳವಾರ ರದ್ದುಗೊಳಿಸಿದೆ. ಏಕಕಾಲಕ್ಕೆ , ಸದನದೊಳಗೆ ಅಥವಾ ಸಂಸತ್ ಭವನದಲ್ಲಿ ಎಲ್ಲೂ ಯಾವುದೇ ಫಲಕಗಳು, ಪೋಸ್ಟರ್‌ಗಳು, ಫೋಟೋಗಳು ಅಥವಾ ಎಐ ಮುಖೇನ ಸೃಜಿಸಿದ ಚಿತ್ರಗಳನ್ನು ಪ್ರದರ್ಶಿಸುವಂತಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಸ್ಪಷ್ಟ ತಾಕೀತು ಮಾಡಿದ್ದಾರೆ. ವಿಪಕ್ಷಕೂಟದ ಎಂಟು ಸದಸ್ಯರ ವಿರುದ್ಧದ ಅಮಾನತನ್ನು ಹಿಂಪಡೆಯಬೇಕು. ಸಂಸತ್ತಿನಲ್ಲಿ ನಡೆದಿರುವ ಘಟನಾವಳಿಗಳು ದುರದೃಷ್ಟಕರ ಮತ್ತು ಸದನದ ಸುಗಮ ಕಲಾಪಗಳಿಗೆ ಸಹಕರಿಸಲು ತನ್ನ ಪಕ್ಷ ಸಿದ್ಧವಿದೆ ಎಂದು ಕಾಂಗ್ರೆಸ್ ಸದಸ್ಯ ಕೆ.ಸುರೇಶ್ ಆರಂಭದಲ್ಲಿ ಸದನವನ್ನು ವಿನಂತಿಸಿದ್ದರು. ವಿಪಕ್ಷಕೂಟದ ಹಲವು ಸದಸ್ಯರು ಇದೇ ಆಗ್ರಹ ಮುಂದಿಟ್ಟಾಗ, ಸದನದ ಸುಗಮ ಕಲಾಪಗಳಿಗಾಗಿ ಲಕ್ಷ್ಮಣ ರೇಖೆ ಎಳೆಯೋ ಅಗತ್ಯವಿದೆ ಎಂದು ಸಂಸದೀಯ ವ್ಯವಹಾರ ಸಚಿವ ಕಿರಣ್ ರಿಜಿಜು ಅಭಿಪ್ರಾಯಪಟ್ಟರು ಮತ್ತು ಇದಕ್ಕೆ ಆಳುವ ಪಕ್ಷ ಮತ್ತು ವಿಪಕ್ಷ ಕೂಟದ ಸದಸ್ಯರು ಸಮ್ಮತಿಸಿದರು. ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯಾಗಿರುವ ಭಾರತದ ಸಂಸತ್ತಿನಲ್ಲಿ ಕಲಾಪಗಳು ತೀರಾ ಸುಗಮವಾಗಿ ನಡೆಯಬೇಕು ಮತ್ತು ಪ್ರತಿಯೋರ್ವರೂ ಇದಕ್ಕೆ ಸಹಕರಿಸಬೇಕೆಂದು ಪ್ರತಿಯೋರ್ವರಿಗೂ ಆಶಯವಿರುತ್ತೆ ಎಂದು ಸಭಾಪತಿ ಬಿರ್ಲಾ ಹೇಳಿದರು.

ಎನ್‌ಎಚ್‌ಆರ್‌ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ

ಹೊಸದಿಲ್ಲಿ: ಸರಿಕೆ ಚುನಾರ್ ಹಾಡು ಮತ್ತು ಅದರ ಕನ್ನಡ ಆವೃತ್ತಿಯಾದ ಸರ್ಸೆ ನಿನ್ನ ಸೆರಗ ಸರ್ಸೆ ಹಾಡುಗಳಲ್ಲಿ ಅಶ್ಲೀಲ ಅಂಶಗಳಿವೆ ಎಂಬ ಕಾರಣಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ನೋಟಿಸ್ ನೀಡಿದ ಬೆನ್ನಲ್ಲೇ, ಎಲ್ಲಾ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳಿಂದ ಈ ಹಾಡನ್ನು ತೆಗೆದುಹಾಕಲಾಗಿದೆ.

ಸಾಮಾಜಿಕ ಕಾರ್ಯಕರ್ತ ವಿನೀತ್ ಜಿಂದಾಲ್ ದಿಲಲಿ ಪೊಲೀಸ್ ಮತ್ತು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ಈ ಬಗ್ಗೆ ಅಧಿಕೃತ ದೂರು ಸಲ್ಲಿಸಿದ್ದರು. ಹಾಡಿನ ಸಾಹಿತ್ಯ ಮತ್ತು ದೃಶ್ಯಗಳು ಲೈಂಗಿಕ ಪ್ರಚೋದಕವಾಗಿದ್ದು, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 294, ಐಟಿ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆಯನ್ನು ಉಲ್ಲಂಘಿಸಿವೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಈ ಕಾನೂನು ಪ್ರಕ್ರಿಯೆಯಲ್ಲಿ ನಿರ್ದೇಶಕ ಪ್ರೇಮ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಗೀತರಚನೆಕಾರ ರಕೀಬ್ ಆಲಂ ಮತ್ತು ಗಾಯಕಿ ಮಂಗ್ಲಿ ಅವರ ಹೆಸರನ್ನು ಉಲ್ಲೇಖಿಸಲಾಗಿದೆ. ಹಾಡನ್ನು ತೆಗೆದುಹಾಕುವ ಮುನ್ನ ಸಾರ್ವಜನಿಕ ವಲಯದಿಂದ ತೀವ್ರ ಟೀಕೆಗಳು ವ್ಯಕ್ತವಾಗಿದ್ದವು. ಗಾಯಕ ಅರ್ಮಾನ್ ಮಲಿಕ್ ಈ ಹಾಡಿನ ಸಾಹಿತ್ಯವನ್ನು ಕನಿಷ್ಠ ಮಟ್ಟದ ಬರವಣಿಗೆ ಎಂದು ಕರೆದಿದ್ದರೆ, ಕ್ರಿಕೆಟಿಗ ಹರ್ಭಜನ್ ಸಿಂಗ್, ಈ ಹಾಡಿನಲ್ಲಿ ನೋರಾ ಫತೇಹಿ ಮತ್ತು ಸಂಜಯ್ ದತ್ ಭಾಗವಹಿಸಿರುವುದನ್ನು ಬಹಿರಂಗವಾಗಿ ವಿರೋಧಿಸಿದ್ದರು. ಯೂಟ್ಯೂಬ್ ಸೇರಿದಂತೆ ಇತರೆ ವೇದಿಕೆಗಳಿಂದ ಹಾಡನ್ನು ತೆಗೆದುಹಾಕಲಾಗಿದ್ದರೂ, ಚಿತ್ರತಂಡದಿಂದ ಈವರೆಗೆ ಯಾವುದೇ ಅಧಿಕೃತ ಹೇಳಿಕೆ ಹೊರಬಂದಿಲ್ಲ.

ಮಕ್ಕಳಿಗೆ ಪೌಷ್ಟಿಕ ಆಹಾರ, ಉತ್ತಮ ಶಿಕ್ಷಣ ಅತ್ಯವಶ್ಯ

ಹೊಸದಿಲ್ಲಿ: ದೇಶದ ಭಾವೀ ಭವಿಷ್ಯವಾಗಿರುವ ಪುಟಾಣಿಗಳಿಗೆ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ಮತ್ತು ಉತ್ತಮ ಗುಣಮಟ್ಟದ ಶಿಕ್ಷಣ ನೀಡೋದು ಅತ್ಯವಶ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಮಕ್ಕಳಿಗೆ ಸುರಕ್ಷಿತ ಮತ್ತು ಭವ್ಯ ಭವಿಷ್ಯ ಕಲ್ಪಿಸುವುದು ಸರಕಾರಕ್ಕೆ ಸೀಮಿತ ಹೊಣೆಯಲ್ಲ, ಬದಲಾಗಿ ಸಮಸ್ತರ ಪಾಲುದಾರಿಕೆಯ ಹೊಣೆಗಾರಿಕೆಯಾಗಿದೆ ಎಂದವರು ಪ್ರತಿಪಾದಿಸಿದ್ದಾರೆ. ಶಿಕ್ಷಕರು, ಹೆತ್ತವರು, ಸಾಮಾಜಿಕ ಸಂಘಟನೆಗಳು, ಕಾರ್ಪೋರೇಟ್ ರಂಗ ಮತ್ತು ಸಮಾಜದ ಪ್ರತಿಯೊಂದು ಸಂಸ್ಥೆಗಳು ಒಗ್ಗಟ್ಟಾಗಿ ಶ್ರಮಿಸಿದಲ್ಲಿ, ಭಾವೀ ಪೀಳಿಗೆಯ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಬಲ್ಲೆವು. ಪ್ರತಿಯೋರ್ವ ಮಗುವಿಗೂ ಉತ್ತಮ ಗುಣಮಟ್ಟದ ಶಿಕ್ಷಣ , ಪೌಷ್ಟಿಕ ಆಹಾರ, ಉತ್ತಮ ಆರೋಗ್ಯ ಹಾಗೂ ಸ್ವಚ್ಛ ಮತ್ತು ಸುರಕ್ಷಿತ ವಾತಾವರಣ ಕಲ್ಪಿಸುವುದು ನಮ್ಮೆಲ್ಲರ ಹೊಣೆ, ಇದನ್ನು ನಾವು ನಿಭಾಯಿಸಲೇಬೇಕು. ಈ ಮೂಲಭೂತ ಅಂಶಗಳಿಂದ ಮಕ್ಕಳ ಸಮಗ್ರ ಬೆಳವಣಿಗೆ ಸಾಧ್ಯ ಎಂದು ರಾಷ್ಟ್ರಪತಿ ಅಭಿಪ್ರಾಯಪಟ್ಟರು. ಅಕ್ಷಯ ಪಾತ್ರ ಪ್ರತಿಷ್ಠಾನದ 5 ಬಿಲಿಯನ್ ಅನ್ನದಾಸೋಹದ ಸಂಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಭಾಗಿಯಾಗಿದ್ದರು.ಉತ್ತಮ ಪೋಷಣೆ ಮತ್ತು ಸುಶಿಕ್ಷಿತ ಭಾರತದಿಂದ ಸಂಪನ್ನ ಭಾರತದತ್ತ ಎಂಬ ಕಾರ್ಯಕ್ರಮದ ಪ್ರಧಾನ ವಿಚಾರವು , 2047ರ ವೇಳೆಗೆ ವಿಕಸಿತ ಭಾರತದ ಸಾಕಾರಕ್ಕೆ ಉತ್ತಮ ಪೋಷಣೆಯುಕ್ತ ಸುಶಿಕ್ಷಿತ ಸಮಾಜದ ಅಗತ್ಯವನ್ನು ಎತ್ತಿಹಿಡಿದಿದೆ ಎಂದರು.



ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ

ಗಾಂಧಿನಗರ: ಏಕರೂಪ ನಾಗರಿಕ ಸಂಹಿತೆ(ಏನಾಸಂ)ಕರಡು ಮಸೂದೆ ರಚನೆಗೆ ಗುಜರಾತ್ ಸರಕಾರ ರಚಿಸಿದ್ದ ಪಂಚ ಸದಸ್ಯ ಸಮಿತಿ, ತನ್ನ ವಿವರವಾದ ಅಂತಿಮ ವರದಿಯನ್ನು ಮಂಗಳವಾರ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಸಲ್ಲಿಸಿದೆ. ರಾಜ್ಯ ಸರಕಾರ ಪ್ರಸಕ್ತ ಬಜೆಟ್ ಅಧಿವೇಶನದಲ್ಲೇ ಏನಾಸಂ ಕರಡು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವ ಸಾಧ್ಯತೆಗಳಿವೆ. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ನ್ಯಾ.ರಂಜನಾ ಪ್ರಕಾಶ್ ದೇಸಾಯಿ ಅಧ್ಯಕ್ಷತೆಯ ಸಮಿತಿ ಮುಖ್ಯಮಂತ್ರಿಗಳಿಗೆ ತನ್ನ ವರದಿ ಸಲ್ಲಿಸುವ ಸಂದರ್ಭ ವರದಿಯ ಪ್ರಸ್ತುತಿ ಮಾಡಿತು. ಗುಜರಾತ್‌ನಲ್ಲಿ ಏನಾಸಂ ಜಾರಿಗೊಳಿಸುವ ನಿಟ್ಟಿನಲ್ಲಿ ವಿವಿಧ ಅಂಶಗಳನ್ನು ಪರಿಗಣಿಸಿ, ಕರಡು ಮಸೂದೆ ಸಿದ್ಧಪಡಿಸಲು, ಕಳೆದ ವರ್ಷ ಫೆಬ್ರವರಿಯಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ವರದಿಯಲ್ಲಿ ರಾಜ್ಯದ ಎಲ್ಲಾ ಧರ್ಮ ಮತ್ತು ಸಮುದಾಯಗಳ ಜನರಿಗೆ ಮದುವೆ, ವಿವಾಹ ವಿಚ್ಛೇದನ, ಆಸ್ತಿಯ ಉತ್ತರಾಧಿಕಾರ, ದತ್ತು ಇತ್ಯಾದಿ ವಿಚಾರಗಳಿಗೆ ಸಮಾನ ಕಾನೂನು ಚೌಕಟ್ಟನ್ನು ಅನ್ವಯಿಸಬೇಕೆಂಬ ಸಲಹೆ ಮುಂದಿಡಲಾಗಿದೆ.

ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಭಾರತದ ಖಾಯಂ ಪ್ರತಿನಿಧಿ ಹರೀಶ್ ಕಿಡಿ

ಇಸ್ಲಾಮೊಫೋಬಿಯಾ ಹೆಸರಲ್ಲಿ ಪಾಕ್ ಕಟ್ಟುಕಥೆ

ವಿಶ್ವಸಂಸ್ಥೆ: ನೆರೆರಾಷ್ಟ್ರಗಳಲ್ಲಿ ಇಸ್ಲಾಮೊಫೋಬಿಯಾ ಹೆಸರಲ್ಲಿ ತಿರುಚಿದ ಕಾಲ್ಪನಿಕ ಕತೆ ಕಟ್ಟುವುದು ಪಾಕಿಸ್ತಾನದ ಹವ್ಯಾಸವೆಂದು ಆರೋಪಿಸಿರುವ ಭಾರತ, ಅಹ್ಮದೀಯರನ್ನು ಕ್ರೂರವಾಗಿ ದಮನಿಸುತ್ತಿರುವ ಅಥವಾ ರಂಜಾನ್ ಸಂದರ್ಭದಲ್ಲೇ ಅಫಘಾನಿಸ್ತಾನ ವಿರುದ್ಧ ವೈಮಾನಿಕ ಬಾಂಬ್ ದಾಳಿ ನಡೆಸುತ್ತಿರುವ ಪಾಕಿಸ್ತಾನ ತನ್ನ ಈ ಕ್ರೂರ ನಡೆಯನ್ನು ಯಾವ ರೀತಿ ಬಣ್ಣಿಸಲಿದೆ ಎಂದು ಪ್ರಶ್ನಿಸಿದೆ.

ಪಾಕಿಸ್ತಾನ ತನ್ನ ದೇಶದಲ್ಲಿನ ಅಹಮದೀಯರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುತ್ತಿದೆ. ಇಸ್ಲಾಮೊಫೋಬಿಯಾ ಹೆಸರಲ್ಲಿ ಕಟ್ಟುಕಥೆ ಕಟ್ಟೋ ಪಾಕಿಸ್ತಾನ, ಅಹ್ಮದೀಯರ ವಿರುದ್ಧದ ತನ್ನ ಸ್ವಂತ ದೌರ್ಜನ್ಯವನ್ನು ಯಾವ ರೀತಿ ಸಮರ್ಥಿಸಿಕೊಳ್ಳುವುದೆಂದು ಯಾರಿಗೂ ಅಚ್ಚರಿಯಾಗದಿರದು ಎಂದು ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿಯಾಗಿರುವ ರಾಯಭಾರಿ ಪರ್ವತನೇಣಿ ಹರೀಶ್ ಕುಟುಕಿದ್ದಾರೆ. ಅಂತಾರಾಷ್ಟ್ರೀಯ ಇಸ್ಲಾಮೊಫೋಬಿಯಾವನ್ನು ಮಟ್ಟಹಾಕುವ ದಿನಾಚರಣೆ ಸಂಸ್ಮರಣಾರ್ಥ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಹರೀಶ್ ಪಾಕಿಸ್ತಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡರು.



ಇಸ್ಲಾಮಿಕ್ ಸಹಕಾರ ಸಂಘಟನೆಯನ್ನು ಭಾರತದ ವಿರುದ್ಧ ಆಯುಧವಾಗಿ ಬಳಸಿಕೊಳ್ಳಲು ವ್ಯವಸ್ಥಿತವಾಗಿ ಪ್ರಯತ್ನಿಸಿರುವ ನೆರೆರಾಷ್ಟ್ರ, ನನ್ನ ತಾಯ್ನಾಡು ಭಾರತದ ವಿರುದ್ಧ ನಿರಂತರವಾಗಿ ಸುಳ್ಳು ಮತ್ತು ಆಧಾರರಹಿತ ಆರೋಪಗಳನ್ನು ಮಾಡುತ್ತಿದೆ. ಮತೀಯ ಅಸ್ಮಿತೆಯನ್ನು ಆಯುಧವಾಗಿ ಬಳಸಿಕೊಳ್ಳುತ್ತಿರುವ ಅಪಾಯಕಾರಿ ಪ್ರವೃತ್ತಿ ಹೆಚ್ಚಾಗುತ್ತಿದೆ. ರಾಷ್ಟ್ರ-ಅರಾಷ್ಟ್ರಗಳು ಮತೀಯ ಅಸ್ಮಿತೆ ಮುಖೇನ ತಮ್ಮ ಸಂಕುಚಿತ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕೂಡ ಗಂಡಾಂತರಕಾರಿ . ಇದನ್ನು ವಿಶ್ವಸಂಸ್ಥೆ ಗಂಭೀರ ಪರಿಗಣಿಸಬೇಕೆಂದು ಹರೀಶ್ ಆಗ್ರಹಿಸಿದ್ದಾರೆ.

ಶಾಂತಿಯುತ ಸಹಬಾಳ್ವೆಗೆ ಕೊಳ್ಳಿ ಇಡುವ ಪಾಕ್ ತಂತ್ರ

ಜಗತ್ತಿನಲ್ಲೇ ಅತ್ಯಧಿಕ ಸಂಖ್ಯೆಯ ಮುಸಲ್ಮಾನರು ಅಂದರೆ 200 ಮಿಲಿಯನ್ ಮುಸಲ್ಮಾನರಿಗೆ ಭಾರತ ತಾಯ್ನೆಲೆಯಾಗಿದೆ. ಜಮ್ಮು ಕಾಶ್ಮೀರ ಸಹಿತ ಭಾರತಾದ್ಯಂತದ ಮುಸಲ್ಮಾನರು ತಮ್ಮ ಪರ ಧ್ವನಿಯೆತ್ತಲು ತಮ್ಮದೇ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಇಂತಹ ಸನ್ನಿವೇಶದಲ್ಲಿ ಮುಸಲ್ಮಾನ ಸಮುದಾಯಗಳ ಸಹಿತ ಭಾರತದಲ್ಲಿ ಎಲ್ಲಾ ಸಮುದಾಯಗಳ ಜನರ ಶಾಂತಿಯುತ ಸಹಬಾಳ್ವೆ ಮತ್ತು ವೈವಿಧ್ಯಮಯ ಬಹುಸಂಸ್ಕೃತಿಯನ್ನು ಹಾಳುಗೆಡಹುವುದೇ ಪಾಕ್ ಪ್ರಚೋದಿತ ಫೋಬಿಯಾ ಹಿಂದಿನ ದುರುದ್ದೇಶವೆಂಬುದು ಸ್ಪಷ್ಟವೆಂದು ಹರೀಶ್ ಆರೋಪಿಸಿದ್ದಾರೆ. ಪಾಕ್‌ನ ತಿರುಚಿದ ಇಸ್ಲಾಮೊಫೋಬಿಯಾವು ಭಾರತದ ಮೂಲಭೂತ ಭಾವನೆಗಳಿಗೆ ತದ್ವಿರುದ್ಧವಾದುದು ಎಂದರು.

11 ಸ್ಥಾನಗಳ ಪೈಕಿ 9 ಎನ್‌ಡಿಎಗೆ | 26 ಅಭ್ಯರ್ಥಿಗಳ ಅವಿರೋಧ ಆಯ್ಕೆ

ರಾಜ್ಯಸಭೆಯಲ್ಲಿ ಬಹುಮತದತ್ತ ಎನ್‌ಡಿಎ

ಹೊಸದಿಲ್ಲಿ: ರಾಜ್ಯಸಭೆ ಚುನಾವಣೆಯಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್‌ಡಿಎ) ಗಮನಾರ್ಹ ಜಯ ಸಾಧಿಸಿದ್ದು, ಮೇಲ್ಮನೆಯಲ್ಲಿ ಬಹುಮತದ ಗಡಿ ತಲುಪುವ ಮೂಲಕ ತನ್ನ ಬಲವನ್ನು ವಿಸ್ತರಿಸಿಕೊಂಡಿದೆ.

ಒಟ್ಟು 37 ಖಾಲಿ ಸ್ಥಾನಗಳ ಪೈಕಿ ಏಳು ರಾಜ್ಯಗಳ 26 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ 11 ಸ್ಥಾನಗಳಿಗೆ ಬಿಹಾರ, ಒಡಿಶಾ ಮತ್ತು ಹರ್ಯಾಣದಲ್ಲಿ ಸೋಮವಾರ ಮತದಾನ ನಡೆದಿದ್ದು, ಎನ್‌ಡಿಎಯ 9 ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದ ಎಲ್ಲಾ ಐದು ಸ್ಥಾನಗಳನ್ನು ಎನ್‌ಡಿಎ ಬಾಚಿಕೊಂಡಿದೆ. ನಿತೀಶ್ ಕುಮಾರ್, ನಿತಿನ್ ನವೀನ್, ರಾಮನಾಥ್ ಠಾಕೂರ್, ಉಪೇಂದ್ರ ಕುಶ್ವಾಹ ಮತ್ತು ಶಿವೇಷ್ ಕುಮಾರ್ ಜಯಗಳಿಸಿದ್ದಾರೆ.

ಒಡಿಶಾದಲ್ಲಿ ಬಿಜೆಪಿ ನಾಲ್ಕು ಸ್ಥಾನಗಳ ಪೈಕಿ ಮೂರನ್ನು ಗೆದ್ದುಕೊಂಡಿದೆ. ಮನಮೋಹನ್ ಸಮಾಲ್, ಸುಜಿತ್ ಕುಮಾರ್ ಮತ್ತು ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿ ದಿಲೀಪ್ ರೇ ಇಲ್ಲಿ ಜಯಭೇರಿ ಬಾರಿಸಿದ್ದಾರೆ. ಬಿಜೆಡಿಯ ಸಂತೃಪ್ ಮಿಶ್ರಾ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಹರ್ಯಾಣದಲ್ಲಿ ಮತದಾನದ ಗೌಪ್ಯತೆ ಉಲ್ಲಂಘನೆಯ ಆರೋಪಗಳ ನಡುವೆಯೇ ಬಿಜೆಪಿಯ ಸಂಜಯ್ ಭಾಟಿಯಾ ಮತ್ತು ಕಾಂಗ್ರೆಸ್‌ನ ಕರಮ್‌ವೀರ್ ಸಿಂಗ್ ಬೌಧ್ ಆಯ್ಕೆಯಾಗಿದ್ದಾರೆ.

ರಾಜ್ಯಸಭೆಯಲ್ಲಿ ಬಿಜೆಪಿ ಶಕ್ತಿ ವೃದ್ಧಿ: 245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಬಹುಮತಕ್ಕೆ 123 ಸ್ಥಾನಗಳ ಅಗತ್ಯವಿದ್ದು, ಎನ್‌ಡಿಎ ಪ್ರಸ್ತುತ 120ರಿಂದ 125 ಸ್ಥಾನಗಳನ್ನು ಹೊಂದಿದೆ. ವಿರೋಧ ಪಕ್ಷಗಳ ಇಂಡಿ ಕೂಟ, 85 ರಿಂದ 95 ಸ್ಥಾನಗಳನ್ನು ಹೊಂದಿದ್ದರೆ, ಉಳಿದ ಸ್ಥಾನಗಳು ಪ್ರಾದೇಶಿಕ ಪಕ್ಷಗಳು, ಪಕ್ಷೇತರರು ಮತ್ತು ನಾಮನಿರ್ದೇಶಿತ ಸದಸ್ಯರ ಬಳಿ ಇವೆ.

ನಾಟಕೀಯ ಬೆಳವಣಿಗೆಗಳಿಂದ ಗಮನ ಸೆಳೆದ ಮೇಲ್ಮನೆ ಸಮರ: ರಾಷ್ಟ್ರ ರಾಜಕಾರಣದಲ್ಲಿ ಮತ್ತೆ ಚರ್ಚೆಗೆ ಕಾರಣವಾದ ರಾಜ್ಯಸಭಾ ಚುನಾವಣೆಗಳು ಅಡ್ಡ ಮತದಾನ, ಮತ ಎಣಿಕೆ ವಿಳಂಬ ಮತ್ತು ರಾಜಕೀಯ ನಾಟಕಗಳಿಂದ ಗಮನ ಸೆಳೆದವು. ಈ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಉತ್ತಮ ಸಾಧನೆ ಮಾಡಿದ್ದು, ಒಡಿಶಾ, ಹರ್ಯಾಣ ಮತ್ತು ಬಿಹಾರ ರಾಜ್ಯಗಳಲ್ಲಿ ಒಟ್ಟು 9 ಸ್ಥಾನಗಳನ್ನು ಗೆದ್ದಿದೆ.

ಹರ್ಯಾಣದಲ್ಲಿ ಮತ ಎಣಿಕೆ ವಿಳಂಬವಾಗಿದ್ದು, ರಾಜಕೀಯ ಆರೋಪ-ಪ್ರತ್ಯಾರೋಪಗಳಿಗೆ ವೇದಿಕೆಯಾಯಿತು. ಅಂತಿಮವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಒಂದು ಸ್ಥಾನ ಗೆದ್ದವು.


ಒಡಿಶಾದಲ್ಲಿ ಅಡ್ಡಮತದಾನ ಭಾರೀ ಸಂಚಲನ ಸೃಷ್ಟಿಸಿತು. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಮೂರು ಸ್ಥಾನಗಳನ್ನು ಗೆದ್ದರೆ, ಬಿಜು ಜನತಾ ದಳಕ್ಕೆ ಒಂದು ಸ್ಥಾನ ಮಾತ್ರ ಸಿಕ್ಕಿತು. ಅಡ್ಡ ಮತದಾನ ಕಾರಣ ಕಾಂಗ್ರೆಸ್ ಮೂವರು ಶಾಸಕರನ್ನು ಪಕ್ಷದಿಂದ ಹೊರಹಾಕಲಾಗಿದೆ.

ಬಿಹಾರದಲ್ಲಿ ಎನ್‌ಡಿಎ ಸಂಪೂರ್ಣ ಮೇಲುಗೈ ಸಾಧಿಸಿದೆ. ಸಿಎಂ ನಿತೀಶ್ ಕುಮಾರ್ ಸೇರಿದಂತೆ ಐದು ಅಭ್ಯರ್ಥಿಗಳು ಜಯ ಸಾಧಿಸಿದರು.

ಕಿರುಸುದ್ದಿ

2026ನೇ ವರ್ಷದ ಕರಿಕ್ಕಕತ್ತಮ್ಮ ಪುರಸ್ಕಾರಕ್ಕೆ ಪ್ರಸಿದ್ಧ ಸಂಗೀತ ನಿರ್ದೇಶಕ ಶ್ರೀಕುಮಾರ್ ತಂಬಿ ಆಯ್ಕೆ

ಕಾಸರಗೋಡು: ಸಾಮಾಜಿಕ, ಕಲಾ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರಸಿದ್ಧ ವ್ಯಕ್ತಿತ್ವಕ್ಕಾಗಿ ನೀಡಲಾಗುವ ಕರಿಕ್ಕಂ ಶ್ರೀ ಚಾಮುಂಡಿ ಕ್ಷೇತ್ರ ಟ್ರಸ್ಟ್ ನೀಡುವ ಕರಿಕ್ಕಕತ್ತಮ್ಮ ಪುರಸ್ಕಾರ –2026ವನ್ನು ಪ್ರಸಿದ್ಧ ಗೀತೆ ರಚನೆಗಾರ, ಸಂಗೀತ ನಿರ್ದೇಶಕ, ಕಿರುತೆರೆ ನಟ, ಚಲನಚಿತ್ರ ನಿರ್ದೇಶಕ, ನಿರ್ಮಾಪಕರೂ ಆದ ಶ್ರೀಕುಮಾರನ್ ತಂಬಿ ಅವರಿಗೆ ನೀಡಲು ತೀರ್ಮಾನಿಸಲಾಗಿದೆ ಎಂದು ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ.



ಮಲೆಯಾಳ ಚಲನಚಿತ್ರ ರಂಗದಲ್ಲಿಯೂ, ಸಾಂಸ್ಕೃತಿಕ ವಲಯದಲ್ಲಿಯೂ ನೀಡಿದ ಸೇವೆಯನ್ನು ಪರಿಗಣಿಸಿ ಶ್ರೀಕುಮಾರನ್ ತಂಬಿ ಅವರನ್ನು ಆಯ್ಕೆ ಮಾಡಲಾಗಿದೆ. ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಫಲಕವನ್ನು ಪ್ರಥಮ ಉತ್ಸವ ದಿನವಾದ ಮಾ.24ರಂದು ಶ್ರೀ ಕ್ಷೇತ್ರ ಸನ್ನಿಧಿಯಲ್ಲಿ ನಡೆಯುವ ಸಾಂಸ್ಕೃತಿಕ ಸಮಾರಂಭದಲ್ಲಿ ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಆರ್ಲೇಕರ್ ಪುರಸ್ಕಾರ ವಿತರಿಸುವರು.

ನಿಟ್ಟೆ ತಾಂತ್ರಿಕ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಮೋಹನ್ ಪೂಜಾರಿಗೆ ಡಾಕ್ಟರೇಟ್

ಕಾರ್ಕಳ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಕಾಲೇಜಿನ ಮೆಕ್ಯಾನಿಕಲ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಮೋಹನ್ ಪೂಜಾರಿ ಅವರು 'ಅಪ್ಗ್ರೇಡೇಶನ್ ಆಫ್ ಲೀನ್ ಆಯರ್ನ್ ಓರ್ ಯುಸಿಂಗ್ ಮೈಕ್ರೋವೇವ್ ಆಂಡ್ ಅಲ್ಟ್ರಾಸೋನಿಕ್ ಪ್ರೀಟ್ರೀಟ್ಮೆಂಟ್' ಎಂಬ ವಿಷಯದ ಬಗೆಗೆ ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್.ಐ.ಟಿ.ಕೆ) ಸುರತ್ಕಲ್ ಡಾಕ್ಟರೇಟ್ ಪದವಿ ಘೋಷಿಸಿದೆ. ಎನ್.ಐ.ಟಿ.ಕೆ. ಮೈನಿಂಗ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ. ಡಾ. ಹರ್ಷ ವರ್ಧನ ಅವರ ಮಾರ್ಗದರ್ಶನದಲ್ಲಿ ಇವರು ಈ ಸಂಶೋಧನೆಯನ್ನು ಪೂರ್ಣಗೊಳಿಸಿದ್ದಾರೆ.



ಶಾರದಾ ವಿದ್ಯಾಲಯದಲ್ಲಿ ಬೇಸಿಗೆ ಶಿಬಿರ

ಮಂಗಳೂರು: ಬೇಸಿಗೆ ರಜೆಯನ್ನು ಸದುಪಯೋಗ ಪಡಿಸಿಕೊಳ್ಳಲು ಶಾರದಾ ವಿದ್ಯಾಲಯ, ಹಲವಾರು ವರ್ಷಗಳಿಂದ 'ವಿಕಸನ' ಬೇಸಿಗೆ ಶಿಬಿರವನ್ನು ಆಯೋಜಿಸುತ್ತಿದ್ದು, ಈ ಶಿಬಿರದಲ್ಲಿ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವಂತಹ ಯೋಗ, ಚಿತ್ರಕಲೆ, ಕಸೂತಿ, ಭಜನೆ, ನೃತ್ಯ ಭಜನೆ, ಜಾನಪದ ನೃತ್ಯ, ಸಂಗೀತ, ಸಂಸ್ಕೃತ ಶ್ಲೋಕಾಭ್ಯಾಸ, ಭಾರತೀಯ ಆಟಗಳು, ಭಾಷಣ, ನಾಟಕ ಮುಂತಾದ ಹತ್ತು ಹಲವು ವಿಷಯಗಳನ್ನು ಒಳಗೊಂಡಿದ್ದು, ಶಿಬಿರವು ಏ. 10ರಿಂದ 11ರ ವರೆಗೆ ಜರಗಲಿದೆ. ಈ ಶಿಬಿರದಲ್ಲಿ ಬೆಳಿಗ್ಗೆ ತಾಜಾ ಹಣ್ಣಿನ ಜ್ಯೂಸ್, ಮಧ್ಯಾಹ್ನದ ಊಟ, ಸಂಜೆ ಲಘುಪಹಾರ ಹಾಗೂ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಒಳಗೊಂಡಿದೆ ಎಂದು ಶಾರದಾ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಡಾ. ಎಂ.ಬಿ. ಪುರಾಣಿಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 0824–2492628, 2493089, 9019730479, 9481319850, 9448545578



ಸೋಮವಾರ ಸಂಜೆ ಸುರಿದ ಭಾರೀ ಗಾಳಿ ಮಳೆಗೆ ತೋರಣೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಚಿಕ್ಕ ಅಲುವಾರದಲ್ಲಿ ಪುಷ್ಪವೇಣಿ ಚಂದ್ರಶೇಖರ್ ಎಂಬವರಿಗೆ ಸೇರಿದ ಮನೆಯ ಮೇಲ್ಛಾವಣಿ ಹಾರಿ ಹೋಗಿದೆ. ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಹಾರ ನೀಡುವ ಭರವಸೆ ನೀಡಿದ್ದಾರೆ.

ಮಾ.20-21ರಂದು ಆಳ್ವಾಸ್ ಕಾಲೇಜಿನಲ್ಲಿ ಭಾಷಾ ವೈವಿಧ್ಯತೆ ಮತ್ತು ದಕ್ಷಿಣ ಭಾರತದ ಅಸ್ಮಿತೆ ರಾಷ್ಟ್ರೀಯ ವಿಚಾರ ಸಂಕಿರಣ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಕಾಲೇಜು ಆವರಣದಲ್ಲಿ ಮಾ. 20 ಮತ್ತು 21ರಂದು 'ಭಾಷಾ ವೈವಿಧ್ಯತೆ ಮತ್ತು ದಕ್ಷಿಣ ಭಾರತದ ಅಸ್ಮಿತೆ' ಎಂಬ ವಿಷಯದಲ್ಲಿ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ.

ಈ ವಿಚಾರ ಸಂಕಿರಣ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಮೂಡುಬಿದಿರೆಯ ಆಳ್ವಾಸ್ ಕಾಲೇಜು (ಸ್ವಾಯತ್ತ) ಕನ್ನಡ ವಿಭಾಗ ಹಾಗೂ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು ಸಹಯೋಗದಲ್ಲಿ ನಡೆಯಲಿದೆ.

ದಕ್ಷಿಣ ಭಾರತದ ಭಾಷೆಗಳು ಮತ್ತು ಸಂಸ್ಕೃತಿಗಳು ಬದಲಾಗುತ್ತಿರುವ ಸ್ಥಿತಿಗತಿಗಳನ್ನು ಚರ್ಚಿಸುವುದರ ಜೊತೆಗೆ, ಈ ಪ್ರದೇಶದಲ್ಲಿ ಭಾಷಾ ವೈವಿಧ್ಯತೆಯ ಮಹತ್ವವನ್ನು ಉಲ್ಲೇಖಿಸುವುದು ವಿಚಾರ ಸಂಕಿರಣದ ಮುಖ್ಯ ಉದ್ದೇಶವಾಗಿದೆ. ದಕ್ಷಿಣ ಭಾರತದಲ್ಲಿ ಬಹುಭಾಷಾ ಪರಂಪರೆ ದೀರ್ಘಕಾಲದಿಂದಲೂ ಇದ್ದರೂ, ಆಡಳಿತಾತ್ಮಕ ಮತ್ತು ರಾಜಕೀಯ ಒತ್ತಡಗಳ ಪರಿಣಾಮವಾಗಿ ಹಲವಾರು ಪ್ರಾದೇಶಿಕ ಭಾಷೆಯ ಹೆಗ್ಗುರುತುಗಳು ಅಂಚಿಗೆ ಸರಿದಿರುವುದರ ಬಗೆಗೆ ಬೆಳಕು ಚೆಲ್ಲಲಿದೆ.

ಭಾಷೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಗೆ ಸಂಬಂಧಿತ ವಿಷಯಗಳ ಕುರಿತು ವಿದ್ವಾಂಸರು ಮತ್ತು ಸಂಶೋಧಕರು ಚರ್ಚೆ ನಡೆಸಲು ಈ ವಿಚಾರ ಸಂಕಿರಣ ವೇದಿಕೆ ಒದಗಿಸಲಿದೆ.

ಮಾ.20ರಂದು ಬೆಳಗ್ಗೆ 11ಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ ವಿಚಾರ ಸಂಕಿರಣ ಉದ್ಘಾಟಿಸುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಆಳ್ವಾಸ್ ಎಜುಕೇಶನ್ ಫೌಂಡೇಶನ್ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಅಧ್ಯಕ್ಷತೆ ವಹಿಸುವರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಪ್ರೊ. ಮಾಧವ ಪೆರಾಜೆ, ಆಳ್ವಾಸ್ ಕಾಲೇಜು ಪ್ರಾಂಶುಪಾಲ ಡಾ. ಕುರಿಯನ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರನಾಥ್ ಗಟ್ಟಿ ಕಾಪಿಕಾಡ್ ಭಾಗವಹಿಸಲಿದ್ದಾರೆ. ಮಾ.21ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಗತ್ತಿಗೇ 'ಗ್ಯಾಸ್ ಟ್ರಬಲ್' | ಕಾರ್ಕಳ ತಾಲೂಕಿನ ಇರ್ವತ್ತೂರಿನ ಕೃಷಿಕ ಕುಟುಂಬ

ಇವರಿಗೆ ಗ್ಯಾಸ್ ಬಗ್ಗೆ ಚಿಂತೆಯಿಲ್ಲ,..!

ಗಣೇಶ್ ನಾಯಕ್, ಸಾಣೂರು

ದಿಗಂತ ವಿಶೇಷ

ಕಾರ್ಕಳ: ದೇಶಾದ್ಯಂತ ಅಡುಗೆ ಅನಿಲದ ಲಭ್ಯತೆ ಹಾಗೂ ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಿದ್ದು, ಸಾಮಾನ್ಯ ಜನರು ಕಂಗೆಟ್ಟಿದ್ದಾರೆ. ಆದರೆ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಇರ್ವತ್ತೂರು ಗ್ರಾಮದಲ್ಲಿ ವಿಶಿಷ್ಟ ಹಾಗೂ ಪ್ರೇರಣದಾಯಕ ಕಥೆ ಇಂದು ಅನೇಕ ಜನರಿಗೆ ಮಾದರಿಯಾಗಿದ್ದಾರೆ.

ಕೃಷಿಕರಾದ ಶ್ರೀನಿವಾಸ್ ಭಟ್ ಅವರ ಕುಟುಂಬ 45 ವರ್ಷಗಳಿಂದ ತನ್ನ ಮನೆಯ ಅಡುಗೆಗೆ ಗೋಬರ್ ಗ್ಯಾಸ್ ಬಳಸಿಕೊಂಡು ಬಂದಿದ್ದಾರೆ. ಇಂದಿನ ದಿನಗಳಲ್ಲಿ ಎಲ್‌ಪಿ ಜಿ ಸಿಲಿಂಡರ್ ಬೆಲೆ ಏರಿಕೆ, ಕೊರತೆ ಮತ್ತು ಅವಲಂಬನೆ ಬಗ್ಗೆ ಎಲ್ಲೆಡೆ ಚರ್ಚೆ ಆಗುತ್ತಿರುವಾಗ ಈ ಕುಟುಂಬ ಬಹಳ ವರ್ಷಗಳಿಂದ ಪರ್ಯಾಯ ಮಾರ್ಗವನ್ನು ಆಯ್ಕೆ ಮಾಡಿದೆ. ಅವರ ಈ ನಿರ್ಧಾರ ಇಂದು ಪರಿಸರ ಸ್ನೇಹಿ ಜೀವನ ಶೈಲಿಗೆ ಉತ್ತಮ ಉದಾಹರಣೆಯಾಗಿದೆ.

ಗೋಬರ್ ಗ್ಯಾಸ್ ಅಂದರೆ ಪಶುಗಳ ಗೋಮಯದಿಂದ ಉತ್ಪಾದನೆಯಾಗುವ ಜೈವಿಕ ಅನಿಲ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಹಸು, ಎಮ್ಮೆ ಸಾಕುವ ಕುಟುಂಬಗಳಿಗೆ ಬಹಳ ಉಪಯುಕ್ತವಾಗುವ ವ್ಯವಸ್ಥೆ.

ಅಡುಗೆಗೆ ಬಳಸುತ್ತಾರೆ..

ಶ್ರೀನಿವಾಸ್ ಭಟ್ ಅವರು ಅವರ ಕುಟುಂಬವು ತನ್ನ ಮನೆಯಲ್ಲಿರುವ ಪಶುಗಳಿಂದ ದೊರೆಯುವ ಗೋಮಯವನ್ನು ಬಳಸಿ ಗೋಬರ್ ಗ್ಯಾಸ್ ಸ್ಥಾಪಿಸಿದ್ದಾರೆ. ಪ್ರತಿದಿನ ಸಂಗ್ರಹವಾಗುವ ಗೋಮಯವನ್ನು ವಿಶೇಷ ಟ್ಯಾಂಕ್‌ನಲ್ಲಿ ಸಂಗ್ರಹಿಸಿ ಅದರ ಮೂಲಕ ಉತ್ಪತ್ತಿಯಾಗುವ ಅನಿಲವನ್ನು ಅಡುಗೆಗೆ ಬಳಸಲಾಗುತ್ತಿದೆ.

ಈ ವಿಧಾನವು ಅಡುಗೆ ಅನಿಲ ಒದಗಿಸುವುದು ಮಾತ್ರ ಅಲ್ಲದೆ ಮನೆಯ ಖರ್ಚು ಕೂಡ ಕಡಿಮೆಯಾಗುತ್ತದೆ ಮತ್ತು ಸಿಲೆಂಡರ್ ಗ್ಯಾಸ್‌ನ ಖರೀದಿಯ ಹಣವು ಉಳಿತಾಯ ವಾಗುತ್ತದೆ.

ಗೋಮಯದಿಂದ ಅನಿಲ ಉತ್ಪಾದನೆಯ ನಂತರ ಉಳಿಯುವ ಅವಶೇಷವನ್ನು ಉತ್ತಮ ಸಾವಯವ ಕೃಷಿಗೆ ಸಾವಯವ ಗೊಬ್ಬರವಾಗಿ ಕೃಷಿಗೆ ಬಳಸಲಾಗುತ್ತಿದೆ.





ರೈತರ ಆದಾಯ ಹೆಚ್ಚಿಸಲು ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ವುಗಳಲ್ಲಿ ಗೋಬರ್ ಧನ್ ಯೋಜನೆ ಪ್ರಮುಖವಾದುದು. ಪ್ರಾಮಾಣಿಕವಾಗಿ ದುಡಿಮೆ ಮಾಡಿದಲ್ಲಿ ಲಾಭ ಇದೆ. ನಮಗೆ ಮನಸ್ಸು ಬೇಕು, ಸ್ವಾವಲಂಬಿಯಾಗಿ ಪ್ರಕೃತಿಯ ಒಟ್ಟಿಗೆ ಬಾಳ್ವೆ ಮಾಡುವಂತಹ ಒಂದು ವಿಧಾನವನ್ನು ಅಳವಡಿಕೆ ಮಾಡಿದ್ದಲ್ಲಿ ಖಂಡಿತವಾಗಿಯೂ ವಿದೇಶಿ ಅವಲಂಬನೆಯನ್ನು (ಗ್ಯಾಸ್) ಕಡಿಮೆ ಮಾಡಬಹುದು. ಸ್ವಾಭಿಮಾನದಿಂದ ಬದುಕಲು ಏನು ಬೇಕು ಎಂದು ಕೃಷಿಯಲ್ಲಿ ಅಳವಡಿಸಿಕೊಂಡಲ್ಲಿ ಖರ್ಚು ಕಡಿಮೆ, ಶ್ರಮವು ಕಡಿಮೆ. ಯುವ ಜನಾಂಗ ಈ ದಿಕ್ಕಿಗೆ ಆಲೋಚನೆ ಮಾಡಿ ಒಳ್ಳೆ ರೀತಿಯ ಬದುಕಿನ ವ್ಯವಸ್ಥೆಯನ್ನು ಕಲ್ಪನೆ ಮಾಡಿ ಕೊಂಡರೆ ನಮಗೆ ಅನುಕೂಲ... ದೇಶಕ್ಕೂ ಅನುಕೂಲ...

■ ಶ್ರೀನಿವಾಸ್ ಭಟ್ ಇರ್ವತ್ತೂರು ಕೃಷಿಕರು ಹಾಗೂ ಉಪಾಧ್ಯಕ್ಷರು, ಕಿಸಾನ್ ಸಂಘ, ಉಡುಪಿ ಜಿಲ್ಲೆ.

ದೇಶದ ಅಭಿವೃದ್ಧಿಗೂ ಸಹಕಾರಿ

ರೈತರ ಆದಾಯವನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳಲ್ಲಿ ಪ್ರಮುಖವಾದುದು ಗೋಬರ್ ಧನ್ ಯೋಜನೆ. ಈ ಯೋಜನೆಯ ಉದ್ದೇಶವು ಜೈವಿಕ ತ್ಯಾಜ್ಯಗಳನ್ನು (ಗೊಬ್ಬರ, ಗೋಮಯ) ಸದುಪಯೋಗಪಡಿಸಿಕೊಂಡು ಶಕ್ತಿ ಮತ್ತು ಸಾವಯವ ಗೊಬ್ಬರವನ್ನು ಉತ್ಪಾದಿಸುವುದಾಗಿದೆ. ಕೃಷಿಯನ್ನು ಅಳವಡಿಸಿಕೊಂಡು ಸ್ವಾವಲಂಬನೆಯತ್ತ ಸಾಗುವುದು ವ್ಯಕ್ತಿಗೂ ದೇಶಕ್ಕೂ ಲಾಭಕರವಾಗಿದೆ. ಯುವಜನರು ಕೃಷಿಯತ್ತ ಒಲವು ತೋರಿದರೆ, ದೇಶದ ಆರ್ಥಿಕ ಸ್ಥಿತಿಯೂ ಬಲವಾಗುತ್ತದೆ. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಇದರಿಂದ ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತದೆ ಮತ್ತು ದೇಶದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ.


ಜೈವಿಕ ತ್ಯಾಜ್ಯವನ್ನು ಬಳಸಿ ಬಯೋ ಗ್ಯಾಸ್ ಉತ್ಪಾದನೆ

ಸಾವಯವ ಗೊಬ್ಬರದ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಳ, ರೈತರ ಆದಾಯದಲ್ಲಿ ಹೆಚ್ಚಳ, ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆಗೆ ಉತ್ತೇಜನ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ.

ಗ್ಯಾಸ್ ಬೆಲೆ ಏರಿಕೆಯ ಟೆನ್ಷನ್ ಇಲ್ಲ

ಗ್ಯಾಸ್ ಬೆಲೆ ಏರಿಕೆ, ಗ್ಯಾಸ್ ಸಿಲಿಂಡರ್ ಕೊರತೆ ಎಫೆಕ್ಟ್‌ನ ಟೆನ್ಷನ್ ಇಲ್ಲದೆ ಸ್ವಾವಲಂಬಿಯಾಗಿ ಅಡುಗೆ ಅನಿಲ ಪಡೆದುಕೊಳ್ಳುತ್ತಿರುವ ಶ್ರೀನಿವಾಸ್ ಭಟ್ ಅವರು ಎಲ್ಲರಿಗೂ ಮಾದರಿಯಾಗಿದ್ದಾರೆ.

ಕಲ್ಲಡ್ಕ ಶ್ರೀರಾಮ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ಅಜಾದ್ ಭವನದಲ್ಲಿ 'ವಸಾಹತು ಮನೋಭಾವದಿಂದ ಭಾರತೀಯತೆ ಯೆಡೆಗೆ ಒಂದು ಚಿಂತನೆ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮವು ಮಾ.20 ರಂದು ನಡೆಯಲಿದೆ ಎಂದು ಪುತ್ತೂರು ವಿವೇಕಾನಂದ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಡಾ.ಪ್ರಭಾಕರ ಭಟ್ ತಿಳಿಸಿದ್ದಾರೆ. ಮಂಗಳವಾರ ಬಂಟ್ವಾಳ ಪ್ರೆಸ್ ಕ್ಲಬ್‌ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು ಹಿರಿಯ ಪತ್ರಕರ್ತ ರಂಗನಾಥ್ ಭಾರದ್ವಾಜ್ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದು, ಸಂಸ್ಥೆಯ ಅಧ್ಯಕ್ಷ ಬಿ.ನಾರಾಯಣ ಸೋಮಯಾಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಬಳಿಕ ನಡೆಯುವ ಮೊದಲ ಗೋಷ್ಠಿಯಲ್ಲಿ ಭಾಷೆ, ಧರ್ಮ, ಸಂಸ್ಕೃತಿ ಮತ್ತು ಆಚರಣೆಗಳ ಮೇಲೊಂದು ಇಣುಕುನೋಟ ಎಂಬ ವಿಷಯದ ಬಗ್ಗೆ ಪ್ರಾಧ್ಯಾಪಕಿ ಡಾ.ಆರತಿ ವಿ.ಬಿ,ಎರಡನೇ ಗೋಷ್ಠಿಯಲ್ಲಿ ಆಡಳಿತ ಮತ್ತು ನ್ಯಾಯಾಂಗದ ವ್ಯವಸ್ಥೆ ವಸಾಹತುಭಾವದಿಂದ ಮುಕ್ತವಾಗುವತ್ತ ಎಂಬ ವಿಷಯದ ಬಗ್ಗೆ ಮಾಜಿ ಶಾಸಕ ರಾಜೀವ ಕುಡಚಿ, ಮೂರನೇ ಗೋಷ್ಠಿಯಲ್ಲಿ ಶಿಕ್ಷಣ, ಇತಿಹಾಸದ ಮೇಲೊಂದು ಚರ್ಚೆ ಎಂಬ ವಿಷಯದ ಬಗ್ಗೆ ಚಿಂತಕ ರೋಹಿತ್ ಚಕ್ರತೀರ್ಥ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ವಿಚಾರ ಮಂಡಿಸಲಿದ್ದಾರೆ ಹಾಗೂ 4ನೇ ಗೋಷ್ಠಿಯಲ್ಲಿ ಮುಕ್ತಚಿಂತನೆ ಮತ್ತು ಸಮಾರೋಪದಲ್ಲಿ ಅಖಿಲ ಭಾರತೀಯ ಟೋಳಿ ಸದಸ್ಯ ರಘುನಂದನ್ ಅವರು ಮಾತನಾಡಲಿದ್ದಾರೆ ಎಂದರು. ಕಳೆದ 12 ವರ್ಷಗಳಿಂದ ರಾಷ್ಟ್ರೀಯ ವಿಚಾರಗಳನ್ನು ಮುಂದಿಟ್ಟುಕೊಂಡು ವಿಚಾರ ಸಂಕಿರಣವನ್ನು ಆಯೋಜಿಸಲಾಗಿದ್ದು, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಚಿಂತನ ಮಂಥನ ನಡೆಸಲಾಗಿದೆ ಎಂದು ಡಾ.ಪ್ರಭಾಕರ ಭಟ್ ತಿಳಿಸಿದರು.

ವಸಾಹತುಶಾಹಿ ಮನೋಭಾವದಿಂದ ಹೊರಬಂದು ಸ್ವದೇಶಿ ಚಿಂತನೆ, ಸಂಸ್ಕೃತಿ ಬೆಳೆಸುವ ಮೂಲಕ ಭಾರತೀಯತೆಯತ್ತ ಮರಳುವುದು ಅಗತ್ಯವಾಗಿದ್ದು, ಈ ಕುರಿತಾಗಿ ಚಿಂತನೆ ನಡೆಸುವ ನಿಟ್ಟಿನಲ್ಲಿ 'ವಸಾಹತು ಮನೋಭಾವದಿಂದ ಭಾರತೀಯತೆಯೆಡೆಗೆ ಒಂದು ಚಿಂತನೆ' ಎಂಬ ವಿಷಯ ಮುಂದಿಟ್ಟು ವಿಚಾರ ಸಂಕಿರಣ ನಡೆಸಲಾಗುತ್ತಿದೆ ಎಂದರು.

ಶ್ರೀರಾಮ ವಿದ್ಯಾಕೇಂದ್ರದಲ್ಲಿ ಶಿಶುಮಂದಿರದಿಂದ ಪದವಿ ಕಾಲೇಜಿನ ವರೆಗೆ ಸಂಸ್ಕಾರಯುತ ಶಿಕ್ಷಣದೊಂದಿಗೆ ಇತರ ಗುಣಗಳನ್ನು ಬೆಳೆಸಲು ಬೇಕಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಂಸ್ಥೆ ಹಮ್ಮಿಕೊಳ್ಳುತ್ತಾ ಬಂದಿದೆ. ಯುವಪೀಳಿಗೆಯಲ್ಲಿ ಸಮಾಜಪ್ರಜ್ಞೆಯನ್ನು ಬಿತ್ತಿ ಬೆಳೆಸುವ ಮಹತ್ತರವಾದ ಯೋಜನೆಯನ್ವಯ ಪ್ರತಿ ತಿಂಗಳು ಚಿಂತನ ಕೂಟ, ವರ್ಷಕ್ಕೊಮ್ಮೆ ವಿಚಾರ ಸಂಕಿರಣ ಬಹಳ ಮಹತ್ವದ್ದಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ನಾರಾಯಣ ಸೋಮಯಾಜಿ, ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್ ಕಾಯರ್ ಕಟ್ಟೆ, ಸಂಸ್ಥೆಯ ಸಂಚಾಲಕಿ ಲಕ್ಷ್ಮೀ ರಘುರಾಜ್ ಮೊದಲಾದವರಿದ್ದರು.

ಬೆಳ್ತಂಗಡಿ ಸೊಸೈಟಿ ಹಗರಣ: ತನಿಖೆಗೆ ಸಿಐಡಿ ಆಗಮನ

ಬೆಳ್ತಂಗಡಿ : ಶ್ರೀರಾಮ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಗ್ರಾಹಕರು ಠೇವಣಿ ಇಟ್ಟಿದ್ದ ಸುಮಾರು 40 ಕೋಟಿ ರೂಪಾಯಿ ಹಣವನ್ನು ವಾಪಸ್ ನೀಡದೆ (ವಂಚನೆ) ಹಗರಣ ಆಗಿರುವ ಬಗ್ಗೆ ಮಾ.17 ರಂದು ಬೆಳಗ್ಗೆ ಸೊಸೈಟಿಗೆ ಬೆಂಗಳೂರಿನಿಂದ ಸಿಐಡಿ ತನಿಖಾ ತಂಡ ಆಗಮಿಸಿ ತನಿಖೆ ಆರಂಭಿಸಿದೆ.

ಪ್ರಕರಣದ ವಿವರ

ಬೆಳ್ತಂಗಡಿ ನಗರದ ಜ್ಯೂನಿಯರ್ ಕಾಲೇಜ್ ರಸ್ತೆಯಲ್ಲಿರುವ ರಾಮನಗರದ ವಿ.ಆರ್.ನಾಯಕ್ ಕಾಂಪೌಂಡ್‌ನಲ್ಲಿ ಸುಮಾರು 25 ವರ್ಷಗಳಿಂದ ಏಕೈಕ ಬ್ರಾಂಚ್ ಆಗಿ ಕಾರ್ಯಾಚರಿಸುತ್ತಿರುವ ಶ್ರೀ ರಾಮ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಆಡಳಿತ ಮಂಡಳಿಯವರು ಗ್ರಾಹಕರಿಗೆ ಸೇರಿದ ಠೇವಣಿ ಇಟ್ಟಿದ್ದ ಸುಮಾರು 40 ಕೋಟಿ ರೂಪಾಯಿ ಹಣ ವಾಪಸ್ ಗ್ರಾಹಕರಿಗೆ ನೀಡದೆ ವಂಚನೆ ಮಾಡಿರುವುದು ಸಂಬಂಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ವಂಚನೆಗೊಳಗಾದ ಬೆಳ್ತಂಗಡಿ ನಿವಾಸಿ ದಯಾನಂದ ನಾಯಕ್ ಸೇರಿ ಒಟ್ಟು 13 ಜನ ನೊಂದವರು 22–05–2025 ರಂದು ಸೊಸೈಟಿಯ 14 ಜನರ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಅದರಂತೆ 23–05–2025 ರಂದು ಪ್ರಕರಣ ದಾಖಲಾಗಿತ್ತು. ಈ ಪ್ರಕರಣ ಮಂಗಳೂರು ಪೊಲೀಸ್ ಠಾಣೆಗೆ ಹೋಗಿ ಇದೀಗ ಸಿಐಡಿಗೆ ಹಸ್ತಾಂತರವಾಗಿ ತನಿಖೆ ಆರಂಭವಾಗಿದೆ.

ಪ್ರಕರಣ 14 ಮಂದಿ ಆರೋಪಿಗಳು

2021 ರಿಂದ 2024 ರ ವರೆಗೆ ಬ್ಯಾಂಕ್‌ನಲ್ಲಿ ಜವಾಬ್ದಾರಿಯಲ್ಲಿದ್ದ 40 ಕೋಟಿ ರೂಪಾಯಿ ಹಣ (ವಂಚನೆ) ಹಗರಣದ ರೂವಾರಿಗಳಾದ ಬ್ಯಾಂಕ್ ಸಿ.ಇ.ಒ. ಚಂದ್ರಕಾಂತ್, ಅಧ್ಯಕ್ಷ ಪ್ರಭಾಕರ ಸಿ.ಹೆಚ್, ಉಪಾಧ್ಯಕ್ಷ ಸದಾನಂದ ಎಮ್ ಉಜಿರೆ, ಡೈರೆಕ್ಟರ್‌ಗಳಾದ ವಿಶ್ವನಾಥ ಆರ್.ನಾಯಕ್, ಪ್ರಮೋದ್ ಆರ್.ನಾಯಕ್, ವಿಶ್ವನಾಥ, ಜಗನ್ನಾಥ ಪಿ, ರತ್ನಾಕರ, ಸುಮ ದಿನೇಶ್ ಉಜಿರೆ, ನಯನ ಶಿವಪ್ರಸಾದ್, ಮೋಹನ್ ದಾಸ್ ಕೆ, ಕಿಶೋರ್ ಕುಮಾರ್ ಲಾಯಿಲ, ಬ್ಯಾಂಕ್ ಸಿಬ್ಬಂದಿ ಸರಿತಾ ಎಸ್. ಮತ್ತು ವಿನೋದ್ ಕುಮಾರ್ ಸಿ.ಹೆಚ್. ಸೇರಿ ಒಟ್ಟು 14 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿತ್ತು. ದಯಾನಂದ ನಾಯಕ್, ನಿಧೀಶ್ ಡಿ.ನಾಯಕ್, ಶ್ರದ್ಧಾ ಬಿ, ಮಾಲಿನಿ ಟಿ.ರಾವ್, ತುಕರಾಮ್ ರಾವ್, ಅಕ್ಷಯಾ ಟಿ.ರಾವ್, ಅಕ್ಷತಾ ರಾವ್, ಚೈತ್ರಾ ಭಟ್, ಮೈತ್ರಿ ಭಟ್, ಸ್ವಾತಿ ಭಟ್, ನಂದಕುಮಾರ್, ಬಿ.ಗಣೇಶ್ ಭಟ್, ವಿದ್ಯಾ ಭಟ್ ಸೇರಿ 13 ಮಂದಿ ನೊಂದವರು ದೂರು ನೀಡಿದ್ದರು.

ಹತ್ತು ಮಂದಿಗೆ ನ್ಯಾಯಾಲಯದಿಂದ ನೋಟಿಸ್ ಜಾರಿಯಾಗಿತ್ತು. ಇಲ್ಲವಾದರೆ ರೂ. 30,45,24,278 ಭದ್ರತಾ ಠೇವಣಿ ಇಡಲು ಅವಕಾಶ ನೀಡಲಾಗಿತ್ತು. ಈ ನೋಟಿಸ್ ವಿರುದ್ಧ ಹೈಕೋರ್ಟ್ ಹೋಗಿ ಸ್ಟೇ ತಂದಿದ್ದರು.

ಸಿಐಡಿ ತನಿಖೆ ಆರಂಭ

40 ಕೋಟಿ ವಂಚನೆ ಪ್ರಕರಣವಾಗಿರುವ ಕಾರಣದಿಂದ ಈ ತನಿಖೆಯನ್ನು ಬೆಳ್ತಂಗಡಿ ಪೊಲೀಸರು ಮಂಗಳೂರು ಪೊಲೀಸ್ ಠಾಣೆಗೆ ಹಸ್ತಾಂತರ ಮಾಡಿದ್ದರು ಬಳಿಕ ದಕ್ಷಿಣ ಕನ್ನಡದ ಪೊಲೀಸ್ ವರಿಷ್ಠಾಧಿಕಾರಿಗಳು ಸಿಐಡಿಗೆ ಹಸ್ತಾಂತರಿಸಿದ ಹಿನ್ನೆಲೆಯಲ್ಲಿ ಇದೀಗ ಅಧಿಕೃತವಾಗಿ ಬೆಂಗಳೂರು ಸಿಐಡಿ ಇನ್ಸ್‌ಪೆಕ್ಟರ್ ಹರೀಶ್ ನೇತೃತ್ವದ ಅಧಿಕಾರಿಗಳು ತನಿಖೆಯನ್ನು ಆರಂಭಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ: ಕೊಡಗಿನಲ್ಲಿ ಸಿದ್ಧತೆ ಪೂರ್ಣ

ಮಡಿಕೇರಿ: ಮಾ.18 ರಿಂದ ಏ. 2ರವರೆಗೆ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಜಿಲ್ಲಾಡಳಿತ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ.

ಕಳೆದ ಬಾರಿಯಂತೆ ಈ ಬಾರಿಯೂ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ–1ನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಜಿಲ್ಲೆಯಲ್ಲಿ 3,049 ಬಾಲಕರು, 3,134 ಬಾಲಕಿಯರು ಸೇರಿದಂತೆ 6,183 ವಿದ್ಯಾರ್ಥಿಗಳು ನೋಂದಣಿ ಮಾಡಿದ್ದು, 399 ಮಂದಿ ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಸವರಾಜು ಅವರು ಮಾಹಿತಿ ನೀಡಿದ್ದಾರೆ.

ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಕಸ್ಟೋಡಿಯನ್, ಸಾರಿಗೆ ಜಾಗೃತ ದಳ, ಮಾರ್ಗಾಧಿಕಾರಿಗಳು, ಕೊಠಡಿ ಮೇಲ್ವಿಚಾರಕರನ್ನು ನಿಯೋಜಿಸಲಾಗಿದ್ದು, ಮಡಿಕೇರಿ ಹಾಗೂ ವೀರಾಜಪೇಟೆ ತಾಲೂಕಿನ ತಲಾ 8 ಹಾಗೂ ಸೋಮವಾರಪೇಟೆ ತಾಲೂಕಿನ 12 ಸೇರಿದಂತೆ ಜಿಲ್ಲೆಯ 28 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಬಸವರಾಜು ಅವರು ವಿವರಿಸಿದ್ದಾರೆ.

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಕೆ, ಕುಡಿಯುವ ನೀರಿನ ಸೌಲಭ್ಯ, ಬೆಳಕಿನ ವ್ಯವಸ್ಥೆ, ಶೌಚಾಲಯ, ಶುಶ್ರೂಷಕರ ನೇಮಕ, ಪೊಲೀಸರ ನಿಯೋಜನೆ ಸೇರಿದಂತೆ ವಿವಿಧ ಇಲಾಖೆಗಳ ಸಹಕಾರದಲ್ಲಿ ಅಗತ್ಯ ಕ್ರಮವಹಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಅಗತ್ಯ ಪೀಠೋಪಕರಣ, ಶೌಚಾಲಯ, ಶುದ್ಧ ಕುಡಿಯುವ ನೀರು, ಪರೀಕ್ಷಾ ಕೊಠಡಿಯಲ್ಲಿ ಗಾಳಿ–ಬೆಳಕಿನ ವ್ಯವಸ್ಥೆ, ವಿಶೇಷ ಅಗತ್ಯತೆವುಳ್ಳ ಮಕ್ಕಳಿಗೆ ಸೌಲಭ್ಯ ಹೀಗೆ ಹಲವು ಮೂಲ ಸೌಕರ್ಯ ಒದಗಿಸಲಾಗಿದೆ ಎಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ನೋಡಲ್ ಅಧಿಕಾರಿ ಬಿಂದು ಅವರು ವಿವರಿಸಿದ್ದಾರೆ.

ಕುಂಜತ್ತಬೈಲ್ ಉತ್ತರ | ಅಧಿಕಾರಿಗಳಿಗೆ ತಿಳಿಸಿದರೂ ಪರಿಣಾಮ ಶೂನ್ಯ...

ಕುಂಜತ್ತಬೈಲಿನ ಹಲವೆಡೆ ನೀರಿನದ್ದೇ ಸಮಸ್ಯೆ!

ಚಿತ್ರ: ರಾಜೇಶ್ ಶೆಟ್ಟಿ ಬಿಜ್ಜಾಲ್‌ಬಾಗ್

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್



ಮಂಗಳೂರು: ಕಳೆದ ಮಳೆಗಾಲ ಮುಗಿದ ಬಳಿಕ ಕುಡಿಯುವ ನೀರಿನ ಪೂರೈಕೆಯಲ್ಲಿ ಭಾರಿ ವ್ಯತ್ಯಯ ಆಗುತ್ತಿದೆ. ಹೆಸರಿಗೆ ನೀರು ಬರುತ್ತಿದೆ. ಆದರೆ, ಜನರಿಗೆ ಅಗತ್ಯ ಇರುವಷ್ಟು ನೀರು ಸಿಗುತ್ತಿಲ್ಲ. ನೀರಿನ ಸಮಸ್ಯೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಪರಿಣಾಮ ಶೂನ್ಯ...

ಇದು, ವಾರ್ಡ್ ಸಂಖ್ಯೆ 13 ಕುಂಜತ್ತಬೈಲ್ ಉತ್ತರದ ನಾಗರಿಕರ ಅಳಲು.

ಕುಂಜತ್ತಬೈಲ್ ಉತ್ತರ ವಾರ್ಡ್‌ನ ಕುಂಜತ್ತಬೈಲು, ಕುಳ, ಅತ್ರೆಬೈಲು, ನಾರ್ದಬೆಟ್ಟು, ರಾಮನಗರ, ತಾಳಿಪಾಡಿಗುಡ್ಡೆ, ದೆಪ್ಪುಣಿಗುತ್ತು, ಕಲ್ಲಗುಡ್ಡೆ, ದೇವಿನಗರ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ. ಈ ಎಲ್ಲ ಪ್ರದೇಶಗಳಿಗೆ ಪ್ರತಿದಿನ ನೀರು ಬರುತ್ತಿದೆ ಎನ್ನುವುದೇನೋ ನಿಜ. ಆದರೆ, ನೀರಿನ ಪೂರೈಕೆ ಪ್ರಮಾಣದಲ್ಲಿ ಇಳಿಮುಖ, ಕಡಿಮೆ ಪ್ರೆಶರ್‌ನಿಂದ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರು ಬರುತ್ತಿಲ್ಲ. ಕುಂಜತ್ತಬೈಲ್ ಉತ್ತರದ ಹೆಚ್ಚಿನ ಪ್ರದೇಶ ಗುಡ್ಡಗಳಿಂದ ಕೂಡಿದ್ದು, ಎತ್ತರದ ಸ್ಥಳಗಳಿಗೆ ಕೆಲವೊಮ್ಮೆ ನೀರು ತಲುಪುವುದೇ ಇಲ್ಲ.

ಶಕ್ತಿನಗರದ ಮುಖ್ಯ ಟ್ಯಾಂಕ್‌ನಿಂದ ಬೆಳಗ್ಗೆ 5.50ಕ್ಕೆ ನೀರು ಪಂಪ್ ಮಾಡಲಾಗುತ್ತದೆ. 6.50ಕ್ಕೆ ಮರಕಡ ಶಾಲೆ ಬಳಿ ಇರುವ ಟ್ಯಾಂಕ್‌ನಿಂದ ಈ ಪ್ರದೇಶಗಳಿಗೆ ನೀರು ಸರಬರಾಜು ಮಾಡಲಾಗುತ್ತದೆ. ಆದರೆ, ಈ ಹಿಂದೆಗಿಂತ ಬೇಗನೆ ಟ್ಯಾಂಕ್‌ನಲ್ಲಿ ನೀರು ಖಾಲಿಯಾಗುತ್ತದೆ. ಇದರಿಂದಾಗಿ ಎತ್ತರದ ಪ್ರದೇಶಗಳಿಗೆ ನೀರು ತಲುಪುವುದು ಅಪರೂಪ. ಶಕ್ತಿನಗರದ ಟ್ಯಾಂಕ್‌ನಿಂದ ಪೂರೈಕೆಯಾಗುವ ನೀರಿನ ಪ್ರೆಶರ್ ಕಡಿಮೆಯಾದ ಕಾರಣ ಈ ಸಮಸ್ಯೆ ಉಂಟಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಇಲ್ಲಿನ ಬಸವನಗರ ಪ್ರದೇಶಕ್ಕೆ ನೀರು ಬರುವುದೇ ಬೆಳಗ್ಗೆ 10.30ಕ್ಕೆ. ಇಲ್ಲಿನ ಬಹುತೇಕ ಮನೆಗಳಲ್ಲಿ ನೀರಿನ ಸಣ್ಣ ಟ್ಯಾಂಕ್, ನೀರು ಸಂಗ್ರಹಣಾ ತೊಟ್ಟಿಯ ಸೌಲಭ್ಯ ಇಲ್ಲ. ಹೀಗಾಗಿ ಇಲ್ಲಿನ ಮನೆಗಳಲ್ಲಿ ಡ್ರಂಗಳಲ್ಲಿ ನೀರು ಸಂಗ್ರಹಿಸಿಡಬೇಕಿದೆ. ನೀರು ಪೂರೈಕೆ ಅವಧಿ ಕಡಿಮೆಯಾದ ಕಾರಣ ಅದೂ ಸಾಧ್ಯವಾಗುತ್ತಿಲ್ಲ. ಮನಪಾ ವತಿಯಿಂದ ನೀರು ಪೂರೈಸಲು ಆರು ವಾರ್ಡ್‌ಗೆ ಒಂದು ಟ್ಯಾಂಕರ್ ಇದ್ದು, ಇಲ್ಲಿಗೆ ಟ್ಯಾಂಕರ್ ನೀರೂ ಬರುವುದು ಅಪರೂಪ.

ಕುಂಜತ್ತಬೈಲ್ ಉತ್ತರ ವಾರ್ಡ್‌ನಲ್ಲಿ ನೀರು ಪೂರೈಕೆಗೆ ಹಳೆಯ ಪೈಪ್‌ಲೈನ್ ಕಾರ್ಯನಿರ್ವಹಿಸುತ್ತಿದೆ. ಆದರೆ, ಮನೆಗಳ ಸಂಖ್ಯೆ ಮೂರ್ನಾಲ್ಕು ಪಟ್ಟು ಹೆಚ್ಚಾಗಿದೆ. ಜಲಸಿರಿ ಯೋಜನೆಯಡಿ ದಿನದ 24 ಗಂಟೆ ಕುಡಿಯುವ ನೀರು ಪೂರೈಕೆ ಉದ್ದೇಶದಿಂದ 10 ಲಕ್ಷ ಲೀಟರ್ ಸಾಮರ್ಥ್ಯದ ಹೊಸ ಟ್ಯಾಂಕ್ ನಿರ್ಮಾಣಗೊಂಡಿದ್ದು, ಇನ್ನಷ್ಟೇ ನೀರಿನ ಸಂಪರ್ಕ ಆಗಬೇಕಿದೆ. ನೀರಿನ ಪ್ರೆಶರ್ ಇಲ್ಲದಿದ್ದರೆ ಈ ಟ್ಯಾಂಕ್ ತುಂಬುವುದೇ ಕಷ್ಟ. ಇಲ್ಲಿ ಗುಡ್ಡ ಪ್ರದೇಶ ಅಧಿಕವಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಕೆಯಾದರೆ ಮಾತ್ರ ಎಲ್ಲ ಮನೆಗಳಿಗೆ ನೀರು ತಲುಪಬಹುದು.




■ ಶರತ್‌ಕುಮಾರ್, ನಿಕಟಪೂರ್ವ ಕಾರ್ಪೊರೇಟರ್ ಕುಂಜತ್ತಬೈಲ್ ಉತ್ತರ

ಕುಂಜತ್ತಬೈಲು ದೇವಿನಗರ ಸುಬ್ರಹ್ಮಣ್ಯ ದೇವಸ್ಥಾನದ ಬಳಿಕ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ. ನೀರಿನ ಪ್ರೆಶರ್ ಇಲ್ಲದೆ ಸಮಸ್ಯೆಯಾಗುತ್ತಿದೆ. ಪ್ರಸ್ತುತ ಇಲ್ಲಿ ಎರಡು ದಿನಕ್ಕೊಮ್ಮೆ ನೀರು ಬಿಡಲಾಗುತ್ತಿದ್ದು, ನಮ್ಮ ಮನೆಯಿರುವ ಪ್ರದೇಶಕ್ಕೆ ನೀರು ತಲುಪದೇ ನೀರಿಗಾಗಿ ಪರದಾಡುವಂತಾಗಿದೆ. ಇಲ್ಲಿಗೆ ಟ್ಯಾಂಕರ್ ಆಗಮಿಸಲು ಸಾಧ್ಯವಾಗುತ್ತಿಲ್ಲ. ಸ್ಥಳೀಯರು ನೀರಿಗಾಗಿ ಪರದಾಡುವಂತಾಗಿದೆ.



■ – ಅನೀಶ್, ಕುಂಜತ್ತಬೈಲು ದೇವಿನಗರ ನಿವಾಸಿ.



ನಾಳೆ ವಾರ್ಡ್ 14, ಮರಕಡ ಪರಿಸರದ ಸ್ಥಿತಿಗತಿ

ಇರುವ ಬಾವಿಗಳ ನವೀಕರಣ ಮಾಡಲಿ

ಕುಂಜತ್ತಬೈಲ್ ಉತ್ತರ ಕ್ಷೇತ್ರದಲ್ಲಿ ಕೊಳವೆ ಬಾವಿಗಳಿಲ್ಲ. ಬೋರ್‌ವೆಲ್ ಕೊರೆದರೂ ನೀರು ಸಿಗುತ್ತಿಲ್ಲ. ಆದರೆ, ಮೇಲ್ಮೈನ ಸಣ್ಣ ಬಾವಿಗಳಲ್ಲಿ ನೀರಿದೆ. ಹೊಸ ಬಾವಿ ತೋಡುವುದು, ಇರುವ ಬಾವಿಗಳ ನವೀಕರಣ ಮೂಲಕ ನೀರಿನ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿಸಬಹುದು ಎಂಬುದು ಸ್ಥಳೀಯರ ಅಭಿಪ್ರಾಯ.

ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಟೀಕೆ ಮಾಡುವವರು ಸಂಘದ ಹತ್ತಿರ ಬಂದು ಕಾರ್ಯವೈಖರಿಯನ್ನು ನೋಡಿದಾಗ ಮಾತ್ರ ಸತ್ಯದ ಅರಿವಾಗುತ್ತದೆ. ಈ ಹಿಂದೆಯೂ ಸಂಘದ ಮೇಲೆ ನಿಷೇಧ ಹೇರಲಾಗಿತ್ತು, ಆದರೆ ಸಂಘವು ಎಲ್ಲಾ ಸವಾಲುಗಳನ್ನು ಎದುರಿಸಿ ಬೆಳೆದಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಆರ್‌ಎಸ್‌ಎಸ್‌ನ ಶತಾಬ್ದಿ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಪಂಚಪರಿವರ್ತನೆಯ 5 ವಿಷಯಗಳಾದ ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿ ಜೀವನಶೈಲಿ, ನಾಗರಿಕ ಶಿಷ್ಟಾಚಾರ ವಿಷಯಗಳಿಗೆ ಒತ್ತುಕೊಡಲಾಗಿದೆ. ಸಮಾಜದಿಂದ ಅತ್ಯುತ್ತಮ ಪ್ರತಿಕ್ರಿಯೆ ಲಭಿಸಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ರಾಣಿ ಅಬ್ಬಕ್ಕ 500 - ಕಾರ್ಯಕ್ರಮ: ರಾಣಿ ಅಬ್ಬಕ್ಕ ಅವರ 500ನೇ ಜನ್ಮ ವರ್ಷಾಚರಣೆಯ ಅಂಗವಾಗಿ ಅವರ ಇತಿಹಾಸವನ್ನು ರಾಜ್ಯಾದ್ಯಂತ ತಿಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ವತಿಯಿಂದ ಮಂಗಳೂರು ವಿಭಾಗದ ಮೂರು ಜಿಲ್ಲೆಗಳಲ್ಲಿ ರಾಣಿ ಅಬ್ಬಕ್ಕ ಅವರ ಕುರಿತು 100 ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸುಮಾರು 125 ವಿದ್ಯಾಸಂಸ್ಥೆಗಳ ಸಹಯೋಗದೊಂದಿಗೆ 75 ಜನ ಸಂಪನ್ಮೂಲ ವ್ಯಕ್ತಿಗಳು, 300 ಗಣ್ಯರು ಭಾಗವಹಿಸಿದ್ದು, ಸುಮಾರು 23000 ವಿದ್ಯಾರ್ಥಿಗಳನ್ನು ತಲುಪಿದ್ದು, 2500 ಶಿಕ್ಷಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು ಎಂದು ತಿಳಿಸಿದರು.



> ಸಮಾಜವೇ ಜಾಗೃತಗೊಂಡು ಧರ್ಮ ರಕ್ಷಣೆ ಮಾಡಬೇಕು ಎಂಬುದು ಸಂಘದ ಆಶಯವಾಗಿದೆ.
> ■ ನಾ.ತಿಪ್ಪೇಸ್ವಾಮಿ, ಆರ್‌ಎಸ್‌ಎಸ್ ಕ್ಷೇತ್ರೀಯ ಕಾರ್ಯವಾಹ

ಶತಾಬ್ದಿ ವರ್ಷದ ನಂತರ ಆರ್‌ಎಸ್‌ಎಸ್‌ನ ಭೌಗೋಳಿಕ ರಚನೆಯಲ್ಲಿ ಬದಲಾವಣೆಯಾಗಲಿದ್ದು, ಸುಮಾರು ಪ್ರತಿ ಎರಡು ಕೋಟಿ ಜನಸಂಖ್ಯೆಗೆ ಒಂದು ಸಂಭಾಗವನ್ನು ರಚಿಸಲಾಗುವುದು. ಅದರಂತೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು ಎಂಬ 4 ಸಂಭಾಗಗಳ ರಚನೆಯಾಗಲಿದೆ ಎಂದು ತಿಳಿಸಿದರು.

ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನ

ಪರಿವರ್ತನಾ ಟ್ರಸ್ಟ್ ಬೆಂಗಳೂರು ವತಿಯಿಂದ ಕರ್ನಾಟಕ ದಕ್ಷಿಣದ 23 ಜಿಲ್ಲೆಯ 86 ತಾಲ್ಲೂಕುಗಳಲ್ಲಿ ಡ್ರಗ್ಸ್ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು. 55 ದಿನಗಳ ಅವಧಿಯಲ್ಲಿ 181 ಜಾಗೃತಿ ಸಭೆ ಯೋಜನೆ ಮಾಡಲಾಗಿತ್ತು. ಇದರಲ್ಲಿ 52 ವಿವಿಧ ಸಂಘಟನೆಗಳು, 187 ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ 60500 ವಿದ್ಯಾರ್ಥಿಗಳು, 6,865 ಸಾರ್ವಜನಿಕರು ಭಾಗವಹಿಸಿದ್ದರು. 3,675 ಕಿ.ಮೀ ಜಾಥಾ ನಡೆಸಲಾಗಿದೆ. ಮುಂದಿನ ಐದು ವರ್ಷದವರೆಗೆ ದೀರ್ಘಾವಧಿ ಜಾಗೃತಿ ಅಭಿಯಾನ ನಡೆಸುವ ಬಗ್ಗೆ ಯೋಚಿಸಲಾಗಿದೆ. ವಿದ್ಯಾಸಂಸ್ಥೆಗಳು ಮತ್ತು ಇಲಾಖೆಗಳ ಸಹಕಾರದೊಂದಿಗೆ ಶಾಲಾ ಕಾಲೇಜುಗಳ ದಾಖಲಾತಿ ಸಂದರ್ಭದಲ್ಲಿ ಟೆಸ್ಟಿಂಗ್ ಹಾಗೂ ವ್ಯಸನಿಗಳಿಗೆ ಚಿಕಿತ್ಸೆ ಇತ್ಯಾದಿ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ತಿಪ್ಪೇಸ್ವಾಮಿ ಮಾಹಿತಿ ನೀಡಿದರು.

ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಬೆಂಗಳೂರು: ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ಏ.2ರವರೆಗೂ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,12,855 ಹೊಸಬರು, 62,845 ಪುನರಾವರ್ತಿತ ಮತ್ತು 27,189 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 15,941 ಶಾಲೆಗಳು ನೋಂದಾಯಿಸಿಕೊಂಡಿದ್ದು, 2,871 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಫಲಿತಾಂಶವನ್ನು ಏ. 24 ರಂದು ಪ್ರಕಟಿಸಲಾಗುತ್ತದೆ.

ಯಾವುದೇ ಅಕ್ರಮ ಮತ್ತು ಗೊಂದಲಗಳಿಗೆ ಅವಕಾಶವಾಗದೆ ಸುಸೂತ್ರವಾಗಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ.

ಜತೆಗೆ ಎಲ್ಲಾ ಪರೀಕ್ಷಾ ಕೊಠಡಿಗಳಲ್ಲೂ ಸಿಸಿ ಕ್ಯಾಮರಾ ಕಣ್ಣಾವಲು ಮತ್ತು ಜಿಲ್ಲಾ ಕೇಂದ್ರದಲ್ಲಿ ವೆಬ್‌ಕ್ಯಾಸ್ಟಿಂಗ್ ವ್ಯವಸ್ಥೆ ಈ ಬಾರಿಯೂ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಕಲಿ ಪ್ರಶ್ನೆಪತ್ರಿಕೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುವವರ ಮೇಲೆ ನಿಗಾ ಇರಿಸಲಾಗುತ್ತದೆ. ಜತೆಗೆ ಇಂತಹ ಅಕ್ರಮ ಎಸಗಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಚಿತ ಬಸ್ ವ್ಯವಸ್ಥೆ

ವಿದ್ಯಾರ್ಥಿಗಳ ಅನುಕೂಲಕ್ಕೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಘೋಷಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರ (ಹಾಲ್ ಟಿಕೆಟ್) ತೋರಿಸಿ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಬಹುದಾಗಿದೆ.

ನಗರ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿರುವ ಝೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

◈ ಭಾರತದಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಗೆ ಕಾಂಗ್ರೆಸ್ಸೇ ಕಾರಣ –ನಿತಿನ್ ಗಡ್ಕರಿ
–ವಿಚಿತ್ರವೇನೆಂದರೆ ಇದೀಗ ಪ್ರತಿ ಚುನಾವಣೆಯಲ್ಲೂ ಅವರ ಸೋಲಿಗೆ ಅದೇ ಕಾರಣ. ಅದು ಹೇಗೆಂದರೆ ಅವರನ್ನು ಈ ಕಡೆ ಹಿಂದುಗಳು ನಂಬೋದಿಲ್ಲ, ಆ ಕಡೆ ಮುಸ್ಲಿಮರೂ ನಂಬೋದಿಲ್ಲ!

ದಿನ ಭವಿಷ್ಯ

ಮೇಷ ಕೆಲಸ, ಮನೆಯ ಕಡೆಗೇ ಗಮನ ಕೊಟ್ಟು ಇತರ ವಿಷಯ ಕಡೆಗಣಿಸಿದ್ದೀರಿ. ಖಾಸಗಿ ವಿಷಯಕ್ಕೂ ಆದ್ಯತೆ ಕೊಡಿ. ಹೂಡಿಕೆಯಿಂದ ಧನಲಾಭ

ವೃಷಭ ಉದಾಸೀನತೆ. ಅದರಿಂದ ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಶೇರು ಹೂಡಿಕೆಯಲ್ಲಿ ಎಚ್ಚರ ವಹಿಸುವುದೊಳಿತು.

ಮಿಥುನ ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ. ಆದಾಯ ಮತ್ತು ಖರ್ಚಿನ ಮಧ್ಯೆ ಸಮತೋಲನ ಸಾಧಿಸಿ.

ಕಟಕ ಈ ದಿನ ಹೆಚ್ಚು ಎಚ್ಚರ ಅವಶ್ಯ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡೀತು. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

ಸಿಂಹ ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು, ಬೇಸರ. ಪ್ರೀತಿಯಲ್ಲಿ ಹಿನ್ನಡೆ. ನಿಮ್ಮ ಧೋರಣೆ ಬದಲಿಸುವ ಪ್ರಸಂಗ ಬಂದೀತು.

ಕನ್ಯಾ ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

ತುಲಾ ಕಲ್ಪನೆಗೆ ರೆಕ್ಕೆ ಮೂಡಲಿದೆ. ಅದನ್ನು ಸಾಕಾರಗೊಳಿಸಲು ಸಫಲ. ಆತ್ಮೀಯರ ಸಾಧನೆಯ ತೃಪ್ತಿ. ಚಾಲನೆಯಲ್ಲಿ ತುಸು ಎಚ್ಚರವಿರಲಿ.

ವೃಶ್ಚಿಕ ಏಕತಾನತೆಯಿಂದ ಹೊರಬಂದು ಹೊಸತನಕ್ಕೆ ಕ್ರಿಯಾಶೀಲರಾಗಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಪ್ರೀತಿಯಲ್ಲಿ ಮಹತ್ವದ ಬೆಳವಣಿಗೆ.

ಧನು ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ ಕೇಳಲಿದೆ. ಧನಪ್ರಾಪ್ತಿ.

ಮಕರ ಉದ್ಯೋಗಕ್ಕೆ ಸಂಬಂಧಿಸಿ ಶುಭ ಸುದ್ದಿ. ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ.

ಕುಂಭ ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

ಮೀನ ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,3,7,1

ರೈಲ್ವೇ ಇಲಾಖೆಯ ಪರೀಕ್ಷೆ ದಿಢೀರ್ ರದ್ದು: ಸಿಎಂ ಅಸಮಾಧಾನ

ಕನ್ನಡಿಗರಿಗೆ ಕೇಂದ್ರ ದ್ರೋಹ

ಬೆಂಗಳೂರು: ನೈರುತ್ಯ ರೈಲ್ವೇ ಇಲಾಖೆಯ 194 ಗೂಡ್ಸ್ ರೈಲು ಮ್ಯಾನೇಜರ್ ಹುದ್ದೆಗಳು ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ ಎಲ್‌ಡಿಸಿಇ 101 ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂಬಂಧ ಮಂಗಳವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ಕನ್ನಡಿಗರು ಹಾಗೂ ಕನ್ನಡ ಸಂಘಟನೆಗಳ ಭಾರೀ ವಿರೋಧದ ತರುವಾಯ ರೈಲ್ವೇ ಇಲಾಖೆಯು ದಿಢೀರ್ ರದ್ದುಪಡಿಸಿ ಕನ್ನಡಿಗ ಉದ್ಯೋಗಿಗಳನ್ನು ಆತಂತ್ರ ಪರಿಸ್ಥಿತಿಗೆ ತಳ್ಳಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಬಗ್ಗೆ ಈ ಮೊದಲೇ ಸಾವಿರಾರು ಕನ್ನಡಿಗ ಉದ್ಯೋಗಿಗಳು ಧ್ವನಿಯೆತ್ತಿದ್ದರು. ಶಾಂತ ರೀತಿಯ ಪ್ರತಿಭಟನೆಯನ್ನು, ಪ್ರತಿರೋಧವನ್ನು ನಿರ್ಲಕ್ಷಿಸುತ್ತಾ ಬಂದ ರೈಲ್ವೆ ಇಲಾಖೆ ಪರೀಕ್ಷೆ ಆರಂಭವಾಗುವ ಕೊನೆ ಕ್ಷಣದಲ್ಲಿ ರದ್ದುಮಾಡಿರುವುದು ಈಗಿನ ಗೊಂದಲಕ್ಕೆ ಕಾರಣ ಎಂದಿದ್ದಾರೆ.

> ಮುಂಬರುವ ದಿನಗಳಲ್ಲಿ ಕನ್ನಡ ಭಾಷಿಗರಿಗೆ ಭಾಷೆಯ ಹೆಸರಲ್ಲಿ ಅನ್ಯಾಯವಾಗದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಮಧ್ಯೆಪ್ರವೇಶಿಸಿ ಸಂಬಂಧಿತ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು.ರದ್ದುಪಡಿಸಲಾದ ರೈಲ್ವೆ ಇಲಾಖೆಯ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ನಡೆಸಲು ಕ್ರಮಕೈಗೊಳ್ಳಬೇಕು.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಕನ್ನಡಿಗರೆಂದರೆ ಕೇಂದ್ರಕ್ಕೆ ತಾತ್ಸಾರ: ಮುಖ್ಯಮಂತ್ರಿ

ಪ್ರಾರಂಭದಲ್ಲಿಯೇ ರೈಲ್ವೆ ಇಲಾಖೆ ಎಚ್ಚೆತ್ತುಕೊಂಡು ತನ್ನ ತಪ್ಪನ್ನು ತಿದ್ದಿಕೊಂಡು ಕನ್ನಡದಲ್ಲಿ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟಿದ್ದರೆ ಈಗಿನ ಅತಂತ್ರ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಆ ಪ್ರಯತ್ನವನ್ನೇ ಮಾಡದೆ, ಕನ್ನಡಿರನ್ನು ತಾತ್ಸಾರ ಭಾವನೆಯಿಂದ ಕಂಡು, ಪ್ರತಿಭಟನೆಯ ಕಾವು ಹೆಚ್ಚಾದ ಕೂಡಲೆ ತರಾತುರಿಯಲ್ಲಿ ಪರೀಕ್ಷೆ ರದ್ದುಪಡಿಸುವ ನಿರ್ಧಾರಕ್ಕೆ ಬಂದಿರುವುದು ಖಂಡನೀಯ. ಕನ್ನಡಿಗರಿಗೆ ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಅನ್ಯಾಯವಾಗುತ್ತಿರುವುದು ಇದು ಮೊದಲ ಬಾರಿ ಅಲ್ಲ ಬಹುಶಃ ಕೊನೆಯದ್ದೂ ಅಲ್ಲ. ಕೇಂದ್ರದ ಕುಟಿಲತನದಿಂದಾಗಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳು ಮೊದಲಿಂದಲೂ ಅನ್ಯಾಯಕ್ಕೆ ತುತ್ತಾಗುತ್ತಾ ಬಂದಿದ್ದಾರೆ ಎಂದು ಸಿಎಂ ಸಿಟ್ಟು ಹೊರಹಾಕಿದ್ದಾರೆ. ಸೋಮಣ್ಣನವರು ಕನ್ನಡಿಗರ ಪರವಾಗಿ ನಿಂತು ಅನ್ಯಾಯವನ್ನು ಸರಿಪಡಿಸುತ್ತಾರೆ ಎಂಬ ಭರವಸೆಯನ್ನು ನಾನೂ ಇಟ್ಟುಕೊಂಡಿದ್ದೆ, ಆ ನಂಬಿಕೆ ಹುಸಿಯಾಗಿದೆ. ಸೋಮಣ್ಣನವರು ಮಾತನಾಡಲು ಶುರು ಮಾಡಿದರೆ ರೈಲ್ವೆ ಇಲಾಖೆ ಇರುವುದೇ ಕರ್ನಾಟಕಕ್ಕಾಗಿ ಎನ್ನುವಂತೆ ಮಾತಿನ ಅರಮನೆ ಕಟ್ಟುತ್ತಾರೆ. ಅವರು ಮಾತು ಸ್ವಲ್ಪ ಕಡಿಮೆಮಾಡಿ ಕರ್ನಾಟಕಕ್ಕಾಗಿ ಮಾಡಬೇಕಾದ ಕೆಲಸವನ್ನು ನಿಷ್ಠೆಯಿಂದ ಮಾಡಲು ಮುಂದಾಗಬೇಕು ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಭಾರತ ರಾಜ್ಯಗಳ ಒಕ್ಕೂಟ, ಈ ರಾಜ್ಯಗಳು ಭಾಷೆಗಳ ಆಧಾರದಲ್ಲಿಯೇ ರಚನೆಯಾಗಿರುವುದನ್ನು ಮರೆಯಬಾರದು. ನಾವು ಹಿಂದಿಯನ್ನು ಭಾಷೆಯಾಗಿ ವಿರೋಧಿಸುವುದಿಲ್ಲ, ಹಿಂದಿಯನ್ನು ಕನ್ನಡದ ಮೇಲೆ ಹೇರುವುದನ್ನು ಮಾತ್ರ ಖಂಡಿತ ಸಹಿಸುವುದಿಲ್ಲ. ಆಳುವ ಪಕ್ಷದ ಸಂಸದರು ಪಕ್ಷದ ಮುಲಾಜಿಗೆ ಬಿದ್ದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಬಾಯಿ ಮುಚ್ಚಿಕೊಂಡಿರಬಹುದು, ಆದರೆ ಕನ್ನಡಿಗರು ಜಾಗೃತರಾಗಿದ್ದಾರೆ. ಕನ್ನಡಿಗರು ಉದ್ಯೋಗಕ್ಕಾಗಿ, ಭಡ್ತಿಗಾಗಿ ಕೇಂದ್ರದ ಮುಂದೆ ಭಿಕ್ಷೆಗೆ ನಿಂತಿಲ್ಲ, ತಾವು ಶಿಕ್ಷಣ ಪಡೆದ ಭಾಷೆಯಲ್ಲೇ ತಮ್ಮ ಹಕ್ಕಿನ ಉದ್ಯೋಗ ಭಡ್ತಿಯನ್ನು ಕೇಳುತ್ತಿದ್ದಾರೆ ಎಂದು ಬರೆದುಕೊಂಡಿದ್ದಾರೆ.



ಬಿರುಗಾಳಿಸಹಿತ ಆಲಿಕಲ್ಲು ಮಳೆ

ಪುಟ ೧➡ ಕಲಬುರಗಿ ನಗರದಲ್ಲಿ ಲಘು ಮಳೆಯಾಗಿದ್ದರೆ, ಚಿಂಚೋಳಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಹೊಸಪೇಟೆ, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ಪಟ್ಟಣಗಳು ಸೇರಿದಂತೆ ವಿಜಯನಗರ ಜಿಲ್ಲೆಯ ಹಲವಾರು ಭಾಗಗಳಲ್ಲಿ ಸೋಮವಾರ ಸಂಜೆ ಗುಡುಗುಸಹಿತ ಮಳೆಯಾಗಿದೆ. ಕೂಡ್ಲಿಗಿ ತಾಲ್ಲೂಕಿನ ಯೆಂಬ್ಲಿ ಗ್ರಾಮದಲ್ಲಿ ಸಿಡಿಲು ಬಡಿದ ನಂತರ ಗಾಳಿ ಯಂತ್ರವೊಂದು ಸುಟ್ಟುಹೋಗಿದೆ.

ಆಲಿಕಲ್ಲು ಸಹಿತ ಮಳೆ: ಧಾರವಾಡ ನಗರದಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆ ಆಗಿದ್ದು, ಬಿಸಿಲಿನ ಝಳಕ್ಕೆ ಬಸವಳಿದಿದ್ದ ಉತ್ತರ ಕರ್ನಾಟಕದ ಜನತೆಗೆ ವರುಣ ತಂಪೆರೆದಿದೆ. ಧಾರವಾಡದ ಕೆಲವೆಡೆ ಸಾಧಾರಣ ಮಳೆ ಆದರೆ, ನಗರದಲ್ಲಿ ಭಾರೀ ಮಳೆ ಆಗಿದೆ. ಆದರೆ ಗಾಳಿ ಜೋರಾಗಿ ಬೀಸಿದ್ದರಿಂದ ರೈತರಿಗೆ ಮಾವಿನ ಬೆಳೆಗೆ ಈ ಮಳೆ ಕಂಟಕವಾಗಲಿದೆಯೇ ಎಂಬ ಆತಂಕ ಉಂಟು ಮಾಡಿದೆ.

ಬಳ್ಳಾರಿ ನಗರ, ಸಂಡೂರು ಮತ್ತು ಕಂಪ್ಲಿಯಲ್ಲಿಯೂ ಸಹ ಲಘು ಮಳೆಯಾಗಿದೆ. ದಾವಣಗೆರೆ ನಗರ ಮತ್ತು ಜಿಲ್ಲೆಯ ಕೆಲವು ಭಾಗಗಳಲ್ಲಿ ಆಲಿಕಲ್ಲು ಮಳೆಯಾಗಿದೆ. ಕಲಘಟಗಿ ತಾಲೂಕಿನ ಬಹುತೇಕ ಭಾಗಗಳಲ್ಲಿ ಮಂಗಳವಾರ ಮಧ್ಯಾಹ್ನ ಭಾರೀ ಗಾಳಿ ಮಳೆ ಸುರಿದಿದೆ. ಕಲಘಟಗಿ ಪಟ್ಟಣ, ಮಾಚಾಪುರ, ಬೆಲವಂತರ ಸೋಮನಕೊಪ್ಪ ಹೀಗೆ ಹಲವು ಊರುಗಳ ರಸ್ತೆಗಳಲ್ಲಿ ಆಲಿಕಲ್ಲು ರಾಶಿ ರಾಶಿ ಸುರಿದು ಬಿದ್ದಿದ್ದು, ಮನೆಗಳ ಮೇಲೆ ಕೂಡ ಆಲಿಕಲ್ಲು ರಾಶಿ ಬಿದ್ದಿದ್ದವು. ನಿರಂತರ ಮಳೆ ಜತೆಗೆ ಆಲಿಕಲ್ಲು ಸುರಿದು ಜನ ಆಶ್ಚರ್ಯಚಕಿತರಾದರು.

ಕೊಡಗಿನ ಅನೇಕ ಭಾಗಗಳಲ್ಲಿ ಸೋಮವಾರ ಋತುವಿನ ಮೊದಲ ಮಳೆಯಾಗಿದೆ. ಮಂಗಳವಾರ ಸಂಜೆ ಸುರಿದ ಮಳೆಯು ಗುಡ್ಡಗಾಡು ಜಿಲ್ಲೆಯ ಕಾಫಿ ಬೆಳೆಗಾರರಿಗೆ ಹರ್ಷ ತಂದಿತು.

ರೈತ ಸಾವು

ರೋಣ: ತಾಲೂಕಿನ ಮೆಣಸಗಿ ಗ್ರಾಮದಲ್ಲಿ ಮಂಗಳವಾರ ಸುರಿದ ಧಾರಾಕಾರ ಮಳೆಯಿಂದ ಸಿಡಿಲು ಬಡಿದು ರೈತ ನಿಂಗಪ್ಪ ರಾಮಪ್ಪ ಅಮಾತಿ (58) ಎಂಬ ರೈತ ಮೃತಪಟ್ಟಿದ್ದಾನೆ. ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

24 ಗಂಟೆಯಲ್ಲಿ ಮತ್ತಷ್ಟು ಮಳೆ

ರಾಜ್ಯದ ಜನತೆಗೆ ಹವಾಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದೆ. ಮುಂದಿನ 24ಗಂಟೆಗಳ ಕಾಲ ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ಜನರು ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ. ರಾಜ್ಯದ ಅಲ್ಲಲ್ಲಿ ಮೋಡಕವಿದ ವಾತಾವರಣವಿರಲಿದ್ದು, ಹಗುರವಾದ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಚಿವರಿಗೆ ಸಿಎಂ ಪತ್ರ

ಪುಟ ೧➡ ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರುತ್ತದೆ. ಈ ಸಂಬಂಧ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಲಾಗಿದೆ. ಅಲ್ಲದೆ, ಉತ್ತರ ಕಳುಹಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕ ಪತ್ರವನ್ನು ಕಳುಹಿಸಿ ಹಾಗೂ ಮಾಹಿತಿ ಒದಗಿಸುವ ನಿರ್ದಿಷ್ಟ ಸಮಯವನ್ನು ತಿಳಿಸಲು ಸಹ ಸೂಚಿಸಿದೆ. ಎಂದು ಪತ್ರದಲ್ಲಿ ಸಿದ್ದರಾಮಯ್ಯ ತಿಳಿಸಿದ್ದಾರೆ.

8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಕಾರಣ ಕೇಳಿ ಬರೋಬ್ಬರಿ ಎಂಟು ಇಲಾಖೆಯ ಹಿರಿಯ ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ಅಧಿವೇಶನದಲ್ಲಿ ಶಾಸಕರುಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡದ ಇಲಾಖೆ ಕಾರ್ಯದರ್ಶಿಗಳಿಗೆ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ ಬೆನ್ನಲ್ಲೇ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು 8 ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ. ಸದನದಲ್ಲಿ ಶಾಸಕರ ಪ್ರಶ್ನೆಗೆ ಉತ್ತರ ನೀಡದ ಹಿನ್ನೆಲೆಯಲ್ಲಿ 8 ಇಲಾಖೆಯ ಕಾರ್ಯದರ್ಶಿಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

- ಆರ್. ವಿನೋತ್ ಪ್ರಿಯಾ -ಪಶುಸಂಗೋಪನಾ ಇಲಾಖೆ
- ಮೋಹನ್ ರಾಜ್ ಕೆ.ಪಿ. -ವಸತಿ ಇಲಾಖೆ
- ಎನ್.ವಿ ಪ್ರಸಾದ್ - ಸಾರಿಗೆ ಇಲಾಖೆ
- ಆರ್.ಗಿರೀಶ್ - ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
- ಆದಿತ್ಯ ಆಮ್ಲನ್ ಬಿಸ್ವಾಸ್ - ಲೋಕೋಪಯೋಗಿ ಇಲಾಖೆ
- ರಾಜೇಂದ್ರ ಕುಮಾರ್ ಕಟಾರಿಯಾ - ಕಂದಾಯ ಇಲಾಖೆ

ಅಮಾನುಷ ದಾಳಿ

ಪುಟ ೧➡ ಸ್ಫೋಟದ ನಂತರ ಸಂಭವಿಸಿದ ದ್ವಿತೀಯ ಹಂತದ ಸ್ಫೋಟಗಳು ಅಲ್ಲಿ ಮದ್ದುಗುಂಡುಗಳ ಸಂಗ್ರಹವಿರುವುದನ್ನು ಖಚಿತಪಡಿಸಿವೆ ಎಂದು ಸಚಿವಾಲಯ ಪ್ರತಿಪಾದಿಸಿದೆ.

ನಂಗರ್‌ಹಾರ್‌ನಲ್ಲಿ ಡ್ರೋನ್ ಜೋಡಣೆ ಕೇಂದ್ರಗಳಿದ್ದವು ಎಂದು ಭದ್ರತಾ ಮೂಲಗಳು ತಿಳಿಸಿವೆ. ಪಾಕಿಸ್ತಾನದ ಭೂಪ್ರದೇಶದ ಮೇಲೆ ಪದೇ ಪದೇ ನಡೆದ ಗಡಿ ದಾಳಿಗಳ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ಪಾಕ್ ಸಮರ್ಥಿಸಿಕೊಂಡಿದೆ.

ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

ಪುಟ ೧➡ ಪೊಲೀಸರ ಮನವೊಲಿಕೆಗೂ ಬಗ್ಗದ ಹಿನ್ನೆಲೆಯಲ್ಲಿ ಎಬಿವಿಪಿ ಕಾರ್ಯಕರ್ತರನ್ನು ವಶಕ್ಕೆ ಪಡೆಯಲು ಪೊಲೀಸರು ಮುಂದಾದಾಗ ಪೊಲೀಸರು ಹಾಗೂ ವಿದ್ಯಾರ್ಥಿಗಳು, ಕಾರ್ಯಕರ್ತರ ನಡುವೆ ವಾಗ್ವಾದ ಹಾಗೂ ಮಾತಿನ ಚಕಮಕಿ ನಡೆಯಿತು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಹೆಚ್ಚಿನ ಹುದ್ದೆಗಳು ಖಾಲಿ ಇದ್ದು, ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದ ಕಾರ್ಯಕರ್ತರು, ಕಳೆದ ಐದು ವರ್ಷಗಳಿಂದ ಯಾವುದೇ ನೇಮಕಾತಿ ನಡೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಸಚಿನ್ ಹಿರೇಮಠ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಪನಿರಾಘವೇಂದ್ರ ದೇಸಾಯಿ, ರಾಜ್ಯ ಸಹಕಾರ್ಯದರ್ಶಿ ಕುಶಾಲ ಗೋಧಗೇರಿ, ರಾಜ್ಯ ಕಾರ್ಯಸಮಿತಿ ಸದಸ್ಯ ಯಲ್ಲಪ್ಪ ಬಮ್ಮನಲ್ಲಿ, ದರ್ಶನ್ ಮಾಷಣ್ಣವರ, ಶಿವಯ್ಯ ಮಠಪತಿ, ಸಾಯಿ ಬೋಸ್ಲೆ, ನಾಗರಾಜ ಹಂಜಿ, ಪ್ರಥಮಗೌಡ ಪಾಟೀಲ, ಮಹಾಂತೇಶ, ಬಾಲಾಜಿ ಜವಳಕರ, ಸೌರಭ ಮೊದಲಾದವರಿದ್ದರು.

ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

ಪುಟ ೧➡ ಈ ವರ್ಗಾವಣೆ ಪ್ರಕ್ರಿಯೆ ಪ್ರತಿ ಗಂಟೆಗೆ 1000 ಟನ್‌ಗಳಂತೆ ನಡೆಯುತ್ತಿದ್ದು, 2 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಕೇಂದ್ರ ಬಂದರು ಸಚಿವಾಲಯದ ನಿರ್ದೇಶನದಂತೆ ವಡ್ನೀರ್ ಬಂದರು ಈ ಕಾರ್ಯಾಚರಣೆಯನ್ನು ಸುಗಮವಾಗಿ ನಿರ್ವಹಿಸುತ್ತಿದೆ. ಇದರಲ್ಲಿ ಬಹು ಏಜೆನ್ಸಿಗಳ ಪಾಲ್ಗೊಳ್ಳುವಿಕೆ ಇದ್ದು, ಎಲ್ಲ ಪ್ರಕ್ರಿಯೆಗಳನ್ನೂ ನಿಕಟವಾಗಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಹಾಗೆಯೇ ಸಚಿವಾಲಯವು ಎಲ್‌ಪಿಜಿ ನೌಕೆಗಳನ್ನು ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿರ್ವಹಿಸುವಂತೆ ಮತ್ತು ಯಾವುದೇ ನಿಯಮಾವಳಿಗಳನ್ನು ಮೀರದಂತೆ ನಿರ್ದೇಶನ ನೀಡಿದೆ.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಹೊಂದಿರುವ ಬಲವಾದ ರಾಜತಾಂತ್ರಿಕ ಬಾಂಧವ್ಯಗಳಿಂದಾಗಿ ಭಾರತೀಯ ನೌಕೆಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಬರುತ್ತಿದ್ದು, ದೇಶದ ತೈಲ ಮತ್ತು ಅನಿಲ ಪೂರೈಕೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ ಎಂದು ಗುಜರಾತಿನ ಸಚಿವ ಜಿತು ವಾಘಾನಿ ತಿಳಿಸಿದ್ದಾರೆ. ಭಾರತ ತನ್ನ ಬೇಡಿಕೆಯ ಕಚ್ಚಾತೈಲದ ಶೇ.88ಕ್ಕೆ ಆಮದನ್ನೇ ನೆಚ್ಚಿಕೊಳ್ಳಬೇಕಾಗಿದ್ದು, ಆದಾಗ್ಯೂ ಮೋದಿ ಸರಕಾರ ರಷ್ಯಾ ಸೇರಿದಂತೆ ಬಹುಮೂಲಗಳಿಂದ ತೈಲ ಆಮದು ಮಾಡಿಕೊಳ್ಳುವ ಮೂಲಕ ದೇಶದ ಜನತೆಯ ಹಿತವನ್ನು ರಕ್ಷಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಅಮೆರಿಕ, ಚೀನಾ, ಕೊಲ್ಲಿ ದೇಶಗಳಲ್ಲಿ ಕೂಡ ತೈಲ ಬೆಲೆ ಏರಿಕೆಯಾಗಿದ್ದರೂ ಭಾರತದಲ್ಲಿ ತೈಲ ಬೆಲೆ ಏರಿಕೆಯಾಗಿಲ್ಲ ಎಂಬುದಿಲ್ಲಿ ಉಲ್ಲೇಖನೀಯ.

ಸಿಲುಕಿರುವ ಹಡಗುಗಳ ಸ್ಥಿತಿ

ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಸಿಲುಕಿರುವ ಉಳಿದ 22 ಹಡಗುಗಳ ಸುರಕ್ಷಿತ ಪ್ರಯಾಣಕ್ಕಾಗಿ ಬಂದರು ಮತ್ತು ಹಡಗು ಸಚಿವಾಲಯ ಹಾಗೂ ಹಡಗು ನಿರ್ದೇಶನಾಲಯ ನಿರಂತರ ಪ್ರಯತ್ನ ನಡೆಸುತ್ತಿದೆ. ಈ ಹಡಗುಗಳಲ್ಲಿ 611 ನಾವಿಕರಿದ್ದು, ಇವುಗಳಲ್ಲಿ ಆರು ಎಲ್‌ಪಿಜಿ ವಾಹಕಗಳು, ನಾಲ್ಕು ಕಚ್ಚಾ ತೈಲ ಟ್ಯಾಂಕರ್‌ಗಳು ಮತ್ತು ಮೂರು ಕಂಟೈನರ್ ಹಡಗುಗಳು ಸೇರಿವೆ. ಎಲ್ಲಾ ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಮತ್ತು ಕಳೆದ 24 ಗಂಟೆಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲ, ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂರೈಕೆ ಮೇಲೆ ಒತ್ತಡ

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಪ್ರತೀಕಾರ ದಾಳಿಗಳಿಂದಾಗಿ ಹಾರ್ಮುಜ್ ಜಲಸಂಧಿ ಪ್ರಸ್ತುತ ಮುಚ್ಚಲ್ಪಟ್ಟಿದೆ. ಪರ್ಯಾಯ ಮೂಲಗಳಿಂದ ತೈಲ ಆಮದಿನ ವ್ಯತ್ಯಯವನ್ನು ಭಾಗಶಃ ಸರಿದೂಗಿಸಲಾಗಿದ್ದರೂ, ಅನಿಲ ಮತ್ತು ಎಲ್‌ಪಿಜಿ ಪೂರೈಕೆ ಮೇಲೆ ಒತ್ತಡ ಮುಂದುವರಿದಿದೆ. ಈ ಬಿಕ್ಕಟ್ಟಿನ ಸಮಯದಲ್ಲಿ ಹಡಗು ಕಾರ್ಯಾಚರಣೆ ಸುಗಮಗೊಳಿಸಲು ಪ್ರಮುಖ ಭಾರತೀಯ ಬಂದರುಗಳು ಶೇಖರಣೆ ಮತ್ತು ಲಂಗರು ಹಾಕುವ ಶುಲ್ಕದಲ್ಲಿ ರಿಯಾಯಿತಿಗಳನ್ನು ನೀಡುತ್ತಿವೆ.

ಲಂಚ ಪಡೆಯುತ್ತಿದ್ದ ಪಿಡಿಒ ಲೋಕಾಯುಕ್ತ ಬಲೆಗೆ

ಮೈಸೂರು: ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಪಿಡಿಒರೊಬ್ಬರು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿ ಬಿದ್ದ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ನಡೆದಿದೆ. ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯ್ತಿ ಪಿಡಿಒ ಮಂಜುಳಾ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದವರು. ನೀರುಗಂಟಿಯಾಗಿ ಕೆಲಸ ಮಾಡುತ್ತಿದ್ದ ಸ್ವಾಮಿ ಎಂಬುವರು ಕರ್ತವ್ಯದಲ್ಲಿದ್ದ ವೇಳೆ ಮೃತಪಟ್ಟಿದ್ದಾರೆ. ಅನುಕಂಪದ ಆಧಾರದ ಮೇಲೆ ಸ್ವಾಮಿರವರ ಮಗ ಮಹದೇವ್ ಎಂಬುವರಿಗೆ ಕೆಲಸ ಸಿಕ್ಕಿದೆ. ತಂದೆ ಕರ್ತವ್ಯ ನಿರ್ವಹಿಸಿದ್ದ ಎರಡು ವರ್ಷದ ಸಂಬಳ ಬಾಕಿ ಪಡೆಯಲು ಮಹದೇವ್ ಮುಂದಾಗಿದ್ದಾರೆ. ಸುಮಾರು ನಾಲ್ಕು ಲಕ್ಷ ಸಂಬಳ ನೀಡಲು ಮಂಜುಳಾ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಇವರ ಕಿರುಕುಳದಿಂದ ಬೇಸತ್ತ ಮಹದೇವ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದಾರೆ. ಮಹದೇವ್‌ರಿಂದ ತಮ್ಮ ಕಚೇರಿಯಲ್ಲಿ ಮಂಜುಳಾ 25 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್ ಹ್ಯಾಂಡಾಗಿ ಹಿಡಿದಿದ್ದಾರೆ. ಈ ವೇಳೆ ಮಂಜುಳಾ ತನ್ನ ಕೈಯನ್ನ ಹರಿತವಾದ ಆಯುಧದಿಂದ ಕೊಯ್ದುಕೊಂಡಿದ್ದಾರೆ. ಗಾಯಗೊಂಡ ಮಂಜುಳಾರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿದ್ಯುತ್ ತಗುಲಿ ಹುಲಿ ಸಾವು



ಪುಟ ೧➡ ತಾಲೂಕಿನ ಹೆಗ್ಗಡಹಳ್ಳಿ, ಹಕ್ಕಲಪುರ, ಸೋಮಹಳ್ಳಿ, ಸಂಪಿಗೆಪುರ, ಕಲ್ಲಹಳ್ಳಿ ಪಡಗೂರು ಭಾಗದಲ್ಲಿ ಕಾಣಿಸಿಕೊಂಡಿದ್ದು ಕೆಲ ದಿನಗಳ ಹಿಂದೆ ಸಂಪಿಗೆಪುರ ಹಾಗೂ ದೇಪಾಪುರದ ಬಳಿ ಹುಲಿ ಸೆರೆಹಿಡಿಯಲಾಗಿತ್ತು. ಪಡಗೂರು ಗ್ರಾಮದ ಸುತ್ತಮುತ್ತ ಹುಲಿ ಓಡಾಟ ಹೆಚ್ಚಳವಾಗಿದ್ದು ಕಳೆದ ವಾರ ಪಡಗೂರಿನಲ್ಲಿ ಜಾನುವಾರುವಿನ ಮೇಲೆ ದಾಳಿ ಮಾಡಿ ಕೊಂದು ಹಾಕಿತ್ತು. ಇದರಿಂದಾಗಿ ಹುಲಿ ಸೆರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಬೋನು ಇಟ್ಟು ನಿಗಾ ವಹಿಸಿದ್ದರು.

ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

ಪುಟ ೧➡ ಮನೆ ಮನೆಗೆ ಸಂಪರ್ಕ ಮಾಡಿದ ಸಂದರ್ಭದಲ್ಲಿ ಮತಾಂತರ, ಡ್ರಗ್ಸ್, ಜನಸಂಖ್ಯೆಯಲ್ಲಿನ ಅಸಮತೋಲನ ಸೇರಿದಂತೆ ಸಮಾಜದ ಸಮಸ್ಯೆಗಳ ಬಗ್ಗೆ ಜನರು ಬೆಳಕು ಚೆಲ್ಲಿದ್ದರು. ಹಿಂದು ಸಮಾಜೋತ್ಸವದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗಿಯಾಗಿದ್ದು ವಿಶೇಷವಾಗಿತ್ತು ಎಂದು ಹೇಳಿದರು.

ಶಾಖೆಯಲ್ಲಿ ಹೆಚ್ಚಳ

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗಳು ನಡೆಯುತ್ತಿದ್ದು, ಕಳೆದ ವರ್ಷಕ್ಕಿಂತ 5820 ಶಾಖೆಗಳು ಹೆಚ್ಚಾಗಿವೆ. ವಾರಕ್ಕೊಮ್ಮೆ ನಡೆಯುವ ಮಿಲನ್ ಸಂಖ್ಯೆ ಕಳೆದ ಬಾರಿಗಿಂತ 459 ಹೆಚ್ಚಾಗಿದ್ದು, ಪ್ರಸ್ತುತ ದೇಶವ್ಯಾಪಿ 32,606 ಮಿಲನ್‌ಗಳು ಜರುಗುತ್ತಿವೆ. ತಿಂಗಳಿಗೊಮ್ಮೆ ನಡೆಯುವ ಮಂಡಲಿಗಳು ಒಟ್ಟು 13,211 ಇವೆ. ಒಟ್ಟಾರೆ ಶಾಖೆ, ಮಿಲನ್ ಮತ್ತು ಮಂಡಲಿಗಳು ಸೇರಿ ಒಟ್ಟು 1,34,766 ಶಾಖೆ ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

ಕಾರ್ಯಕರ್ತ ಪ್ರಶಿಕ್ಷಣ ವರ್ಗ

ದೇಶಾದ್ಯಂತ ಕಾರ್ಯಕರ್ತರ ಪ್ರಶಿಕ್ಷಣ ವರ್ಗಗಳು ನಡೆದಿದ್ದು, ಒಟ್ಟು 63 ಸಂಘ ಶಿಕ್ಷಾ ವರ್ಗಗಳಲ್ಲಿ 14,024 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಈ ವರ್ಷ ಕರ್ನಾಟಕದಲ್ಲೂ ನಾಲ್ಕು ಸಂಘ ಶಿಕ್ಷಾ ವರ್ಗಗಳು ನಡೆಯಲಿದ್ದು, ಘೋಷ್ ವರ್ಗ ಸೇರಿಸಲಾಗುವುದು ಎಂದು ತಿಳಿಸಿದರು.

ಗಣ್ಯರಿಗೆ ಶ್ರದ್ಧಾಂಜಲಿ ಸಂತಾಪ

ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆ ನೀಡಿ ನಮ್ಮನ್ನಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ದೇಶದ ಅನೇಕ ಗಣ್ಯರ ಜತೆಗೆ ಕರ್ನಾಟಕದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ, ಹಿಂದುಸ್ಥಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಪುಟ ೧➡ ದೀಪೋತ್ಸವ, ಕಬಡ್ಡಿ ಸ್ಪರ್ಧೆ ಸೇರಿದಂತೆ 17 ವಿವಿಧ ಉಪಕ್ರಮಗಳೊಂದಿಗೆ ಯುವಕರ ಸಂಪರ್ಕ ಮಾಡಲಾಯಿತು. 13 ಸ್ಥಾನಗಳಲ್ಲಿ ಜಾಯ್ನ್ ಆರ್‌ಎಸ್‌ಎಸ್ ಅಭಿಯಾನ ಮತ್ತು 2815 ಸಣ್ಣಸಭೆಗಳು ನಡೆದವು. ಒಟ್ಟಾರೆ 8799 ವಿದ್ಯಾರ್ಥಿಗಳು ಮತ್ತು 3973 ತರುಣ ಉದ್ಯೋಗಿಗಳು ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಉಪಸ್ಥಿತಿಯಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಮುಖರನ್ನು ಆಹ್ವಾನಿಸಲಾಗಿದ್ದ ಬೃಹತ್ ಸಂವಾದ ಕಾರ್ಯಕ್ರಮ ಧಾರವಾಡದ ಗರಗದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಯೋಜಿಸಲಾಗಿತ್ತು. 191 ಸ್ಥಾನಗಳಿಂದ 540 ಸಂಸ್ಥೆಗಳಿಂದ 920 ಪ್ರಮುಖರು ಭಾಗವಹಿಸಿದ್ದರು. ವಿಜಯಪುರದಲ್ಲಿ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಭೇಟಿಯ ಸಂದರ್ಭದಲ್ಲಿ ಯುವ ಸಾಧು ಸಂತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿವಿಧ ಪಂಥಗಳ 230 ಸಂತರು ಭಾಗವಹಿಸಿದ್ದರು. ಶತಾಬ್ದಿಯ ನಿಮಿತ್ತ ದೇಶದ 4 ಮಹಾನಗರಗಳಲ್ಲಿ ಸರಸಂಘಚಾಲಕರ ವ್ಯಾಖ್ಯಾನಮಾಲೆ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು. ಬೆಂಗಳೂರಿನ ಕಾರ್ಯಕ್ರಮದಲ್ಲಿ 13 ವಿವಿಧ ಕ್ಷೇತ್ರಗಳಿಂದ ಗಣ್ಯರನ್ನು ಆಹ್ವಾನಿಸಲಾಗಿತ್ತು. ಒಟ್ಟು 1228 ಜನರು ಭಾಗಿಯಾಗಿದ್ದರು ಎಂದು ತಿಪ್ಪೇಸ್ವಾಮಿ ತಿಳಿಸಿದರು.

ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಮುಖ್ಯಮಂತ್ರಿ

ವಿಧಾನಸಭೆ: ರಾಜ್ಯದಲ್ಲಿ 2026 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಬುಧವಾರದಿಂದ ಪ್ರಾರಂಭವಾಗುತ್ತಿದ್ದು, ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಕರ್ನಾಟಕ ವಿಧಾನಸಭೆ ಶುಭಾಶಯ ಕೋರಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಶುಭ ಹಾರೈಸಲು ಅವಕಾಶ ನೀಡಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಪ್ರಸ್ತುತ ಸಾಲಿನಲ್ಲಿ 8,65,968 ಮಕ್ಕಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದ್ದು, ಮೂರು ಹಂತದಲ್ಲಿ ಪರೀಕ್ಷೆಗಳು ನಡೆಯುತ್ತವೆ. ಒಂದು ವೇಳೆ ಮೊದಲ ಹಂತದ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾಗ್ಯೂ ಎರಡನೇ ಹಂತ, ಮೂರನೇ ಹಂತದಲ್ಲಿ ಪರೀಕ್ಷೆಗೆ ಅವಕಾಶ ಇರುವುದರಿಂದ ಯಾವುದೇ ವಿದ್ಯಾರ್ಥಿಗಳು ಆತಂಕಗೊಳ್ಳದೆ ಪರೀಕ್ಷೆಯನ್ನು ಎದುರಿಸುವಂತೆ ತಿಳಿಸಿ ಎಸ್ಎಸ್ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಧೈರ್ಯವಾಗಿ ಪರೀಕ್ಷೆ ಬರೆಯಲು ತಿಳಿಸಿದರು. ಅದಕ್ಕೂ ಮೊದಲು ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಎಸ್ಎಸ್ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಈ ಹಿಂದೆ ಒತ್ತಡದಿಂದ ಪರೀಕ್ಷೆಗೆ ಹಾಜರಾಗುತ್ತಿದ್ದರು.

ಸುಳ್ಳು ಸುದ್ದಿ ಹರಡುವವರಿಗೆ ಎಚ್ಚರಿಕೆ ಕೊಡಿ

ಪ್ರತಿಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಪೋಷಕರು ಮಾನಸಿಕ ಹಿಂಸೆ ನೀಡಬಾರದು. ವರ್ಷಪೂರ್ತಿ ಸುಮ್ಮನಿದ್ದು, ಈಗ ಒತ್ತಡದಿಂದ ಪರೀಕ್ಷೆ ಬರೆಯುವಂತೆ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗುತ್ತಿದೆ ಎಂದು ಸುಳ್ಳು ಸುದ್ದಿಗಳು ಬರುತ್ತಿವೆ. ಅಂತಹ ಸುದ್ದಿ ಹರಡುವವರನ್ನು ಜೈಲಿಗೆ ಹಾಕುವ ಎಚ್ಚರಿಕೆಯನ್ನು ನೀಡಬೇಕು ಎಂದು ತಿಳಿಸಿದರು.

ಸಭೆ



ದಿಲ್ಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ನಡೆದ ರಾಜ್ಯದ ಸಂಸದರ ಜೊತೆ ಸಭೆಯಲ್ಲಿ ಯುಕೆಪಿ, ಮೇಕೆದಾಟು, ಮಹದಾಯಿ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಅಡೆತಡೆ ನಿವಾರಣೆ ಸಂಬಂಧ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಸಂಬಂಧ ಚರ್ಚೆ ನಡೆಸಲಾಯಿತು. ಡಿಸಿಎಂ ಡಿ.ಕೆ. ಶಿವಕುಮಾರ್,ಸಚಿವರಾದ ಎಚ್.ಕೆ.ಪಾಟೀಲ್, ಭೋಸರಾಜು, ಎಂ.ಬಿ.ಪಾಟೀಲ್ ಹಾಗೂ ಸಂಸದರಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಇದ್ದರು.

ಉದ್ದಿಮೆದಾರರಿಗೆ ಜಮೀನು

ವಿಧಾನ ಪರಿಷತ್: ಕಳೆದ 2 ವರ್ಷಗಳಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ 2,954.52 ಎಕರೆ ಜಮೀನನ್ನು 1,445 ಉದ್ದಿಮೆದಾರರಿಗೆ ಹಂಚಿಕೆ ಮಾಡಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ರವಿಕುಮಾರ್ ಅವರ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಕೆಐಎಡಿಬಿಯಿಂದ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳಾದ ರಸ್ತೆ, ಸಂಪರ್ಕ ವ್ಯವಸ್ಥೆ, ನೀರು, ಚರಂಡಿ, ವಿದ್ಯುತ್ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು. 2022-23 ರಿಂದ ಫೆಬ್ರವರಿ 2026ರ ಅಂತ್ಯದವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 2,028 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲಿ

ವಿಧಾನ ಪರಿಷತ್: ಅಡಕೆ ಬೆಳೆಗಾರರಿಗೆ ಒಂದೆಡೆ ಎಲೆಚುಕ್ಕೆ ರೋಗ, ಹಳದಿ ರೋಗದ ಬಾಧೆಯಾದರೆ, ಮತ್ತೊಂದೆಡೆ ಈಶಾನ್ಯ ರಾಜ್ಯಗಳಿಂದ ಅಡಿಕೆ ರಾಜ್ಯದ ಮಾರುಕಟ್ಟೆಗೆ ಬರುತ್ತಿರುವುದರಿಂದ ಅಡಕೆ ಬೆಲೆ ಪಾತಾಳಕ್ಕೆ ಕುಸಿಯುತ್ತಿದೆ. ಅಡಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಜೆಡಿಎಸ್ ಸದಸ್ಯ ಭೋಜೆಗೌಡ ಒತ್ತಾಯಿಸಿದರು.

ಬಜೆಟ್ ಚರ್ಚೆ ಕಲಾಪದ ವೇಳೆ ಈ ವಿಷಯ ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಮಲೆನಾಡು/ಅರೆ ಮಲೆನಾಡು ಸೇರಿದಂತೆ ರಾಣೆಬೆನ್ನೂರುವರೆಗೆ ಅಡಿಕೆ ಬೆಳೆ ವಿಸ್ತರಿಸಿದೆ. ಸುಮಾರು 6.75 ಲಕ್ಷ ಹೆಕ್ಟೇರು ಅಡಿಕೆ ಬೆಳೆಯಿದೆ. ವಾರ್ಷಿಕ ಬೆಳೆ 10 ಲಕ್ಷ ಟನ್ ಉತ್ಪಾದನೆಯಾಗುತ್ತದೆ. 50 ಹೆಕ್ಟರ್ ಪ್ರದೇಶದಲ್ಲಿ ಹಳದಿ ಎಲೆ ಚುಕ್ಕಿ ರೋಗ, 15 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಕೊಳೆ ರೋಗ ವ್ಯಾಪಿಸಿದೆ ಎಂದರು.

ಕಿರುಸುದ್ದಿ

ಕುಡಿಯುವ ನೀರಿಗೆ 490 ಕೋಟಿ ರೂ. ಮೀಸಲು

ವಿಧಾನಸಭೆ: ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ 490 ಕೋಟಿ ರೂ.ಗಳನ್ನು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಮೀಸಲಿಟ್ಟಿದೆ ಎಂದು ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಮಂಜುನಾಥ್ ಎಂ.ಆರ್. ಅವರ ಪ್ರಶ್ನೆಗೆ ಸಣ್ಣ ನೀರಾವರಿ ಸಚಿವರ ಪರವಾಗಿ ಉತ್ತರಿಸಿದ ಅವರು, ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನೀರಾವರಿ ಕೆರೆಗಳು, ಪಿಕಪ್ ಚೆಕ್ ಡ್ಯಾಂ ನಿರ್ಮಾಣ, ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ ಹಾಗೂ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ 9 ಕೋಟಿ ರೂ.ಗಿಂತ ಹೆಚ್ಚು ಅನುದಾನವನ್ನು ಹನೂರು ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ. ಅಲ್ಲದೇ ಪ್ರಸ್ತುತ ಆಯವ್ಯಯದಲ್ಲಿ 490 ಕೋಟಿ ರೂ. ಅನುದಾನವನ್ನು ಮೀಸಲಿರಿಸಿದೆ ಎಂದು ಮಾಹಿತಿ ನೀಡಿದರು.

ಹೊಸ ಕೆಎಸ್ಆರ್‌ಪಿ ಪಡೆ ಸ್ಥಾಪನೆ ಪರಿಶೀಲನೆ

ವಿಧಾನಸಭೆ: ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆಎಸ್ಆರ್‌ಪಿ ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅಗತ್ಯತೆ ಆಧಾರದ ಮೇಲೆ ರಾಯಚೂರು ಜಿಲ್ಲೆಯಲ್ಲಿ ಕೆಎಸ್ಆರ್‌ಪಿ ಪಡೆ ಸ್ಥಾಪಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ತುರುವಿಹಾಳ್ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಎಸ್ಆರ್‌ಪಿ ಪಡೆ ಅಗತ್ಯವಿದ್ದು, 175 ಎಕರೆ ಜಾಗವನ್ನು ಹಾಗೂ ಕೆ.ಕೆ. ಆರ್.ಡಿ.ಬಿ.ಯ ಅನುದಾನವನ್ನು ಸಹ ನೀಡಲಾಗುವುದು ಎಂದು ತಿಳಿಸಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಶಾಸಕರು ಗೃಹ ಸಚಿವರಿಗೆ ಈಗಾಗಲೇ ಮನವಿ ಸಲ್ಲಿಸಿದ್ದಾರೆ ಎಂದರು. ಇದಕ್ಕೆ ಉತ್ತರಿಸಿದ ಸಚಿವರು, ರಾಯಚೂರು ಭಾಗದ 30 ಶಾಸಕರು ಸಹಿ ಮಾಡಿ ರಾಯಚೂರು ಭಾಗಕ್ಕೆ ಕೆಎಸ್ ಆರ್‌ಪಿ ಪಡೆ ಸ್ಥಾಪಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಈಗಾಗಲೇ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ 12 ಕೆಎಸ್ ಆರ್‌ಪಿ ಪಡೆಗಳು ಕಾರ್ಯನಿರ್ವಹಿಸುತ್ತಿವೆ. ರಾಯಚೂರು ಭಾಗದಲ್ಲಿ ವಿಶ್ವಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳು, ಅಣೆಕಟ್ಟೆಗಳು, ಗಡಿಭಾಗಗಳು ಇರುವುದರಿಂದ ಈ ಕುರಿತು ಪರಿಶೀಲಿಸಿ, ಶಾಸಕರ ಮನವಿಯನ್ನಾಧರಿಸಿ ಆರ್ಥಿಕ ಇಲಾಖೆಗೆ ಈಗಾಗಲೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಗತ್ಯತೆ ಅನುಸಾರ ಆರ್ಥಿಕ ಇಲಾಖೆ ಅನುಮೋದನೆ ಪಡೆದು ಕೆಎಸ್ಆರ್‌ಪಿ ಪಡೆ ಸ್ಥಾಪನೆ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಜಾಲತಾಣಗಳ ದುರ್ಬಳಕೆಗೆ ಭಾರತಿ ಶೆಟ್ಟಿ ಆಗ್ರಹ

ವಿಧಾನ ಪರಿಷತ್: ಸಾಮಾಜಿಕ ಜಾಲತಾಣಗಳ ದುರ್ಬಳಕೆಯ ಫಲವಾಗಿ ಅನೇಕರು ಆತಂಕ, ಬ್ಲಾಕ್ ಮೇಲ್, ನಿದ್ರಾಹೀನತೆಯಂತಹ ಗಂಭೀರ ಸಮಸ್ಯೆಗೆ ಎದುರಿಸುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಗಂಭೀರ ಹೆಜ್ಜೆ ಇರಿಸಬೇಕು ಎಂದು ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಸದನದಲ್ಲಿ ಗಮನ ಸೆಳೆದರು. ಶೂನ್ಯವೇಳೆಯಲ್ಲಿ ವಿಷಯವನ್ನು ಮಂಡಿಸಿದ ಅವರು, ಸಾಮಾಜಿಕ ಜಾಲತಾಣಗಳ ದುರುಪಯೋಗದಿಂದ ಆಗುತ್ತಿರುವ ಪರಿಣಾಮಗಳ ಕುರಿತು ಸ್ವಯಂ ಸೇವಾ ಸಂಸ್ಥೆಯೊಂದು 11 ಸಾವಿರಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಸಮೀಕ್ಷಾ ವರದಿ ಒದಗಿಸಿದೆ.

ನವೀನ್ ಹೋಟೆಲ್ಸ್ ವಿರುದ್ಧದ ಭೂ ಹಗರಣ ಆರೋಪ

ವಂಚನೆ ನಡೆದಿಲ್ಲ

ವಿಧಾನ ಪರಿಷತ್: ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್ಸ್‌ಗೆ 114.17 ಎಕರೆ ಜಮೀನು ಸಂಬಂಧ ಯಾವ ರೀತಿಯ ಹಗರಣ ನಡೆದಿಲ್ಲ. ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಥವಾ ಉಪನೋಂದಣಾಧಿಕಾರಿಗಳ ಮಾರ್ಗಸೂಚಿ ದರವನ್ನು ಮಂಡಳಿ ಪಡೆಯುವುದಿಲ್ಲ. ಹೀಗಾಗಿ ಇಲ್ಲಿ ಮುದ್ರಾಂಕ ಶುಲ್ಕದ ವಂಚನೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಜಕ್ಕಪ್ಪನವರ್ ಕೇಳಿದ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಗಾಲ್ಫ್ ಕ್ಲಬ್ ಎಂದರೆ ಗ್ರೀನ್ ಬೆಲ್ಟ್. ಅಲ್ಲಿ ಯಾವ ವಿಶೇಷವಾಗಿ ಗಾಲ್ಫ್ ಕೋರ್ಸ್, ಗಾಲ್ಫ್ ಕ್ಲಬ್ ಚಟುವಟಿಕೆ ಹೊರತುಪಡಿಸಿ ಉಳಿದ ಯಾವ ಚಟುವಟಿಕೆಗಳನ್ನು ನಡೆಸುವುದಿಲ್ಲ. ಆದರೆ, ಒಂದು ವೇಳೆ ಅಲ್ಲಿ ಅನ್ಯ ವಾಣಿಜ್ಯಿಕ ಚಟುವಟಿಕೆಗಳು ನಡೆಯುತ್ತಿರುವ ದೂರು ಬಂದಿದ್ದರೆ ಅದನ್ನು ಇಲಾಖಾ ಕಾರ್ಯದರ್ಶಿಯ ಮಟ್ಟದಲ್ಲಿ ತನಿಖೆ ನಡೆಸಲು ಆದೇಶಿಸಲಾಗುವುದು, ಒಂದು ವೇಳೆ ಹೋಟೆಲ್ ಗಾಲ್ಫ್ ಚಟುವಟಿಕೆ ಹೊರತುಪಡಿಸಿ ಅನ್ಯ ವಾಣಿಜ್ಯಿಕ ಉದ್ದೇಶಗಳಿಗೆ ಜಮೀನು ಬಳಕೆ ಮಾಡಿಕೊಳ್ಳುತ್ತಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದರು.



ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ

ಇದಕ್ಕೂ ಮೊದಲು ಕಾಂಗ್ರೆಸ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ್ ಮಾತನಾಡಿ, ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್ಸ್‌ಗೆ 114.17 ಎಕರೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೋಂದಾಯಿಸದೇ ಕೇವಲ 97.61,433 ರೂ.ಗಳಿಗೆ ನೋಂದಾಯಿಸಿ 150 ಕೋಟಿ ರೂ. ಮುದ್ರಾಂಕ ಹಾಗೂ ನೋಂದಣಿ ಶುಲ್ಕ ವಂಚನೆಯಾಗಿದೆ. ಯಾವುದೇ ದೇಶದಲ್ಲೂ 114 ಎಕರೆ ಜಮೀನು ಗಾಲ್ಫ್ ಕ್ಲಬ್‌ಗೆ ನೀಡಿರುವ ಉದಾರಹಣೆ ಇಲ್ಲ. ಕೋಟ್ಯಂತರ ರೂ. ಬೆಲೆ ಬಾಳುವ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ ಮಾಡಲಾಗಿದೆ. ಅಲ್ಲಿ ಯಾವ ಗಾಲ್ಫ್ ಕ್ಲಬ್ ಸಹ ನಿರ್ಮಾಣಗೊಂಡಿಲ್ಲ. ಒಂದು ರೀತಿಯಲ್ಲಿ ಅಲ್ಲಿ ಖಾಸಗಿ ಲೇಔಟ್ ಮಾಡುವ ದೊಡ್ಡಮಟ್ಟದ ಪ್ರಯತ್ನ ನಡೆದಿದೆ, ಇದೊಂದು ದೊಡ್ಡ ಭೂ-ಹಗರಣ, ಹೀಗಾಗಿ ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಹ ದನಿಗೂಡಿಸಿ ತನಿಖೆಗೆ ಒತ್ತಾಯಿಸಿದರು.

ಜಿಲ್ಲೆಗಳಲ್ಲಿ ವಿಶೇಷ ಪಡೆ: ಸಚಿವ ಆರ್.ಬಿ. ತಿಮ್ಮಾಪುರ

ಅಕ್ರಮ ಮದ್ಯ, ತಡೆಗೆ ಕಾಯ್ದೆ?

ವಿಧಾನಸಭೆ: ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ವಿಷಯ ಪ್ರಸ್ತಾಪಿಸಿ, ರಾಯಚೂರು ಜಿಲ್ಲೆಯಲ್ಲಿ ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳು ಹಾಗೂ ಕಿರಾಣಿ ಅಂಗಡಿಗಳಲ್ಲೂ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮ ಆಗುತ್ತಿಲ್ಲ. ಈ ಬಗ್ಗೆ ಸರ್ಕಾರ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ವಿಶೇಷ ಪಡೆಗಳನ್ನು ರಚಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮವು ಹಳೆಯದಾಗಿದ್ದು, ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ಸೇರಿಸಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಮದ್ಯ ಅಕ್ರಮ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ತಿಳಿಸಿದರು.



ಶೇಂದಿ ಮಾರಾಟ

ರಾಯಚೂರು ಜಿಲ್ಲೆಯಲ್ಲಿ ಅಕ್ರಮವಾಗಿ ಕ್ಲೋರಲ್ ಹೈಡ್ರೇಟ್ ಪೌಡರ್‌ನಿಂದ ಕೃತಕವಾಗಿ ಶೇಂದಿಯನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಜಿಲ್ಲೆಯ ಗಡಿ ಭಾಗಗಳಿಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದ ಸೇಂದಿ ಅಥವಾ ಕೃತಕ ಸೇಂದಿಯು ರಸ್ತೆ ಹಾಗೂ ರೈಲು ಮಾರ್ಗವಾಗಿ ಕಳ್ಳಸಾಗಾಣಿಕೆಯಾಗುತ್ತಿದೆ. ಈ ರೀತಿ ಅಕ್ರಮವಾಗಿ ಶೇಂದಿ ಅಥವಾ ಕೃತಕ ಸೇಂದಿಯನ್ನು ತಯಾರಿಸುತ್ತಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಸರ್ಕಾರದಿಂದ ದುಂದುವೆಚ್ಚ: ವಿಶ್ವನಾಥ್

ವಿಧಾನ ಪರಿಷತ್: ಇನ್ಫೋಸಿಸ್ ದಿಗ್ಗಜರಾದ ನಾರಾಯಣಮೂರ್ತಿ, ಸುಧಾ ನಾರಾಯಣಮೂರ್ತಿ ಅಂತಹ ಅಗರ್ಭ ಶ್ರೀಮಂತರೇ ಇಂಡಿಗೋ ವಿಮಾನದಲ್ಲಿ ಹೊಸದಿಲ್ಲಿಗೆ ಹೋಗುತ್ತಾರೆ. ಆದರೆ, ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಿಂದ ಮೈಸೂರು, ಹುಬ್ಬಳ್ಳಿ ಹಾಗೂ ಹೊಸದಿಲ್ಲಿಗೆ ವಿಶೇಷ ವಿಮಾನದಲ್ಲಿ ಹಾರುತ್ತಾರೆ. ಅವರ ಸಂಪುಟ ಸಹೋದ್ಯೋಗಿಗಳೂ ಇದೇ ಹಾದಿಯನ್ನು ಅನುಸರಿಸುತ್ತಿದ್ದಾರೆ. ಪರಿಣಾಮ ರಾಜ್ಯ ಸರ್ಕಾರದ ದುಂದುವೆಚ್ಚ ಹೆಚ್ಚುತ್ತಿದೆ ಎಂದು ಹಿರಿಯ ಸದಸ್ಯ ಎಚ್. ವಿಶ್ವನಾಥ್ ತರಾಟೆಗೆ ತೆಗೆದುಕೊಂಡರು.

ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆ ವೇಳೆಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಿಂದ – ಮೈಸೂರಿಗೆ ಕೇವಲ ಒಂದೂವರೆ ಗಂಟೆಯಲ್ಲಿ ತಲುಪಬಹುದು. ಬೆಂಗಳೂರಿನಿಂದ ಹೊಸದಿಲ್ಲಿಗೆ ಸಾಮಾನ್ಯ ವಿಮಾನದಲ್ಲಿ ಹೋಗಬಹುದು. ಆದರೆ, ಮೈಸೂರು, ದಿಲ್ಲಿಗೂ ಸಿಎಂ ವಿಶೇಷ ವಿಮಾನದಲ್ಲೇ ಪ್ರಯಾಣಿಸುತ್ತಾರೆ. ಇದಕ್ಕಾಗಿ ಸರ್ಕಾರ 38 ಕೋಟಿ ರೂ. ಖರ್ಚು ಮಾಡಿದೆ. ಇದು ಯಾರ ಹಣ, ಜನತೆ ಬೆವರು ಸುರಿಸಿ ಸರ್ಕಾರಕ್ಕೆ ಕಟ್ಟಿದ ತೆರಿಗೆ ಹಣ ಪೋಲಲ್ಲವೇ? ಈ ಸರ್ಕಾರದಲ್ಲಿ ದುಂದು ವೆಚ್ಚಗಳು ನಾಗಾಲೋಟದಲ್ಲಿದೆ ಎಂದರು.

ಒಳಚರಂಡಿ ಕಾಮಗಾರಿ ನಗರಸಭೆಗೆ ಹಸ್ತಾಂತರ

ವಿಧಾನ ಪರಿಷತ್: ಭದ್ರಾವತಿ ನಗರದಲ್ಲಿ 16 ಕೋಟಿ ರೂ. ಮತ್ತು ಅಮೃತ್ 1 ರಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡು ನಗರಸಭೆಗೆ ಹಸ್ತಾಂತರ ಮಾಡಲಾಗಿದೆ. ಅದರಂತೆ ನಗರಸಭೆ ಈ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆ ಮಾಡಲಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದರು.

» ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿಕೆ

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯೆ ಬಲ್ಕಿಸ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಒಳಚರಂಡಿ ಯೋಜನೆ ಕಾಮ ಗಾರಿಯಲ್ಲಿ ಲೋಪದೋಷಗಳ ಬಗ್ಗೆ ಮೂರನೇ ಸಂಸ್ಥೆಯಿಂದ ತನಿಖೆ ನಡೆಸಿ ತಪ್ಪಿತಸ್ಥರ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಕೆಎಂಆರ್‌ಪಿ ಯೋಜನೆಯಲ್ಲಿ ಭದ್ರಾವತಿ ಸೇರಿದಂತೆ 32 ನಗರ/ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆ

ವಿಧಾನ ಪರಿಷತ್ : ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಯೋಜನೆಯ ಬಾಕಿ ಇರುವ ಕಾಮಗಾರಿಗಳಿಗೆ ಇನ್ನೂ 35.45 ಕೋಟಿ ರೂ. ಅಗತ್ಯವಿದೆ ಎಂದು ಸಚಿವ ಬೈರತಿ ಸುರೇಶ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ನಗರ /ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರು ಪೂರೈಕೆಗೆ ಹಣದ ಅಗತ್ಯವಿದ್ದು, ಈ ಹಣವನ್ನು ಕ್ರೋಢೀಕರಿಸಿ ಪುರಸಭೆ ವತಿಯಿಂದಲೇ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಅಡಕೆ ಹಾಳೆ ತಟ್ಟೆ ಸುರಕ್ಷಿತ

ವಿಧಾನ ಪರಿಷತ್: ಅಡಕೆ ಹಾಳೆ ತಟ್ಟೆಗಳ ಕುರಿತ ಆತಂಕಕ್ಕೆ ವೈಜ್ಞಾನಿಕ ಸಂಶೋಧನಾ ವರದಿಯು ತೆರೆ ಎಳೆದಿದೆ. ಅಡಿಕೆ ತಟ್ಟೆಗಳಲ್ಲಿ ಆಲ್ಕಲಾಯ್ಡ್ ಮಟ್ಟವು ಅತ್ಯಂತ ಅಲ್ಪ ಪ್ರಮಾಣದಲ್ಲಿದ್ದು, ಇದು ಬಲಿತ ಅಡಿಕೆ ಕಾಯಿಗಿಂತಲೂ ಸಾವಿರಾರು ಪಟ್ಟು ಕಡಿಮೆಯಿದೆ. ಇದು ಸಂಪೂರ್ಣ ಸುರಕ್ಷಿತ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.

ಸದಸ್ಯ ಪ್ರತಾಪ್ ಸಿಂಹ ನಾಯಕ್ ಅವರು ಕೇಳಿದ ಪ್ರಶ್ನೆಗೆ ಮೇಲ್ಮನೆಯಲ್ಲಿ ಅಡಿಕೆ ಕುರಿತು ಎದ್ದಿದ್ದ ಸಂಶಯಗಳಿಗೆ ಕೃಷಿ ಸಚಿವ ಚೆಲುವರಾಯಸ್ವಾಮಿ ಅವರು ಉತ್ತರಿಸಿದ್ದಾರೆ.

ಅಡಕೆಗೆ ಅಂಟಿರುವ ಕಳಂಕವನ್ನು ವೈಜ್ಞಾನಿಕವಾಗಿ ತೊಡೆದುಹಾಕುವ ನಿಟ್ಟಿನಲ್ಲಿ ರಾಜ್ಯ ತೋಟಗಾರಿಕೆ ಇಲಾಖೆಯು ಬೆಂಗಳೂರಿನ ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯಕ್ಕೆ ವಿಶೇಷ ಅಧ್ಯಯನದ ಜವಾಬ್ದಾರಿ ವಹಿಸಿತ್ತು. ಈ ಸಂಬಂಧ ಈ ಸಂಸ್ಥೆಯು ಅಡಿಕೆಗಾಗಿ ಫೈಟೊಕೆಮಿಕಲ್ ಮತ್ತು ಕೀಟನಾಶಕ ಘಟಕಗಳ ಮೌಲ್ಯಮಾಪನ – ಆರೋಗ್ಯ, ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಮಾಪನ ಎಂಬ ಯೋಜನೆಯನ್ನು ಕೈಗೆತ್ತಿಕೊಂಡು, ಸುಮಾರು 31.80 ಲಕ್ಷ ರೂ. ವೆಚ್ಚದಲ್ಲಿ ಸಂಶೋಧನೆ ಕೈಗೊಂಡಿದ್ದು, ಪಾನ್ ಅಥವಾ ಪಾನ್ ಮಸಾಲದಂತಹ ಪದಾರ್ಥಗಳಲ್ಲಿ ಅಡಿಕೆಯನ್ನು ಕೇವಲ ಒಂದೇ ಅಂಶವಾಗಿ ಬಳಸಿ, ಅದಕ್ಕೆ ತಂಬಾಕು ಸೇರಿಸದೇ ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಅದು ಖಂಡಿತವಾಗಿಯೂ ಹಾನಿಕಾರಕವಲ್ಲ ಎಂದು ಈ ಸಂಸ್ಥೆಯು ತನ್ನ ಸಂಶೋಧನಾ ವರದಿಯಲ್ಲಿ ಸ್ಪಷ್ಟಪಡಿಸಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಅಡಿಕೆ ಕುರಿತ ಸಾಕ್ಷ್ಯಾಧಾರಿತ ಸಂಶೋಧನೆಗೆ ದಿಲ್ಲಿಯ ಏಮ್ಸ್, ಹೈದರಾಬಾದ್‌ನ ಸಿಎಸ್ಐಆರ್, ಕಾಸರಗೋಡಿನ ಸಿಪಿಸಿಆರ್‌ಐ ಸೇರಿದಂತೆ ಹತ್ತು ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡ ಬೃಹತ್ ಯೋಜನೆಯನ್ನು ರೂಪಿಸಿದೆ. ತೋಟಗಾರಿಕೆ ಆಯುಕ್ತರ ನೇತೃತ್ವದ ಸಮಿತಿಯು ಸಂಶೋಧನೆಯ ಮೇಲ್ವಿಚಾರಣೆ ನಡೆಸುತ್ತಿದೆ ಎಂದರು. ಈ ಎಲ್ಲ ಪ್ರತಿಷ್ಠಿತ ಸಂಸ್ಥೆಗಳಿಂದ ಅಂತಿಮ ವರದಿ ಕೈಸೇರಿದ ತಕ್ಷಣ, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್ ಕಾರಕವಲ್ಲ ಎಂಬ ಸತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಅಗತ್ಯ ಎಂದು ಸಚಿವರು ಭರವಸೆ ನೀಡಿದರು.

ಸರ್ಕಾರಕ್ಕೆ ಸಣ್ಣ ಕೈಗಾರಿಕೆಗಳ ಬಗ್ಗೆ ಕಾಳಜಿ ಇಲ್ಲ: ಶರವಣ

ವಿಧಾನ ಪರಿಷತ್: ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲ ಎಂಬುದಾಗಿ ಹೇಳುವ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಇದೊಂದು ದಪ್ಪ ಚರ್ಮದ ಸರ್ಕಾರ ವಿಧಾನ ಪರಿಷತ್ ಶಾಸಕ ಟಿ.ಎ. ಶರವಣ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗೆ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಇಲಾಖೆ ಸಮರ್ಪಕ ಮಾಹಿತಿ ನೀಡದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲದ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎಂಬ ಪ್ರಶ್ನೆಗೆ ಸಚಿವರು ಮಾಹಿತಿ ಇಲ್ಲ ಎಂದು ನೀಡಿದ ಉತ್ತರಕ್ಕೆ ಆಕ್ರೋಶಗೊಂಡ ಶರವಣ ಅವರು, ಕೆಲಸ ಮಾಡದ ಇಲಾಖೆಗಳು ಮತ್ತು ಸಚಿವ ಸ್ಥಾನಗಳು ಯಾಕೆ ಇರಬೇಕು ಎಂದು ವಾಗ್ದಾಳಿ ನಡೆಸಿದರು. ಇದಕ್ಕೆ ಸಚಿವ ಶರಣ ಬಸಪ್ಪ ದರ್ಶನಾಪೂರ್ ಪ್ರತಿಕ್ರಿಯಿಸಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನೋಂದಣಿ ಕೇಂದ್ರ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನಡೆಯುವುದರಿಂದ, ಮುಚ್ಚಲ್ಪಟ್ಟ ಘಟಕಗಳ ನಿಖರ ಮಾಹಿತಿ ಪಡೆಯುವ ವ್ಯವಸ್ಥೆ ಇಲಾಖೆಯಲ್ಲಿ ಸದ್ಯಕ್ಕೆ ಲಭ್ಯವಿಲ್ಲ ಎಂದರು.

ಇಲಾಖೆ ವಜಾಕ್ಕೆ ಆಗ್ರಹ

ಎಷ್ಟು ಕೈಗಾರಿಕೆಗಳು ಮುಚ್ಚಿವೆ ಮತ್ತು ಅದಕ್ಕೆ ಕಾರಣಗಳೇನು ಎಂಬ ಕನಿಷ್ಠ ಜ್ಞಾನವೂ ಇಲ್ಲದ ಮೇಲೆ ಸಣ್ಣ ಕೈಗಾರಿಕೆ ಇಲಾಖೆ ಮತ್ತು ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮಗಳು ಯಾಕೆ ಬೇಕು? ಕೂಡಲೇ ಇಲಾಖೆಯನ್ನು ಮುಚ್ಚಿಬಿಡಿ. ಸಣ್ಣ ಕೈಗಾರಿಕೆಗಳು ಕೇವಲ ವ್ಯಾಪಾರವಲ್ಲ. ಅವು ಲಕ್ಷಾಂತರ ಗ್ರಾಮೀಣ ಯುವಕರ ವೃತ್ತಿಜೀವನ ಮತ್ತು ಘನತೆಯ ಪ್ರಶ್ನೆ. ಸರ್ಕಾರವು ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ ರಿಯಾಯಿತಿ, ಬಡ್ಡಿ ರಹಿತ ಸಾಲ ಮತ್ತು ಮಾರುಕಟ್ಟೆ ಸೌಲಭ್ಯ ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇಂತಹ ಬೇಜವಾಬ್ದಾರಿ ನೀತಿಯಿಂದಾಗಿ ಉದ್ಯಮಿಗಳು ಆತ್ಮಹತ್ಯೆಯ ಹಾದಿ ಹಿಡಿಯುವಂತಾಗಿದೆ ಎಂದು ಶರವಣ ಎಚ್ಚರಿಸಿದರು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಖರ್ಗೆ ಆಶ್ವಾಸನೆ

ಉದ್ಯೋಗ ಕಲ್ಪಿಸಲು ರಾಜ್ಯ ಸರ್ಕಾರ ಬದ್ಧ

ವಿಧಾನಸಭೆ: ರಾಜ್ಯದ ಎರಡನೇ ರಾಜಧಾನಿಯೆಂದೇ ಘೋಷಣೆಯಾಗಿರುವ ಹಾಗೂ ರಾಜ್ಯದ ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಅಭಯ ಪಾಟೀಲ್ ಅವರು ವಿಷಯ ಪ್ರಸ್ತಾಪಿಸಿ, ಬೆಳಗಾವಿಯಲ್ಲಿ ಐಟಿ ಪಾರ್ಕ್ ಮತ್ತು ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿಪರ ರಾಜ್ಯವನ್ನಾಗಿ ಮಾಡಬೇಕು. ದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬೇಕೆಂದು ಮನವಿ ಮಾಡಿದರು.

ಇದಕ್ಕುತ್ತರಿಸಿದ ಸಚಿವರು, ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಸರ್ಕಾರವು ಈಗಾಗಲೇ ಕ್ರಮ ಕೈಗೊಂಡಿದೆ. ಐಟಿ ಪ್ಲಗ್ ಆ್ಯಂಡ್ ಪ್ಲೇ ಮೂಲ ಸೌಕರ್ಯ ಸ್ಥಾಪನೆ, ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು. ವೇಗವರ್ಧಕ ಜಾಲಗಳು ಮತ್ತು ಸೀಡ್ ಫಂಡ್ ಬೆಂಬಲ, ಟೆಕ್ಸಿಲರೇಷನ್, ಸಮಗ್ರ ಅಭಿವೃದ್ಧಿ ಹಾಗೂ ಭವಿಷ್ಯದ ತಂತ್ರಜ್ಞಾನ, ನಿಪುಣ ಕರ್ನಾಟಕ, ಐಡಿಯಾ2ಪಿಒಸಿ ಎಲಿವೇಟ್ (ಗ್ರಾಂಟ್ ಇನ್ ಏಡ್), ರಾಜೀವ್ ಗಾಂಧಿ ಉದ್ಯಮ ಶೀಲತೆ ಕಾರ್ಯಕ್ರಮ, ಎಲಿವೇಟ್ ಮಹಿಳಾ ಉದ್ಯಮಶೀಲತೆ, ಗ್ರಾಸ್ ರೂಟ್ ಇನೋವೇಶನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಬೆಳಗಾವಿಯ ತಿಲಕವಾಡಿಯಲ್ಲಿರುವ ಕಲಾಮಂದಿರ ಕಟ್ಟಡದಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ ಸ್ಥಾಪಿಸಲು ಆ ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.



ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪನೆ

ಬೆಳಗಾವಿಯಲ್ಲಿ ಐಟಿ. ಪಾರ್ಕ್ ಅಥವಾ ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ಸ್ಥಾಪಿಸುವ ಸಂಬಂಧ ಉದ್ದೇಶಿತ ಜಮೀನನ್ನು ಸರ್ಕಾರಕ್ಕೆ ಪಡೆದು ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವ ಸಲುವಾಗಿ ಭಾರತ ಸರ್ಕಾರದ ರಕ್ಷಣಾ ಸಚಿವರಿಗೆ 2021ರ ಜ.8ರಂದು ಪತ್ರ ಬರೆಯಲಾಗಿದೆ. ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಲು ರಕ್ಷಣಾ ಇಲಾಖೆಯಿಂದ ಇನ್ನೂ ಕ್ರಮ ಕೈಗೊಂಡಿಲ್ಲವಾದ್ದರಿಂದ ಅದೇ ವರ್ಷ ಸೆ.9ರಂದು ಮತ್ತೆ ಪತ್ರ ಬರೆಯಲಾಗಿದೆ. 2021ರ ಸೆ.21ರಂದು ಮುಖ್ಯಮಂತ್ರಿಗಳು ರಕ್ಷಣಾ ಸಚಿವರಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರಕ್ಷಣಾ ಕಾರ್ಯದರ್ಶಿಯವರಿಗೆ ಪತ್ರ ಬರೆದು ಜಮೀನನ್ನು ಕರ್ನಾಟಕ ಸರ್ಕಾರದ ವಶಕ್ಕೆ ನೀಡುವಂತೆ ಕೋರಲಾಗಿದೆ ಎಂದು ವಿವರಿಸಿದರು.

ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಔಷಧ ಕೊರತೆ ಉಂಟಾಗದಂತೆ ಕ್ರಮ

ವಿಧಾನ ಪರಿಷತ್: ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಎಲ್ಲ ಉನ್ನತ ಅಧಿಕಾರಿಗಳು ಪರೀಕ್ಷೆ ನಡೆಸಲು ಅವಕಾಶವಿರುತ್ತದೆ. ಈ ಎಲ್ಲ ಬದಲಾವಣೆಯಿಂದ ಮುಂದಿನ ದಿನದಲ್ಲಿ ಶೇ.80ರಷ್ಟು ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ (ಕೆಎಸ್ಎಂಎಸ್‌ಸಿಎಲ್)ದಿಂದ ನೇರವಾಗಿ ಔಷಧಿಗಳ ಟೆಂಡರ್ ಕರೆದು ಪೂರೈಸಲಾಗುತ್ತದೆ ಎ ಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೇಲ್ಮನೆಯಲ್ಲಿ ಅರ್ಧ ಗಂಟೆ ಚರ್ಚೆ ಕಲಾಪದ ವೇಳೆ ಸದಸ್ಯರಾದ ಡಾ.ಧನಂಜಯ ಸರ್ಜಿ ಹಾಗೂ ಪ್ರತಾಪ್ ಸಿಂಹ ನಾಯಕ್ ಅವರು ಈ ಬಗ್ಗೆ ಪ್ರಸ್ತಾಪಿಸಿದಾಗ ಉತ್ತರಿಸಿದ ಸಚಿವರು, ಕೆಎಸ್ಎಂಎಸ್‌ಸಿಎಲ್ ಮುಖಾಂತರ ಖರೀದಿ ಮಾಡಬೇಕು ಎನ್ನುವುದು ಮುಖ್ಯ ಉದ್ದೇಶ. ಅವಶ್ಯಕತೆಯಿರುವ ಔಷಧ ಖರೀದಿ ಕಾರ್ಯವೈಖರಿಯಲ್ಲಿ ಲೋಪದೋಶವಿತ್ತು. ಟೆಂಡರ್ ಪ್ರಕ್ರಿಯೆ, ಗುಣಮಟ್ಟ ಹೀಗೆ ಹಲವು ನ್ಯೂನ್ಯತೆಗಳ ಲಾಭವನ್ನು ಕೆಲವು ಸಂಸ್ಥೆಗಳು ಪಡೆದುಕೊಂಡಿರಬಹುದು. ಇದನ್ನು ಸರಿಪಡಿಸಲು ಹಲವು ಕ್ರಮ ಕೈಗೊಂಡಿದ್ದೇವೆ. ಕೆಎಸ್ಎಂಎಸ್ ಸಿಎಲ್ ಸರಿಯಾಗಿ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಕಾರಣಕ್ಕೆ ಐಎಎಸ್ ಅಧಿಕಾರಿಯನ್ನು ಮುಖ್ಯಸ್ಥರಾಗಿ ನೇಮಕ ಮಾಡಿದ್ದೇವೆ. ನಮ್ಮ ಉದ್ದೇಶ ಎಲ್ಲ ಇಲಾಖೆಗಳ ಔಷಧಿ ಖರೀದಿ ಪ್ರಕ್ರಿಯೆ ಸರಿಯಾಗಿ ಆಗಬೇಕು ಎಂದರು.



ಕಳೆದ ವರ್ಷ 893 ಔಷಧಗಳ ಪೈಕಿ 534 ಔಷಧಗಳಿಗೆ ಟೆಂಡರ್ ಕರೆಯಲಾಗಿದೆ. ಈ ಪೈಕಿ 232 ಔಷಧ ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಇನ್ನುಳಿದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲಾಗುವುದು. ಶೇ.20ರಷ್ಟು ಔಷಧಗಳನ್ನು ಸ್ಥಳೀಯ ಆಸ್ಪತ್ರೆಗಳೇ ಖರೀದಿಸುವಂತೆ ಸೂಚಿಸಲಾಗಿದೆ. ವಾರ್ಷಿಕವಾಗಿ ಔಷಧಿ ಖರೀದಿ ಬದಲು ಎರಡ್ಮೂರು ತಿಂಗಳಿಗೊಮ್ಮೆ ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ಔಷಧಿ ಸರಬರಾಜಿಗೂ ಮುನ್ನ ಅದರ ಗುಣಮಟ್ಟ ಪರೀಕ್ಷಿಸಿದ ಬಳಿಕವಷ್ಟೇ ಆಸ್ಪತ್ರೆಗಳಿಗೆ ವಿತರಿಸಲಾಗುತ್ತಿದೆ. ಸದ್ಯ 270 ಕೋಟಿ ರೂ. ಮೌಲ್ಯದ ಔಷಧ ಖರೀದಿಸಲಾಗಿದೆ. ಉಗ್ರಾಣಗಳಲ್ಲಿ ದಾಸ್ತಾನು ಇರುವ ಔಷಧಗಳ ಪ್ರಮಾಣ, ಔಷಧಗಳ ಸರಬರಾಜು, ವಿತರಣೆ ಮೇಲೆ ನಿಗಾವಹಿಸಲು ರಿಯಲ್ ಟೈಮ್ ಟ್ರ್ಯಾಕಿಂಗ್‌ಸಿಸ್ಟಂ ಜಾರಿಗೊಳಿಸಲಾಗಿದೆ ಎಂದರು.

ಸಂಪಾದಕೀಯ

ಉತ್ತರದಾಯಿತ್ವ ಮತ್ತು ಅಧಿಕಾರ

ಸರ್ಕಾರದ ಸಚಿವರು ಸಮರ್ಪಕ ಉತ್ತರ ನೀಡುತ್ತಿಲ್ಲವೆಂದು ವಿಧಾನ ಸಭಾಧ್ಯಕ್ಷರು ಸಭಾತ್ಯಾಗ ಮಾಡಿದ ಘಟನೆ ಇತಿಹಾಸದಲ್ಲೇ ಮೊದಲು ಎಂಬುದು ಎಷ್ಟು ಸತ್ಯವೋ ಎಲ್ಲಾ ಕಾಲದಲ್ಲೂ ಸಚಿವರು ಒಂದು ಹಂತದ ನಂತರ ಅಸಹಾಯಕರೇ ಎನ್ನುವುದು ಕೂಡ ಅಷ್ಟೇ ಸತ್ಯ. ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಿಂದ ಮೊದಲುಗೊಂಡು ಕೆಳಹಂತದ ಗುಮಾಸ್ತರವರೆಗೆ ಎಲ್ಲರೂ ಸಚಿವರುಗಳ ಕಣ್ಣಿಗೆ ಮಣ್ಣೆರಚುವ ತಂತ್ರ ಚೆನ್ನಾಗಿ ಅರಿತವರೇ. ಎಲ್ಲಾ ಕಾಲದಲ್ಲೂ ಯಾಮಾರುವ ಸಚಿವರು ಇದ್ದೇ ಇರುತ್ತಾರೆ ಎಂಬುದನ್ನು ಈ ಹೊತ್ತಿನಲ್ಲಿ ಗಮನಿಸಬೇಕಾಗಿದೆ. ಒಂದು ಕ್ಷೇತ್ರದ ಶಾಸಕ ತನ್ನೂರಿನ ಸಮಸ್ಯೆಯನ್ನು ಸಂಬಂಧಪಟ್ಟ ಸಚಿವರ ಬಳಿಗೆ ತೆಗೆದುಕೊಂಡು ಹೋಗುತ್ತಾನೆ. ಆದರೆ ಸಚಿವರಿಗೆ ತಮ್ಮ ಇಲಾಖೆಗಳ ಸಂಪೂರ್ಣ ಕಾರ್ಯವೈಖರಿ ಮತ್ತು ನಿಯಮಗಳ ಅರಿವಂತೂ ಇರಲು ಸಾಧ್ಯವಿಲ್ಲ. ಒಂದು ಇಲಾಖೆಯ ಸಂಪೂರ್ಣ ಒಳತೋಟಿಯನ್ನು ಅರಿಯುವ ಸಚಿವ ಉತ್ತಮ ರಾಜಕಾರಣಿ ಎನಿಸಿಕೊಳ್ಳುವುದೂ ಇಲ್ಲ. ರಾಜಕಾರಣದಲ್ಲಿ ಇಲಾಖೆ ಆತನಿಗೆ ಒಂದು ಭಾಗವೇ ಹೊರತು ಆತನ ರಾಜಕೀಯ ಬದುಕಿನ ಎಲ್ಲವೂ ಅಲ್ಲ. ಅಂಥಲ್ಲಿ ಸಚಿವರು ಇಲಾಖೆಯ ಅಧಿಕಾರಿಗಳನ್ನು ನೆಚ್ಚಿಕೊಳ್ಳಲೇಬೇಕು. ಇಂಥ ಎಷ್ಟೋ ಸಚಿವರನ್ನು ಈ ಮೊದಲೂ ಕಂಡಿರುವ ಅಧಿಕಾರಿಗಳು ಅತಿ ಜಾಣರು! ಸಚಿವರಿಗೆ ಇಂಥವರನ್ನು ನಂಬಲೇಬೇಕಾದ ಅನಿವಾರ್ಯತೆ.

ಅಧಿಕಾರಿಗಳಿಗೆ ತುರ್ತು ಎಂಬುದಿರುವುದಿಲ್ಲ. ಸಚಿವ, ಶಾಸಕರಿಗಿರುವಂತೆ ಯಾರಿಗೂ ಮುಖ ಕೊಟ್ಟು ಉತ್ತರಿಸುವ ಪ್ರಮೇಯವೂ ಇಲ್ಲ. ಇಲಾಖೆಗಳಲ್ಲಿ ಕಾರ್ಯಗಳು ನಡೆಯುವ ಒಂದು ಸಿದ್ಧಸೂತ್ರವಿರುತ್ತದೆ. ಅದರನ್ವಯ ಕಾರ್ಯಗಳೂ ನಡೆಯುತ್ತಿರುತ್ತವೆ. ಲೋಕ ಎಷ್ಟೇ ಎಐ ಕಾಲಕ್ಕೇ ಹೋಗಿರಲಿ ಸರ್ಕಾರಿ ಯಂತ್ರ ಮಾತ್ರ ಇನ್ನೂ ಐವತ್ತರ ದಶಕದ ಕಾರ್ಯವೈಖರಿಯನ್ನೇ ನೆಚ್ಚಿಕೊಂಡಿರುತ್ತವೆ. ಅಧಿಕಾರಿ ವರ್ಗಕ್ಕೆ ಆಡಳಿತ ಯಂತ್ರದ ವೇಗ ಹೆಚ್ಚಿಸುವುದು ಬೇಕಾಗಿಲ್ಲ. ವೇಗ ಹೆಚ್ಚಿದರೆ ಅವರಿಗೆ ತಮ್ಮ ಕರ್ತವ್ಯವನ್ನೂ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಕಂಪ್ಯೂಟರ್ ಯುಗಕ್ಕಿಂತ ಸಾಕಷ್ಟು ಮುನ್ನ ಆಡಳಿತ ವ್ಯವಸ್ಥೆಯ ಭಾಗವಾಗಿರುವ ದೊಡ್ಡ ಅಧಿಕಾರಿ ವರ್ಗ ಇಂದಿಗೂ ರಾಜ್ಯದ ವ್ಯವಸ್ಥೆಯಲ್ಲಿದೆ. ಸುಲಭಕ್ಕೆ ಬದಲಾವಣೆಗೆ ತೆರೆದುಕೊಳ್ಳದ ಪರಿಸ್ಥಿತಿ ಅವರಲ್ಲಿದೆ. ಆದರೆ ಸಮಾಜ ಸಾಕಷ್ಟು ಮುಂದೆ ಸಾಗಿದೆ. ಸಮಾಜದಲ್ಲಿ ಕಾಲದ ನಡೆಗೆ ತಕ್ಕಂತೆ ಸಮಸ್ಯೆಗಳೂ ನಿರ್ಮಾಣವಾಗಿವೆ ಮತ್ತು ಬೇಡಿಕೆಗಳೂ ಸೃಷ್ಟಿಯಾಗಿವೆ. ಸಚಿವಗಣಕ್ಕೂ ಸಮಾಜವನ್ನು ಕಾಲದ ನಡೆಗೆ ತಕ್ಕಂತೆ ಕೊಂಡೊಯ್ಯುವ ಮನಸ್ಸಿರುತ್ತದೆ. ಆದರೆ ಮಾರ್ಗವಿರುವುದಿಲ್ಲ. ಆದ್ದರಿಂದ ಇಂದಿಗೂ ರಾಜ್ಯದ ಕಂದಾಯ ಇಲಾಖೆಯಂಥ ಜಾಗಗಳಲ್ಲಿ ಕೆಲಸಗಳು ಕುಂಟುತ್ತಾ ಸಾಗುತ್ತವೆ. ವರ್ಷಗಟ್ಟಲೆ ಕಾಯುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಇದರ ನಡುವೆಯೇ ಅಧಿಕಾರಿ ವರ್ಗಕ್ಕೆ ಸಚಿವರನ್ನು ಹಿತಾಸಕ್ತಿಗೆ ತೆಗೆದುಕೊಳ್ಳುವ ತಂತ್ರಗಾರಿಕೆಯೂ ತಿಳಿಯುತ್ತದೆ. ಇದರ ಪರಿಣಾಮ ಸಚಿವರು ಉತ್ತರ ನೀಡದ ಉತ್ತರ ಕುಮಾರರಾಗುತ್ತಾರೆ. ಈ ಪರಿಸ್ಥಿತಿ ಸುಧಾರಣೆಯಾಗದ್ದೇನಲ್ಲ. ಸಚಿವರು ಅಧಿಕಾರಿಗಳ ಮೇಲೆ ತೀಕ್ಷ್ಣವಾದ ಕಣ್ಣಿಟ್ಟರೆ ಇಂಥ ಪರಿಸ್ಥಿತಿಯಿಂದ ಹೊರಬರಬಹುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವೇಗವನ್ನು ತರಬಹುದು.

ಗೆದ್ದೋನು ಸೋತ, ಸೋತವನು ಸತ್ತು ಗೆದ್ದ

ಎಷ್ಟು ದುಬಾರಿಯ ಸಾಧನವಿದೆ ಎಂಬುದಕ್ಕಿಂತ ಎಷ್ಟು ಚಾಲಾಕಿ ಅಥವಾ ಚತುರ ಸಾಧನ ನಿಮ್ಮ ಬಳಿ ಇದೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ.

ಖಾರಾ ಬಾತ್
ವಿನಾಯಕ ಭಟ್ಟ ಮೂರೂರು
vakradanta@gmail.com



ಯುದ್ಧದ ರೀತಿ ಬದಲಾಗಿದೆ. ಈಗಿನ ಯುದ್ಧಗಳಲ್ಲಿ ಯಾರೂ ಎಲ್ಲಿಗೂ ಹೋಗುವ ಅಗತ್ಯವೇ ಇಲ್ಲ. ಕುಳಿತಲ್ಲಿಂದಲೇ ಕ್ಷಿಪಣಿ, ಡ್ರೋಣ್ ಹಾರಿಸಿದರಾಯಿತು. ಇನ್ನೊಂದು ದೇಶದವರೂ ಅಷ್ಟೇ ಕುಳಿತಲ್ಲಿಂದಲೇ ಅವುಗಳನ್ನು ಹೊಡೆದುರುಳಿಸಬಹುದು. ಅವರೂ ಪ್ರತಿಯಾಗಿ ಕ್ಷಿಪಣಿ-ಡ್ರೋಣ್ ಹಾರಿಸಬಹುದು. ಯಾವ್ಯಾವುದೋ ತಂತ್ರಜ್ಞಾನದ ಮೂಲಕ ಯಾರು ಎಲ್ಲಿದ್ದಾರೆ, ಪ್ರಮುಖ ಅಸ್ತ್ರಗಳನ್ನು ಎಲ್ಲಿಟ್ಟಿದ್ದಾರೆ ಎಂಬುದನ್ನೆಲ್ಲ ಪತ್ತೆ ಮಾಡಿ, ಅಲ್ಲಿಗೆ ಸರಿಯಾಗಿ ದಾಳಿ ಮಾಡಿದರಾಯಿತು. ಇನ್ನೊಂದು ದೇಶಕ್ಕೆ ಹೋಗಬೇಕೆಂದಿಲ್ಲ, ಅವರ ವಾಯು ಗಡಿ ದಾಟಬೇಕೆಂದಿಲ್ಲ, ದುಬಾರಿ ವಿಮಾನ ಹಾರಿಸಿ, ಅದರೊಳಗೊಬ್ಬ ಪೈಲಟ್ ಕುಳಿತು, ಆ ವಿಮಾನ ವೈರಿ ನೆಲದಲ್ಲಿ ಬಿದ್ದು, ಪೈಲಟ್‌ನನ್ನು ಅವರು ಯುದ್ಧ ಖೈದಿಯಾಗಿಸಿಕೊಳ್ಳುವ ಕತೆಗಳೆಲ್ಲ ಈಗ ಹಳೆಯದಾಯಿತು. ಈಗೇನಿದ್ದರೂ ಆತ್ಮಹತ್ಯಾ ಡ್ರೋಣ್‌ಗಳ ಕಾಲ. ಅದು ನಾಶವಾಗಲೆಂದೇ ಹಾರಿಸುವುದು. ಒಂದೋ ವೈರಿಗಳು ಅದನ್ನು ಹೊಡೆದುಹಾಕುತ್ತಾರೆ ಅಥವಾ ಅದೇ ಬಿದ್ದು ಸ್ಫೋಟಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ನಾಶವಾಗುತ್ತದೆ.

ಪಾಕಿಸ್ತಾನದ ಮೇಲೆ ಭಾರತ ನಡೆಸಿದ ಆಪರೇಷನ್ ಸಿಂದೂರ ಕೂಡ ಹೆಚ್ಚುಕಡಿಮೆ ಇದೇ ಮಾದರಿಯದ್ದು. ಭಾರತೀಯ ಯುದ್ಧ ವಿಮಾನಗಳು ಪಾಕಿಸ್ತಾನ ವಾಯುಪ್ರದೇಶವನ್ನು ಪ್ರವೇಶಿಸಲೇ ಇಲ್ಲ. ಕುಳಿತಲ್ಲಿಂದಲೇ ನಿರ್ದಿಷ್ಟ ಗುರಿಗೆ ಕ್ಷಿಪಣಿ ಹಾರಿಸಿ, ಯಶ ಸಾಧಿಸಲಾಯಿತು. ಈಗ ಅಮೆರಿಕ-ಇಸ್ರೇಲ್ ಹಾಗೂ ಇರಾನ್ ಯುದ್ಧದ ರೀತಿ ಇನ್ನೂ ವಿಚಿತ್ರ. ಅಮೆರಿಕ ಬಳಿ ಅಧುನಿಕ ಶಸ್ತ್ರಾಸ್ತ್ರ, ರಾಡಾರ್ ಗಳಿವೆ. ಅಮೆರಿಕದಷ್ಟು ಆತ್ಯಾಧುನಿಕ ಶಸ್ತ್ರಾಸ್ತ್ರಗಳು ಇರಾನ್ ಬಳಿ ಇಲ್ಲ. ಆದರೂ ಯುದ್ಧದಲ್ಲಿ ಹೆಚ್ಚು ನಷ್ಟವಾಗುತ್ತಿರುವುದು ಅಮೆರಿಕಕ್ಕೆ ಅಂದರೆ ನಂಬುತ್ತೀರಾ?

ಇರಾನ್ ಒಳಗೆ ಇಸ್ರೇಲ್ ಹಾಗೂ ಅಮೆರಿಕ ಸಾಕಷ್ಟು ಹಾನಿ ಮಾಡಿರಬಹುದು. ಒಂದೇ ಹೊಡೆತಕ್ಕೆ ಇರಾನ್ ಮುಖ್ಯಸ್ಥನನ್ನೇ ಕೊಂದು ವಿಶ್ವಕ್ಕೆ ಅಚ್ಚರಿ ಮೂಡಿಸಿರಬಹುದು. ಆದರೆ ಯುದ್ಧ ಹೆಚ್ಚು ದಿನ ನಡೆದರೆ ಅಮೆರಿಕಕ್ಕೆ ಹೆಚ್ಚು ನಷ್ಟವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಯಾಕೆಂದರೆ ಅಮೆರಿಕದ ಬಳಿ ಶಸ್ತ್ರಾಸ್ತ್ರಗಳೆಲ್ಲ ಇವೆಯಾದರೂ, ಅವೆಲ್ಲ ದುಬಾರಿ ಸಾಧನಗಳು. ಅಮೆರಿಕದಲ್ಲಿ ಉತ್ಪಾದನಾ ವೆಚ್ಚ ಹೆಚ್ಚು. ಹಾಗಾಗಿಯೇ ನಾಸಾಗಿಂತ ನಮ್ಮ ಇಸ್ರೋದವರು ಕಡಿಮೆ ಖರ್ಚಿನಲ್ಲಿ ಚಂದ್ರಯಾನ ಮಾಡಲು ಸಾಧ್ಯವಾಗಿದ್ದು. ಹಾಗೆ ಅಮೆರಿಕದ ಹೆಚ್ಚು ವೆಚ್ಚಗಳ ಶಸ್ತ್ರಾಸ್ತ್ರಗಳನ್ನು ಎದುರಿಸಲು ಇರಾನ್ ಹೆಚ್ಚು ಖರ್ಚು ಮಾಡುತ್ತಿಲ್ಲ. ಉದಾಹರಣೆಗೆ ಇರಾನ್ ಕೇವಲ 20 ಲಕ್ಷ ರೂಪಾಯಿ ವೆಚ್ಚದ ಡ್ರೋಣ್‌ಗಳನ್ನು ಬಳಸುತ್ತಿದೆ. ಆ ಡ್ರೋಣ್‌ಗಳನ್ನು ಹೊಡೆದುರುಳಿಸಲು ಅದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ವೆಚ್ಚದ ಸಾಧನಗಳನ್ನು ಬಳಸಲಾಗುತ್ತಿದೆ. ಇತ್ತೀಚೆಗೆ ಅರಬ್ ದೇಶಗಳಲ್ಲಿದ್ದ ಅಮೆರಿಕದ ಆತ್ಯಾಧುನಿಕ ರಾಡಾರ್ ಒಂದನ್ನು ಇರಾನ್ ಡ್ರೋನ್ ಮೂಲಕ ನಾಶಪಡಿಸಿಬಿಟ್ಟಿತು. ಈ ಲೆಕ್ಕಾಚಾರ ನೋಡಿದರೆ ಹೆಚ್ಚು ದಿನ ಯುದ್ಧ ನಡೆದಷ್ಟೂ ನಷ್ಟ ಅಮೆರಿಕಕ್ಕೆ ಎಂಬುದು ಸ್ಪಷ್ಟ. ಇರಾನ್‌ಗೆ ನಷ್ಟವಾಗುತ್ತದೆ. ಆದರೆ ಅದರ ನಷ್ಟದ ಪ್ರಮಾಣ ಕಡಿಮೆ. ಅಮೆರಿಕ ಆರ್ಥಿಕವಾಗಿ ಬಲಿಷ್ಠವಾಗಿದೆ. ಹಾಗಾಗಿ ಅದಕ್ಕಾಗುವ ನಷ್ಟವೂ ಅಷ್ಟೇ ಬಲವಾಗಿರುತ್ತದೆ.



ಇರಾನ್‌ನ ನೌಕಾಪಡೆ ಬಳಿ ಇರುವ ಯುದ್ಧ ನೌಕೆಗಳು ಬಹುತೇಕ ನೌಕೆಗಳು ಮೊದಲು ಸರಕುಸಾಗಣೆ ನೌಕೆಗಳಾಗಿದ್ದವು. ಅವುಗಳನ್ನೆ ಬದಲಾಯಿಸಿ ಯುದ್ಧನೌಕೆ ಮಾಡಲಾಗಿದೆ. ಹಾಗಾಗಿ ಅಮೆರಿಕದ ಒಂದು ಯುದ್ಧ ನೌಕೆಯ ಖರ್ಚು, ಇರಾನ್‌ನ ನಾಲ್ಕೈದು ಯುದ್ಧ ನೌಕೆ ನಿರ್ಮಾಣವಾಗಬಿಡುತ್ತದೆ. ಅಮೆರಿಕ ಈಗಾಗಲೇ ಇರಾನ್‌ನ ನಾಲ್ಕು ಯುದ್ಧ ನೌಕೆಗಳನ್ನು ಹೊಡೆದುಹಾಕಿದ್ದಾಗಿ ಹೇಳಿಕೊಂಡಿದೆ. ಆದರೆ ಇರಾನ್ ಏನಾದರೂ ಅಮೆರಿಕದ ಒಂದು ಯುದ್ಧ ನೌಕೆಯನ್ನು ಹೊಡೆದುರುಳಿಸಿದರೆ ಆಗ ದುಡ್ಡಿನ ಲೆಕ್ಕಾಚಾರದಲ್ಲಿ ಅಮೆರಿಕ ಹೆಚ್ಚು ನಷ್ಟದಲ್ಲಿರುತ್ತದೆ.

ಇನ್ನೊಂದು ಅತ್ಯಂತ ಆಸಕ್ತಿಕರ ಸಂಗತಿಯಿದೆ. ಅಮೆರಿಕದ ಆತ್ಯಾಧುನಿಕ ಯುದ್ಧ ನೌಕೆಯೊಂದನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿರ್ಮಿಸಿದ್ದ ಸಬ್ ಮೆರಿನ್ ಒಂದು ಹೊಡೆದುರುಳಿಸಲು ಯಶಸ್ವಿಯಾಗಿತ್ತು ಎಂದರೆ ನಿಮಗೆ ಅಚ್ಚರಿಯಾಗಬಹುದು. ವಿಮಾನ ಮತ್ತು ಕ್ಷಿಪಣಿವಾಹಕ ಯುದ್ಧನೌಕೆಗಳು ಸಾಮಾನ್ಯವಾಗಿ ಏಕಾಂಗಿಯಾಗಿ ಸಮುದ್ರಕ್ಕಿಳಿಯುವುದಿಲ್ಲ. ಬದಲಾಗಿ ಅಕ್ಕಪಕ್ಕದಲ್ಲಿ ರಕ್ಷಣಾ ಹಡಗುಗಳು ಕೂಡ ಇರುತ್ತವೆ. ಹೆಲಿಕಾಪ್ಟರ್‌ಗಳು, ಸಬ್ ಮೆರಿನ್ ಸ್ಕ್ಯಾನರ್‌ಗಳು ಎಲ್ಲವೂ ಇರುತ್ತವೆ. ಅಮೆರಿಕ 45,500ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ ಯುದ್ಧ ನೌಕೆ ಅಂದು ಉತ್ತರ ಅಂಟ್ಲಾಂಟಿಕ್ ಸುಮದ್ರದಲ್ಲಿ ಹೋಗುತ್ತಿತ್ತು. ಇಷ್ಟೆಲ್ಲ ಆತ್ಯಾಧುನಿಕ ಸಾಧನಗಳಿದ್ದರೂ ಕೇವಲ 660ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದ್ದ ಸಬ್ ಮೆರಿನ್‌ಒಂದು ಈ ಯುದ್ಧನೌಕೆಯನ್ನು ಹೊಡೆದುರುಳಿಸುವ ಹಂತ ತಲುಪಿತ್ತು. ನಿಜವಾದ ಯುದ್ಧ ಸಂದರ್ಭವಾಗಿದ್ದರೆ ಅಮೆರಿಕದ ಯುದ್ಧ ನೌಕೆ ಬಲಿಯಾಗುತ್ತಿತ್ತು.

ನ್ಯಾಟೊ ಪಡೆಗಳು ಯುದ್ಧಾಭ್ಯಾಸ ಮಾಡುತ್ತಿದ್ದ ಸಂದರ್ಭವದು. ಅಮೆರಿಕದ ವಿಮಾನವಾಹಕ ಯುದ್ಧನೌಕೆ ಡಿ. ಐಸಿನ್ ಹೋವರನ್ನು ತೇಲಾಡುವ ವಾಯುನೆಲೆ ಎಂದೇ ಕರೆಯಲಾಗುತ್ತದೆ. ಯುದ್ಧದ ಸಂದರ್ಭದಲ್ಲಿ ಒಂದು ಡಜನ್‌ಗೂ ಹೆಚ್ಚು ಯುದ್ಧ ನೌಕೆಗಳನ್ನು ಉಡಾವಣೆ ಮಾಡಬಹುದಾದ ಸಾಮರ್ಥ್ಯ ಈ ಹಡಗಿನದ್ದು. ಹಡಗಿನ ಕೆಳಭಾಗದಲ್ಲಿ ಸೋನಾರ್ ವೇವ್‌ಗಳ ಮೂಲಕ ಹಾಗೂ ಆಗಸದಲ್ಲಿ ಹೆಲಿಕಾಪ್ಟರ್ ಹಾಗೂ ರಾಡಾರ್‌ಗಳು ಯಾವುದೇ ದಾಳಿಯನ್ನು, ವೈರಿಯ ನಡೆಯನ್ನು ಮೊದಲೇ ಗುರುತಿಸಲು ಸಿದ್ಧವಾಗಿದ್ದವು. ಇದ್ದಲ್ಲದೆ ನಡುವೆ ಕೆನಡಾದ ನೌಕಾಪಡೆಯ ಸಣ್ಣ ಸಬ್‌ಮೆರಿನ್ ಒಂದು ಸಮುದ್ರದಾಳದಲ್ಲಿ ತಣ್ಣಗೆ ಅಮೆರಿಕದ ಯುದ್ಧ ನೌಕೆಯ ಕಡೆಗೆ ಬರುತ್ತಿತ್ತು. ಯುದ್ಧ ನೌಕೆ ಹಾಗೂ ಆಸುಪಾಸಿನ ಭದ್ರತಾ ಹಡಗುಗಳಲ್ಲಿರುವ ಸಾಧನಗಳು ಸಬ್ ಮೆರಿನ್ ಸೇರಿದಂತೆ ಯಾವುದೇ ವೈರಿ ದೇಶದ ಸಾಧನಗಳು ಅನತಿ ದೂರದಲ್ಲಿರುವಾಗಲೇ ಪತ್ತೆ ಮಾಡಿ, ಪ್ರತಿ ದಾಳಿಯನ್ನು ರೂಪಿಸಿ ಯುದ್ಧ ನೌಕೆಯನ್ನು ಕಾಪಾಡುತ್ತವೆ. ಆದರೆ ಇಲ್ಲಿ ಕೆನಡಾದ ಚಿಕ್ಕ ಸಬ್‌ಮೆರಿನ್ ಪತ್ತೆ ಮಾಡಲು ಅಮೆರಿಕದ ಆತ್ಯಾಧುನಿಕ ಯುದ್ಧ ನೌಕೆ ಹಾಗೂ ಅದರ ಭದ್ರತಾ ಹಡಗುಗಳು ವಿಫಲವಾದವು.

ಯುದ್ಧಾಭ್ಯಾಸದ ಸಮಯದಲ್ಲಿ ಯಾರೂ ಶಸ್ತ್ರ ಚಲಾಯಿಸುವುದಿಲ್ಲ. ಕೆಲವು ಲೆಕ್ಕಾಚಾರಗಳ ಆಧಾರದಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗುತ್ತದೆ. ಈ ಲೆಕ್ಕಾಚಾರದ ಆಧಾರದಲ್ಲಿ ಅಮೆರಿಕ ಯುದ್ಧ ನೌಕೆ ನಾಶವಾಯಿತು ಎಂದು ಯುದ್ಧಾಭ್ಯಾಸದಲ್ಲಿ ಘೋಷಿಸಲಾಯಿತು.

ಇದಕ್ಕೆ ಕಾರಣವಿತ್ತು. ಸಾಮಾನ್ಯವಾಗಿ ಸಬ್ ಮೆರಿನ್‌ಗಳು ಒಂದು ಹಂತದ ಶಬ್ದವನ್ನು ಹೊರಡಿಸುತ್ತವೆ. ಯುದ್ಧ ನೌಕೆ ಹಾಗೂ ಅದರ ಭದ್ರತಾ ನೌಕೆಗಳಲ್ಲಿರುವ ಸೋನಾರ್ ವ್ಯವಸ್ಥೆ ನೀರಿನ ಆಳದಲ್ಲಿ ಓಡಾಡುವ ಸಾಧನಗಳ ಎಂಜಿನ್ ಶಬ್ದ, ಅದರ ಬೇರೆ ಬೇರೆ ಮೆಕಾನಿಕಲ್ ಶಬ್ದಗಳನ್ನು ಆಧರಿಸಿ ಅದರ ಸೂಚನೆಯನ್ನು ಯುದ್ಧ ನೌಕೆಗೆ ನೀಡುತ್ತದೆ. ಆದರೆ ಕೆನಡಾ ಸಬ್‌ಮೆರಿನ್ ನಿರ್ಮಿಸುವಾಗ ಹೊಸ ತಂತ್ರಜ್ಞಾನ ಅಳವಡಿಸಿತ್ತು. ಸಾಮಾನ್ಯವಾಗಿ ಸಬ್‌ಮೆರಿನ್‌ಗಳು ನ್ಯೂಕ್ಲಿಯರ್ ಶಕ್ತಿ ಬಳಸಿದರೆ, ಈ ಸಬ್ ಮೆರಿನನ್ನು ಡೀಸೆಲ್ ಎಂಜಿನ್ ಹಾಗೂ ಬ್ಯಾಟರಿ ಬಳಸಿ ನಿರ್ಮಿಸಲಾಗಿತ್ತು. ಹೇಗೆ ಬ್ಯಾಟರಿ ಸ್ಕೂಟರ್ ಅಥವಾ ಕಾರುಗಳು ಶಬ್ದ ಮಾಡುವುದೇ ಇಲ್ಲವೋ ಹಾಗೆ ಬ್ಯಾಟರಿ ಬಳಸಿದ ಸಬ್‌ಮೆರಿನ್ ಸಾಧಾರಣ ಸಬ್‌ಮೆರಿನ್‌ಗಿಂತ ತುಂಬಾ ಕಡಿಮೆ ಶಬ್ದ ಮಾಡುತ್ತಿತ್ತು. ಇದರಿಂದಾಗಿ ಸಮುದ್ರದಾಳದ ಬೇರೆ ಬೇರೆ ಸದ್ದುಗಳ ಜತೆಗೆ ಈ ಸಬ್‌ಮೆರಿನ್ ಶಬ್ದವನ್ನು ಪ್ರತ್ಯೇಕಿಸಿ ಗುರುತಿಸಲು ಅಮೆರಿಕದ ಯುದ್ಧ ನೌಕೆಯ ಸೋನಾರ್ ವ್ಯವಸ್ಥೆ ವಿಫಲವಾಯಿತು. ಇದರಿಂದಾಗಿ ಸಬ್‌ಮೆರಿನ್ ಅಪಾಯಕಾರಿಯಾಗುವಷ್ಟು ಹತ್ತಿರದ ತನಕ ಬರುವವರೆಗೂ ಅದನ್ನು ಗುರುತಿಸಲು ಯುದ್ಧ ನೌಕೆಗೆ ಸಾಧ್ಯವಾಗಿಲ್ಲ.

ಇದನ್ನು ಗಮನಿಸಿದಾಗ ಎಷ್ಟು ಆತ್ಯಾಧುನಿಕ ತಂತ್ರಜ್ಞಾನ ಹಾಗೂ ಹೆಚ್ಚು ದುಡ್ಡಿನಿಂದ ನಿರ್ಮಿಸಿದ ಸಾಧನಗಳನ್ನು ನೀವು ಹೊಂದಿದ್ದೀರಿ ಎಂಬುದಕ್ಕಿಂತ ಅದೆಲ್ಲ ತಂತ್ರಜ್ಞಾನವನ್ನು ವಿಮಾರಿಸುವ ಹೊಸ ಮಾದರಿಯ, ನಾವಿನ್ಯವಿರುವ ಸಾಧನ ನಿಮ್ಮ ಬಳಿ ಇದೆಯೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ. ಎಷ್ಟು ದುಬಾರಿಯ ಸಾಧನವಿದೆ ಎಂಬುದಕ್ಕಿಂತ ಎಷ್ಟು ಚಾಲಾಕಿ ಅಥವಾ ಚತುರ ಸಾಧನ ನಿಮ್ಮ ಬಳಿ ಇದೆ ಎಂಬುದು ಹೆಚ್ಚು ಮುಖ್ಯವಾಗುತ್ತಿದೆ.

ಪ್ರಜಾಸತ್ತೆಗೆ ಮರಳಿದ ಬಾಂಗ್ಲಾ ಮತ್ತು ನೇಪಾಳ

ರಾಮ್ ಮಾಧವ್

ಭಾರತವು ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಷ್ಟೇ ಅಲ್ಲದೇ ಅತ್ಯಂತ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟ್ರವೂ ಹೌದು. ದ. ಏಷ್ಯಾದ ಇತರ ದೇಶಗಳಿಗೂ ಭಾರತದ ಪ್ರಜಾತಂತ್ರವು ಒಂದು ಮಾದರಿಯಾಗಿದೆ. ಕಳೆದ ಕೆಲವು ದಶಕಗಳಲ್ಲಿ ದಕ್ಷಿಣ ಏಷ್ಯಾದ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವವನ್ನು ಅಪ್ಪಿಕೊಂಡಿವೆ. ಅಲ್ಲಿನ ಜನರನ್ನು ಇದಕ್ಕೆ ಅಭಿನಂದಿಸಬೇಕಾದುದು ಸಹಜವಾದರೂ, ಇದರಲ್ಲಿ ಭಾರತದ ಶ್ರೇಯಸ್ಸು ಕೂಡಾ ಇದೆ.

ಇದೇವೇಳೆ, ಕಳೆದ ಎರಡು ತಿಂಗಳಲ್ಲಿ ಭಾರತದ ಎರಡು ನೆರೆರಾಷ್ಟ್ರಗಳು ಪ್ರಜಾತಂತ್ರಕ್ಕೆ ಮರಳಿರುವುದು ಸ್ವಾಗತಾರ್ಹ ಬೆಳವಣಿಗೆ. ರಾಜಕೀಯ ಅಸ್ಥಿರತೆಗೆ ಗುರಿಯಾಗಿದ್ದ ಬಾಂಗ್ಲಾದೇಶ ಮತ್ತು ನೇಪಾಳಗಳಲ್ಲಿ ಚುನಾವಣೆಗಳು ನಡೆದು ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರಕಾರಗಳು ಅಧಿಕಾರಕ್ಕೆ ಬಂದವು.


ಬಾಂಗ್ಲಾದಲ್ಲಿ ಫೆ. 12ರಂದು ಚುನಾವಣೆ ನಡೆಯುವ ಮೂಲಕ ಮಹಮ್ಮದ್ ಯೂನುಸ್‌ರ 18 ತಿಂಗಳ ಹಂಗಾಮಿ ಆಡಳಿತಕ್ಕೆ ತೆರೆ ಬಿತ್ತು. ನೇಪಾಳದಲ್ಲಿ ಐದು ತಿಂಗಳ ಹಿಂದೆ ಯುವಜನಾಂಗದಿಂದ ಕ್ರಾಂತಿ ನಡೆದು ಚುನಾಯಿತ ಸರಕಾರವು ಪದಚ್ಯುತಗೊಂಡಿತ್ತು. ಅಲ್ಲಿ ಮಾರ್ಚ್ 5ರಂದು ಚುನಾವಣೆ ನಡೆದು ಹೊಸ ಸರಕಾರವೊಂದು ಅಧಿಕಾರ ವಹಿಸಿಕೊಂಡಿತು. ಎರಡೂ ದೇಶಗಳಲ್ಲಿನ ಚುನಾವಣೆಗಳು ಶಾಂತಿಯುತವಾಗಿ ನಡೆದುದು ಹಾಗೂ ಮತದಾರರು ತಮ್ಮ ಸರಕಾರವನ್ನು ಆರಿಸುವಲ್ಲಿ ಪ್ರಬುದ್ಧತೆಯನ್ನು ಮೆರೆದುದು ಗಮನಾರ್ಹ ಅಂಶವಾಗಿದೆ.

ಬಾಂಗ್ಲಾ ಮತ್ತು ನೇಪಾಳ ಎರಡೂ ದೇಶಗಳಲ್ಲಿ ಹಿಂದಿನ ಆಡಳಿತದ ವಿರುದ್ಧ ಜನರು ದಂಗೆ ಎದ್ದಿದ್ದರು. ಬಾಂಗ್ಲಾದಲ್ಲಿ 2024ರ ಆಗಸ್ಟ್‌ನಲ್ಲಿ ಶೇಖ್ ಹಸೀನಾ ಸರಕಾರವನ್ನು ಉರುಳಿಸಲಾಗಿದ್ದರೆ, 2025ರ ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ಕೆ.ಪಿ. ಶರ್ಮಾ ಒಲಿ ಸರಕಾರವನ್ನು ಉರುಳಿಸಲಾಗಿತ್ತು. ಇವೆರಡು ದಂಗೆಗಳು ಶಾಂತಿಯುತವಾಗಿರಲಿಲ್ಲ. ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ಬಾಂಗ್ಲಾದಲ್ಲಿ ನಡೆದ ಹಿಂಸೆಯಲ್ಲಂತೂ 850 ಜನರು ಸತ್ತಿರುವುದಾಗಿ ಅಲ್ಲಿನ ಆಡಳಿತ ತಿಳಿಸಿದೆ. ಆದರೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ತನಿಖಾ ವರದಿ ಹೇಳುವ ಪ್ರಕಾರ ಸತ್ತವರ ಸಂಖ್ಯೆ 1400ಕ್ಕಿಂತ ಅಧಿಕ. ನೇಪಾಳದಲ್ಲಿ 76 ಮಂದಿ ಸತ್ತಿರುವುದಾಗಿ ಅಧಿಕೃತವಾಗಿ ಹೇಳಲಾಗಿತ್ತು. ಆದರೆ ಅಲ್ಲಿನ ಹಿಂಸಾಚಾರದಲ್ಲಿ ಅದಕ್ಕಿಂತ ಹೆಚ್ಚು ಮಂದಿ ಸತ್ತಿರುವ ಸಾಧ್ಯತೆಗಳಿವೆ.

ನೇಪಾಳ ಮತ್ತು ಬಾಂಗ್ಲಾ ಎರಡೂ ದೇಶಗಳಲ್ಲಿ ಹಠಾತ್ತನೆ ಹಿಂಸಾಚಾರ ಸ್ಫೋಟಗೊಂಡುದ್ದನ್ನು ಕಾಣುವಾಗ ಇದರ ಹಿಂದೆ ವಿದೇಶೀ ಕೈವಾಡದ ಸಂಚಿದೆ ಎಂಬ ಅನುಮಾನ ಮೂಡಿತ್ತು. ಆಡಳಿತ ಬದಲಾವಣೆಯ ಉದ್ದೇಶದಿಂದ ವಿದೇಶಿ ಶಕ್ತಿಗಳು ಈ ಹಿಂಸಾತ್ಮಕ ಪ್ರತಿಭಟನೆಗೆ ಕುಮ್ಮಕ್ಕು ನೀಡಿರಬೇಕೆಂದು ಆರೋಪ ಕೇಳಿಬಂದಿತ್ತು.ಇದೇವೇಳೆ ಇವೆರಡೂ ದೇಶಗಳಲ್ಲಿ ಜನರು ದಂಗೆ ಏಳಲು ಬೇಕಾದ ಪರಿಸ್ಥಿತಿಯೂ ಉಂಟಾಗಿತ್ತೆಂಬುದು ಸುಳ್ಳಲ್ಲ. ಎರಡೂ ದೇಶಗಳಲ್ಲಿ ಜನರ ಬವಣೆ ಹೆಚ್ಚಿತ್ತು. ಆಡಳಿತದಲ್ಲಿ ಭ್ರಷ್ಟಾಚಾರ ಮಿತಿಮೀರಿತ್ತು. ಇವನ್ನೆಲ್ಲಾ ಸಹಿಸಲಾಗದೆ ಜನರು ದಂಗೆ ಎದ್ದಿರುವುದೂ ಸಹಜವಾಗಿದೆ.

ದಂಗೆಯ ಬಳಿಕ ಬಾಂಗ್ಲಾ ದೇಶವು ಬಳಿಕ ಚುನಾಯಿತವಲ್ಲದ ಮಹಮ್ಮದ್ ಯೂನುಸ್ ಆಡಳಿತದ ಕೈವಶದಲ್ಲಿತ್ತು. ಆದರೆ ಈ ಮಧ್ಯಂತರ ಸರಕಾರದ ಆಡಳಿತ ಕೂಡಾ ಸಮಾಧಾನಕರವಾಗಿರಲಿಲ್ಲ. ಅಲ್ಲಿನ ಜನರಿಗೂ ಈ ಆಡಳಿತದ ಧೋರಣೆ ರೋಸಿಹೋಗಿತ್ತು. ಜತೆಗೇ ಭಾರತಕ್ಕೆ ಕೂಡಾ ಯೂನುಸ್ ಆಡಳಿತವು ಅಸಹನೀಯ ಪರಿಸ್ಥಿತಿಗಳನ್ನು ಸೃಷ್ಟಿಸಿತ್ತು. ಯೂನುಸ್ ಸರಕಾರವು ಭಾರತ ವಿರೋಧಿ ನಿಲುವನ್ನು ನಿರ್ಲಜ್ಜವಾಗಿ ಪ್ರದರ್ಶಿಸಿದ್ದರಿಂದ ಉಭಯ ದೇಶಗಳ ನಡುವಿನ ಸಂಬಂಧವು ಹಿಂದೆಂದೂ ಕಾಣದಷ್ಟು ಪ್ರಪಾತಕ್ಕೆ ಕುಸಿದಿತ್ತು.

ಬಾಂಗ್ಲಾ ಚುನಾವಣೆಗೆ ಸಿದ್ಧತೆ ನಡೆದಂತೆಯೇ ಹಿಂದಿನ ಸರಕಾರದ ಪದಚ್ಯುತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿದ್ಯಾರ್ಥಿಗಳ ಸಂಘಟನೆಗಳನ್ನು ಒಳಗೊಂಡ ನ್ಯಾಷನಲ್ ಸಿಟಿಜನ್ಸ್ ಪಾರ್ಟಿ ಮೂಲಭೂತವಾದಿ ಜಮಾತ್-ಇ-ಇಸ್ಲಾಮೀ ಪಕ್ಷದೊಂದಿಗೆ ಕೈಜೋಡಿಸಿತ್ತು. ಈ ಮೈತ್ರಿಕೂಟಕ್ಕೆ ಮಧ್ಯಂತರ ಸರಕಾರದ ಪರೋಕ್ಷ ಬೆಂಬಲವೂ ಇತ್ತು. ಹಾಗಾಗಿ ಜಮಾತ್-ಇ-ಇಸ್ಲಾಮೀ ಮತ್ತು ಎನ್‌ಸಿಪಿ ಮೈತ್ರಿಕೂಟವು ಚುನಾವಣೆಯಲ್ಲಿ ಗೆಲುವು ಸಾಧಿಸಬಹುದು ಎಂಬುದಾಗಿ ಎಲ್ಲರೂ ಭಾವಿಸಿದ್ದರು. ಚುನಾವಣೆ ಸಂದರ್ಭದಲ್ಲಿ ಕೂಡಾ ಭಾರೀ ಹಿಂಸಾಚಾರ ನಡೆಯಬಹುದೆಂದು ಭೀತಿ ಪಡಲಾಗಿತ್ತು.



ಆದರೆ ಬಾಂಗ್ಲಾದ ಮತದಾರರು ಬುದ್ಧಿವಂತಿಕೆ ಮತ್ತು ಪ್ರಬುದ್ಧತೆಯನ್ನು ಪ್ರದರ್ಶಿಸಿದರು.ಚುನಾವಣೆ ವೇಳೆ ಹಿಂಸಾಚಾರಕ್ಕೆ ಹೆಚ್ಚಿನ ಆಸ್ಪದ ನೀಡಲಿಲ್ಲ. ಮೂಲಭೂತವಾದಿ ಪಕ್ಷವನ್ನು ತ್ಯಜಿಸಿ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ (ಬಿಎನ್‌ಪಿ)ಗೆ ಭಾರೀ ಬಹುಮತ ನೀಡಿದರು.ಅಧಿಕ ಜನಸಂಖ್ಯೆ ಹೊಂದಿರುವ ಬಾಂಗ್ಲಾದೇಶಕ್ಕೆ ಈ ಸಂಕೀರ್ಣ ಸಮಯದಲ್ಲಿ ಒಂದು ವಿಶ್ವಾಸಾರ್ಹ ಹಾಗೂ ಅನುಭವೀ ಸರಕಾರದ ಅಗತ್ಯವಿತ್ತು. ಜನರು ಈ ಕಾರಣದಿಂದಲೇ ತಾರೀಖ್ ರೆಹಮಾನ್ ನೇತೃತ್ವದ ಬಿಎನ್‌ಪಿಯನ್ನು ಅಧಿಕಾರಕ್ಕೆ ಏರಿಸಿದರು.

ಬಾಂಗ್ಲಾದಲ್ಲಿ ಹಲವು ರಾಜಕೀಯ ಸುಧಾರಣೆ ಮತ್ತು ಸಾಂವಿಧಾನಿಕ ಬದಲಾವಣೆಗೆ ಚುನಾವಣೆ ಸಂದರ್ಭದಲ್ಲಿಯೇ ಜನಮತ ಗಣನೆ ನಡೆದಿತ್ತು. ಈ ಸುಧಾರಣೆಗಳಿಗೆ ಬಾಂಗ್ಲಾ ಜನರು ಸಮ್ಮತಿ ಸೂಚಿಸಿದ್ದರು. ಅದನ್ನು ಅನುಷ್ಠಾನಕ್ಕೆ ತರುವುದು ಈಗ ಬಿಎನ್‌ಪಿ ಸರಕಾರದ ಆದ್ಯತೆಯಾಗಿದೆ. ಜನಮನತಗಣನೆಯಲ್ಲಿ ಪಾಲ್ಗೊಂಡ 87 ಮಿಲಿಯ ಮತದಾರರಲ್ಲಿ ಶೇ. 83ರಷ್ಟು ಮಂದಿ ಸಾಂವಿಧಾನಿಕ ಸುಧಾರಣೆಗಳಿಗೆ ಸಮ್ಮತಿ ಸೂಚಿಸಿದ್ದಾರೆ. ಪ್ರಧಾನಿಯ ಅಧಿಕಾರಾವಧಿಯನ್ನು ಎರಡು ಅವಧಿಗಳಿಗೆ ಸೀಮಿತಗೊಳಿಸುವುದು, ಸಂಸತ್ತಿನಲ್ಲಿ ಮತ್ತು ಸರಕಾರಿ ಹುದ್ದೆಗಳಲ್ಲಿ ಯುವಕರಿಗೆ ಶೇ. 5ರಷ್ಟು ಪ್ರಾತಿನಿಧ್ಯ ಕಲ್ಪಿಸುವುದು, ಸ್ವತಂತ್ರ ಭ್ರಷ್ಟಾಚಾರ ವಿರೋಧಿ ಮಂಡಳಿ ಸ್ಥಾಪಿಸುವುದು, ಅಲ್ಪಸಂಖ್ಯಾತರಿಗೆ ಸಮಾನ ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಕಲ್ಪಿಸುವುದು ಮುಂತಾದವು ಈ ಸುಧಾರಣೆಗಳಲ್ಲಿ ಸೇರಿದೆ. ಯೂನುಸ್ ಆಡಳಿತವು ಸಂಪೂರ್ಣವಾಗಿ ಭಾರತ ವಿರೋಧಿ ನೀತಿಯನ್ನು ಅನುಸರಿಸಿದ್ದರೆ ನೂತನ ಪ್ರಧಾನಿ ರೆಹಮಾನ್ ಅವರು ಭಾರತದೊಂದಿಗಿನ ಸಂಬಂಧವನ್ನು ಸುಧಾರಿಸುವ ಇಂಗಿತ ವ್ಯಕ್ತಪಡಿಸಿರುವುದು ಸ್ವಾಗತಾರ್ಹ.

ನೇಪಾಳದಲ್ಲಿ ಹೊಸ ಸರಕಾರ

ನೇಪಾಳದಲ್ಲಿ ಜನರು ಹೊಸದಾದ ಪಕ್ಷವೊಂದನ್ನು ಅಧಿಕಾರಕ್ಕೆ ಏರಿಸಿದ್ದಾರೆ. ಕೆಲವೇ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಎನ್‌ಸಿಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೆ ಏರಿದೆ. ಪತ್ರಕರ್ತನಾಗಿದ್ದುಕೊಂಡು ರಾಜಕಾರಣಿಯಾದ 50ರ ಹರೆಯದ ರವಿ ಲಮಿಚನೆ ಮತ್ತು 35ರ ಹರೆಯದ ರ್‍ಯಾಪ್ ಸಂಗೀತಗಾರ ಬಾಲೇಂದ್ರ ಷಾ ಈ ಪಕ್ಷವನ್ನು ಕಟ್ಟಿದವರು. ನೇಪಾಳದಲ್ಲಿ ಯುವ ಮತದಾರರು ಶೇ. 40ರಷ್ಟಿದ್ದು, ಅವರು ಹೊಸಬರನ್ನೇ ಆಡಳಿತಕ್ಕೆ ಏರಿಸುವ ಉತ್ಸಾಹ ತೋರಿದ್ದಾರೆ. ಬಾಲೇಂದ್ರ ಷಾ ನೇಪಾಳದ ಹೊಸ ಪ್ರಧಾನಿಯಾಗಿದ್ದಾರೆ. ಬಹುಕಾಲದಿಂದ ಅಸ್ತಿತ್ವದಲ್ಲಿದ್ದ ನೇಪಾಳಿ ಕಾಂಗ್ರೆಸ್ ಮತ್ತು ನೇಪಾಳಿ ಕಮ್ಯುನಿಸ್ಟ್ ಪಕ್ಷ ಮೊದಲಾದವು ಮೂಲೆಗುಂಪಾಗಿವೆ. ಈ ಎರಡು ಪಕ್ಷಗಳ ಪ್ರಮುಖ ಮುಖಂಡರನ್ನು ಕೂಡಾ ಜನರು ಮೂಲೆಗೆ ತಳ್ಳಿದ್ದಾರೆ.

1991ರಲ್ಲಿ ರಾಜಸತ್ತೆಯ ಬದಲಿಗೆ ನೇಪಾಳವು ಪ್ರಜಾಸತ್ತೆಯನ್ನು ಅಪ್ಪಿಕೊಂಡಿತ್ತು. ಆದರೆ ಅಲ್ಲಿಂದ ಬಳಿಕ ನೇಪಾಳದಲ್ಲಿ ಸ್ಥಿರ ಸರಕಾರವೊಂದು ರೂಪುಗೊಂಡಿರಲೇ ಇಲ್ಲ. 1990ರಿಂದ 2008ರ ಅವಧಿಯಲ್ಲಿ 16 ಪ್ರಧಾನಿಗಳು ಆಳಿದ್ದರು. 2008ರಲ್ಲಿ ರಾಜಸತ್ತೆಯನ್ನು ಸಂಪೂರ್ಣ ಅಳಿಸಿಹಾಕಲಾಯಿತು. ಅಲ್ಲಿಂದ ಬಳಿಕ ಕೂಡಾ 15 ಪ್ರಧಾನಿಗಳು ನೇಪಾಳವನ್ನು ಆಳಿದ್ದಾರೆ. 2008ರಿಂದಾರಂಭಿಸಿ ಕಳೆದ 4 ಚುನಾವಣೆಗಳಲ್ಲಿ ನೇಪಾಳದ ಜನರು ಯಾವ ಪಕ್ಷಕ್ಕೂ ಬಹುಮತ ನೀಡಿರಲಿಲ್ಲ. ಹಾಗಾಗಿ ಸರಕಾರಗಳು ಪದೇ ಪದೇ ಬದಲಾಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಮೊನ್ನೆ ನಡೆದ ಚುನಾವಣೆ ನೇಪಾಳದ ಪ್ರಜಾತಾಂತ್ರಿಕ ಇತಿಹಾಸದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಏಕಪಕ್ಷವು ಬಹುಮತ ಪಡೆಯಲು ಸಫಲವಾಗಿದೆ. ಇದರಿಂದಾಗಿ ಅಲ್ಲಿ ಸ್ಥಿರ ಸರಕಾರವೊಂದು ರೂಪುಗೊಳ್ಳುವ ಆಶಾವಾದ ಮೂಡಿದೆ.

"ಪ್ರಜಾಪ್ರಭುತ್ವ ಒಳ್ಳೆಯದು. ಬೇರೆ ವ್ಯವಸ್ಥೆಗಳು ಕೆಟ್ಟದಾಗಿರುವುದರಿಂದ ನಾನಿದನ್ನು ಹೇಳುತ್ತಿದ್ದೇನೆ" ಎಂದು ನೆಹರೂ ಹಿಂದೊಮ್ಮೆ ಹೇಳಿದ್ದರು. ಯಾವುದೇ ಪ್ರಜಾಪ್ರಭುತ್ವವು ಪರಿಪೂರ್ಣವಲ್ಲ, ಯಾವುದೇ ಚುನಾವಣೆಯೂ ಸಂಪೂರ್ಣ ದೋಷಪೂರಿತವಲ್ಲ. ಆದರೆ ಭಾರತವು ಪ್ರಜಾತಂತ್ರವನ್ನು ಅನುಸರಿಸುವಲ್ಲಿ ಇತರ ದೇಶಗಳಿಗೆ ಯಾವಾಗಲೂ ಮಾದರಿಯಾಗಿದೆ. ಪಾಕಿಸ್ತಾನ ಹೊರತುಪಡಿಸಿದರೆ ಭಾರತದ ಉಳಿದೆಲ್ಲಾ ನೆರೆದೇಶಗಳು ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿವೆ. ಪಾಕಿಸ್ತಾನದಲ್ಲಿ ಮಾತ್ರ ಹೆಸರಿಗೆ ಪ್ರಜಾಪ್ರಭುತ್ವ ಸರಕಾರವಿದ್ದರೂ ಆಡಳಿತದ ಹಿಡಿತ ಇರುವುದು ಸೇನೆಯಲ್ಲಿ. ಮೂರು ವರ್ಷಗಳ ಹಿಂದೆ ಮಾಲ್ಡೀವ್ಸ್ ಮತ್ತು ಶ್ರೀಲಂಕಾಗಳಲ್ಲೂ ಶಾಂತಿಯುತ ಮತದಾನ ನಡೆದು ಆಡಳಿತ ಬದಲಾವಣೆ ಉಂಟಾಗಿತ್ತು. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮ್ಯಾನ್ಮಾರ್‌ನಲ್ಲಿ ಕೂಡಾ ಸಂಸದೀಯ ಚುನಾವಣೆ ನಡೆದಿತ್ತು. ಹೊಸ ಸರಕಾರದಡಿಯಲ್ಲಿ ಇವೆಲ್ಲ ದೇಶಗಳು ಭಾರತದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿವೆ.

ನೆರೆ ದೇಶಗಳ ಜನರೊಂದಿಗೆ ನಮ್ಮ ದೇಶದ ಜನರೂ ಕೂಡಾ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತ ಸರಕಾರವು ನೇಪಾಳ ಮತ್ತು ಬಾಂಗ್ಲಾದೇಶಗಳ ನೂತನ ಸರಕಾರಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ದ್ವಿಪಕ್ಷೀಯ ಸಂಬಂಧವನ್ನು ಬೆಳೆಸಿಕೊಳ್ಳಬಹುದಾಗಿದೆ.ಕಳೆದೊಂದು ವರ್ಷದಿಂದ ಈ ದೇಶಗಳೊಂದಿಗೆ ಹದಗೆಟ್ಟ ಸಂಬಂಧವನ್ನು ಮತ್ತೆ ಸರಿದಾರಿಗೆ ತರಬಹುದಾಗಿದೆ. ಅಟಲ್‌ಬಿಹಾರಿ ವಾಜಪೇಯಿ ಹಿಂದೊಮ್ಮೆ ಹೇಳಿದ್ದರಲ್ಲವೆ "ನಾವು ನಮ್ಮ ಸ್ನೇಹಿತರನ್ನು ಬದಲಾಯಿಸಬಹುದು, ಆದರೆ ನೆರೆಕರೆಯನ್ನು ಬದಲಾಯಿಸಲಾಗುವುದಿಲ್ಲ".

ಪರಿಣಾಮದಿಂದ ಸಾಫಲ್ಯವನ್ನು ಅಳೆಯಬೇಕು

ವಿದ್ಯಾಭ್ಯಾಸಸ್ಯ ಸಾಫಲ್ಯಂ ಜ್ಞೇಯಂ ನ ಪರಿಮಾಣತಃ ।
ಜ್ಞೇಯಂ ತತ್ಸರ್ವಥಾ ಲೋಕೇ ಮನುಷ್ಯೈ ಪರಿಣಾಮತಃ ॥ -ಸುವಚನಶತಕಂ

ವಿದ್ಯಾಭ್ಯಾಸದ ಸಫಲತೆಯನ್ನು ವಿದ್ಯಾರ್ಥಿ ಎಷ್ಟು ಕಲಿತಿದ್ದಾನೆ ಎಂಬ ಪರಿಮಾಣದಿಂದ ಅಳೆಯಬಾರದು. ಅವನ ಮೇಲೆ ಅದು ಎಷ್ಟು ಪರಿಣಾಮವನ್ನು ಬೀರಿದೆ ಎಂಬುದರಿಂದ ಸಾಫಲ್ಯವನ್ನು ಅಳೆಯಬೇಕು- ಎಂಬುದು ಶ್ಲೋಕಾರ್ಥ.



ಶಿಕ್ಷಣ ಮೂಲಭೂತ ಹಕ್ಕುಗಳಲ್ಲೊಂದು. ಎಲ್ಲ ಶಿಕ್ಷಿತರಾಗಬೇಕು ಎಂಬುದು ಇದರ ಹಿಂದಿರುವ ಆಶಯ. ಶಿಕ್ಷಿತನು ಚೆನ್ನಾಗಿ ಅರ್ಥಮಾಡಿಕೊಂಡು ಬದುಕಬಲ್ಲ. ಸಮಾಜವನ್ನು ಕಟ್ಟಬಲ್ಲ ಸಮಾಜದಲ್ಲಿರುವ ಓರೆ ಕೋರೆಗಳನ್ನು ಸರಿಪಡಿಸಬಲ್ಲ. ಸುಂದರ ಹಾಗೂ ಸಮೃದ್ಧ ಸಮಾಜಕ್ಕೆ ಮುನ್ನುಡಿಯಾಗಬಲ್ಲ. ಅರ್ಥಪೂರ್ಣ ಸಮಾಜ ಬದುಕಿಗೆ ಕಾರಣನಾಗಬಲ್ಲ. ತಾನೂ ಅರಳಿ ಇತರರನ್ನೂ ಅರಳಿಸಬಲ್ಲ.

ಈ ಎಲ್ಲ ಕಾರಣಕ್ಕಾಗಿಯೇ ಸರ್ವ ಶಿಕ್ಷಣ ಅಭಿಯಾನದಂತಹ ಕ್ರಾಂತಿಕಾರಿ ಯೋಜನೆಯನ್ನು ತರಲಾಗಿದೆ. ಇಂದಿನ ಕಾಲಘಟ್ಟದಲ್ಲಿ ಓದಿ ಪದವಿ ಪಡೆದರೆ ಶಿಕ್ಷಿತ ಎಂಬ ಹಣೆಪಟ್ಟಿಕಟ್ಟುತ್ತೇವೆ. ಶಾಲೆಗಳಿಗೆ ತೆರಳಿ ಓದದಿದ್ದರೂ ಸಮಾಜದ ನಡುವೆ ಅನ್ಯಾನ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕೃಷಿಯನ್ನೋ, ವ್ಯಾಪಾರವನ್ನೂ ಸಮುದಾಯ ಮೆಚ್ಚುವಂತೆ ನಡೆಸಿಕೊಂಡು ಬಂದವನೂ ಶಿಕ್ಷಿತನೆ. ಪರಿಸರವೇ ಗುರು. ಸಮಾಜವೇ ಶಾಲೆ. ಪರಿಶ್ರಮದಿಂದ ದುಡಿದು ಪಡೆದ ಅನುಭವವೇ ಪದವಿ. ಸಮಾಜಕ್ಕೆ ಪೂರಕವಾಗಿ ಬದುಕು ನಡೆಸುತ್ತಿದ್ದರೇ ವಿನಾ ಅವರೆಂದೂ ಸಮಾಜಕ್ಕೆ ಮಾರಕವಾಗಿರಲಿಲ್ಲ.

ಇಂದು ಎಷ್ಟು ಕಲಿತಿದ್ದಾನೆ ಎಂಬುದನ್ನು ಅರಿತು ಸಾಫಲ್ಯವನ್ನು ಗುರುತಿಸುತ್ತೇವೆ. ಉನ್ನತ ಪದವಿಯನ್ನು ಪಡೆದಿದ್ದರೂ ಹೆಚ್ಚು ಡಿಗ್ರಿಗಳನ್ನು ಹೊಂದಿದ್ದಾನೆ ಎಂಬುದರ ಹಿನ್ನೆಲೆಯಲ್ಲಿ ಜೀವನದ ಸಫಲತೆಯನ್ನು ಲೆಕ್ಕ ಹಾಕುವ ಪದ್ಧತಿಯಿದೆ. ಇದು ತಪ್ಪು. ರಾಕ್ಷಸರಂತೆ ವ್ಯವಹರಿಸುವ ಸಾಕ್ಷರರಿದ್ದಾರೆ. ಅಪರೂಪದ ಪದವಿ ಪಡೆದು ಲೋಕಕಂಟಕರಾದವರಿದ್ದಾರೆ.

ಜಗತ್ತಿನಲ್ಲಿ ಭಯೋತ್ಪಾದನೆ ಮಾಡುವವರು, ಪ್ರೇರೇಪಿಸುವವರು, ಅವರನ್ನು ಸಮರ್ಥಿಸುವವರು... ಇವರೆಲ್ಲರೂ ವಿದ್ಯಾಭ್ಯಾಸ ಪಡೆದವರೆ. ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿದವರು ನಿರಕ್ಷರಕುಕ್ಷಿಗಳಲ್ಲ. ಇವರ ಬೆಂಬಲಕ್ಕೆ ನಿಲ್ಲುವ ಅರ್ಬನ್ ನಕ್ಸಲರು ಓದಿಕೊಂಡವರೇ. ಇವರನ್ನೆಲ್ಲ ಇವರ ಪದವಿ, ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಅಳೆಯಲು ಸಾಧ್ಯವೇ? ಸಂಸ್ಕಾರದ ಗಂಧವಿಲ್ಲದ ಇವರ ವಿದ್ಯಾ ರಾಷ್ಟ್ರ ಮಾರಕ. ಸಮಾಜ ವಿದ್ರೋಹಕ. ಓದಿದ್ದೊಂದು, ಮಾಡುವುದೊಂದು ಎಂಬಂತಾಗಬಾರದು. ದೇಶಕ್ಕೆ ವ್ಯವಸ್ಥೆಗೆ, ಇನ್ನೊಬ್ಬರ ಸಂಪತ್ತಿಗೆ ಕನ್ನ ಹಾಕುವವರು ವಿದ್ಯಾವಂತ ಸಮಾಜ ವಿಧ್ವಂಸಕರು. ಆದ್ದರಿಂದ ವಿದ್ಯಾಭ್ಯಾಸದ ಸಫಲತೆಯನ್ನು ಪಡೆದ ಪದವಿಯಿಂದ ಗುರುತಿಸಬಾರದು. ಅದು ಸಮಾಜದ ಮೇಲೆ ಎಷ್ಟು ಒಳ್ಳೆಯ ಪರಿಣಾಮವನ್ನು ಬೀರಿದೆ ಎಂಬುದರ ಮೇಲೆ ಅಳೆಯಬೇಕು. ವಿದ್ಯಾವಂತನು, ಪದವೀ ಧರನು ಸಮಷ್ಟಿಯ ಹಿತಚಿಂತನೆಯನ್ನು ಬೆಳೆಸಿಕೊಳ್ಳಬೇಕು. ತನ್ನ ಜ್ಞಾನವನ್ನು ಸಮಾಜೋನ್ನಯನಕ್ಕೆ ಬಳಸಬೇಕು. ಆಗಲೇ ವಿದ್ಯಾಭ್ಯಾಸ ಸಾಫಲ್ಯವನ್ನು ಪಡೆಯುತ್ತದೆ.

'ಆರ್ಡರ್ಲಿ' ಪದ್ಧತಿ ಇನ್ನೂ ರದ್ದುಗೊಂಡಿಲ್ಲವೆ?

ಆರ್ಡರ್ಲಿ ವ್ಯವಸ್ಥೆ ರದ್ದುಗೊಂಡಿದೆ ಎಂದೇ ಭಾವಿಸಲಾಗಿತ್ತು. ಆದರೆ ಇನ್ನೂ ಇದೆ ಎಂಬುದು ಪೊಲೀಸ್ ವರಿಷ್ಠಾಧಿಕಾರಿಯ ಮಾತಿನಿಂದ ಸಾಬೀತಾಗಿದೆ.

ಹೊಸೂರು ರತ್ನಾಕರ ಶೆಟ್ಟಿ

ಜನಸಾಮಾನ್ಯರ ನೆನಪು ಮಾಸುವುದು ಬಹು ಬೇಗ. ಕಹಿ ನೆನಪುಗಳಾಗಲಿ, ಸಮಾಜವೇ ತಲೆ ತಗ್ಗಿಸುವ ಘಟನೆಗಳಾಗಲಿ ಮುನ್ನೆಲೆಗೆ ಬಂದಾಗ ಆಂದೋಲನೆಯೇ ನಡೆದು, ತದನಂತರ ಸರ್ಕಾರದ ಕ್ರಮ/ಭರವಸೆಯ ನಂತರ ಎಲ್ಲವೂ ಸರಿಹೋಯಿತೆಂದು ಮುನ್ನಡೆಯುವ ಜನರು ಕ್ರಮೇಣ ಅಂತಹ ಘಟನಾವಳಿಗಳನ್ನೆ ಮರೆತು ಬಿಡುತ್ತಾರೆ. ಆದರೆ ವಾಸ್ತವವಾಗಿ ಅಂತಹ ಅನಿಷ್ಟ ಪದ್ಧತಿಗಳು ತೆರೆಯ ಮರೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದು ಮತ್ತೆ ಮುಖ್ಯವಾಹಿನಿಯಲ್ಲಿ ಸದ್ದು ಮಾಡಿದಾಗ ಬೆಚ್ಚಿಬೀಳುವ ಸರದಿ ಅದೇ ಜನಸಾಮಾನ್ಯರದ್ದು. ನಮ್ಮ ಪೊಲೀಸ್ ವ್ಯವಸ್ಥೆಯಲ್ಲಿ ಅನಾದಿಕಾಲದಿಂದಲೂ ಅನುಸರಿಸಿಕೊಂಡು ಬಂದ 'ಆರ್ಡರ್ಲಿ' (ಮನೆಗೆಲಸದ ಸಿಪಾಯಿಗಳು) ವ್ಯವಸ್ಥೆ ಇನ್ನೂ ಮುಂದುವರಿಯುತ್ತಿದೆ.

ಪೊಲೀಸ್ ವ್ಯವಸ್ಥೆಯ ಕೆಳಹಂತದಲ್ಲಿ ಕೆಲಸಮಾಡುವ ನೌಕರರನ್ನು ಉನ್ನತ ಪೊಲೀಸ್ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡಲು ಬಳಸಿಕೊಳ್ಳುತ್ತಿರುವುದು ಎಲ್ಲರೂ ಸಮಾನರು ಎನ್ನುವ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವೇ ಸರಿ.ಶತಮಾನಗಳ ಕಾಲ ನಮ್ಮನ್ನಾಳಿದ ಆಂಗ್ಲರಿಂದ ಬಳುವಳಿ ಪಡೆದ ಹಲವು ಅನಿಷ್ಟ ಪದ್ಧತಿಗಳಲ್ಲಿ ಇದೂ ಒಂದು. ಆದರೆ ಸ್ವಾತಂತ್ರ್ಯದ ಅಮೃತೋತ್ಸವ ದಾಟಿರುವ ಈ ಹಂತದಲ್ಲೂ ಈ ಪದ್ಧತಿ ಇನ್ನೂ ಇರುವುದು ದುರದೃಷ್ಟಕರ. ಕೆಚ್ಚೆದೆಯ, ಸ್ವಾಭಿಮಾನಿಗಳಾದ ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್‌ರಂತವರ ಪರಂಪರೆ ಹೊಂದಿರುವ ನಮ್ಮ ಯುವಜನತೆ ಒಂದಿಷ್ಟೂ ಪ್ರತಿಭಟನೆ ತೋರದೆ, ಹೀನಾಯ ವ್ಯವಸ್ಥೆಗೆ ಒಗ್ಗಿಕೊಳ್ಳುತ್ತಿರುವುದು ಮಾತ್ರ ವಿಪರ್ಯಾಸವೇ ಸರಿ.

ದೇಶದ ಕಾನೂನು ಪರಿಸ್ಥಿತಿ ಸುಸ್ಥಿತಿಯಲ್ಲಿರಲು ಸದಾ ಜಾಗರೂಕರಾಗಿರುವ ಕ್ರಿಯಾಶೀಲ ಪೊಲೀಸ್ ವ್ಯವಸ್ಥೆ ಅತ್ಯವಶ್ಯಕ.ಈ ನಿಟ್ಟಿನಲ್ಲಿ ಎಲ್ಲಾ ಚುನಾಯಿತ ಸರ್ಕಾರದ ಪ್ರಥಮ ಆದ್ಯತೆ ಸಮರ್ಪಕ ಕಾನೂನು ಪರಿಪಾಲನೆಯೇ ಆಗಿರುತ್ತದೆ. ಇದಕ್ಕಾಗಿ ಸರ್ಕಾರವು ಪೊಲೀಸ್ ವ್ಯವಸ್ಥೆಯನ್ನು ಕಾಲಕಾಲಕ್ಕೆ ಆಧುನಿಕಗೊಳಿಸುವುದರ ಜೊತೆಗೆ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಪಾರದರ್ಶಕವಾಗಿ ಕಾರ್ಯನಿರ್ವಹಿಸುವತ್ತ ಶ್ರಮಪಡುತ್ತಿದೆ. ಕೆಲವೊಮ್ಮೆ ಪೊಲೀಸ್ ಸಿಬ್ಬಂದಿಗಳ ಕೊರತೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹರಸಾಹಸ ಪಡುತ್ತಿರುವುದನ್ನು ಕೂಡಾ ನಾವು ಆಗಾಗ ನೋಡುತ್ತಲೇ ಇದ್ದೇವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕಾನೂನುಬದ್ಧವಾಗಿ ಪೊಲೀಸ್ ಇಲಾಖೆಗೆ ನೇಮಕಗೊಂಡು, ತಿಂಗಳುಗಳ ಕಾಲ ಕಠಿಣ ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯನ್ನು ಅಧಿಕಾರಿಗಳು ತಮ್ಮ ಮನೆಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ಎಷ್ಟು ಸರಿ? ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯು ಸದಾ ದೇಶಕ್ಕಾಗಿ ಮುಡುಪಿರಲಿ ಎನ್ನುವ ಉದಾತ್ತ ಮನೋಭಾವವುಳ್ಳ ಪೊಲೀಸ್ ಉನ್ನತಾಧಿಕಾರಿಗಳ ಕೊರತೆ ಇದೆಯೆ ?

ಈ 'ಆರ್ಡರ್ಲಿ' ವ್ಯವಸ್ಥೆಯ ಬಗ್ಗೆ ದಶಕಗಳ ಹಿಂದೆಯೇ ಪ್ರತಿಭಟನೆ ನಡೆದಿತ್ತು. ಪ್ರತಿಭಟನೆಯ ಕಾವು ತೀವ್ರಗೊಂಡ ಬಳಿಕ ಇಂತಹ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಆಶ್ವಾಸನೆ ನೀಡಿತ್ತು. ಅದರ ನಂತರ ಎಲ್ಲವೂ ಸರಿಹೋಯಿತೆಂದು ಎಲ್ಲರು ತಿಳಿದಿದ್ದರು. ಆದರೆ ಇತ್ತೀಚೆಗೆ ಪೊಲೀಸ್ ಇಲಾಖೆಯ ಮಹಾನಿರ್ದೇಶಕ (ಡಿ.ಜಿ.ಪಿ) ಎಮ್.ಎ.ಸಲೀಮ್‌ರವರು ಹೊರಡಿಸಿದ ಆದೇಶದಲ್ಲಿ ರಾಜ್ಯದಲ್ಲಿರುವ ಸುಮಾರು ಮೂರು ಸಾವಿರ 'ಆರ್ಡರ್ಲಿ'ಗಳ ಸೇವೆಗಳನ್ನು ರದ್ದು ಪಡಿಸಿರುವುದಾಗಿ ಘೋಷಿಸಿರುವುದನ್ನು ಜನರು ಆಶ್ಚರ್ಯಚಕಿತರಾಗಿದ್ದಾರೆ. ದಶಕಗಳ ಹಿಂದೆಯೇ ಈ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಘೋಷಿಸಿದ್ದರೂ, ಮದ್ರಾಸ್ ಹೈಕೋರ್ಟ್ ಇದನ್ನು ಅನಾದಿಕಾಲದ ಜೀತ ಪದ್ಧತಿ ಎಂದು ಜರೆದಿದ್ದರೂ ಈ ಪದ್ಧತಿ ಇನ್ನೂ ಚಾಲನೆಯಲ್ಲಿರುವುದು ದಿಟವೆಂದು ಸಾಬೀತಾಗಿದೆ. ಇದು ಹಲವು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತಿದೆ.

ಪ್ರತಿ ತಿಂಗಳು ಸರ್ಕಾರದಿಂದ ಸಂಬಳ ಪಡೆದು, ತನ್ನ ಉಪಯುಕ್ತ ಸೇವೆಯನ್ನು ಮರೆತು, ಮೇಲಧಿಕಾರಿಗಳ ಮನೆಯಲ್ಲಿ ಬಿಟ್ಟಿ ಕೆಲಸ ಮಾಡುತ್ತಿರುವ ಪೊಲೀಸ್ ಸಿಬ್ಬಂದಿಗಳನ್ನು ಗುರುತಿಸುವುದೇಕೆ ಸರಕಾರಕ್ಕೆ ಸಾಧ್ಯವಾಗಿಲ್ಲ? ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿಲ್ಲವೇಕೆ? ನಿಯಮಾವಳಿಗಳನ್ನು ರೂಪಿಸುವ ಉನ್ನತಾಧಿಕಾರಿಗಳೇ ಈ ಅನಿಷ್ಟ ಪದ್ಧತಿಗೆ ಸಮರ್ಥನೆ ನೀಡುತ್ತಿದ್ದಾರೆ ಎನ್ನುವ ಅನುಮಾನ ಎಲ್ಲರನ್ನು ಕಾಡುತ್ತಿದೆ. ಉನ್ನತಾಧಿಕಾರಿಗಳೇ ಸ್ವಯಂಪ್ರೇರಿತರಾಗಿ ತಮ್ಮ ಅಡಿಯಾಳಾಗಿ ದುಡಿಯುತ್ತಿರುವ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಬಹುದು. ಆ ಮೂಲಕ ಸಿಬ್ಬಂದಿಗಳು ಇಲಾಖೆಯ ಮುಖ್ಯವಾಹಿನಿಗೆ ಬಂದು ಸಿಬ್ಬಂದಿಗಳ ಕೊರತೆಯಿಂದ ಹೆಣಗಾಡುವ ವ್ಯವಸ್ಥೆಯನ್ನು ತುಸು ತಿಳಿಗೊಳಿಸುವಂತೆ ಮಾಡಬಹುದು.

ಪ್ರಸ್ತುತ ಕರ್ನಾಟಕದಲ್ಲಿರುವ ಹಲವಾರು ಸಮಸ್ಯೆಗಳು ವೈರುಧ್ಯಗಳಿಂದ ಕೂಡಿದ್ದು ಹರಿತವಾದ ಕತ್ತಿಯ ಉಭಯ ತುದಿಗಳಂತೆ ಯಾವ ಕಡೆ ವಾಲಿದರೂ ಹಾನಿಯು ನಿಶ್ಚಿತವೆನ್ನುವಂತಿದೆ. ಉದಾಹರಣೆಗೆ ಜಾತಿ ಒಳ ಮೀಸಲಾತಿ ಜಾರಿ ಮಾಡಿದರೆ ಒಂದು ವರ್ಗಕ್ಕೆ ಅನ್ಯಾಯವಾದರೆ, ಜಾರಿ ಮಾಡದಿದ್ದರೆ ಮತ್ತೊಂದು ವರ್ಗಕ್ಕೆ ಅನ್ಯಾಯವಾಗಲಿದೆ.ಆದರೆ ಆರ್ಡರ್ಲಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರಿಂದ ಕೇವಲಕೆಲವೇಮೇಲಾಧಿಕಾರಿಗಳಿಗೆಅಸಮಾಧಾನವಾಗಬಹುದೇ ಹೊರತು ಪೊಲೀಸ್ ಇಲಾಖೆ ಹಾಗೂ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ.

ಪೊಲೀಸ್ ಇಲಾಖೆಯ ಹೊಣೆ ಹೊತ್ತಿರುವ ಗೃಹಮಂತ್ರಿಗಳು ಮನಸ್ಸು ಮಾಡಿದರೆ ಕೆಲವೇ ಗಂಟೆಗಳಲ್ಲಿ ಈ ಅನಿಷ್ಟ ಪದ್ಧತಿಗೆ ಅಂತಿಮ ಹಾಡಬಹುದು. ಅಂತಹ ಎದೆಗಾರಿಕೆಯ ನಿರ್ಧಾರ ಹೊರಬೀಳಲಿ ಎನ್ನುವುದೇ ಬಹುಜನರ ಆಶಯ ಕೂಡಾ. 'ಆರ್ಡರ್ಲಿ' ವ್ಯವಸ್ಥೆಯಲ್ಲಿ ಸುಮಾರು ಮೂರು ಸಾವಿರ ಸಿಬ್ಬಂದಿಗಳಿದ್ದು, ಇವರ ವಾರ್ಷಿಕ ವೆಚ್ಚ 78 ಕೋಟಿ ರೂಪಾಯಿಯನ್ನು ಆರ್ಥಿಕ ಹೊರೆಯಿಂದ ಬಸವಳಿದ ಕರ್ನಾಟಕ ಸರ್ಕಾರವೇ ಭರಿಸಬೇಕಾಗಿರುವುದು ಅನಿವಾರ್ಯವಾಗಿದೆ.ಹಾಗಾಗಿ ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಕಿರುಸುದ್ದಿ

ಪುನೀತ್ ಜನ್ಮದಿನ : ಕುಶಾಲನಗರದಲ್ಲಿ ರಕ್ತದಾನ

ಕುಶಾಲನಗರ: ಪುನೀತ್ ರಾಜ್ ಕುಮಾರ್ ಜನ್ಮದಿನದ ಅಂಗವಾಗಿ ಕುಶಾಲನಗರ ಲಯನ್ಸ್ ಕ್ಲಬ್ ಹಾಗೂ ಗೌಡ ಸಮಾಜದ ಆಶ್ರಯದಲ್ಲಿ ರಕ್ತದಾನ ಶಿಬಿರ ಕುಶಾಲನಗರ ಗೌಡ ಸಮಾಜ ಸಭಾಂಗಣದಲ್ಲಿ ನಡೆಯಿತು.

ಲಯನ್ಸ್ ಕ್ಲಬ್ ರೀಜನಲ್ ಚೇರ್ ಪರ್ಸನ್ ಡಾ.ಪಂಚಮ್ ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಸಹಕಾರ ನೀಡುವ ಚಿಂತನೆ ಎಲ್ಲರಲ್ಲೂ ಮೂಡಬೇಕಿದೆ. ಸ್ಥಿತಿವಂತರಾದರೂ ಕೊಡುಗೆ ನೀಡುವ ಮನಸ್ಥಿತಿ ಎಲ್ಲರಲ್ಲೂ ಇರುವುದಿಲ್ಲ. ಇದು ಬದಲಾಗಬೇಕಿದೆ. ಪುನೀತ್ ರಾಜ್ ಕುಮಾರ್ ಸಮಾಜಕ್ಕೆ ನೀಡಿದ ಕೊಡುಗೆ ಅಪಾರ ಎಂದು ಶ್ಲಾಘಿಸಿದರು.

ಈ ಸಂದರ್ಭ ಗೌಡ ಸಮಾಜ ಅಧ್ಯಕ್ಷ ಚಿಲ್ಲನ ಗಣಪ್ರಸಾದ್, ಜಿಲ್ಲಾ ರಕ್ತ ನಿಧಿ ಘಟಕದ ಡಾ.ಕರುಂಬಯ್ಯ, ಲಯನ್ಸ್ ಕ್ಲಬ್ ಜಿಲ್ಲಾ ಕ್ಯಾಬಿನೆಟ್ ಉಪ ಕಾರ್ಯದರ್ಶಿ ಸುಮನ್ ಬಾಲಚಂದ್ರ, ಕುಶಾಲನಗರ ಅಧ್ಯಕ್ಷ ನಾರಾಯಣ, ಕಾರ್ಯದರ್ಶಿ ಕಿರಣ್, ಕುಶಾಲನಗರ ಗೌಡ ಸಮಾಜ ಉಪಾಧ್ಯಕ್ಷ ಕಾಶಿ ಪೂವಯ್ಯ, ಕಾರ್ಯದರ್ಶಿ ಹೇಮಂತ್, ಮೈಸೂರಿನ ಡಾ.ಇಬ್ರಾಹಿಂ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್.ಕೆ.ಶಾಂತಿ, ಲಯನ್ಸ್ ಪ್ರಮುಖರಾದ ಚಿಣ್ಣಪ್ಪ, ಡಾ.ಪ್ರವೀಣ್, ರಾಜಶೇಖರ್, ಗೌಡ ಸಮಾಜದ ಪ್ರಮುಖರು, ರಕ್ತದಾನಿಗಳು ಇದ್ದರು.

ಮೊಬೈಲ್ ಕ್ಯಾಂಟೀನ್ ಖರೀದಿಸಲು ಅರ್ಜಿ ಆಹ್ವಾನ

ಮಂಗಳೂರು: 2025-26 ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಮೊಬೈಲ್ ಕ್ಯಾಂಟೀನ್ ಖರೀದಿಸಲು ಸಹಾಯ ಕಾರ್ಯಕ್ರಮದಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಜಿದಾರರು ಅರ್ಜಿ ನಮೂನೆಯನ್ನು ಪಡೀಲ್ 'ಪ್ರಜಾ ಸೌಧ' ದಕ್ಷಿಣ ಕನ್ನಡ ಜಿಲ್ಲಾ ಆಡಳಿತ ಕೇಂದ್ರದಲ್ಲಿರುವ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರ ಕಚೇರಿಯಿಂದ ಪಡೆಯಬಹುದು.

ಸಹಾಯ ಕಾರ್ಯಕ್ರಮದಡಿ ಮೊಬೈಲ್ ಕ್ಯಾಂಟೀನ್ ಖರೀದಿಸಲು ಅರ್ಜಿ ಸಲ್ಲಿಸಲು ಏಪ್ರಿಲ್ 6 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ 0824-2453926/ 9844535509 ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲಿನಿಂದ ಬಿದ್ದು ಬಾಲಕ ಸಾವು

ಕುಂದಾಪುರ : ಜಾರ್ಖಂಡ್‌ನಿಂದ ಮಂಗಳೂರಿಗೆ ಹೋಗುವ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಜಾರ್ಖಂಡ್ ಮೂಲದ ರಂಗಬಾಜ್ ಅನ್ಸಾರಿ (16) ಎಂಬವರು ಕುಂದಬಾರಂದಾಡಿ ಗ್ರಾಮದ ತೊರೊಳ್ಳಿ ಎಂಬಲ್ಲಿ ರೈಲು ಸಂಚರಿಸುವಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮೃತಪಟ್ಟಿದ್ದಾರೆ. ಮಾ. 15ರಂದು ಮಧ್ಯಾಹ್ನ ಕುಂದಬಾರಂದಾಡಿ ಗ್ರಾಮದ ಚಕ್ರ ಸೇತುವೆಯ ಮೇಲೆ ಹಾದು ಹೋಗಿರುವ ತೊರೊಳ್ಳಿ ರೈಲ್ವೆ ಬ್ರಿಡ್ಜ್‌ನ ಮೇಲೆ ಟ್ರ್ಯಾಕ್ ಬಳಿ ಈತನ ಮೃತದೇಹ ಪತ್ತೆಯಾಗಿದ್ದು, ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ರತ್ನಾಕರ ದೇವಾಡಿಗ, ಕಾಂತ ಬಸಮನೆ, 5ನೇ ಬ್ಲಾಕ್, ಕೃಷ್ಣಾಪುರ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ಯನ್.ಕೆ. ಫ್ರೆಂಡ್ಸ್, ಪಲ್ಕೆಪದವು ಚರ್ಚ್ ಬಳಿ, ಮೂಡುಪೆರಾರ.
3. ತಾಳಿಪಾಡಿಗುತ್ತು ದಿ| ಶಂಭು ಶೆಟ್ಟಿ ಸ್ಮರಣಾರ್ಥ ಮಕ್ಕಳು, ಮಿತ್ತೋಡಿ ಮನೆ, ಕುತ್ತೆತ್ತೂರು.
4. ಚಂದ್ರಶೇಖರ ಕೆ., 'ಸಮೃದ್ಧಿ', ಕಲ್ಲುಗುಡ್ಡೆ, ಕೆಮ್ಮಿಂಜೆ, ದರ್ಬೆ, ಪುತ್ತೂರು.
5. ಚೀಳಾಯೂರು ಹತ್ತು ಸಮಸ್ತರು, ಗುತ್ತಿನ ಬಳಿ, ವಯಾ ಮುಕ್ಕ.
6. ಲಕ್ಷ್ಮಿ ಆರ್. ಶೆಟ್ಟಿ ಮತ್ತು ಮಕ್ಕಳು, ಸಮೃದ್ಧೀ ಲೇಔಟ್, 3ನೇ ಕ್ರಾಸ್, ಗುರುಪುರ, ಕೈಕಂಬ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
7. ಪ್ರಸಾದ್ ಆಚಾರ್ಯ ಮತ್ತು ಸಹೋದರರು, 'ಮೀನಾಕ್ಷಿ ಮಂಜುನಾಥ ನಿಲಯ', ಕಲ್ಲೋಡಿ, ಬಜಪೆ.

ಶ್ರೀ ಧರ್ಮಸ್ಥಳ ಮೇಳ
ಬಾಳೆಹೊಳೆಯಲ್ಲಿ
ಶ್ರೀ ವಿ.ಪಿ. ನಂದಕುಮಾರ್ ಮತ್ತು ಮನೆಯವರು
ದಾಸನಕೊಡಿಗೆ ಮನೆ

ಶ್ರೀ ಸಾಲಿಗ್ರಾಮ ಮೇಳ
ನಿಲುವಾಗಿಲುನಲ್ಲಿ- ಸ್ವಪ್ನ ಮಂಟಪ

ಶ್ರೀ ಪೆರ್ಡೂರು ಮೇಳ
ರಂಗನಪಲ್ಕೆ ಪಾನಡ್ಕದಲ್ಲಿ-ಚದುರಂಗ

ಶ್ರೀ ಹನುಮಗಿರಿ ಮೇಳ
ನೆಕ್ಕರಡ್ಕಪಳಿಕೆಯಲ್ಲಿ

ಶ್ರೀ ಪಾವಂಜೆ ಮೇಳ
ಹರ್ತಟ್ಟು ಯುವಕ ಮಂಡಲ (ರಿ.), ಕೋಟ, ಬ್ರಹ್ಮಾವರ ತಾಲೂಕು
ಬಪ್ಪನಾಡು ಕ್ಷೇತ್ರ ಮಹಾತ್ಮೆ



ಗುಂಡ್ಮಿ ಸಾಸ್ತಾನ ಶ್ರೀ ಕಂಬಿಗಾರ ಶ್ರೀ ಬಬ್ಬು ಸ್ವಾಮಿ ಪರಿವಾರ ದೈವಗಳ ದೈವಸ್ಥಾನದ ದ್ವಿತೀಯ ವರ್ಷದ ನೇಮೋತ್ಸವದ ಆಮಂತ್ರಣ ಪತ್ರಿಕೆಯನ್ನು ಕೋಟ ಅಮೃತೇಶ್ವರಿ ಹಲವು ಮಕ್ಕಳ ತಾಯಿ ದೇವಸ್ಥಾನದ ಸಾನಿಧ್ಯದಲ್ಲಿ ನೇಮೋತ್ಸವ ಸಮಿತಿಯ ಗೌರವಾಧ್ಯಕ್ಷ ಆನಂದ ಸಿ. ಕುಂದರ್ ಬಿಡುಗಡೆಗೊಳಿಸಿದರು. ಶಂಕರ್ ಎ. ಕುಂದರ್, ರಮೇಶ್ ಕಾರಂತ, ಸುಭಾಷ್ ಶೆಟ್ಟಿ ಗಿಳಿಯಾರು, ನೇಮೋತ್ಸವ ಸಮಿತಿಯ ಅಧ್ಯಕ್ಷ ಕೇಶವ ಕುಂದರ್, ಸುಲತಾ ಹೆಗ್ಡೆ , ಬಿ.ಉದಯ್ ಶೆಟ್ಟಿ, ಜಗದೀಶ್ ಬಾಳೆಬೆಟ್ಟು ಮಣೂರು ಮತ್ತಿತರರು ಉಪಸ್ಥಿತರಿದ್ದರು.

ಅಧಿವೇಶನದಲ್ಲಿ ಶಾಸಕ ವೇದವ್ಯಾಸ ಕಾಮತ್ ಪ್ರಶ್ನೆ
ತಮಿಳುನಾಡು ವ್ಯಕ್ತಿಗೆ ಗುತ್ತಿಗೆ ಯಾಕೆ?

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಜಾಹೀರಾತುಗಳ ಟೆಂಡರ್, ಟ್ರಾಫಿಕ್ ಪೊಲೀಸ್ ಬೂತ್ ಮೊದಲಾದ ವಿಷಯಗಳಲ್ಲಿ ಪಾಲಿಕೆ ಅಧಿಕಾರಿಗಳು, ಪೊಲೀಸ್ ಇಲಾಖೆ, ಜನಪ್ರತಿನಿಧಿಗಳು, ಸೇರಿದಂತೆ ಯಾರಿಗೂ ಬೆಂಗಳೂರಿನಲ್ಲಿ ಕುಳಿತವರು ಮಾಹಿತಿ ನೀಡದೇ ಏಕಪಕ್ಷೀಯವಾಗಿ ನಡೆದುಕೊಂಡು ತಮಿಳುನಾಡಿನ ವ್ಯಕ್ತಿಯೊಬ್ಬರಿಗೆ ಗುತ್ತಿಗೆ ನೀಡಿ ಕೈ ತೊಳೆದುಕೊಂಡಿದ್ದಾರೆ ಎಂದು ಶಾಸಕ ವೇದವ್ಯಾಸ ಕಾಮತ್ ಅವರು ಅಧಿವೇಶನದಲ್ಲಿ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು.



ನೀತಿ ನಿಯಮಗಳನ್ನೆಲ್ಲ ಗಾಳಿಗೆ ತೂರಿ, ತಮಗಿಷ್ಟ ಬಂದ ಹಾಗೆ ಅನ್ಯ ರಾಜ್ಯದವರಿಗೆ ಅನುಕೂಲ ಮಾಡಿಕೊಟ್ಟು, ಇಷ್ಟು ವರ್ಷ ಮಂಗಳೂರಿನಲ್ಲಿ ಪಾಲಿಕೆಗೆ ತೆರಿಗೆ ಸಹಿತ ಕ್ರಮಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದ ಸ್ಥಳೀಯ ಜಾಹೀರಾತುದಾರರನ್ನು ಕಡೆಗಣಿಸುವ ವ್ಯವಸ್ಥಿತ ಹುನ್ನಾರ ನಡೆದಿದೆ. ಈ ಅನ್ಯಾಯದ ವಿರುದ್ಧ ಕೋರ್ಟ್ ಮೊರೆ ಹೋಗಿದ್ದಕ್ಕೆ ಅವರನ್ನು ಬೆದರಿಸುವ ಕೆಲಸವೂ ಆಗುತ್ತಿದೆ. ಪಾಲಿಕೆಗೆ ಜಾಹಿರಾತುಗಳಿಂದಲೇ ಸುಮಾರು ಮೂರೂವರೆ ಕೋಟಿ ಆದಾಯ ಬರುತ್ತಿದ್ದು, ಸರ್ಕಾರ ಮನಸ್ಸು ಮಾಡಿದ್ದರೆ ಹತ್ತು ಕೋಟಿಯವರೆಗೂ ಆದಾಯ ಪಡೆಯಬಹುದು. ಆದರೆ ಭ್ರಷ್ಟಾಚಾರಕ್ಕೆ ಎಡೆಮಾಡಿ ಕೊಡುವಂತೆ ಸರ್ಕಾರವೇ ವರ್ತಿಸಿದರೆ ಹೇಗೆ ಎಂದು ಪ್ರಶ್ನಿಸಿದರು. ಇಲ್ಲಿ ಯಾರಿಗೂ ಯಾವುದೇ ಮಾಹಿತಿ ನೀಡದೇ, ಫುಟ್‌ಪಾತ್, ರಸ್ತೆ ಅಗಲೀಕರಣಕ್ಕಾಗಿ ಬಿಟ್ಟ ಜಾಗ, ರಾಜಕಾಲುವೆಗಳ ಮೇಲೆ, ಕೊನೆಗೆ ರಸ್ತೆ ಮಧ್ಯದಲ್ಲಿಯೂ ಎಲ್ಲೆಂದರಲ್ಲಿ ಟ್ರಾಫಿಕ್ ಪೊಲೀಸ್ ಬೂತ್ ಅಳವಡಿಸಲಾಗಿದೆ. ಪೊಲೀಸ್ ಔಟ್‌ಪೋಸ್ಟ್ ಮೇಲೆ ಜಾಹೀರಾತು ನೀಡುವರಿದ್ದರೆ ಸಂಪರ್ಕಿಸಿ ಎಂದು ಬೋರ್ಡ್ ಕೂಡ ಹಾಕಲಾಗಿದೆ. ಈ ಬಗ್ಗೆ ಜನರು ನಮ್ಮನ್ನು ಪ್ರಶ್ನೆ ಮಾಡುತ್ತಿದ್ದು, ಸರ್ಕಾರ ಮಾಡಿದ ತಪ್ಪಿಗೆ ನಾವೇಕೆ ಜವಾಬ್ದಾರರಾಗಬೇಕು ಎಂದರು. ಇದಕ್ಕೆ ಧ್ವನಿಗೂಡಿಸಿದ ಸ್ಪೀಕರ್ ಯು.ಟಿ ಖಾದರ್ ನನ್ನ ಕ್ಷೇತ್ರದ ರಸ್ತೆಯ ಭಾಗದಲ್ಲಿದ್ದ ಟ್ರಾಫಿಕ್ ಪೊಲೀಸ್ ಬೂತ್‌ನ್ನು ನಾನೇ ಸೂಚನೆ ನೀಡಿ ತೆರವುಗೊಳಿಸಿದ್ದೇನೆ ಎಂದರು.

ಅಧಿವೇಶನದಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ಪ್ರಶ್ನೆಗೆ ಸಚಿವ ಮಾಂಕಾಳ್ ವೈದ್ಯ ಉತ್ತರ
ಬಂದರು ಹೂಳೆತ್ತಲು ಅಂದಾಜುಪಟ್ಟಿ ತಯಾರಿ

ಬೈಂದೂರು: ರಾಜ್ಯದ ಮೀನುಗಾರಿಕೆ ಬಂದರುಗಳಲ್ಲಿ ಹೂಳೆತ್ತುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸಲಾಗುತ್ತಿದೆ ಎಂದು ಮೀನುಗಾರಿಕೆ ಬಂದರು ಹಾಗೂ ಒಳನಾಡು ಜಲ ಸಾರಿಗೆ ಸಚಿವ ಮಾಂಕಾಳ್ ವೈದ್ಯ ಹೇಳಿದರು.

ಅಧಿವೇಶನದಲ್ಲಿ ಶಾಸಕ ಗುರುರಾಜ ಗಂಟಿಹೊಳೆ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರಸ್ತುತ ಪಿಎಂಎಂಎಸ್ ವೈ. ಯೋಜನೆಯಡಿ ಕರಾವಳಿ ಉತ್ತರ ಕನ್ನಡ ಜಿಲ್ಲೆಯ ಅಮದಳ್ಳಿ, ಬೇಲಿಕೇರಿ-ಹಾರವಾಡ ಮತ್ತು ತದಡಿ ಮೀನುಗಾರಿಕೆ ಬಂದರುಗಳಲ್ಲಿ ನಿರ್ವಹಣಾ ಹೂಳೆತ್ತುವಿಕೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. 2023-24ನೇ ಸಾಲಿನ ಆಯವ್ಯಯ ಕಂಡಿಕೆ - 249 ರಲ್ಲಿ ಮೀನುಗಾರಿಕೆ ದೋಣಿಗಳು ತಂಗುವ ಜೆಟ್ಟಿಗಳು ಹಾಗೂ ಬಂದರುಗಳಲ್ಲಿ ಹೂಳು ತೆಗೆಯಲು ಮತ್ತು ಮಲ್ಪೆ, ಹೊನ್ನಾವರ, ಭಟ್ಕಳ, ಕುಂದಾಪುರ ಮತ್ತು ಬೇಲಿಕೇರಿ ಬಂದರುಗಳಲ್ಲಿ ಎರಡು ವರ್ಷಗಳಿಗೊಮ್ಮೆ ಹೂಳೆತ್ತುವ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುವುದು ಎಂದು ಘೋಷಿಸಿರುವ ಯೋಜನೆಯ ಅನುಷ್ಠಾನಕ್ಕೆ 2023ರಲ್ಲಿ ತಾತ್ವಿಕ ಅನುಮೋದನೆ ನೀಡಿ ಆದೇಶಿಸಲಾಗಿದೆ. ಅದರಂತೆ ರಾಜ್ಯದ ಮೀನು ಗಾರಿಕೆ ಬಂದರುಗಳಲ್ಲಿ ಹೂಳೆತ್ತುವ ಕಾಮಗಾರಿ ಅಂದಾಜು ಪಟ್ಟಿ ತಯಾರಿಸುವ ಪೂರ್ವ ಬ್ಯಾತಮೆಟ್ರಿಕ್ ಸರ್ವೇ ಕೈಗೊಳ್ಳಲಾಗಿದೆ ಎಂದರು.



ಪಂಚಗಂಗಾವಳಿ ನದಿ ಹೂಳು ತೆರವು ಕ್ರಮಕ್ಕೆ ಮನವಿ

ಕುಂದಾಪುರ ಪ್ರಮುಖ ಮೀನುಗಾರಿಕಾ ಪ್ರದೇಶ ಪಂಚಗಂಗಾವಳಿ ನದಿಯಲ್ಲಿ ವ್ಯಾಪಕವಾಗಿ ಹೂಳು ತುಂಬಿಕೊಂಡು ಪ್ರತಿವರ್ಷ ಮೀನುಗಾರಿಕೆ ಚಟುವಟಿಕೆಗಳಿಗೆ ಹಾಗೂ ನದಿತೀರದ ಮೀನುಗಾರರ ಕುಟುಂಬಗಳಿಗೆ ತೊಂದರೆ ಉಂಟಾಗುತ್ತಿರುವುದರಿಂದ ಪಂಚಗಂಗಾವಳಿ ನದಿಯಲ್ಲಿ ತುಂಬಿರುವ ಹೂಳನ್ನು ತೆಗೆಯಲು ಸಚಿವರನ್ನು ಒತ್ತಾಯಿಸಿದ್ದಾರೆ.

ಪಡಿತರ ಚೀಟಿ ಕೋರಿದ ಅರ್ಜಿಗಳು

ರಾಜ್ಯದಲ್ಲಿ ಎಪಿಎಲ್ ಪಡಿತರ ಚೀಟಿ ಕೋರಿ ಸಲ್ಲಿಕೆಯಾಗಿ ಅನುಮೋದನೆಗೆ ಬಾಕಿ ಇರುವ ಹಾಗೂ ಪ್ರಸ್ತುತ ಪಡಿತರ ಚೀಟಿ ಅರ್ಜಿ ಹಾಕಿದ ನಂತರ ಸಕಾಲದಲ್ಲಿ ಪಡಿತರ ಚೀಟಿ ದೊರಕದೇ ಇರುವ ಕಾರಣ ಅರ್ಜಿದಾರರು ವಿವಿಧ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿರುವ ಬಗ್ಗೆ ಕೇಳಿರುವ ಪ್ರಶ್ನೆಗೆ ರಾಜ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ. ಹೆಚ್. ಮುನಿಯಪ್ಪ ಉತ್ತರಿಸಿ, ರಾಜ್ಯದಲ್ಲಿ 2026 ಫೆ.22ರ ಅಂತ್ಯಕ್ಕೆ ಎಪಿಎಲ್ ಪಡಿತರ ಚೀಟಿ ಕೋರಿ 1,38,778 ಅರ್ಜಿಗಳು ಬಾಕಿ ಇರುವುದಾಗಿದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ ಆನಾಸ 211 ಡಿಆರ್ ಎ 2021, 29-09-2023ರಲ್ಲಿ ಎಪಿಎಲ್ ಪಡಿತರ ಚೀಟಿಗಳನ್ನು ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಅನುಮೋದನೆ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದಿದ್ದಾರೆ.

ಅಧಿವೇಶನದಲ್ಲಿ ಶಾಸಕ ಗುರುರಾಜ್ ಗಂಟಿಹೊಳೆ ರಾಜ್ಯದ ಕರಾವಳಿ ಜಿಲ್ಲೆಗಳ ಬಂದರು ಪ್ರದೇಶ ಹಾಗೂ ಅಳಿವೆ ಭಾಗಗಳಲ್ಲಿ ಹೂಳು ತುಂಬಿ ಮೀನುಗಾರಿಕೆ ಚಟುವಟಿಕೆಗಳಿಗೆ ತೊಂದರೆ ಉಂಟಾಗುತ್ತಿರುವುದರಿಂದ ಬಂದರು ಹಾಗೂ ಅಳಿವೆ ಭಾಗಗಳಲ್ಲಿನ ಹೊಳೆತ್ತುವ ಬಗ್ಗೆ ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಉಡುಪಿಗೆ ಸರ್ಕಾರಿ ಮೆಡಿಕಲ್ ಕಾಲೇಜ್

ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಯ ಬಗ್ಗೆ ಹಲವಾರು ದಶಕಗಳಿಂದ ಸಾರ್ವಜನಿಕರಿಂದ ಬೇಡಿಕೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಬಗ್ಗೆ ಸರ್ಕಾರದ ನಿಲುವೇನು ಎಂದು ಶಾಸಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಆರ್. ಪಾಟೀಲ್, ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ ಬಗ್ಗೆ ಬೇಡಿಕೆ ಇರುವ ವಿಚಾರ ಗಮನಕ್ಕೆ ಬಂದಿದೆ. ರಾಜ್ಯದಲ್ಲಿ ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂಬುದು ಸರ್ಕಾರ ನೀತಿಯಾಗಿದೆ. ಉಡುಪಿ ಜಿಲ್ಲೆಯೂ ಸೇರಿದಂತೆ ವೈದ್ಯಕೀಯ ಕಾಲೇಜುಗಳು ಇಲ್ಲದ ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಬಗ್ಗೆ ಪೂರ್ವಭಾವಿ ಸಭೆಯನ್ನು ನಡೆಸಲಾಗಿದೆ. ರಾಜ್ಯ ಸರ್ಕಾರದ ವತಿಯಿಂದ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅಂದಾಜು ರೂ.610 ಕೋಟಿಗಳ ಅನಾವರ್ತಕ ವೆಚ್ಚ ಹಾಗೂ ರೂ.60 ಕೋಟಿಗಳ ಆವರ್ತಕ ವೆಚ್ಚದ ಆವಶ್ಯಕತೆ ಇರುತ್ತದೆ. ಅದರಂತೆ ಅನುದಾನದ ಲಭ್ಯತೆಯನ್ನು ಆಧರಿಸಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹೊಂದಿರದ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು ಎಂದು ಸಚಿವರು ಶಾಸಕರು ಪ್ರಶ್ನೆಗೆ ಉತ್ತರಿಸಿದ್ದಾರೆ.

ಉಡುಪಿ ಜಿಲ್ಲೆಯ ಬೈಂದೂರು ಹಾಗೂ ಕುಂದಾಪುರ ಭಾಗಗಳಲ್ಲಿ ಸಮರ್ಪಕವಾದ ಸೂಕ್ತ ಆಸ್ಪತ್ರೆಗಳಿಲ್ಲದ ಕಾರಣ ಮತ್ತು ಸೂಕ್ತ ಸರ್ಕಾರಿ ಜಾಗದ ಲಭ್ಯತೆ ಹಾಗೂ ಈ ಭಾಗದಲ್ಲಿ ಇತ್ತೀಚಿಗೆ ರಸ್ತೆ ಅಪಘಾತ ಸಮಯದಲ್ಲಿ ಸಕಾಲದಲ್ಲಿ ತ್ವರಿತ ಚಿಕಿತ್ಸೆ ಸಿಗದೇ ಸಾಕಷ್ಟು ಜನ ಪ್ರಾಣ ಕಳೆದು ಕೊಳ್ಳುತ್ತಿರುವುದರಿಂದ ಈ ಭಾಗದಲ್ಲಿಯೇ ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಮಂಜೂರು ಮಾಡಲು ಶಾಸಕರು ಸಚಿವರನ್ನು ಒತ್ತಾಯಿಸಿದ್ದಾರೆ.

ಬೆಳೆ ನಷ್ಟ ಪರಿಹಾರ

ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸ್ತುತ ವರ್ಷ ಕಲ್ಲಂಗಡಿ ಹಣ್ಣಿನ ಮೊದಲ ಬೆಳೆಗೆ ಸೊರಗು ರೋಗ ತಗುಲಿ ಬೆಳೆ ಹಾನಿ ಸಂಭವಿಸಿರುವುದರಿಂದ ಹಾನಿಯಾದ ಬೆಳೆಗೆ ಸೂಕ್ತ ಪರಿಹಾರ ಹಾಗೂ ಕಲ್ಲಂಗಡಿ ಬೆಳೆಗಾರರ ಹಿತ ಕಾಪಾಡಲು, ಉತ್ತಮ ದರವನ್ನು ದೊರಕಿಸಿ ಕೊಡಲು ಶಾಸಕರು ಕೇಳಿಕೊಂಡಾಗ ತೋಟಗಾರಿಕೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು, ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 180 ಎಕ್ರೆ ಕಲ್ಲಂಗಡಿ ಬೆಳೆ ಪ್ರದೇಶವಿದ್ದು, ಪ್ರಸ್ತುತ ವರ್ಷ ಕಲ್ಲಂಗಡಿ ಹಣ್ಣಿನ ಮೊದಲ ಬೆಳೆಗೆ ಸೊರಗು ರೋಗ ತಗುಲಿ ಕಟಾವು ಹಂತದಲ್ಲಿ 40 ಎಕ್ರೆ ಪ್ರದೇಶದಲ್ಲಿ ರೋಗ ಬಾಧೆ ಕಂಡು ಬಂದಿರುವುದಾಗಿ ಅಂದಾಜಿಸಲಾಗಿದೆ. ಹಾನಿಯಾದ ಬೆಳೆಗಳಿಗೆ ಪರಿಹಾರ ನೀಡುವ ಕಾರ್ಯಕ್ರಮ ಇಲಾಖೆಯಲ್ಲಿ ಇರುವುದಿಲ್ಲ ಹಾಗೂ ಕಲ್ಲಂಗಡಿ ಬೆಳೆಗಾರರ ಹಿತ ಕಾಪಾಡಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಯಡಿ ಹೊಸ ಪ್ರದೇಶ ವಿಸ್ತರಣೆಗೆ ಪ್ರತಿ ಹೆಕ್ಟೆರ್‌ಗೆ ರೂ..0.60 ಲಕ್ಷ ಘಟಕ ವೆಚ್ಚದ ಶೇ.40 ರಂತೆ ರೂ.0.24 ಲಕ್ಷ ಸಹಾಯಧನ ನೀಡಲಾಗುತ್ತಿದೆ ಎಂದು ಸಚಿವರು ಉತ್ತರಿಸಿದ್ದಾರೆ.

ಕಾಫಿ- ಕರಿಮೆಣಸು- ವಾಹನ- ಜಾನುವಾರು ಕಳವು: ಮೂವರ ಬಂಧನ

ಮಡಿಕೇರಿ: ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಕಣಗಳಿಂದ ಕಾಫಿ ಹಾಗೂ ಕರಿಮೆಣಸು ಕಳವು ಮಾಡಿದ್ದ ಹಾಗೂ ಅಕ್ರಮವಾಗಿ ಜಾನುವಾರು ಸಾಗಿಸುತ್ತಿದ್ದ ಆರೋಪದಡಿ ಮೂವರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.





ವೀರಾಜಪೇಟೆ ತಾಲೂಕಿನ ಚೆನ್ನಯ್ಯನಕೋಟೆ ನಿವಾಸಿ ಕೆ.ಎಂ. ಕೆ.ಎಂ.ಉಬೈದ್ (36), ಕೇರಳ ರಾಜ್ಯದ ಮಾನಂದವಾಡಿಯ ಕಾಟಿಕೊಳಂ ನಿವಾಸಿ ಅಬ್ದುಲ್ ರೆಹಮಾನ್ ಪಿ. (34) ಹಾಗೂ ಮಡಿಕೇರಿ ತಾಲೂಕಿನ ಕೊಟ್ಟಮುಡಿ ನಿವಾಸಿ ಪಿ.ಎಂ.ಮುಜೀಬ್ (36) ಎಂಬವರೇ ಬಂಧಿತ ಆರೋಪಿಗಳು.

ಅವರಿಂದ1,43,500ರೂ.ನಗದು, ಮಹೀಂದ್ರ ಸ್ಕಾರ್ಪಿಯೋ, ಮಹೀಂದ್ರ ಬೊಲೇರೊ ಪಿಕ್ ಅಪ್, ಚವರ್ ಲೆಟ್ ಸೇರಿದಂತೆ ನಾಲ್ಕು ವಾಹನ ಮತ್ತು ಎರಡು ಎತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೋಪಿಗಳು ಬಿಳಿಕೆರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2 ಎತ್ತುಗಳು ಹಾಗೂ ಹುಣಸೂರು ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಂದ್ರ ಬೊಲೇರೋ ವಾಹನವನ್ನು ಕಳವು ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ಕಂಡು ಬಂದಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ತಿಳಿಸಿದ್ದಾರೆ.

ಗೋಣಿಕೊಪ್ಪ ಠಾಣೆ ವ್ಯಾಪ್ತಿಯ ದೇವರಪುರ ಗ್ರಾಮದ ನಿವಾಸಿ ಎಂ.ಎಂ. ಉತ್ತಯ್ಯ ಎಂಬವರಿಗೆ ಸೇರಿದ ಕಣದಿಂದ ಕಳೆದ ಡಿ.21ರಂದು ಅಂದಾಜು 15 ಚೀಲ ಕಾಫಿ ಹಾಗೂ ಚೆನ್ನಂಗೊಲ್ಲಿ ಹೆಬ್ಬಾಲೆ ಗ್ರಾಮದ ನಿವಾಸಿ ಟಿ.ಹೆಚ್.ಹನೀಫ್ ಎಂಬವರಿಗೆ ಸೇರಿದ ಕಣದಿಂದ ಫೆ.19 ಅಂದಾಜು 11 ಚೀಲ ಕರಿಮೆಣಸು ಕಳವು ಮಾಡಿರುವ ಕುರಿತು ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿತ್ತು.

ಅಲ್ಲದೆ ಫೆ.28ರಂದು ತಿತಿಮತಿ ಉಪಠಾಣೆ ಸಮೀಪ ಹೆದ್ದಾರಿಯಲ್ಲಿ ಅಕ್ರಮವಾಗಿ ದನ ಸಾಗಾಟ ಮಾಡುತ್ತಿರುವ ಕುರಿತು ಮಾಹಿತಿ ದೊರೆತ ಮೇರೆಗೆ ವಾಹನ ತಪಾಸಣೆ ನಡೆಸುವ ಸಂದರ್ಭ ಒಂದು ಕಾರನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದು, ವಾಹನವನ್ನು ಪರಿಶೀಲಿಸಿದಾಗ ಅದರಲ್ಲಿ ಎರಡು ಎತ್ತುಗಳನ್ನು ಸಾಗಿಸುತ್ತಿರುವುದು ಕಂಡುಬಂದಿದ್ದು, ಈ ಕುರಿತು ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಕಲಂ: 4, 5, 6, 7, 12 ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಸಂರಕ್ಷಣಾ ಕಾಯ್ದೆ 11(1) ಪ್ರಾಣಿ ಹಿಂಸೆ ನಿಷೇಧ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು.

ಈ ಮೂರು ಪ್ರಕರಣಗಳ ಆರೋಪಿಗಳ ಪತ್ತೆಗಾಗಿ ವೀರಾಜಪೇಟೆ ಡಿವೈಎಸ್ಪಿ ಮಹೇಶ್ ಕುಮಾರ್, ಗೋಣಿಕೊಪ್ಪ ಸಿಪಿಐ ಶಿವರಾಜ್ ಆರ್.ಮುಧೋಳ್, ಗೋಣಿಕೊಪ್ಪ ಪಿಎಸ್ಐ ಪ್ರದೀಪ್ ಕುಮಾರ್ ಬಿ.ಕೆ, ಪೊನ್ನಂಪೇಟೆ ಪಿಎಸ್ಐ ನವೀನ್.ಜಿ, ಪಿಎಸ್ಐ, ಎಎಸ್ಐಗಳಾದ ಪಿ.ಟಿ. ಶ್ರೀನಿವಾಸ್, ವೆಂಕಟೇಶ್ ಹೆಚ್.ಟಿ., ಮಂಜುನಾಥ.ಟಿ.ಪಿ, ಧನಪತಿ ಕೆ.ಕೆ, ಹಾಗೂ ಸಿಬ್ಬಂದಿಗಳಾದ ಮೊಹಮ್ಮದ್ ಅಲಿ, ಎನ್.ಎಸ್.ಲೋಕೇಶ್, ಎನ್.ಹೆಚ್. ಸತೀಶ್, ತನುಕುಮಾರ್, ನಂಜುಂಡ, ಪ್ರವೀಣ್, ಕುಶ, ಪ್ರಸನ್ನ ಎಸ್.ಕೆ. ನೆಹರುಕುಮಾರ್, ಮಹೇಂದ್ರ, ಗಿರೀಶ್, ದರ್ಶನ್, ಅಬ್ದುಲ್ ಘನಿ, ರಾಘವೇಂದ್ರ, ಗುರುಪ್ರಸಾದ್, ರಘು, ಶಶಿಕುಮಾರ್, ಉಮೇಶ ಜೆ, ಉಮೇಶ್ ಎಂ. ಸಂಪತ್ ಕುಮಾರ್, ಬೀರಲಿಂಗ, ತಾಂತ್ರಿಕ ವಿಭಾಗದ ಸಿಬ್ಬಂದಿಗಳಾದ ರಾಜೇಶ್, ಶರತ್ ರೈ, ಡಿಸಿಆರ್‌ಬಿ ವಿಭಾಗದ ಪ್ರವೀಣ್ ಮತ್ತು ನಿರಂಜನ್ ಅವರುಗಳನ್ನೊಂಡ ವಿಶೇಷ ತಂಡ ಶ್ರಮವಹಿಸಿತ್ತು ಎಂದು ಬಿಂದುಮಣಿ ಅವರು ವಿವರಿಸಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯವನ್ನು ಅವರು ಶ್ಲಾಘಿಸಿದ್ದಾರೆ.

ಬೇರೊಬ್ಬರ ಆಧಾರ್ ಕಾರ್ಡ್ ಬಳಸಿದ ಹೋಂನರ್ಸ್
ಮನೆಗೇ ಕನ್ನ ಹಾಕಿದ ಖದೀಮ

ಮಡಿಕೇರಿ: ಬೇರೊಬ್ಬರ ಆಧಾರ್ ಕಾರ್ಡ್ ಬಳಸಿ ಹೋಂನರ್ಸಿಂಗ್ ಕೆಲಸಕ್ಕೆ ಸೇರಿದ್ದಲ್ಲದೆ, ತಾನು ಕೆಲಸ ಮಾಡುತ್ತಿದ್ದ ಮನೆಯಿಂದ 5.50 ಲಕ್ಷ ರೂ.ನಗದು ಹಾಗೂ 80 ಗ್ರಾಂ ಚಿನ್ನಾಭರಣ ಅಪಹರಿಸಿದ್ದ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಮಣ್ಣೂರು ಗ್ರಾಮದ ಭದ್ರಪ್ಪ ಬಸಪ್ಪ ಹಡಪದ (27) ಎಂಬಾತನೇ ಪೊಲೀಸರ ಅತಿಥಿಯಾದ ಆರೋಪಿ.



ಮಡಿಕೇರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಎಫ್ಎಂಸಿ ಕಾಲೇಜು ಹಿಂಭಾಗದ ಬಡಾವಣೆಯಲ್ಲಿ ವಾಸವಿದ್ದ ಡಾ.ಪಾರ್ಥಸಾರಥಿ ಎಂಬವರ ಅಣ್ಣ ವಯೋವೃದ್ಧರಾಗಿದ್ದು ಅವರನ್ನು ನೋಡಿಕೊಳ್ಳುವ ಸಲುವಾಗಿ ಹೋಂ ನರ್ಸಿಂಗ್ ಕೆಲಸಕ್ಕಾಗಿ ಕೊಪ್ಪಳ ಜಿಲ್ಲೆ ಮೂಲದ ಮಹಂತೇಶ ಪೂಜಾರ ಎಂಬಾತನನ್ನು ನೇಮಿಸಲಾಗಿತ್ತು.

ಫೆ.28ರಂದು ಈತ ಮನೆಯಲ್ಲಿದ್ದ ಅಂದಾಜು 80 ಗ್ರಾಂ ತೂಕದ ಚಿನ್ನಾಭರಣ ಹಾಗೂ ರೂ. 5,50,000 ನಗದು ಕಳವು ಮಾಡಿರುವ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಕಲಂ: 306 ಬಿಎನ್‌ಎಸ್ ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯ ಪತ್ತೆಗಾಗಿ ಹಿರಿಯ ಅಧಿಕಾರಿಗಳು ಹಾಗೂ ವೃತ್ತ ಮಟ್ಟದ ಅಪರಾಧ ಕೃತ್ಯ ಪರಿಶೀಲನಾ ತಜ್ಞರನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿತ್ತು.

ಈ ತಂಡವು ಸ್ಥಳಕ್ಕೆ ಭೇಟಿ ನೀಡಿ ಅಪರಾಧ ಕೃತ್ಯಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಸಾಕ್ಷಾಧಾರಗಳನ್ನು ಕಲೆ ಹಾಕಿ ತನಿಖೆ ನಡೆಸಿದಾಗ, ಆರೋಪಿ ಭದ್ರಪ್ಪ ಬಸಪ್ಪ ಹಡಪದ, ಮಹಾಂತೇಶ ಪೂಜಾರ ಎಂಬವರ ಆಧಾರ್ ಕಾರ್ಡ್ ಪ್ರತಿಯನ್ನು ಬಳಸಿ ಹೋಂ ನರ್ಸಿಂಗ್ ಕೆಲಸಕ್ಕೆ ಸೇರಿರುವುದು ಹಾಗೂ 2025ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯ ಕೆ.ಟಿ.ಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದು ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದ ಹಿನ್ನೆಲೆಯಲ್ಲಿ ಆತನನ್ನು ಬಂಧಿಸಲಾಗಿದೆ ಅಲ್ಲದೆ ಆತನಿಂದ 5,09,000 ನಗದು, 137 ಗ್ರಾಂ ಚಿನ್ನಾಭರಣ ಹಾಗೂ ಒಂದು ಮೊಬೈಲ್‌ನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಅವರು ತಿಳಿಸಿದ್ದಾರೆ.

5,09,000 ನಗದು, 137 ಗ್ರಾಂ ಚಿನ್ನಾಭರಣ ಹಾಗೂ ಒಂದು ಮೊಬೈಲ್ ವಶ

ಮಡಿಕೇರಿ ಉಪ ವಿಭಾಗದ ಡಿವೈಎಸ್ಪಿ ಸೂರಜ್.ಪಿ.ಎ, ಮಡಿಕೇರಿ ನಗರ ವೃತ್ತ ಸಿಪಿಐ ರಾಜು.ಪಿ.ಕೆ, ಬೆರಳು ಮುದ್ರೆ ಘಟಕದ ಪಿಐ ರಾಮಕೃಷ್ಣ ಮಡಿಕೇರಿ ನಗರ ಠಾಣೆ ಪಿಎಸ್ ಐ ಅನ್ನಪೂರ್ಣ ಎಸ್.ಎಸ್, ಎ.ಎಸ್ಐ ರಾಮಪ್ಪ ಸಿಬ್ಬಂದಿಗಳಾದ ಪ್ರಭಾಕರ್, ಗಿರೀಶ್, ಕಿರಣ್, ಕೃಷ್ಣಮೂರ್ತಿ, ಸುಽೀರ್, ಮುನೀರ್, ರಂಜಿತ್, ಪ್ರದೀಪ್, ತಾಂತ್ರಿಕ ವಿಭಾಗದ ಸಿಬ್ಬಂದಿಗಳಾದ ರಾಜೇಶ್, ಶರತ್ ರೈ, ಫಾರೆನ್ಸಿಕ್ ವಿಭಾಗದ ಜಯಕುಮಾರ್, ಸಂತೋಷ್ ಹಾಗೂ ಡಿಸಿಆರ್‌ಬಿ ವಿಭಾಗದ ಪ್ರವೀಣ್ ಮತ್ತು ನಿರಂಜನ್ ಅವರುಗಳು ಆರೋಪಿಗಳ ಪತ್ತೆ ಕಾರ್ಯದಲ್ಲಿ ಭಾಗವಹಿಸಿದ್ದು, ಅವರ ಕಾರ್ಯವನ್ನು ಎಸ್ಪಿ ಬಿಂದುಮಣಿ ಶ್ಲಾಘಿಸಿದ್ದಾರೆ.

ಶ್ರೀಮದ್ ಎಡನೀರು ಮಠದಲ್ಲಿ ಭರತಮುನಿ ಜಯಂತಿ ಕಾರ್ಯಕ್ರಮ | ಭರತನಾಟ್ಯ, ಕಥಕ್ಕಳಿ, ಸಮೂಹ ನೃತ್ಯ ಪ್ರದರ್ಶನ
ಗುರುಕುಲ ಪದ್ಧತಿಯಿಂದ ಭಾರತೀಯ ಸಂಸ್ಕೃತಿ ಭದ್ರ : ಎಡನೀರು ಶ್ರೀ

ಕಾಸರಗೋಡು: ರಂಗಭೂಮಿ ಕಲೆಗಳಾದ ಯಕ್ಷಗಾನ, ಭರತನಾಟ್ಯ, ನಾಟಕ ಮೊದಲಾದವುಗಳಿಗೆ ಪರಿಗಣಿಸಲ್ಪಟ್ಟ ನಾಟ್ಯಶಾಸ್ತ್ರದ ಪಿತಾಮಹ ಭರತಮುನಿ. ಅವರು ನಾಟ್ಯಶಾಸ್ತ್ರಕ್ಕೆ ಒಂದು ಆಯಾಮವನ್ನು ಕೊಟ್ಟವರಾಗಿದ್ದಾರೆ. ಕೃಷಿ ಹಾಗೂ ಋಷಿ ಸಂಸ್ಕೃತಿಯ ಮೂಲಕ ಭಾರತವು ಸುಭದ್ರವಾಗಿದೆ. ಪರಂಪರೆಯ ಸಂಸ್ಕೃತಿ ಮುಂದುವರಿಯುತ್ತಾ ಭಾರತದಲ್ಲಿ ಗಟ್ಟಿಯಾಗಿ ಇಲ್ಲಿನ ಕಲೆಗಳು ಬೆಳಗುತ್ತಿವೆ. ಆಚರಣೆಗಳ ಮೂಲಕ ಯುವ ಸಮಾಜಕ್ಕೆ ಕ್ಷೇತ್ರ ಕಲೆಗಳನ್ನು, ಋಷಿ ಪರಂಪರೆಯನ್ನು ಪರಿಚಯಿಸುತ್ತಿರುವುದು ಅಭಿನಂದನೀಯ. ಗುರುಕುಲ ಪದ್ಧತಿಯಿಂದ ಭಾರತೀಯ ಸಂಸ್ಕೃತಿ ಉಳಿಯುತ್ತದೆ ಎಂದು ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲಾ ಶಾಸ್ತ್ರೀಯ ನೃತ್ಯ ಕಲಾವಿದರ ಸಂಘಟನೆಯಾದ ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್ ಮಂಗಳೂರು ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು ಇವುಗಳ ಸಹಯೋಗದಲ್ಲಿ ಶ್ರೀಮದ್ ಎಡನೀರು ಮಠದ ಭಾರತೀ ಕಲಾಸದನದಲ್ಲಿ ಭಾನುವಾರ ಜರಗಿದ ಭರತಮುನಿ ಜಯಂತಿ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಕಲೆಗಳ ವಿನಿಮಯ ಕಲಾವಿದರೊಳಗೆ ಆಗಬೇಕು. ಕಲಾವಿದರೊಳಗೆ ಸೌಹಾರ್ದತೆ ಸಂಬಂಧಗಳನ್ನು ಬೆಳೆಸುವುದಲ್ಲದೆ ಕಲೆ ಮತ್ತು ಪ್ರೇಕ್ಷಕರ ಮಧ್ಯೆ ಸಂವಹನವನ್ನು ಗಟ್ಟಿಗೊಳಿಸಬೇಕು. ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಇಂತಹ ಸಂಘಟನೆಗಳು ಮುಂದುವರಿಯಬೇಕು ಎಂದರು.

ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್‌ನ ಅಧ್ಯಕ್ಷೆ ವಿದುಷಿ ರಾಜಶ್ರೀ ಉಳ್ಳಾಲ ಸಭಾಧ್ಯಕ್ಷತೆ ವಹಿಸಿದ್ದರು. ಹಿರಿಯ ಯಕ್ಷಗಾನ ಕಲಾವಿದ, ಸಂಘಟಕ ಕೆರೆಮನೆ ಶಿವಾನಂದ ಹೆಗಡೆ ಅಭ್ಯಾಗತರಾಗಿ ಪಾಲ್ಗೊಂಡಿದ್ದರು. ನಾಟ್ಯರಂಗ ಪುತ್ತೂರು ಸಂಸ್ಥೆಯ ಕಲಾನಿರ್ದೇಶಕಿ ವಿದುಷಿ ಮಂಜುಳಾ ಸುಬ್ರಹ್ಮಣ್ಯ ಮಾತನಾಡಿದರು.



ಹಿರಿಯ ಕಲಾವಿದೆ, ಕಾಸರಗೋಡು ನೃತ್ಯನಿಕೇತನದ ನಿರ್ದೇಶಕಿ, ನೃತ್ಯಗುರು ವಿದುಷಿ ಶಶಿಕಲಾ ಟೀಚರ್ ಅವರಿಗೆ ಗೌರವ ಸನ್ಮಾನ ನಡೆಯಿತು.

ಕಾರ್ಯಕ್ರಮದ ಅಂಗವಾಗಿ ವಿದುಷಿ ಯೋಗೀಶ್ವರಿ ಜಯಪ್ರಕಾಶ್ ಪುತ್ತೂರು, ವಿದುಷಿ ಮಂಜುಳಾ ಸುಬ್ರಹ್ಮಣ್ಯ ಪುತ್ತೂರು, ವಿದುಷಿ ಕಾವ್ಯಾ ಭಟ್ ಪೆರ್ಲ, ವಿದುಷಿ ಸವಿತಾ ಜೀವನ್ ಕೊಂಡೆವೂರು ಉಪ್ಪಳ, ವಿದುಷಿ ಪ್ರಣತಿ ಚೈತನ್ಯ ಪದ್ಯಾಣ ಅವರ ನಿರ್ದೇಶನದಲ್ಲಿ ನಾಟ್ಯಾರ್ಚನೆ - ಸಮೂಹ ನೃತ್ಯ ಪ್ರದರ್ಶನಗೊಂಡಿತು.

ಅಲ್ಲದೆ ಡಾ.ಸತ್ಯನಾರಾಯಣ ರಾಜು ಅವರ ಶಿಷ್ಯೆ ವಿದುಷಿ ಗೌರಿ ಸಾಗರ್ ಬೆಂಗಳೂರು ಅವರಿಂದ ಭರತನಾಟ್ಯ ಪ್ರಸ್ತುತಿ ಶ್ರೀ ವಿನೋದ, ಕುಚೇಲ ವ್ರತಂ ಕಥಕ್ಕಳಿ ಪ್ರದರ್ಶನ ನಾಟ್ಯರತ್ನಂ ಕಣ್ಣನ್ ಪಾಟಾಳಿ ಸ್ಮಾರಕ ಕಥಕ್ಕಳಿ ಟ್ರಸ್ಟ್ ಬೇಕಲ ಕಾಸರಗೋಡು ಅವರ ಸಂಯೋಜನೆಯಲ್ಲಿ ವಿದುಷಿ ಮೃದುಲಾ ಹರೀಶ್ ಅವರ ಸಹಪ್ರಾಯೋಜಕತ್ವದಲ್ಲಿ ಜರಗಿತು.

ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್ ನಿಕಟಪೂರ್ವ ಅಧ್ಯಕ್ಷ ವಿದ್ವಾನ್ ಯು.ಕೆ.ಪ್ರವೀಣ್, ಸುದರ್ಶನ್, ಎಡನೀರು ಮಠದ ಆಡಳಿತಾಧಿಕಾರಿ ರಾಜೇಂದ್ರ ಕಲ್ಲೂರಾಯ ಉಪಸ್ಥಿತರಿದ್ದರು. ಶ್ರೀಧರ ಹೊಳ್ಳ ಕಾರ್ಯಕ್ರಮ ನಿರೂಪಿಸಿದರು. ಆತ್ಮಶ್ರೀ ಪ್ರಾರ್ಥಿಸಿದರು. ಉಪಾಧ್ಯಕ್ಷ ವಿದ್ವಾನ್ ಚಂದ್ರಶೇಖರ ನಾವಡ ಸ್ವಾಗತಿಸಿ, ಕಾರ್ಯದರ್ಶಿ ವಿದುಷಿ ಶಾರದಾ ಮಣಿಶೇಖರ್ ವಂದಿಸಿದರು.

ನಾಟ್ಯಶಾಸ್ತ್ರಗಳ ಪಿತಾಮಹ ಭರತಮುನಿ

ದಕ್ಷಿಣ ಏಷ್ಯಾದಲ್ಲಿಯೇ ಪರಸ್ಪರ ಹೋಲಿಕೆಯನ್ನು ಮಾಡುವ ಕಲೆಗಳಿವೆ. ಭಾರತೀಯ ಶಾಸ್ತ್ರಗಳನ್ನ ನಾವು ಎಂದೂ ಮರೆಯಬಾರದು. ನಾಟ್ಯ ಶಾಸ್ತ್ರಗಳ ಪಿತಾಮಹ ಭರತಮುನಿ. ಕಲೆಯ ಬಗ್ಗೆ ನಮ್ಮ ನೋವು, ಯೋಚನೆಗಳನ್ನು, ಸಂಕಷ್ಟಗಳನ್ನು ಹೇಳುವುದಕ್ಕಿರುವ ಪೀಠ ನಮ್ಮಲ್ಲಿದೆ ಎಂಬ ಭಾವನೆಯಿದೆ. ಕಲಾವಿದರು ಪರಸ್ಪರ ಬೇಧ ಮರೆಯಬೇಕು. ಯಕ್ಷಗಾನದ ಎಲ್ಲಾ ವಿಭಾಗ ಸಂಗಮಿಸಿದ ಕ್ಷೇತ್ರ ಶ್ರೀಮದ್ ಎಡನೀರು ಮಠ.

■ ಕೆರೆಮನೆ ಶಿವಾನಂದ ಹೆಗಡೆ, ಹಿರಿಯ ಯಕ್ಷಗಾನ ಕಲಾವಿದ, ಸಂಘಟಕ

ಕೊಲೆ ಯತ್ನ ಆರೋಪಿಯ ಸೆರೆ

ಮಂಗಳೂರು: ಮಂಗಳೂರು ಪೂರ್ವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕೊಲೆ ಮಾಡಲು ಯತ್ನಿಸಿದ ಪ್ರಕರಣದಲ್ಲಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಫಳ್ನೀರ್ ನಿವಾಸಿ ಮಹಮ್ಮದ್ ಶರೀಫ್ (26) ಬಂಧಿತ ಆರೋಪಿ. ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಸುಮಾರು 2 ಕೋಟಿ ರೂ. ಹಣದ ವಿಚಾರದಲ್ಲಿ ಮೋಸವಾಗಿದೆ ಎಂದು ಆರೋಪಿಸಿ, ಆರ್ಯ ಸಮಾಜ ರಸ್ತೆಯಲ್ಲಿ ದೂರುದಾರ ಮೋಹನ್ ದಾಸ್ ಶೆಟ್ಟಿ ಅವರೊಂದಿಗೆ ಮಾತುಕತೆ ನಡೆಸಿದ ಬಳಿಕ ಆರೋಪಿ ಅವರ ಮೊಬೈಲ್ ಕಸಿದುಕೊಂಡಿದ್ದಾನೆ. ನಂತರ ದೂರುದಾರ ಮೋಹನ್ ದಾಸ್ ಶೆಟ್ಟಿ ಅವರು ದ್ವಿಚಕ್ರ ವಾಹನದಲ್ಲಿ ತೆರಳುವಾಗ ಆರೋಪಿ ತನ್ನ ಇನೋವಾ ಕ್ರಿಸ್ಟಾ ಕಾರನ್ನು ಅತಿವೇಗವಾಗಿ ಚಲಾಯಿಸಿ ಹಿಂಬದಿಯಿಂದ ಡಿಕ್ಕಿ ಹೊಡೆಸಿ ಕೊಲೆ ಮಾಡಲು ಯತ್ನಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

17-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 460
ಚೋಲ್ ಅಡಿಕೆ	505 - 530
ಡಬಲ್ ಚೋಲ್	505 - 530
ಹೊಸ ಪಟೋರ	340 - 390
ಹಳೆ ಪಟೋರ	380 - 410
ಹೊಸ ಉಳ್ಳಿ	115 - 290
ಹಳೆ ಉಳ್ಳಿ	105 - 290
ಹೊಸ ಕೋಕಾ	325 - 345
ಹಳೆ ಕೋಕಾ	330 - 350
ಹೊಸ ಕರಿಗೋಟು	230 - 260
ಹಳೆ ಕರಿಗೋಟು	230 - 260
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 300

ಕಾಳುಮೆಣಸು ಧಾರಣೆ

ಕಾಳುಮೆಣಸು : 465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	213.00
ಆರ್‌ಎಸ್‌ಎಸ್ 2	197.00
ಸ್ಕ್ರಾಪ್ 1	130.00
ಸ್ಕ್ರಾಪ್ 2	128.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-511th) ಡ್ರಾ ಮಾರ್ಚ್ 17ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SV 307202 (PUNALUR)

Cons Prize-Rs: 5000/-
SN 307202 SO 307202 SP 307202 SR 307202
SS 307202 ST 307202 SU 307202 SW 307202
SX 307202 SY 307202 SZ 307202

2nd Prize Rs: 30,00,000/- [30 Lakhs]
SS 230403 (PALAKKAD)

3d Prize Rs: 5,00,000/- [5 Lakhs]
SU 319223 (ADOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0344 1244 1391 1619 3053 3241 3613 3802 4094 4373 5731 6580 6611 7435 7506 7656 7719 8227 9995

5th Prize Rs.2,000/-
0250 2892 3055 3491 7101 7806

6th Prize Rs.1,000/-
0684 0715 1143 1196 1607 1702 2001 2312 2770 3156 3345 3535 3735 3800 4033 4279 4366 4800 7702 7821 7839 8163 8415 8968 9349

7th Prize Rs.500/-
0077 0125 0147 0168 0172 0352 0354 0644 0709 0806 0812 0989 1158 1283 1296 1632 1801 1811 1997 2138 2144 2249 2299 2323 2536 2585 2589 2921 3099 3300 3381 3385 3479 3654 3803 4001 4015 4108 4147 4284 4326 4441 4506 4675 4837 4890 5500 5552 5781 6001 6107 6241 6268 6323 6598 6677 6683 6855 7122 7296 7369 7577 7733 7787 7796 7907 7952 8023 8332 8475 8587 8729 8743 9101 9155 9599

8th Prize Rs.200/-
0062 0222 0320 0605 0640 0768 0893 0897 1086 1389 1596 1630 1642 1754 1824 2150 2287 2315 2390 2548 2750 2754 3142 3271 3463 3552 3630 3683 3688 3811 3933 3948 4074 4301 4311 4543 4609 5044 5282 5304 5409 5526 5568 5605 5629 5689 5760 5851 5878 5987 5999 6092 6167 6213 6263 6632 6665 6729 6843 6892 6945 7029 7197 7276 7448 7483 7513 7528 7943 8035 8053 8112 8226 8295 8396 8584 8686 8906 9002 9110 9173 9417 9447 9490 9492 9596 9654 9733 9753 9809

9th Prize Rs.100/-
0047 0189 0239 0246 0291 0380 0413 0742 0746 0880 0899 0936 1094 1190 1218 1327 1482 1546 1570 1610 1727 1751 1812 1834 1847 1881 1900 1949 1962 2130 2186 2236 2316 2494 2660 2698 2766 2773 2829 2981 3396 3468 3655 3768 3774 3900 4053 4099 4120 4124 4142 4191 4237 4298 4369 4571 4618 4737 4785 4804 4843 5007 5135 5138 5259 5446 5587 5722 5778 6013 6117 6137 6158 6175 6198 6204 6220 6222 6361 6404 6446 6482 6503 6656 6659 6700 6735 6752 6849 6938 6942 6943 6949 6952 7006 7014 7049 7067 7173 7187 7297 7410 7437 7626 7653 7698 7789 7816 7822 7901 7949 8052 8097 8104 8124 8125 8223 8252 8306 8322 8352 8363 8373 8424 8538 8596 8748 8752 8768 8979 9047 9128 9175 9200 9292 9293 9380 9387 9414 9422 9499 9502 9535 9554 9637 9863 9870 9908 9984 9987

ಅಕ್ಷಯಪಾತ್ರ ಪೌಂಡೇಷನ್ ಸಾಧನೆ ಶ್ಲಾಘಿಸಿದ ರಾಷ್ಟ್ರಪತಿ

ರಾಷ್ಟ್ರ ನಿರ್ಮಾಣದಲ್ಲಿ ಮಹೋನ್ನತ ಪಾತ್ರ



ಬೆಂಗಳೂರು: ಮಧ್ಯಾಹ್ನದ ಬಿಸಿ ಊಟವನ್ನು ನೀಡುವುದರ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಮಹೋನ್ನತ ಪಾತ್ರವನ್ನು ವಹಿಸಿರುವ ಅಕ್ಷಯಪಾತ್ರ ಸಂಸ್ಥೆಯ ಸಾಧನೆ ಶ್ಲಾಘನೀಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಿಳಿಸಿದರು.

ಮಂಗಳವಾರ ಹೊಸದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಅಕ್ಷಯಪಾತ್ರ ಸಂಸ್ಥೆಯ ಐದನೇ ಬಿಲಿಯನ್ ಊಟ ವಿತರಣೆ ಹಾಗೂ ಬೆಳ್ಳಿ ಹಬ್ಬದಲ್ಲಿ ಮಾತನಾಡಿದ ಅವರು, ಸಹಾನುಭೂತಿ, ಸದ್ಗುಣದಿಂದ ಆಧಾರಿತವಾದ ಸಾಮಾಜಿಕ ನಾವೀನ್ಯತೆಗೆ ಒಂದು ಅತ್ಯುತ್ತಮ ಉದಾಹರಣೆಯಾಗಿ ಅಕ್ಷಯಪಾತ್ರ ತಲೆಎತ್ತಿ ನಿಂತಿದೆ. ಕಳೆದ 25 ವರ್ಷದಿಂದ ಅಕ್ಷಯ ಪಾತ್ರ ಸಂಸ್ಥೆಯು ಒಂದು ದಿನವೂ ತಪ್ಪದೇ ನಿರಂತರವಾಗಿ ಶಾಲಾ ಮಧ್ಯಾಹ್ನದ ಊಟವನ್ನು ನೀಡುತ್ತಾ ಬರುತ್ತಿರುವುದು ಶ್ಲಾಘನೀಯ ಎಂದರು.

ಮಕ್ಕಳು ಕೇವಲ ಉಚಿತ ಶಾಲಾ ಮಧ್ಯಾಹ್ನದ ಊಟದ ಯೋಜನೆಯ ಫಲಾನುಭವಿಗಳಲ್ಲ. 2047 ರ ವೇಳೆಗೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನು ಸಾಧಿಸಲು ಇರುವ ಉತ್ಪಾದಕ ಮತ್ತು ಸ್ಪರ್ಧಾತ್ಮಕ ಭವಿಷ್ಯದ ವೃತ್ತಿಶಕ್ತಿಯ ಚಾಲಕರಾಗಿದ್ದಾರೆ. ಪ್ರತಿ ಊಟವೂ ನಮ್ಮ ರಾಷ್ಟ್ರದ ಮಾನವ ಬಂಡವಾಳದ ಮೇಲಿನ ಹೂಡಿಕೆಯಾಗಿದೆ. ಇದು ಆರೋಗ್ಯವಂತ, ಸುಶಿಕ್ಷಿತ ಯುವ ಸಮೂಹವನ್ನು ಬೆಳೆಸುತ್ತಿದೆ. ಈ ಮೂಲಕ ಇದು ನವ ಹಾಗೂ ಅಭಿವೃದ್ಧಿ ಹೊಂದಿದ ಭಾರತದ ಸಾಮಾಜಿಕ-ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತಿದೆ. ಅಕ್ಷಯ ಪಾತ್ರವು ಈ ನಿಟ್ಟಿನಲ್ಲಿ ಅದ್ಭುತವಾದ ಕೆಲಸ ಮಾಡುತ್ತಿದೆ. ಈ ಶಾಲಾ ಮಧ್ಯಾಹ್ನದ ಊಟದ ಯೋಜನೆಯು ಪರಿಣಾಮಕಾರಿಯಾಗಿ ನಡೆಯುತ್ತಾ, ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುತ್ತಿದೆ ಎಂದರು. ಸಚಿವ ಧರ್ಮೇಂದ್ರ ಪ್ರಧಾನ್ ಮಾತನಾಡಿ, ತಮ್ಮ ದೂರದೃಷ್ಟಿಯ ಮೂಕ ಅಕ್ಷಯ ಪಾತ್ರ ಸಂಸ್ಥೆಗೆ ಅಡಿಪಾಯ ಹಾಕಿದ ಮಧು ಪಂಡಿತ್ ದಾಸ ಮತ್ತು ಚಂಚಲಾಪತಿ ದಾಸ ಅವರಿಗೆ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ 25 ವರ್ಷಗಳ ಪ್ರಯಾಣವು ಸುಲಭವಾಗಿರಲಿಲ್ಲ, ಆದರೂ ನಿಮ್ಮ ಸಂಕಲ್ಪವು ಅಚಲವಾಗಿದೆ. ಆಂದೋಲನದ ದೊಡ್ಡ ಫಲಾನುಭವಿಗಳಲ್ಲಿ ಭಾರತದ ಶಿಕ್ಷಣ ಕ್ಷೇತ್ರವೂ ಒಂದು. 16 ರಾಜ್ಯಗಳಲ್ಲಿ 25,000 ಕ್ಕೂ ಹೆಚ್ಚು ಶಾಲೆಗಳಲ್ಲಿ, ನೀವು ಪ್ರತಿದಿನ 2.35 ಮಿಲಿಯನ್ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡುತ್ತಿರುವುದು ವಿಶೇಷ ಕಾರ್ಯ ಎಂದರು.

ಜಿ.ಟಿ.ದಿನೇಶ್‌ಕುಮಾರ್‌ಗೆ ಷರತ್ತುಬದ್ಧ ಜಾಮೀನು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ನಡೆಸುತ್ತಿರುವ ಪ್ರಕರಣದಲ್ಲಿ ಜಿ.ಟಿ.ದಿನೇಶ್‌ಕುಮಾರ್ ಅವರಿಗೆ ಜನಪ್ರತಿನಿಧಿಗಳ ವಿಶೇಷನ್ಯಾಯಾಲಯವು ಷರತ್ತುಬದ್ಧ ಡಿಫಾಲ್ಟ್ ಜಾಮೀನು ಮಂಜೂರು ಮಾಡಿದೆ.

ದಿನೇಶ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಜಾಮೀನು ಮಂಜೂರು ಮಾಡಿ ಆದೇಶಿಸಿದರು. ಒಂದು ಲಕ್ಷ ರೂ. ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಇಷ್ಟೇ ಮೊತ್ತಕ್ಕೆ ಒಬ್ಬರ ಭದ್ರತೆ. ಆರೋಪಿಗಳು ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು. ಆರೋಪಿಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಾಕ್ಷಿಗಳನ್ನು ಪ್ರಭಾವಿಸಬಾರದು. ತನಿಖಾಧಿಕಾರಿಗಳು ಸೂಚಿಸಿದಾಗ ಆರೋಪಿಗಳು ಅವರ ಮುಂದೆ ಹಾಜರಾಗಬೇಕು ಮತ್ತು ತನಿಖೆಗೆ ಸಹಕರಿಸಬೇಕು. ನ್ಯಾಯಾಲಯದ ಅನುಮತಿ ಇಲ್ಲದೇ ವಿದೇಶ ಪ್ರವಾಸ ಕೈಗೊಳ್ಳುವಂತಿಲ್ಲ ಎಂಬ ಷರತ್ತುಗಳನ್ನು ಪೀಠ ವಿಧಿಸಿದೆ.

ಹೋಳಿಗೆ ತಯಾರಿ



ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಬೆಂಗಳೂರು ನಗರದ ವಿವಿಧ ಹೋಟೆಲ್‌ಗಳಲ್ಲಿ ಹಬ್ಬದೂಟ ಹಾಗೂ ಹೋಳಿಗೆ ತಯಾರಿ ಜೋರಾಗಿ ನಡೆದಿರುವುದು.

ಕಿರುಸುದ್ದಿ

ಅಮಿಕಸ್ ಕ್ಯೂರಿಗೆ ಹೈಕೋರ್ಟ್ ಕಾಲಾವಕಾಶ

ಬೆಂಗಳೂರು: ಕೋಗಿಲು ಬಡಾವಣೆಯಲ್ಲಿನ ಅಕ್ರಮ ಮನೆಗಳ ತೆರವು ಕಾರ್ಯಾಚರಣೆಯಲ್ಲಿ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಿರುವುದು ಮತ್ತು ನಿರ್ಗತಿಕರಾಗಿರುವ ಮಾಹಿತಿ ಒಳಗೊಂಡ ಅಂತಿಮ ವರದಿ ಸಲ್ಲಿಸಲು ಅಮಿಕಸ್ ಕ್ಯೂರಿಗೆ ಏಪ್ರಿಲ್ 29ರವರೆಗೆ ಹೈಕೋರ್ಟ್ ಮಂಗಳವಾರ ಕಾಲಾವಕಾಶ ನೀಡಿದೆ. ತೆರವು ಕಾರ್ಯಾಚರಣೆಯನ್ನು ಅಕ್ರಮ ಹಾಗೂ ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೋರಿ ಕೋಗಿಲು ಬಡಾವಣೆ ನಿವಾಸಿಗಳಾದ ಜೈಬಾ ತಬಸ್ಸುಮ್, ರೆಹನಾ ಮತ್ತು ಆರೀಫ್ ಬೇಗಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಿಚಾರಣೆ ಆರಂಭವಾಗುತ್ತಿದ್ದಂತೆ ನ್ಯಾಯಾಲಯಕ್ಕೆ ಹಾಜರಾಗಿದ್ದ ಅಮಿಕಸ್ ಕ್ಯೂರಿ ಬಿ.ವಿ.ವಿದ್ಯುಲ್ಲತಾ ಅವರು ಕೋಗಿಲು ಬಡಾವಣೆಯಲ್ಲಿನ ಅಕ್ರಮ ಮನೆಗಳ ತೆರವು ಕಾರ್ಯಾಚರಣೆಯಲ್ಲಿ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಿರುವುದು ಮತ್ತು ನಿರ್ಗತಿಕರಾಗಿರುವ ಮಾಹಿತಿ ಒಳಗೊಂಡ ಅಂತಿಮ ವರದಿಯನ್ನು ಎರಡು-ಮೂರು ವಾರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಇದರಿಂದ ಪುನರ್ವಸತಿ ವ್ಯವಸ್ಥೆ ಕುರಿತು ಅಂತಿಮ ವರದಿ ಸಲ್ಲಿಸಲು ಏ.29ರವರೆಗೆ ಅಮಿಕಸ್ ಕ್ಯೂರಿ ಅವರಿಗೆ ಕಾಲಾವಕಾಶ ನೀಡಿದ ಪೀಠ ಅರ್ಜಿ ವಿಚಾರಣೆಯನ್ನು ಮುಂದೂಡಿತು.

ರಾಕ್‌ಲೈನ್ ಮೊಮ್ಮಗನಿಂದ ವಿಶ್ವ ದಾಖಲೆ



ಬೆಂಗಳೂರು: ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಹಾಗೂ ಶಾಸಕ ಮುನಿರತ್ನ ನಾಯ್ಡು ಅವರ 14 ವರ್ಷದ ಮೊಮ್ಮಗ ಶಿವತೇಜ ವೈ ಮೆಗಾಮಿಂಕ್ಸ್ ರೂಬಿಕ್ಸ್ ಕ್ಯೂಬ್ ಬಿಡಿಸುವಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆಯುವ ಮೂಲಕ ತ್ರಿವಳಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಕ್‌ಲೈನ್ ವೆಂಕಟೇಶ್, ಇಂದಿನ ಮಕ್ಕಳು ಹೆಚ್ಚಾಗಿ ಟಿವಿ, ಮೊಬೈಲ್‌ಗಳಲ್ಲಿ ಕಾಲ ಕಳೆಯುವುದನ್ನು ನೋಡುತ್ತೇವೆ, ಅದು ನಮಗೆ ಅಷ್ಟಾಗಿ ಇಷ್ಟವಾಗದ ವಿಷಯ. ಆದರೆ ಅದರ ನಡುವೆಯೂ ನಮ್ಮ ಮುಂದಿನ ಪೀಳಿಗೆ ಇಂತಹ ವಿಭಿನ್ನ ಸಾಧನೆ ಮಾಡಿರುವುದು ಖುಷಿ ತಂದಿದೆ. ಈ ಸಾಧನೆ ನಮ್ಮ ಕುಟುಂಬಕ್ಕೆ ಒಂದು ಕಿರೀಟವಿದ್ದಂತೆ ಎಂದರು.

ಹರೀಶ್‌ಕುಮಾರ್ ನೇಮಕ

ಬೆಂಗಳೂರು: ಹ್ಯೂಮನ್ ರೈಟ್ಸ್ ಕೌನ್ಸಿಲ್ ಇಂಡಿಯಾ ಕರ್ನಾಟಕ ರಾಜ್ಯಾಧ್ಯಕ್ಷರಾಗಿ ಹರೀಶ್‌ಕುಮಾರ್ ಅವರು ನೇಮಕಗೊಂಡಿದ್ದಾರೆ. ಸಮಾಜಸೇವೆ ಮತ್ತು ಮಾನವ ಹಕ್ಕುಗಳ ರಕ್ಷಣೆ ಮಾಡುವಲ್ಲಿ ಹರೀಶ್‌ಕುಮಾರ್ ಸೇವೆಯನ್ನು ಗುರ್ತಿಸಿ ರಾಷ್ಟ್ರೀಯ ಅಧ್ಯಕ್ಷರಾದ ಆರತಿ ರಾಜಪೂತ್ ಇವರನ್ನು ನೇಮಕ ಮಾಡಿದ್ದಾರೆ. ಹಲವು ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳಲ್ಲಿ ತೊಡಗಿ ಕೊಳ್ಳುವ ಮೂಲಕ ಸಕ್ರಿಯರಾಗಿರುವ ಹರೀಶ್‌ಕುಮಾರ್ ಕರ್ನಾಟಕದಾದ್ಯಂತ ಮಾನವ ಹಕ್ಕುಗಳ ಜಾಗೃತಿ ಮತ್ತು ಸಂಘಟನೆಯ ಬಲವರ್ಧನೆಗಾಗಿ ನಿರಂತರ ಶ್ರಮಿಸುವುದಾಗಿ ತಿಳಿಸಿದ್ದಾರೆ.



ಜಿಬಿಎಯಾಗಿ ಪರಿವರ್ತನೆ ಬಳಿಕ ಸೌಲಭ್ಯದ ಅವಶ್ಯ ಹೆಚ್ಚಳ | ವರ್ಷಕ್ಕೆ 10 ಸಾವಿರ ಕೋಟಿ ರೂ. ನೀಡದಿದ್ದಲ್ಲಿ ಅಭಿವೃದ್ಧಿ ಕುಸಿತ

ಬೆಂಗಳೂರು ಅಭಿವೃದ್ಧಿಗೆ ಅನುದಾನ ನೀಡಿ

ವಿಧಾನಸಭೆ: ರಾಜ್ಯದ ಬೊಕ್ಕಸಕ್ಕೆ ಶೇ.65 ರಷ್ಟು ಆರ್ಥಿಕ ಕೊಡುಗೆ ನೀಡುವ ಬೆಂಗಳೂರಿನ ಅಭಿವೃದ್ಧಿಗೆ ವರ್ಷಕ್ಕೆ ಕನಿಷ್ಠ 10 ಸಾವಿರ ಕೋಟಿ ರೂ.ಗಳನ್ನು ಕೊಡದಿದ್ದರೆ ಅಭಿವೃದ್ಧಿ ಸಂಪೂರ್ಣ ಕುಸಿಯುತ್ತದೆ ಎಂದು ಬಿಜೆಪಿ ಶಾಸಕ ಎಸ್. ಆರ್. ವಿಶ್ವನಾಥ್ ಹೇಳಿದರು.



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಜಿಬಿಎ)ವಾಗಿ ಪರಿವರ್ತನೆಗೊಂಡಿರುವ ಬೆಂಗಳೂರು ನಗರ ಅಭಿವೃದ್ಧಿಗೆ ತಕ್ಕಂತೆ ಮೂಲ ಸೌಲಭ್ಯಗಳನ್ನು ಕಲ್ಪಿಸದೇ ಇರುವುದರಿಂದ ಅಭಿವೃದ್ಧಿ ಕುಂಠಿತ ವಾಗಿರುವ ಮತ್ತು ನಗರದ ಹಲವು ಸಮಸ್ಯೆಗಳ ಬಗ್ಗೆ ನಿಗಮ 69ರಡಿ ಅವರು ಪ್ರಸ್ತಾಪಿಸಿದರು. ಎಸ್.ಎಂ. ಕೃಷ್ಣ ಅವರ ಅವಧಿಯಿಂದ ಶುರುವಾದ ಅಭಿವೃದ್ಧಿ ಪರ್ವ ಯಡಿಯೂರಪ್ಪ ಅವರ ಸರ್ಕಾರದವರೆಗೆ ಮುಂದುವರಿಯಿತು. ಬಿಜೆಪಿಯ 3 ವರ್ಷ ಆಡಳಿತದಲ್ಲಿ 18,299 ಕೋಟಿ ರೂ. ಕೊಟ್ಟಿದೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಹೆಚ್ಚಿನ ಅನುದಾನವೂ ಸಿಕ್ಕಿಲ್ಲ, ಅಭಿವೃದ್ಧಿಯೂ ಆಗಿಲ್ಲ. ಈಗ ಪ್ರತಿ ಪಾಲಿಕೆಗೆ ತಲಾ 100 ಕೋಟಿ ರೂ. ಕೊಡುವುದಾಗಿ ಘೋಷಿಸಿದ್ದು, ಕೆಲ ಪಾಲಿಕೆಗಳು ಆರ್ಥಿಕವಾಗಿ ಸದೃಢವಾಗಿದ್ದರೆ, ಇನ್ನೂ ಕೆಲ ಪಾಲಿಕೆಗಳಲ್ಲಿ ಸಿಬ್ಬಂದಿಗೆ ಸಂಬಳ ಕೊಡಲೂ ಹಣವಿಲ್ಲ. ಆದ್ದರಿಂದ ಎರಡು ವರ್ಷಗಳ ಕಾಲ ರಾಜ್ಯದ ಎಲ್ಲ ಜಿಲ್ಲೆಗಳಿಗೆ ಅನುದಾನ ನಿಲ್ಲಿಸಿ, ಬೆಂಗಳೂರಿನ ಅಭಿವೃದ್ಧಿಗೆ ವಾರ್ಷಿಕ ಕನಿಷ್ಠ 10 ಸಾವಿರ ಕೋಟಿ ರೂ. ಅನುದಾನ ನೀಡಿ. ಪ್ರತ್ಯೇಕ ರಾಜ್ಯಕ್ಕಾಗಿ ಆಗ್ರಹಿಸುವವರನ್ನು ನಂತರ ಸಮಾಧಾನಪಡಿಸಬಹುದು. ಬೆಂಗಳೂರಿನ ಶೇ.65 ರಷ್ಟು ತೆರಿಗೆಯಿಂದ ರಾಜ್ಯ ನಡೆಯುತ್ತಿದೆ. ಇದು 28 ಶಾಸಕರಿಗೆ ಸೀಮಿತವಲ್ಲ. 224 ಶಾಸಕರಿಗೂ ಸಂಬಂಧಿಸಿದ್ದಾಗಿದೆ ಎಂದರು.

ಸುರಂಗ ಮಾರ್ಗಕ್ಕೆ ಬೇಕು 22.36 ಎಕರೆ ಜಾಗ: ಸರ್ಕಾರ ಬೆಂಗಳೂರಿನಲ್ಲಿ 17 ಕಿ.ಮೀ. ಸುರಂಗ ಮಾರ್ಗ ನಿರ್ಮಾಣ ಮಾಡುತ್ತದೆ ಎಂದು ಹೇಳಿದೆ. ವಿಸ್ತೃತ ಯೋಜನಾ ವರದಿ ಪ್ರಕಾರ, ಹೆಬ್ಬಾಳದ ಎಸ್ಟೀಂ ಮಾಲ್ (5.10 ಎಕರೆ), ಮೇಖ್ರಿ ವೃತ್ತ (5.94 ಎಕರೆ), ರೇಸ್ ಕೋರ್ಸ್ ರಸ್ತೆ (3.32 ಎಕರೆ), ಲಾಲ್‌ಬಾಗ್ ರಸ್ತೆ (3.7 ಎಕರೆ), ಸಿಲ್ಕ್ ಬೋರ್ಡ್ (4.22 ಎಕರೆ) ಬಳಿ ಸುರಂಗ ಮಾರ್ಗಕ್ಕೆ ಪ್ರವೇಶ ಮತ್ತು ನಿರ್ಗಮನಕ್ಕೆ ದಾರಿ ಮಾಡಿಕೊಡಲು ಹೊರಟಿದ್ದೀರಿ. ಇದಕ್ಕಾಗಿ ಒಟ್ಟು ಐದು ಸಾವಿರ ಕೋಟಿ ರೂ. ಬೆಲೆಬಾಳುವ 22.36 ಎಕರೆಯನ್ನು ಸ್ವಾಧೀನ ಮಾಡಿಕೊಳ್ಳಬೇಕಿದೆ. ಇದು ಸಾಧ್ಯವೇ ಎಂದು ಪ್ರಶ್ನಿಸಿದರು. ಹೆಬ್ಬಾಳದಿಂದ ಮೇಲ್ಸೇತುವೆ ಮಾಡುತ್ತೇವೆ ಎಂದಿದ್ದೀರಿ. ಹೆಬ್ಬಾಳ- ಸರ್ಜಾಪುರ ನಡುವೆ ಡಬಲ್ ಡೆಕ್ಕರ್ ರಸ್ತೆ ನಿರ್ಮಿಸುವುದಾಗಿ ಪ್ರಕಟಿಸಿದ್ದೀರಿ. ಹೆಬ್ಬಾಳದಿಂದ ಇನ್ನೂ ಏನೇನು ಮಾಡುತ್ತೀರಿ? ಗುಂಡಿ ಮುಚ್ಚಲು ಸರ್ಕಾರದ ಬಳಿ ದುಡ್ಡಿಲ್ಲ. ಆದರೆ ಮೇಲ್ಸೇತುವೆ, ಸುರಂಗ ಮಾರ್ಗ ಎಂದು ಅವೈಜ್ಞಾನಿಕ ಕಾಮಗಾರಿಯ ಘೋಷಣೆ ಮಾಡುತ್ತಿದೆ. ಉದ್ಯಾನ ನಗರಿಯ ಹೆಗ್ಗುರುತಾಗಿರುವ ಉದ್ಯಾನವನಗಳ ನಿರ್ವಹಣೆಗೆ ಸರ್ಕಾರದ ಬಳಿ ದುಡ್ಡಿಲ್ಲ, ಕೆರೆ ನಿರ್ವಹಣೆಗೆ ದುಡ್ಡಿಲ್ಲ, ಒಂದೇ ಒಂದು ಮೇಲ್ಸೇತುವೆ ಕೂಡ ಮಂಜೂರು ಮಾಡಿಲ್ಲ. ಬೆಂಗಳೂರು ರಸ್ತೆ ಗುಂಡಿ ಮುಚ್ಚುವುದಕ್ಕಾದರೂ ಅನುದಾನ ಕೊಡಿ ಎಂದು ಒತ್ತಾಯಿಸಿದರು.

> ಮಳೆಗಾಲ ಸಮೀಪ ಬರುತ್ತಿದೆ ರಾಜಧಾನಿಯಲ್ಲಿ ಮೋರಿ ಕೆಲಸ ಮಾಡಲೂ ಸಾಧ್ಯವಾಗುತ್ತಿಲ್ಲ. ರಾಜ ಕಾಲುವೆ ನಿರ್ವಹಿಸಲೂ ಸರ್ಕಾರದ ಬಳಿ ದುಡ್ಡಿಲ್ಲ. ಸಿದ್ದರಾಮಯ್ಯ ಸರ್ಕಾರಕ್ಕೆ ಮೂಲಸೌಕರ್ಯ ಒದಗಿಸಲಾಗುತ್ತಿಲ್ಲ, ರಸ್ತೆ ಗುಂಡಿ ಮುಚ್ಚಲೂ ಆಗುತ್ತಿಲ್ಲ.
> ■ ಎಸ್. ಮುನಿರಾಜು, ಬಿಜೆಪಿ ಶಾಸಕ



> ಸುಪ್ರೀಂ ಕೋರ್ಟ್ ಆದೇಶದಂತೆ ಕೈಗಾರಿಕಾ ಭೂಮಿ ಯನ್ನು ವಸತಿ ಭೂಮಿಯಾಗಿ ಪರಿವರ್ತನೆ ಮಾಡಬಾರದು. ನಮ್ಮ ಸರ್ಕಾರವಿದ್ದಾಗ ಮೆಟ್ರೊ 3ನೇ ಹಂತದ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ರಾಜರಾಜೇಶ್ವರಿ ನಗರದಲ್ಲಿ ಮೆಟ್ರೊ ನಿಲ್ದಾಣಕ್ಕೆ ಮೀಸಲಿಟ್ಟ ಜಾಗದಲ್ಲಿ ಈಗ ಜಾಗವೇ ಲಭ್ಯವಿಲ್ಲ.
> ■ ಮುನಿರತ್ನ, ಬಿಜೆಪಿ ಶಾಸಕ



ಡ್ರೋನ್ ಸರ್ವೇ ಸ್ಥಗಿತಗೊಳಿಸಿ ಭೌತಿಕ ಸರ್ವೇಯನ್ನೇ ಮಾಡಲಿ

ಡ್ರೋನ್ ಮೂಲಕ ಸರ್ವೇ ಮಾಡಿ, ಆಸ್ತಿ ತೆರಿಗೆ ವಿಧಿಸುವುದು ಮತ್ತು ದಂಡ ವಸೂಲಿ ಮಾಡುವುದನ್ನು ನಿಲ್ಲಿಸಬೇಕು. ಅದರ ಬದಲು ಭೌತಿಕ ಸರ್ವೇ ಆಧಾರದಲ್ಲೇ ತೆರಿಗೆ ವಿಧಿಸಬೇಕು ಎಂದು ಬಿಜೆಪಿ ಶಾಸಕ ಸತೀಶ್ ರೆಡ್ಡಿ ಒತ್ತಾಯಿಸಿದರು.

ಬನ್ನೇರುಘಟ್ಟ ರಸ್ತೆಯಲ್ಲಿರುವ ಮೀನಾಕ್ಷಿ ಮಾಲ್ 2018ರಿಂದ 11 ಕೋಟಿ ರೂ. ತೆರಿಗೆ ಪಾವತಿಸಿಲ್ಲ. ದಂಡದ ಮೊತ್ತ ಸೇರಿದರೆ ಸಾಕಷ್ಟು ಹಣ ಬಾಕಿ ಇದೆ. ನೋಟಿಸ್ ಕೊಟ್ಟರೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಅದನ್ನು ತೆರವು ಮಾಡಲು ಇದುವರೆಗೆ ಆಗಿಲ್ಲ. ಡ್ರೋನ್ ಸರ್ವೇ ಮಾಡಿ ತೆರಿಗೆ ವಿಧಿಸಿ, ಮನೆ ಹರಾಜು ನೋಟಿಸ್ ಕೊಡುವ ಆಡಳಿತಕ್ಕೆ ಮೀನಾಕ್ಷಿ ಮಾಲ್‌ನಿಂದ ತೆರಿಗೆ ವಸೂಲಿ ಮಾಡಲಾಗುವುದಿಲ್ಲವೇ? ಎಂದು ಪ್ರಶ್ನಿಸಿದರು. ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ (ಕೆಸಿಡಿಸಿ)ದಲ್ಲಿ ಜೈವಿಕ ಇಂಧನ ತಯಾರಿಗೆ ಕೇಂದ್ರ ಸರ್ಕಾರ ಹಣ ಕೊಡಲು ಸಿದ್ಧವಿದ್ದರೂ ರಾಜ್ಯ ಸರ್ಕಾರ ತಲೆ ಕೆಡಿಸಿಕೊಳ್ಳುತ್ತಿಲ್ಲ. 2 ಸಾವಿರ ಕೋಟಿ ರೂ. ತೆರಿಗೆ ಪಾವತಿಸುವ ಬೊಮ್ಮನಹಳ್ಳಿ ವಲಯಕ್ಕೆ 3 ವರ್ಷದಲ್ಲಿ 165 ಕೋಟಿ ರೂ. ಅನುದಾನ ಸಿಕ್ಕಿದೆ. ಕೇಂದ್ರ ಸರ್ಕಾರವನ್ನು ಪ್ರಶ್ನಿಸುವ ಯಾವ ಹಕ್ಕು ನಿಮಗಿದೆ? ಎಂದವರು ಕೇಳಿದರು.

ನಿಶ್ಚಿತಾರ್ಥ ಮಾಡಿಕೊಂಡಿದ್ದವನಿಂದಲೇ ಕೃತ್ಯ: ಶಂಕೆ

ಅಪ್ರಾಪ್ತೆಯ ಕತ್ತು ಕೊಯ್ದು ಕೊಲೆ

ಬೆಂಗಳೂರು: ಡಿ.ಜೆ. ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಮಾನವೀಯ ಘಟನೆಯೊಂದು ನಡೆದಿದೆ. ನಿಶ್ಚಿತಾರ್ಥವಾಗಿದ್ದ ಅಪ್ರಾಪ್ತ ಬಾಲಕಿಯನ್ನು ವ್ಯಕ್ತಿಯೊಬ್ಬ ಪಾಳುಬಿದ್ದ ಮನೆಯಲ್ಲಿ ಕತ್ತು ಕೊಯ್ದು ಭೀಕರವಾಗಿ ಕೊಲೆ ಮಾಡಿದ್ದಾನೆ.

ಡಿ.ಜೆ. ಹಳ್ಳಿಯ ಸಕ್ಕರೆ ಮಂಡಿ ಎಂಬಲ್ಲಿ ಕೃತ್ಯ ನಡೆದಿದ್ದು, ಆರೋಪಿ ಶಬೀಲ್(20) ಕೃತ್ಯ ಎಸಗಿದ ಬಳಿಕ ಪರಾರಿಯಾಗಿದ್ದಾನೆ. ಈತ ತಾನು ನಿಶ್ಚಿತಾರ್ಥ ಮಾಡಿಕೊಂಡಿದ್ದ ಅಪ್ರಾಪ್ತ ಬಾಲಕಿ ಜೋಯಾ ಎಂಬಾಕೆಯನ್ನು ಮಂಗಳವಾರ ಮುಂಜಾನೆ 6.30ರ ಹೊತ್ತಿಗೆ ಸಕ್ಕರೆ ಮಂಡಿ ಪ್ರದೇಶದಲ್ಲಿರುವ ತನ್ನ ಕುಟುಂಬಕ್ಕೆ ಸೇರಿದ ಪಾಳುಬಿದ್ದ ಮನೆಗೆ ಕರೆದೊಯ್ದಿದ್ದಾನೆ. ಅಲ್ಲಿ ಇಬ್ಬರ ನಡುವೆ ವಾಗ್ವಾದ ನಡೆದಿದ್ದು, ನಂತರ ಶಬೀಲ್ ಬಾಲಕಿಯ ಕತ್ತನ್ನು ಹರಿತ ವಾದ ಆಯುಧದಿಂದ ಸೀಳಿ ಸ್ಥಳದಿಂದ ಪರಾರಿ ಯಾಗಿದ್ದಾನೆ ಎನ್ನಲಾಗಿದೆ.

ಈ ಭೀಕರ ಹತ್ಯೆಯ ವಿಷಯವು ಸ್ವತಃ ಆರೋಪಿ ಶಬೀಲ್‌ನ ಕುಟುಂಬ ಸದಸ್ಯರ ಮೂಲಕವೇ ಹೊರಬಂದಿದೆ. ಮನೆಯಲ್ಲಿ ರಕ್ತಸಿಕ್ತ ಸ್ಥಿತಿಯಲ್ಲಿ ಬಿದ್ದಿದ್ದ ಬಾಲಕಿಯ ಶವವನ್ನು ಕಂಡು ಬೆಚ್ಚಿಬಿದ್ದ ಕುಟುಂಬಸ್ಥರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ, ಬೆಳಗ್ಗೆ ಸುಮಾರು 11 ಗಂಟೆಯ ಹೊತ್ತಿಗೆ ಪೊಲೀಸರಿಗೆ ಈ ಬಗ್ಗೆ ಮಾಹಿತಿ ತಲುಪಿದೆ. ತಕ್ಷಣವೇ ಕಾರ್ಯಪ್ರವೃತ್ತರಾದ ಡಿ.ಜೆ. ಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಪ್ರಸ್ತುತ ಬಾಲಕಿಯ ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಡಿ.ಜೆ. ಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಆಮಟೆ ಅವರು, ಘಟನಾ ಸ್ಥಳಕ್ಕೆ ಸೋಕೋ ತಂಡ ಭೇಟಿ ನೀಡಿ ಸಾಕ್ಷ್ಯವನ್ನು ಸಂಗ್ರಹಿಸಿದೆ. ಹತ್ಯೆ ನಡೆದ ಸ್ಥಳವು ಶಬೀಲ್ ಕುಟುಂಬಕ್ಕೆ ಸೇರಿದ್ದಾಗಿದೆ. ಕೊಲೆ ಮಾಡಿರುವುದು ಯಾರು ಎಂಬುದು ಈಗಾಗಲೇ ದೃಢಪಟ್ಟಿದ್ದು, ತಲೆಮರೆಸಿಕೊಂಡಿರುವ ಆರೋಪಿ ಶಬೀಲ್ ಬಂಧನಕ್ಕಾಗಿ ವಿಶೇಷ ತಂಡ ರಚಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಉತ್ಸವ –2026

ಕೌಶಲಾಧಾರಿತ ಶಿಕ್ಷಣ ವ್ಯವಸ್ಥೆ ಇಂದಿನ ಅಗತ್ಯ

ಬೆಂಗಳೂರು: ಮೂಲ ವಿಷಯಗಳೊಂದಿಗೆ ಕೌಶಲಾಧಾರಿತ ಶಿಕ್ಷಣವನ್ನು ಒದಗಿಸುವುದು ಇಂದಿನ ಪ್ರಸ್ತುತತೆಗೆ ಅಗತ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಎಸ್. ಆರ್. ನಿರಂಜನ ಅವರು ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೈನ್ಸ್ ಫೋರಮ್ (ಬಿಯುಎಸ್‌ಎಫ್) ಹಾಗೂ ಪಿಎಂ ಉಷಾ ಸಹಯೋಗದೊಂದಿಗೆ ಆಯೋಜಿಸಿದ್ದ ಬೆಂಗಳೂರು ವಿಶ್ವ ವಿದ್ಯಾಲಯ ವಿಜ್ಞಾನ ಉತ್ಸವ - 2026ವನ್ನು ಉದ್ಘಾಟಿಸಿ ಮಾತನಾಡಿ, ಅಂತರಶಾಖಾ ಮತ್ತು ಬಹುಶಾಖಾ ಶಿಕ್ಷಣ ವ್ಯವಸ್ಥೆ ಹೊಸದಲ್ಲ. ನಳಂದಾ ಮತ್ತು ತಕ್ಷಶೀಲಾ ಕಾಲದಲ್ಲಿಯೇ ಇದು ಅಸ್ತಿತ್ವದಲ್ಲಿತ್ತು. ಮೂಲ ವಿಷಯಗಳೊಂದಿಗೆ ಕೌಶಲ್ಯಾಧಾರಿತ ಶಿಕ್ಷಣವನ್ನು ಒದಗಿಸುವುದು ಇಂದಿನ ಪ್ರಸ್ತುತತೆಗೆ ಅಗತ್ಯವಾಗಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ಶಿಕ್ಷಣದಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು. ಐಐಟಿ ಧಾರವಾಡದ ಪ್ರಾಧ್ಯಪಕ ಪ್ರೊ.ಡಾ. ಶಿವಪ್ರಸಾದ್ ಎಸ್.ಎಂ ಮಾತನಾಡಿ, ಅನ್ವಯಿಕ ವಿಜ್ಞಾನ ಮತ್ತು ಮೂಲಕ ವಿಜ್ಞಾನ ಜಾಗತಿಕ ಪ್ರಗತಿಯ ಬಲವಾದ ಆಧಾರವಾಗಿದೆ. ಪ್ರಸ್ತುತ ವಿಜ್ಞಾನ ವ್ಯಾಪಕವಾಗಿ ಪರಿವರ್ತನೆಯಾಗುತ್ತಿದ್ದು, ಶಿಕ್ಷಣ ವ್ಯವಸ್ಥೆ ಕೂಡ ಭವಿಷ್ಯಕ್ಕೆ ತಕ್ಕಂತೆ ಬದಲಾಗಬೇಕು. ಸಂಶೋಧನೆ ಮತ್ತು ಶಿಕ್ಷಣವು ಜತೆಯಾಗಿ ಸಾಗಬೇಕು, ಪ್ರಾಯೋಗಿಕ ಹಾಗೂ ಚಿಂತನಾ ಆಧಾರಿತ ಕಲಿಕೆ ಅಗತ್ಯವಾಗಿದೆ. ಆಧುನಿಕ ಯುಗದಲ್ಲಿ ಪ್ರತಿಯೊಬ್ಬರು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಭಿನ್ನ ಚಿಂತನೆಗೆ ತೆರೆದುಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.



> ಪ್ರಾಯೋಗಿಕ ವಿಜ್ಞಾನ ಮತ್ತು ಮಾದರಿಗಳು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿರಲಿದೆ. ಈ ಕಾರ್ಯಕ್ರಮ ವಿದ್ಯಾರ್ಥಿಗಳಲ್ಲಿ ಸಂಶೋಧನೆ ಮತ್ತು ನವೀನತೆಗೆ ಪ್ರೇರೆಪಿಸಲಿದ್ದು, ವೈಜ್ಞಾನಿಕ ಮನೋಭಾವವನ್ನು ಸಮಾಜದಲ್ಲಿ ವಿಸ್ತರಿಸುವುದು ಬೆಂಗಳೂರು ವಿಶ್ವವಿದ್ಯಾಲಯದ ಪ್ರಮುಖ ಉದ್ದೇಶವಾಗಿದೆ.
> ■ ಡಾ.ಜಯಕರ ಎಸ್.ಎಂ, ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ.



ಮೇಜರ್ ಸಂದೀಪ್ ಉನ್ನಿಕೃಷ್ಣನ್ ಅವರ 49ನೇ ಜನ್ಮದಿನಾಚರಣೆ ಪ್ರಯುಕ್ತ ಟೀಮ್ ಯುವ ಬ್ರಿಗೇಡ್, ಸೋದರಿ ನಿವೇದಿತ ಪ್ರತಿಷ್ಠಾನ ಸಹಯೋಗದಲ್ಲಿ ಯಲಹಂಕದ ಇಸ್ರೋ ಬಡಾವಣೆಯಲ್ಲಿರುವ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಅವರ ನಿವಾಸದಲ್ಲಿ ಯೋಧ ಹೃದಯ ಸಮಾಗಮ ಕಾರ್ಯಕ್ರಮ ನಡೆಯಿತು.

ರೈಲಿಗೆ ಅಡ್ಡಲಾಗಿ ಮಲಗಿದ್ದ ವ್ಯಕ್ತಿ ರಕ್ಷಣೆ

ಬೆಂಗಳೂರು: ಜೀವನದ ಜಿಗುಪ್ಸೆಯಿಂದ ರೈಲು ಹಳಿಗೆ ಅಡ್ಡಲಾಗಿ ಮಲಗಿ ಪ್ರಾಣ ಕಳೆದುಕೊಳ್ಳಲು ಮುಂದಾಗಿದ್ದ ವ್ಯಕ್ತಿಯೊಬ್ಬರನ್ನು ಸಕಾಲಕ್ಕೆ ಧಾವಿಸಿದ ಯಲಹಂಕ ಪೊಲೀಸ್ ಠಾಣೆಯ ಹೆಡ್ ಕಾನ್ಸ್ಟೇಬಲ್ ಶ್ರೀಧರ್ ಮೂರ್ತಿ ಅವರ ವ್ಯಕ್ತಿಯನ್ನು ರಕ್ಷಿಸಿದ್ದಾರೆ.

ನಗರದ ಈಶಾನ್ಯ ವಿಭಾಗದ ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯ ರೈಲ್ವೆ ಹಳಿಯ ಮೇಲೆ ವ್ಯಕ್ತಿಯೊಬ್ಬರು ಆತ್ಮಹತ್ಯೆಗೆ ಯತ್ನಿಸುತ್ತಿದ್ದಾರೆ ಎಂಬ ತುರ್ತು ಕರೆ ಪೊಲೀಸ್ ನಿಯಂತ್ರಣ ಕೊಠಡಿಗೆ ಬಂದಿತ್ತು. ವಿಷಯ ತಿಳಿಯುತ್ತಿದ್ದಂತೆಯೇ ಗಸ್ತು ವಾಹನದಲ್ಲಿದ್ದ ಹೆಡ್ ಕಾನ್ಸ್ಟೇಬಲ್ ಶ್ರೀಧರ್ ಮೂರ್ತಿ ಅವರು ತಕ್ಷಣ ಘಟನ ಸ್ಥಳಕ್ಕೆ ಧಾವಿಸಿದರು.

ದೂರದಲ್ಲಿ ರೈಲು ಬರುತ್ತಿರುವುದನ್ನು ಗಮನಿಸಿದ ಪೊಲೀಸರು, ತಕ್ಷಣ ಹಳಿಯ ಮೇಲೆ ಮಲಗಿದ್ದ ವ್ಯಕ್ತಿಯನ್ನು ಎಳೆದು ಸುರಕ್ಷಿತ ಸ್ಥಳಕ್ಕೆ ಕರೆತಂದರು. ಒಂದು ವೇಳೆ ಪೊಲೀಸರ ಆಗಮನ ಸ್ವಲ್ಪ ತಡವಾಗಿದ್ದರೂ ದೊಡ್ಡ ಅನಾಹುತವೇ ಸಂಭವಿಸುತ್ತಿತ್ತು.

ಧೈರ್ಯ ತುಂಬಿದ ಪೊಲೀಸರು: ಕೇವಲ ವ್ಯಕ್ತಿಯನ್ನು ರಕ್ಷಿಸುವುದಷ್ಟೇ ಅಲ್ಲದೆ, ಮಾನಸಿಕವಾಗಿ ಕುಗ್ಗಿದ್ದ ಆತನಿಗೆ ಪೊಲೀಸರು ಸ್ಥಳದಲ್ಲೇ ಆಪ್ತ ಸಮಾಲೋಚನೆ ನಡೆಸಿದರು. ಆತ್ಮಹತ್ಯೆ ಯಾವುದಕ್ಕೂ ಪರಿಹಾರವಲ್ಲ, ಸಮಸ್ಯೆಗಳನ್ನು ಎದುರಿಸುವ ಧೈರ್ಯ ಬೆಳೆಸಿಕೊಳ್ಳಬೇಕು ಎಂದು ಹಿತವಚನ ಹೇಳಿ ಆತನಲ್ಲಿ ಹೊಸ ಭರವಸೆ ಮೂಡಿಸಿದರು. ಬಳಿಕ ಆತನ ಕುಟುಂಬದವರನ್ನು ಸಂಪರ್ಕಿಸಿ, ನಡೆದ ಘಟನೆಯ ಬಗ್ಗೆ ಮಾಹಿತಿ ನೀಡಿ ವ್ಯಕ್ತಿಯನ್ನು ಸುರಕ್ಷಿತವಾಗಿ ಕುಟುಂಬಸ್ಥರಿಗೆ ಹಸ್ತಾಂತರಿಸಿದ್ದಾರೆ.

ಎಸ್‌ಟಿಎಸ್ ಕಪ್–2026ರ ಕ್ರಿಕೆಟ್ ಸಮಾರೋಪ

ಸಹಕಾರ ಕ್ಷೇತ್ರಕ್ಕೆ ಅಮೂಲಾಗ್ರ ಸೇವೆ

ಕೆಂಗೇರಿ: ಸಹಕಾರ ಇಲಾಖೆಯ ಮೂಲಕ ಅಮೂಲಾಗ್ರ ಸೇವೆ ಸಲ್ಲಿಸಿದ ಕೀರ್ತಿ ಎಸ್.ಟಿ.ಸೋಮಶೇಖರ್ ಅವರದ್ದು, ಮಾತಿಗಿಂತ ಕೃತಿ ಮೇಲು ಎಂಬ ಆಶಯ ಹೊಂದಿರುವ ಅಪರೂಪದ ರಾಜಕಾರಣಿಯಾಗಿದ್ದಾರೆ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಂಗೇರಿ ಉಪನಗರದ ಗಣೇಶ ಆಟದ ಮೈದಾನದಲ್ಲಿ ಆಯೋಜನೆಗೊಂಡಿದ್ದ ಎಸ್.ಟಿ.ಎಸ್ ಕಪ್ - 2026ರ ಕ್ರಿಕೆಟ್ ಟೂರ್ನಮೆಂಟ್‌ನ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್.ಟಿ.ಎಸ್ ಯಾವುದೇ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ, ಯಶಸ್ವಿಯಾಗಿ ನಿರ್ವಹಿಸುತ್ತಾರೆ. ಅವರ ಜನಪರ ಕಾರ್ಯಗಳು ಹೀಗೆಯೇ ಮುಂದುವರಿಯಲಿ ಎಂದು ಹಾರೈಸಿದರು. ಅಂತಾರಾಷ್ಟ್ರೀಯ ಕ್ರಿಕೆಟ್ ತೀರ್ಪುಗಾರ ಕೆ. ಶ್ರೀನಾಥ್ ಮಾತನಾಡಿ, ಸುಮಾರು 5 ಸಾವಿರಕ್ಕೂ ಅಧಿಕ ಮಂದಿ ಕ್ರೀಡಾಪಟುಗಳನ್ನು ಒಳಗೊಂಡ 317 ತಂಡಗಳನ್ನು ಒಂದೆಡೆ ಸೇರಿಸಿ, ನಡೆಸಿರುವ ಟೂರ್ನಮೆಂಟ್ ಅವಿಸ್ಮರಣೀಯ ಸಾಧನೆ ಎಂದು ಶ್ಲಾಘಿಸಿದರು.ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ಯಶಸ್ಸಿಗೆ ನಾನು ನೆಪ ಮಾತ್ರ . ಜಿಬಿಎ, ಪೊಲೀಸ್, ಆರೋಗ್ಯ ಇಲಾಖೆ, ಬೆಸ್ಕಾಂ ಸೇರಿದಂತೆ ಕ್ಷೇತ್ರದ 12 ಜಿಬಿಎ ವಾರ್ಡ್ ಹಾಗೂ 17 ಗ್ರಾ ಪಂ ವ್ಯಾಪ್ತಿಯ ಮುಖಂಡರು ಹಾಗೂ ಕಾರ್ಯಕರ್ತರು ಕಾರಣರಾಗಿದ್ದು, 7 ದಿನಗಳ ಕಾಲ ಶ್ರಮವಹಿಸಿದ ಕಾರಣ ಯಶಸ್ಸು ಲಭಿಸಿದೆ ಎಂದು ತಿಳಿಸಿದರು. ಇದೇ ವೇಳೆ ವಿಜೇತ ತಂಡ ಪ್ರಥಮ ಸ್ಥಾನ ಗಳಿಸಿದ ರಾಯಲ್ ಫೈಟರ್ಸ್, ದ್ವಿತೀಯ ಸ್ಥಾನ ಇಮ್ಮಡಿ ಪುಲಕೇಶಿ ಸೋಮೇಶ್ವರ ತಂಡ ಹಾಗೂ ತೃತೀಯ ಸ್ಥಾನ ಪಡೆದ ಬಸವೇಶ್ವರ ಕ್ರಿಕೆಟರ್ಸ್ ಇತರೆ ವಿಜೇತ ತಂಡಗಳಿಗೆ ಟ್ರೋಫಿ ಹಾಗೂ ನಗದು ಬಹುಮಾನ ವಿತರಿಸಲಾಯಿತು.



ಹಕ್ಕು, ಆಕ್ಷೇಪಣೆಗೆ ದಿನಾಂಕ ವಿಸ್ತರಿಸಲಿ

ಬೆಂಗಳೂರು: ಮತದಾರರ ಹೆಸರನ್ನು ಪರಿಶೀಲಿಸುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ವೆಬ್‌ಸೈಟ್ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡಬೇಕು. ವೆಬ್‌ಸೈಟ್ ಯುಆರ್‌ಎಲ್ ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಿದ ನಂತರ ಹಕ್ಕು ಮತ್ತು ಆಕ್ಷೇಪಣೆ ದಿನಾಂಕವನ್ನು ವಿಸ್ತರಿಸಬೇಕೆಂದು ಬಿಜೆಪಿ ಒತ್ತಾಯಿಸಿದೆ.

ಬಿಜೆಪಿ ಬೆಂಗಳೂರು ಮಹಾನಗರದ ಅಧ್ಯಕ್ಷರ ನಿಯೋಗವು ಈ ಕುರಿತು ಮಂಗಳವಾರ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದೆ. ಜಿಬಿಎಯ ಯುಆರ್‌ಎಲ್‌ನಲ್ಲಿ ಕಳೆದ ವಾರದಿಂದ ಬಳಕೆದಾರರು ವಿವರಗಳು ಅಥವಾ ಮತದಾರರ ಗುರುತಿನ ಚೀಟಿ (ಎಪಿಕ್ ಕಾರ್ಡ್)ಬಳಸಿ ತಮ್ಮ ಹೆಸರನ್ನು ಹುಡುಕಲು ಸಾಧ್ಯವಾಗುತ್ತಿಲ್ಲ ಎಂಬುದರ ಕುರಿತು ಮನವಿಯಲ್ಲಿ ಗಮನ ಸೆಳೆಯಲಾಗಿದೆ. ಹಕ್ಕು ಮತ್ತು ಆಕ್ಷೇಪಣೆಗಳ ದಿನಾಂಕವನ್ನು ವಿಸ್ತರಿಸಲಾಗಿದ್ದರೂ ನಾಗರಿಕರು ಮತ್ತು ರಾಜಕೀಯ ಪಕ್ಷಗಳು ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಹುಡುಕದೆ ಹಕ್ಕು ಮತ್ತು ಆಕ್ಷೇಪಣೆಯನ್ನು ಸಲ್ಲಿಸಲು ಸಾಧ್ಯವಾಗುವುದಿಲ್ಲ ಎಂದು ಗಮನಕ್ಕೆ ತರಲಾಗಿದೆ. ನಿಯೋಗದಲ್ಲಿ ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷ ಮತ್ತು ಶಾಸಕ ಸಿ.ಕೆ.ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲೆ ಅಧ್ಯಕ್ಷ ಎಸ್.ಹರೀಶ್, ಬೆಂಗಳೂರು ಕೇಂದ್ರ ಜಿಲ್ಲೆ ಅಧ್ಯಕ್ಷ ಸಪ್ತಗಿರಿ ಗೌಡ ಇದ್ದರು.



ಇಂಡಿಯಾ ಫಾರ್ ಐಎಎಸ್ ಅಕಾಡೆಮಿ: 19 ಸಾಧಕರಿಗೆ ಸನ್ಮಾನ

ಗ್ರಾಮೀಣರಿಂದಲೇ ಹೆಚ್ಚು ಸಾಧನೆ

ಬೆಂಗಳೂರು: ಇತ್ತೀಚಿನ ದಿನದಲ್ಲಿ ಗ್ರಾಮೀಣ ಭಾಗದ ಅಭ್ಯರ್ಥಿಗಳು ಯುಪಿಎಸ್ಸಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ. ಗ್ರಾಮೀಣ ಪ್ರದೇಶದವರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಿಂದ ಸೋಮವಾರ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಯೋಜಿಸಿದ್ದ 2025-26ರ ಯುಪಿಎಸ್ಸಿ ಪರೀಕ್ಷೆಯಲ್ಲಿ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಲ್ಲಿ ಆಯ್ಕೆಯಾದ ರಾಜ್ಯದ 19 ಸಾಧಕರನ್ನು ಅಭಿನಂದಿಸಿ ಮಾತನಾಡಿ, ನಾಗರಿಕ ಸೇವೆ ಅತ್ಯಂತ ಶ್ರೇಷ್ಠ ಮತ್ತು ಪರಮೋಚ್ಚ ಅವಕಾಶವಾಗಿದೆ. ಪ್ರಧಾನಿ ನೇತೃತ್ವದಲ್ಲಿ ಕೈಗೊಂಡ ತೀರ್ಮಾನವನ್ನು ಆದೇಶದ ಮೂಲಕ ಜಾರಿ ಮಾಡುವವರು ಅಧಿಕಾರಿಗಳು. ಅಧಿಕಾರಿಗಳಿಗೆ ಸಂವಿಧಾನ ಅಷ್ಟೊಂದು ಪರಮಾಧಿಕಾರ ನೀಡಿದೆ. ನಾಗರಿಕ ಸೇವೆಯಿಂದ ಬಹಳಷ್ಟು ಜನ ಉತ್ತಮ ಕೆಲಸ ಮಾಡಿದ್ದಾರೆ ಎಂದರು.

ಅಧಿಕಾರಿಗಳು ಸಾಮಾನ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು. ಜನ ಸಾಮಾನ್ಯರಿಗೆ ಸೇವೆ ಸಲ್ಲಿಸಲು ನಿಮಗೆ ಆಕಾಶವೇ ಮಿತಿಯಾಗಿದೆ. ತಾಳ್ಮೆಯಿಂದ, ವಿವೇಚನೆಯಿಂದ ಕೆಲಸ ಮಾಡಬೇಕು. ಉತ್ತಮ ವಿಧಾನಗಳನ್ನು ಅಳವಡಿಸಿಕೊಂಡರೆ ಉತ್ತಮ ಕೆಲಸ ಮಾಡಲು ನೆರವಾಗಲಿದೆ ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷ ಡಾ. ಸಿ.ಎಸ್. ಕೇದಾರ್, ಉಪಾಧ್ಯಕ್ಷ ಡಾ.ಜಿ.ಎನ್ ಶ್ರೀಕಂಠಯ್ಯ, ಸಹ ಸಂಸ್ಥಾಪಕ ಶ್ರೀನಿವಾಸ್ ಪಿ.ಸಿ. ಮುಂತಾದವರಿದ್ದರು.



ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಬಂಟ್ವಾಳ: ಕರ್ನಾಟಕ ರಾಜ್ಯದಿಂದ ಕೇರಳಕ್ಕೆ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿದ್ದ ಪ್ರಕರಣದಲ್ಲಿ ಕಳೆದ ಎಂಟು ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಕೇರಳ ಮೂಲದ ಆರೋಪಿಯನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.



ಕೇರಳ ಮಲಪುರಂ ಜಿಲ್ಲೆಯ ನಿವಾಸಿ ಮೊಹಮ್ಮದ್ ಆನಾಸ್ (38) ಬಂಧಿತ ಆರೋಪಿಯಾಗಿದ್ದಾನೆ. ತಮಿಳುನಾಡು ರಾಜ್ಯದ ಕೊಯಂಬತ್ತೂರು ಜಿಲ್ಲೆಯ ಪೊಳಚಿ ಎಂಬಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿ ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಕಿರುಸುದ್ದಿ

ಮಾ. 27ರಂದು ಶ್ರೀರಾಮ ಭಜನಾ ಮಂದಿರದಲ್ಲಿ ಶ್ರೀರಾಮ ತಾರಕ ಯಾಗ

ಮಂಗಳೂರು: ಬಂಟ್ವಾಳ ಮೂಡ ದೈಪಲ ಕಾಮಾಜೆ ಶಿವಾಜಿನಗರದ ಶ್ರೀರಾಮ ಭಜನಾ ಮಂದಿರ, ಶ್ರೀರಾಮಾಂಜನೇಯ ವ್ಯಾಯಾಮ ಶಾಲೆಯಲ್ಲಿ ಶ್ರೀರಾಮ ನವಮಿ ಪ್ರಯುಕ್ತ ಮಾ. 27ರಂದು ವೇದಮೂರ್ತಿ ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ಸಾರ್ವಜನಿಕ ಶ್ರೀಸತ್ಯನಾರಾಯಣ ಪೂಜೆ ಹಾಗೂ ಶ್ರೀರಾಮ ತಾರಕ ಯಾಗ ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ದೇವತಾ ಪ್ರಾರ್ಥನೆ, ಆದ್ಯ ಗಣಯಾಗ, 9ಕ್ಕೆ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ, 10 ಗಂಟೆಗೆ ಶ್ರೀರಾಮ ತಾರಕ ಯಾಗ ಆರಂಭ, 12 ಗಂಟೆಗೆ ಶ್ರೀರಾಮ ದೇವರ ಪ್ರಸನ್ನ ಮಹಾಪೂಜೆ, ಮಧ್ಯಾಹ್ನ 1ರಿಂದ ಸಾರ್ವಜನಿಕ ಅನ್ನ ಸಂತರ್ಪಣೆ, ರಾತ್ರಿ ಸಂಸದ, ಶಾಸಕ, ಧಾರ್ಮಿಕ ಮುಂದಾಳುಗಳ ಉಪಸ್ಥಿತಿಯಲ್ಲಿ ಧಾರ್ಮಿಕ ಸಭೆ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ರಾತ್ರಿ 9 ಗಂಟೆಯಿಂದ ಶ್ರೀರಾಮ ಮಂದಿರದ ಬಾಲಗೋಕುಲ ಮಕ್ಕಳಿಂದ ಕುಣಿತ ಭಜನೆ, ವಿವಿಧ ವಿನೋದಾವಳಿಗಳು, ಭಕ್ತಿ ಪ್ರಧಾನ ಪೌರಾಣಿಕ ತುಳು ನಾಟಕ 'ಜೋಡು ಜೀಟಿಗೆ' ಪ್ರದರ್ಶನಗೊಳ್ಳಲಿದೆ.

ತಿಮರೋಡಿ ಗಡಿಪಾರು

ಬೆಳ್ತಂಗಡಿ : ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿಗೆ ಮತ್ತೆ ಮೂರನೇ ಬಾರಿಗೆ ಗಡಿಪಾರು ಆದೇಶ ಹೊರಡಿಸಲಾಗಿದೆ. ಮಹೇಶ್ ಶೆಟ್ಟಿ ತಿಮರೋಡಿಯನ್ನು ಹೈಕೋರ್ಟ್ ಆದೇಶದಂತೆ ಮಾ.16 ರಂದು (16-03-2026 ರಿಂದ 16-09-2026 ರವರೆಗೆ) ಪುತ್ತೂರು ಎಸಿ ಸ್ಟೆಲ್ಲಾ ವರ್ಗಿಸ್ ಅವರು ಆರು ತಿಂಗಳು ಕಾಲ ಮತ್ತೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ. ಪುತ್ತೂರು ಎ.ಸಿ ಗಡಿಪಾರು ಆದೇಶದಂತೆ ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿನಿ.ಸಿ.ಕೆ ಅವರು ನೇತೃತ್ವದಲ್ಲಿ ಪೊಲೀಸರು ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿ ಮನೆಗೆ ಮಾ.16 ರಂದು ಮಧ್ಯರಾತ್ರಿ ಹೋಗಿ ಗಡಿಪಾರು ಆದೇಶ ಪ್ರತಿಯನ್ನು ಜಾರಿ ಮಾಡಲು ಹೋದಾಗ ಮಹೇಶ್ ಶೆಟ್ಟಿ ತಿಮರೋಡಿ ಅವರು ಮನೆಯಲ್ಲಿರದೆ ನಾಪತ್ತೆಯಾಗಿದ್ದರು. ಬಳಿಕ ಮನೆಯ ಗೋಡೆಗೆ ನೋಟಿಸ್ ಅಂಟಿಸಿದ್ದಾರೆ.

ವೈರಲ್ ವಿಚಾರ ಯುವಕ ಆತ್ಮಹತ್ಯೆಗೆ ಯತ್ನ

ಸುಳ್ಯ: ಸುಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೂರು ಪ್ರತ್ಯೇಕ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ನ್ಯಾಯಾಲವು 15 ದಿನಗಳ ಸಮುದಾಯಿಕ ಸೇವೆಗೆ ಗುರಿಯಾಗಿದ್ದ ರಕ್ಷಿತ್ ಜಿ.(29) ಎಂಬವರು ನ್ಯಾಯಾಲಯದ ಆದೇಶದಂತೆ ಭಾನುವಾರ ಸಮುದಾಯಿಕ ಸೇವೆಯಾಗಿ ಸಾರ್ವಜನಿಕರಿಗೆ ಸಂಚಾರ ನಿಯಮಗಳ ಬಗ್ಗೆ ಅರಿವು ಮತ್ತು ನಿಯಂತ್ರಣ ಕಾರ್ಯವನ್ನು ನಿರ್ವಹಿಸಿದ್ದರು. ಆ ಬಳಿಕ ತಾನು ಸಲ್ಲಿಸಿದ ಸಮುದಾಯಿಕ ಸೇವೆಯ ವಿಚಾರ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವುದನ್ನು ಮನೆಯಲ್ಲಿದ್ದಾಗ ಗಮನಿಸಿದ ರಕ್ಷಿತ್ ಜಿ. ಇದರಿಂದ ಬೇಸರಗೊಂಡು ವಿಷ ಸೇವನೆ ಮಾಡಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಸುಳ್ಯದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರೆಸಲಾಗಿದೆ.

ಸಂತ ಅಲೋಶಿಯಸ್: ವೃತ್ತಿ ಆಧಾರಿತ ಪದವಿ ಕೋರ್ಸ್ ಆರಂಭ

ಮಂಗಳೂರು: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಮತ್ತು ಸಿಯೆರಾ ಲರ್ನಿಂಗ್ ಅಕಾಡೆಮಿಯ ಸಹಯೋಗದಲ್ಲಿ ವೃತ್ತಿ ಆಧಾರಿತ ಪದವಿ ಕೋರ್ಸ್‌ಗಳನ್ನು ಪ್ರಸಕ್ತ ಸಾಲಿನಿಂದ ಆರಂಭಿಸಲಾಗುತ್ತಿದೆ ಎಂದು ಕಾಲೇಜಿನ ಸಹ ಕುಲಾಧಿಪತಿ ಫಾ ಮೆಲ್ವಿನ್ ಡಿಕುನ್ಹ ತಿಳಿಸಿದರು. ಉದ್ಯೋಗ ಮಾರುಕಟ್ಟೆಯಲ್ಲಿ ಪದವೀಧರರಿಂದ ಕೇವಲ ವಿಷಯ, ಸಿದ್ಧಾಂತ ಜ್ಞಾನದ ಜತೆಗೆ ಪ್ರಾಯೋಗಿಕ ಅನುಭವವನ್ನೂ ಉದ್ಯೋಗದಾತರರು ನಿರೀಕ್ಷಿಸುತ್ತಿದ್ದಾರೆ. ಮಂಗಳೂರಿನ ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆ (ಪರಿಗಣಿತ ವಿಶ್ವವಿದ್ಯಾಲಯ) ತನ್ನ ಹೊಸ ಶೈಕ್ಷಣಿಕ ಉಪಕ್ರಮದ ಭಾಗವಾಗಿ ಸಿಯೇರಾ ಲರ್ನಿಂಗ್ ಅಕಾಡೆಮಿ ಜತೆಗೂಡಿ ಈ ನಿಟ್ಟಿನಲ್ಲಿ ಹೊಸ ಎರಡು ಪದವಿ ಕಾರ್ಯಕ್ರಮಗಳನ್ನು ಆರಂಭಿಸಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು. ಬಿಸಿಎ ಇನ್ ಆಗ್ಯುಮೆಂಟೆಡ್ ಸಾಫ್ಟ್‌ವೇರ್ ಸಿಸ್ಟಮ್ಸ್, ಬಿಎಸ್ಸಿ ಇನ್ ಮೀಡಿಯಾ ಆ್ಯಂಡ್ ಕ್ರಿಯೇಟಿವ್ ಟೆಕ್ನಾಲಜೀಸ್ ಕಾರ್ಯಕ್ರಮಗಳು ಉದ್ದಿಮೆ ಕೇಂದ್ರಿತವಾಗಿ ರೂಪುಗೊಂಡಿವೆ. ಶೈಕ್ಷಣಿಕ ಪಠ್ಯ ಕ್ರಮವನ್ನು ಅಲೋಶಿಯಸ್ ಪರಿಗಣಿಸಿತ ವಿವಿ ಒದಗಿಸಲಿದ್ದು, ಉದ್ಯಮ ಸಂಪರ್ಕಿತ ತರಬೇತಿ, ಪ್ರಾಯೋಗಿಕ ಅನುಭವ ಹಾಗೂ ತಜ್ಞರ ಮಾರ್ಗದರ್ಶನವನ್ನು ಸಿಯೆರಾ ಲರ್ನಿಂಗ್ ಅಕಾಡೆಮಿ ನಿರ್ವಹಿಸಲಿದೆ. ಈ ಬಗ್ಗೆ ಪ್ರವೇಶ ಪ್ರಕ್ರಿಯಗಳು ಆರಂಭಗೊಂಡಿದ್ದು, ತರಗತಿಗಳು ಸಂತ ಅಲೋಶಿಯಸ್ ವಿವಿ ಕ್ಯಾಂಪಸ್‌ನಲ್ಲಿ ನಡೆಯಲಿದೆ ಎಂದು ಅವರು ಹೇಳಿದರು. ಸಿಯೆರಾ ಲರ್ನಿಂಗ್ ಸಂಸ್ಥೆಯ ಕ್ರಿಯೇಟಿವ್ ವಿಭಾಗದ ಮುಖ್ಯಸ್ಥ ದೀಕ್ಷಿತ್ ಕುಂದರ್, ತಾಂತ್ರಿಕ ಸಲಹೆಗಾರ ಮನು ಭಟ್, ಸಂತ ಅಲೋಶಿಯಸ್ ಕಾಲೇಜಿನ ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ, ಲವಿಟಾ, ರಿಷಲ್ ಉಪಸ್ಥಿತರಿದ್ದರು.



ಶ್ರಿ ಕ್ಷೇತ್ರ ಕನಿಲ ಗ್ರಾಮದೈವ ಪಿಲಿಚಾಮುಂಡಿ, ಧೂಮಾವತಿ, ಜಾರಂದಾಯ ದೈವಸ್ಥಾನ ಕುಡುಂಬೂರು ಗುತ್ತು, 62ನೇ ತೋಕೂರು ವರ್ಷಾವಧಿ ಬಂಡಿ ನೇಮೋತ್ಸವ ಕ್ಷೇತ್ರದ ಅನುವಂಶಿಕ ಆಡಳಿತ ಮೊಕ್ತೇಸರ ಗುತ್ತಿನಾರ್ ಜಯರಾಮ ಶೆಟ್ಟಿ ಮುಂದಾಳತ್ವದಲ್ಲಿ ನಡೆಯಿತು. ದೈವ ಕ್ಷೇತ್ರಕ್ಕೆ ನೂತನ ಬಂಡಿ ಸಮರ್ಪಣಾ ಕಾರ್ಯಕ್ರಮ ವಿಧಿಪೂರ್ವಕವಾಗಿ ಇದೇ ಸಂದರ್ಭ ನೆರವೇರಿತು. ಕ್ಷೇತ್ರದ ಸಂಬಂಧಪಟ್ಟ ಸಮಿತಿ ಸದಸ್ಯರು, ಗ್ರಾಮಸ್ಥರು ನೇಮೋತ್ಸವದಲ್ಲಿ ಪಾಲ್ಗೊಂಡರು.

ರೋಟರಿ ಕ್ಲಬ್‌ನಿಂದ ಮಾ. 21ರಂದು ಪ್ರದಾನ ಡಾ.ನಾಯರ್‌ಗೆ ವಂದನಾ ಪ್ರಶಸ್ತಿ

ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಮತ್ತು ರೋಟರ‍್ಯಾಕ್ಟ್ ಕ್ಲಬ್ ಮಂಗಳೂರು ಸಿಟಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಪ್ರಾಯೋಜಿಸುತ್ತಿರುವ ವಾರ್ಷಿಕ ರಾಜ್ಯ ಮಟ್ಟದ 'ವಂದನಾ ಪ್ರಶಸ್ತಿ – 2026'ಕ್ಕೆ ಗ್ರೀನ್ ಹೀರೋ ಆಫ್ ಇಂಡಿಯಾ ಖ್ಯಾತಿಯ ಪರಿಸರ ಪ್ರೇಮಿ ಡಾ. ಆರ್.ಕೆ. ನಾಯರ್ ಆಯ್ಕೆಯಾಗಿದ್ದಾರೆ ಎಂದು ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಡಾ. ದೇವದಾಸ್ ರೈ ತಿಳಿಸಿದರು.

ಕಾಸರಗೋಡು ಮೂಲದ ರಾಧಾಕೃಷ್ಣ ನಾಯರ್ ಅವರು ಭಾರತ ದೇಶದ ಹಸಿರು ನಾಯಕ ಎಂದು ಖ್ಯಾತಿ ಪಡೆದವರು. ಅವರು ದೇಶದ 12 ರಾಜ್ಯಗಳಲ್ಲಿ ಸಾವಿರಾರು ಎಕ್ರೆ ಬಂಜರು ಭೂಮಿಯನ್ನು ಜಪಾನ್ ರಾಷ್ಟ್ರ ಮಾದರಿಯ ಮಿಯಾವಾಕಿ ಅರಣ್ಯ ಪ್ರದೇಶವಾಗಿ ಪರಿವರ್ತಿಸಿದ್ದನ್ನು ಪರಿಗಣಿಸಿ ಪ್ರಶಸ್ತಿ ಪ್ರದಾನ ಮಾಡಲಾಗು ವುದು. ಈ ಪ್ರಶಸ್ತಿಯು ಪ್ರಶಸ್ತಿ ಫಲಕ, ಪ್ರಮಾಣ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ರೋಟರಿ ಸಂಸ್ಥೆಯ ವೃತ್ತಿಪರ ಸೇವೆ ಯೋಜನೆಯ ಅಂಗವಾಗಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ್ ರೈ ಕಟ್ಟ ಮಾತನಾಡಿ, ಮಾ.21ರಂದು ಸಂಜೆ 7.30ಕ್ಕೆ ನಗರದ ಹೊಟೇಲ್ ಸೀ ವ್ಯೂವ್‌ನ ಸಭಾಂಗಣದಲ್ಲಿ ಜರಗುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಪ್ರಶಸ್ತಿ ಪ್ರದಾನ ಮಾಡಲಿರುವರು. ಭಾಸ್ಕರ್ ರೈ ಕಟ್ಟ ಅಧ್ಯಕ್ಷತೆ ವಹಿಸಲಿರುವರು. ರೋಟರಿ ಜಿಲ್ಲಾ 3181ರ ಸಹಾಯಕ ಗರ್ವನರ್ ಡಾ. ಚನ್ನಗಿರಿ ಗೌಡ, ರೋಟರ‍್ಯಾಕ್ಟ್ ಜಿಲ್ಲಾ ಪ್ರತಿನಿಧಿ ಪ್ರಜ್ವಲ್ ಆರ್. ಅತಿಥಿಯಾಗಿ ಭಾಗವಹಿಸುವರು ಎಂದರು.

ಈ ವೇಳೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಲಾಯಿತು. ರೋಟರಿ ಮಂಗಳೂರು ಸೆಂಟ್ರಲ್ ಕಾರ್ಯ ದರ್ಶಿ ವಿಕಾಸ್ ಕೋಟ್ಯಾನ್, ನಿಯೋಜಿತ ಅಧ್ಯಕ್ಷ ರವೀಂದ್ರ, ಪ್ರಮೀಳಾ ಹೆಗ್ಡೆ, ರೋಟರ‍್ಯಾಕ್ಟ್ ಮಂಗಳೂರು ಸಿಟಿಯ ಅಧ್ಯಕ್ಷ ಅಕ್ಷಯ್ ಬಿ. ರೈ, ಮಾಧ್ಯಮ ಸಲಹೆಗಾರ ಎಂ.ವಿ. ಮಲ್ಯ ಉಪಸ್ಥಿತರಿದ್ದರು.

ಕೆದಂಬಾಡಿಯ ಒಣ ತ್ಯಾಜ್ಯ ಘಟಕದ ಸಂಪರ್ಕ | 105 ಮೀ. ಉದ್ದ, 5.5 ಮೀ. ಅಗಲದ ರಸ್ತೆ | ವೇಸ್ಟ್ ಪ್ಲಾಸ್ಟಿಕ್ ಬಳಕೆ

ಪ್ಲಾಸ್ಟಿಕ್ ತ್ಯಾಜ್ಯದಿಂದಲೇ ಡಾಮರು ರಸ್ತೆ ನಿರ್ಮಾಣ

ದಿಗಂತ ವಿಶೇಷ

ಪುತ್ತೂರು: ಕೆದಂಬಾಡಿಯಲ್ಲಿರುವ ಸಮಗ್ರ ಒಣತ್ಯಾಜ್ಯ ನಿರ್ವಹಣಾ ಘಟಕ (ಎಂಆರ್ ಎಫ್)ದಲ್ಲಿ ಸಂಗ್ರಹವಾದ ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯದಿಂದ ಡಾಮರು ರಸ್ತೆ ನಿರ್ಮಾಣ ಮಾಡುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪನೆಯಾಗಿದೆ. ಪ್ರಥಮವಾಗಿ ಘಟಕಕ್ಕೆ ಸಂಪರ್ಕಿಸುವ ರಸ್ತೆಯನ್ನೇ ಅಲ್ಲಿನ ಪ್ಲಾಸ್ಟಿಕ್ ತ್ಯಾಜ್ಯದಿಂದ ನಿರ್ಮಿಸಿ ಹೊಸ ವಿಧಾನ ಕಾರ್ಯಾರಂಭವಾಗಿದೆ.

ಕೆದಂಬಾಡಿ ಗ್ರಾಮದ ತಿಂಗಳಾಡಿ ಸಮೀಪದ ಬೋಳೋಡಿಯಲ್ಲಿ ನಿರ್ಮಾಣವಾದ ಒಣತ್ಯಾಜ್ಯ ಘಟಕಕ್ಕೆ ಪುತ್ತೂರು, ಸುಳ್ಯ ಹಾಗೂ ಕಡಬ ತಾಲೂಕಿನ ಸುಮಾರು 68 ಗ್ರಾಮ ಪಂಚಾಯತ್‌ಗಳಿಂದ ಸಂಗ್ರಹವಾದ ಒಣತ್ಯಾಜ್ಯವನ್ನು ಗ್ರಾಮ ಪಂಚಾಯತ್‌ನ ಸ್ವಚ್ಛ ಭಾರತ್ ವಾಹನದ ಮೂಲಕ ತರಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 4 ಘಟಕಗಳು ಕಾರ್ಯಾಚರಿಸುತ್ತಿದ್ದು, ಇದು ಪುತ್ತೂರು ತಾಲೂಕಿನ ಪ್ರಥಮ ಒಣತ್ಯಾಜ್ಯ ಸಂಗ್ರಹಣಾ ಘಟಕವಾಗಿದೆ. ಕೆದಂಬಾಡಿಯ ಘಟಕ 5 ಟನ್ ಸಾಮರ್ಥ್ಯದ ಘಟಕವಾಗಿದ್ದು, ಒಣತ್ಯಾಜ್ಯವನ್ನು ಸಮಗ್ರ ನಿರ್ವಹಣೆ ಮಾಡಲಾಗುತ್ತದೆ. ಪ್ರತೀ ದಿನ ಸಂಗ್ರಹವಾದ ಒಣ ತ್ಯಾಜ್ಯವನ್ನು ವಿವಿಧ ವಿಭಾಗಗಳಲ್ಲಿ ವಿಂಗಡಣೆ ಮಾಡಿ ಮರು ಉತ್ಪನ್ನಕ್ಕೆ ಬಳಸಲಾಗುತ್ತದೆ. ಅಲ್ಲದೆ ಉಳಿದ ತ್ಯಾಜ್ಯವನ್ನು ಸಿಮೆಂಟ್ ಕಾರ್ಖಾನೆಗಳಿಗೂ ಕಳುಹಿಸಲಾಗುತ್ತದೆ.

ಪ್ಲಾಸ್ಟಿಕ್ ತ್ಯಾಜ್ಯದಿಂದ ಡಾಮರು ರಸ್ತೆ

ಈ ಘಟಕದ ಸಂಪರ್ಕ ರಸ್ತೆಗೆ ತಾಲೂಕು ಪಂಚಾಯತ್‌ನಿಂದ ರೂ.15 ಲಕ್ಷ ಅನುದಾನ ನೀಡಲಾಗಿತ್ತು. ದ.ಕ. ಜಿಲ್ಲಾ ಪಂಚಾಯತ್ ಪ್ಲಾಸ್ಟಿಕ್ ತ್ಯಾಜ್ಯವನ್ನು ಬಳಕೆ ಮಾಡಿ ಡಾಮರು ರಸ್ತೆ ನಿರ್ಮಾಣ ಮಾಡಿ ಎಂದು ಶರತ್ತು ಹಾಕಿತ್ತು. ದ.ಕ.ಜಿಲ್ಲೆಯ ಉಜಿರೆ ಘಟಕ ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯದಿಂದ ರಸ್ತೆ ನಿರ್ಮಿಸಿ ಯಶಸ್ವಿಯಾಗಿದ್ದ ಬೆನ್ನಲ್ಲೇ ಕೆದಂಬಾಡಿ ತ್ಯಾಜ್ಯ ಘಟಕದ ಸಂಪರ್ಕ ರಸ್ತೆಗೆ ಅಲ್ಲಿನ ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಮಾಡಿ ರಸ್ತೆ ನಿರ್ಮಿಸಿ ಮಾದರಿ ಆಗಲಿ ಎಂದು ಜಿಲ್ಲಾ ಪಂಚಾಯತ್ ಸೂಚಿಸಿತ್ತು. ಇದಕ್ಕೆ ಪೂರಕವಾಗಿ ಯೋಜನೆ ಮಾಡಿ ಟೆಂಡರ್ ಆಗಿ ಇದೀಗ ಕೆಲಸ ಆರಂಭವಾಗಿದೆ. ರೂ.15 ಲಕ್ಷದಲ್ಲಿ 105 ಮೀಟರ್ ಉದ್ದ ಮತ್ತು 5.5 ಮೀಟರ್ ಅಗಲದ ಡಾಮರು ರಸ್ತೆ, ಮೋರಿ ನಿರ್ಮಾಣ, ಘಟಕದ ಸುತ್ತ ಕಂಪೌಂಡ್ ಹಾಗೂ ಘಟಕಕ್ಕೆ ನಾಮಫಲಕ ನಿರ್ಮಾಣವಾಗಲಿದೆ.



170 ಟನ್ ಪ್ಲಾಸ್ಟಿಕ್ ತ್ಯಾಜ್ಯ ಬಳಕೆ

ಗ್ರಾಮೀಣ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗುವ ಡಾಮರು ರಸ್ತೆಗೆ ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಮಾಡಿ ರಸ್ತೆ ನಿರ್ಮಿಸಬೇಕೆಂದು ಕಳೆದ ಬಾರಿ ರಾಜ್ಯ ಸರಕಾರ ಸೂಚನೆ ನೀಡಿತ್ತು. ರಾಜ್ಯದ ಎಲ್ಲಾ ಜಿಲ್ಲೆಗಳ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಯ ನೋಡಲ್ ಅಧಿಕಾರಿಗಳ ಮೂಲಕ ಉಜಿರೆಗೆ ಕರೆಸಿಕೊಂಡು ಅಲ್ಲಿನ ಘಟಕದ 100 ಮೀ. ರಸ್ತೆಯನ್ನು ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಮಾಡಿ ನಿರ್ಮಾಣ ಮಾಡಲಾಗಿತ್ತು. ನಮ್ಮ ಜಿಲ್ಲೆಯಲ್ಲಿ ಈಗಾಗಲೇ 4 ಘಟಕಗಳು ಕಾರ್ಯ ನಿರ್ವಹಿಸುತ್ತಿದೆ. ಕಳೆದ ವರ್ಷದಲ್ಲಿ ತಲಪ್ಪಾಡಿಯಿಂದ ಕುಂದಾಪುರದ ಸಾಸ್ತಾನವರೆಗಿನ ರಾ. ಹೆದ್ದಾರಿಯ ಸರ್ವಿಸ್ ರಸ್ತೆಯ ಡಾಮರೀಕರಣಕ್ಕೆ ಜಿಲ್ಲೆಯ 4 ಘಟಕಗಳಿಂದ ಸುಮಾರು 170 ಟನ್ ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಮಾಡಲಾಗಿದೆ. ಇದು ಒಂದು ಮೈಲಿಗಲ್ಲಾಗಿದೆ.

■ ನವೀನ್, ದ.ಕ. ಜಿಲ್ಲಾ ಸಂಯೋಜಕರು, ಸ್ವಚ್ಛ ಭಾರತ್ ಯೋಜನೆ

ಪರಿಹಾರ ಸಿಕ್ಕಿದೆ

ಕೆದಂಬಾಡಿಯಲ್ಲಿ ಎಂಆರ್ ಎಫ್ ಘಟಕ ನಿರ್ಮಾಣ ಮಾಡಿ ಪುತ್ತೂರು, ಸುಳ್ಯ, ಕಡಬ ತಾಲೂಕಿನ ಗ್ರಾಮ ಪಂಚಾಯತ್‌ಗಳಿಂದ ಒಣತ್ಯಾಜ್ಯ ಸಂಗ್ರಹ ಮಾಡಿ ಪ್ರತ್ಯೇಕಿಸಲಾಗುತ್ತಿದೆ. ಇಲ್ಲಿ 30ರಿಂದ 35ರಷ್ಟು ವಿವಿಧ ಬಗೆಯಲ್ಲಿ ಪ್ರತ್ಯೇಕಿಸಿ ಶೇ.40 ರಷ್ಟು ಸಿಗುತ್ತಿರುವ ತ್ಯಾಜ್ಯವನ್ನು ಬಾಗಲಕೋಟೆ, ಗುಲ್ಬರ್ಗ ಜಿಲ್ಲೆಗೆ ಕಳುಹಿಸಿ ಕೊಡುತ್ತಿದ್ದೇವೆ. ಉಳಿದ ಪ್ಲಾಸ್ಟಿಕ್ ತ್ಯಾಜ್ಯವನ್ನು ಇದೀಗ ಡಾಮರು ರಸ್ತೆಗೆ ಮಿಶ್ರಣ ಮಾಡಿ ರಸ್ತೆ ನಿರ್ಮಿಸಿದ್ದೇವೆ. ಇದರಿಂದ ಏಕಬಳಕೆ ಪ್ಲಾಸಿಕ್‌ಗೆ ಪರಿಹಾರ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಗ್ರಾಮೀಣ ರಸ್ತೆಗಳಿಗೂ ಅಳವಡಿಕೆ ಮಾಡಲಿದ್ದೇವೆ.

■ ನವೀನ್ ಭಂಡಾರಿ, ಇಒ, ತಾ.ಪಂ. ಪುತ್ತೂರು

ದ.ಕ. ಜಿಲ್ಲೆಯ ಎರಡನೇ ಘಟಕ

ಪುತ್ತೂರು ತಾ.ಪಂ. ಅನುದಾನದಲ್ಲಿ ಜಿಲ್ಲಾ ಪಂಚಾಯತ್ ಶರತ್ತು ಪ್ರಕಾರ ಪರಿಸರ ಸ್ನೇಹಿ ರಸ್ತೆ ನಿರ್ಮಾಣ ಮಾಡಲಾಗಿದೆ. ಕೆದಂಬಾಡಿ ಘಟಕದ ಪ್ಲಾಸ್ಟಿಕ್ ತ್ಯಾಜ್ಯದಿಂದಲೇ ಘಟಕಕ್ಕೆ ಡಾಮರು ರಸ್ತೆ ಮಾಡಲಾಗಿದೆ. ಡಾಮರು ಬಳಕೆಯ ಶೇ.8ರಷ್ಟನ್ನು ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಮಾಡಿ ಮಾಡ ಲಾಗುತ್ತದೆ. ಪ್ಲಾಸ್ಟಿಕ್ ಬಳಕೆ ರಸ್ತೆ ನಿರ್ಮಾಣ ಮಾಡಿರುವ ಕೆದಂಬಾಡಿ ಘಟಕ ದ.ಕ.ಜಿಲ್ಲೆಯ ಎರಡನೇ ಘಟಕವಾಗಿದೆ.

■ ಸುರೇಶ್, ಇಇ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಪ್ರಕ್ರಿಯೆ

ಇಲ್ಲಿನ ಘಟಕದಲ್ಲಿ ಶೇ.60ರಷ್ಟು ಪ್ಲಾಸ್ಟಿಕ್ ತ್ಯಾಜ್ಯಗಳ ಸಂಗ್ರಹವಾಗುತ್ತಿದೆ. ಸಂಗ್ರಹವಾದ ಏಕ ಬಳಕೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ನಿರ್ವಹಣೆ ಮಾಡಿ ಸಂಗ್ರಹಿಸಿ, ಸ್ವಚ್ಛಗೊಳಿಸಿ, ಸಣ್ಣಸಣ್ಣತುಂಡುಗಳನ್ನಾಗಿ ಕತ್ತರಿಸಲಾಗುತ್ತದೆ. ಬಳಿಕ ಎಂಆರ್‌ಆಫ್ ಘಟಕದಿಂದ ಕುರಿಯದಲ್ಲಿರುವ ಡಾಮರು ಮಿಶ್ರಣ ಘಟಕಕ್ಕೆ ಈ ಕಡಿಮೆ ಸಾಂದ್ರತೆಯ ಪಾಲಿಥಿಲೀನ್ ತ್ಯಾಜ್ಯವನ್ನು ಶೆಡ್ ಮಾಡಿ ಪೂರೈಕೆ ಮಾಡಲಾಗಿದೆ. ಇಲ್ಲಿ ಸಾಧಾರಣ 100 ಕೆ.ಜಿ. ಡಾಮರು ಮಿಶ್ರಣಕ್ಕೆ ಶೇ.8ರಷ್ಟು ಪ್ಲಾಸ್ಟಿಕ್ ತ್ಯಾಜ್ಯ ಬಳಕೆ ಮಾಡಲಾಗಿದೆ. ಪ್ಲಾಸ್ಟಿಕ್ ತ್ಯಾಜ್ಯ(ಎಲ್ ಡಿಪಿಇ ವೇಸ್ಟ್) ಜಲ್ಲಿ ಹಾಗೂ ಡಾಮರಿನೊಂದಿಗೆ ಮಿಶ್ರಣ ಘಟಕದೊಳಗೆ ಹೋಗಿ ಹೀಟರ್‌ನಲ್ಲಿ 160 ಡಿಗ್ರಿ ತಾಪಮಾನದಲ್ಲಿ ಮಿಶ್ರಣವಾಗಿ ಹೊರಗೆ ಬರುತ್ತದೆ. ಈ ಮಿಶ್ರಣವನ್ನು ರಸ್ತೆ ನಿರ್ಮಾಣಕ್ಕೆ ಬಳಸಲಾಗಿದೆ. ಇಲ್ಲಿನ ಒಟ್ಟು 105 ಮೀ. ಉದ್ದದ ರಸ್ತೆಯನ್ನು 100ರಿಂದ 120 ಕೆ.ಜಿ. ವೇಸ್ಟ್ ಪ್ಲಾಸ್ಟಿಕ್ ಬಳಕೆ ಮಾಡಲಾಗಿದೆ. ಮಿಶ್ರಣವು ಹೊರಗೆ ಬಂದು ಲಾರಿಗೆ ಲೋಡ್ ಆಗುವಾಗ 140 ಡಿಗ್ರಿ ಸೆಲ್ಸಿಯಸ್ ಹಾಗೂ ರಸ್ತೆಗೆ ಬಳಕೆ ಮಾಡುವಾಗ ಕನಿಷ್ಠ 110 ಡಿಗ್ರಿ ಸೆಲ್ಸಿಯಸ್ ಇರುತ್ತದೆ.

ದೀರ್ಘಬಾಳಿಕೆಯ ಪ್ಲಾಸ್ಟಿಕ್ ರಸ್ತೆ

ಪ್ಲಾಸ್ಟಿಕ್‌ತ್ಯಾಜ್ಯದಿಂದಡಾಮರುರಸ್ತೆನಿರ್ಮಾಣವು ಸುಸ್ಥಿರ ಪರಿಸರ ಸ್ನೇಹಿ ತಂತ್ರಜ್ಞಾನವಾಗಿದೆ. ಸಾಮಾನ್ಯ ಡಾಮರು ರಸ್ತೆಗಳಿಗಿಂತ ಈ ರಸ್ತೆ ಹೆಚ್ಚಿನ ಬಲ ಮತ್ತು ದೀರ್ಘಕಾಲ ಬಾಳಿಕೆ ಬರುತ್ತವೆ ಮತ್ತು ಪ್ಲಾಸ್ಟಿಕ್ ಮಾಲಿನ್ಯವನ್ನು ಕಡಿಮೆ ಮಾಡುತ್ತದೆ. ಈ ವಿಧಾನದಲ್ಲಿ ಕರಗಿದ ಪ್ಲಾಸ್ಟಿಕ್‌ನ್ನು ಡಾಮರಿನೊಂದಿಗೆ ಬೆರೆಸಿ, ರಸ್ತೆಯ ಸಾಮರ್ಥ್ಯವನ್ನು ಹೆಚ್ಚಿಸಿ, ನೀರಿನಿಂದ ಆಗುವ ಹಾನಿಯನ್ನು ತಡೆಯಲಾಗುತ್ತದೆ. ಈ ರಸ್ತೆಗಳು ನೀರು ನುಗ್ಗದಂತೆ ತಡೆದು, ಗುಂಡಿ ಬೀಳುವುದನ್ನು ತಪ್ಪಿಸುತ್ತವೆ. ಪ್ಲಾಸ್ಟಿಕ್ ಬಳಕೆಯಿಂದ ಡಾಮರಿನ ಆವಶ್ಯಕತೆ ಕಡಿಮೆಯಾಗಿ, ಪ್ರತಿ ಕಿಲೋಮೀಟರ್ ಗೆ ಸುಮಾರು 1.5 ಲಕ್ಷದವರೆಗೆ ಉಳಿತಾಯ ವಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಕೊಡಗಿನ ಕ್ರೀಡಾಪಟುಗಳ ಸಾಧನೆ

ಮಡಿಕೇರಿ: ಪಂಜಾಬ್‌ನ ಬಟಿಂಡಾದ ಗುರುಕಾಶಿ ವಿಶ್ವವಿದ್ಯಾಲಯ ಕ್ರೀಡಾಂಗಣದಲ್ಲಿ ಮಾರ್ಚ್ 14ರಿಂದ 16ವರೆಗೆ ನಡೆದ 45ನೇ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕೊಡಗು ಜಿಲ್ಲೆಯ ಕ್ರೀಡಾಪಟುಗಳು ಅದ್ಭುತ ಸಾಧನೆ ಮಾಡಿದ್ದಾರೆ.

ಬಿಟ್ಟಂಗಾಲ ನಾಂಗಾಲ ಮೂಲದ ಚೇಮಿರ ಸೀತಮ್ಮ (ಪ್ರೇಮಾ) ಭಾರದ ಗುಂಡು ಎಸೆತದಲ್ಲಿ ಪ್ರಥಮ, ತಟ್ಟೆ ಎಸತದಲ್ಲಿ ದ್ವಿತೀಯ, ಸರಪಳಿ ಗುಂಡು ಎಸೆತದಲ್ಲಿ ತೃತೀಯ ಬಹುಮಾನ ಪಡೆದುಕೊಂಡರೆ, ಮೋರಿರ ಶಾಂತಿ ಅವರು ಭಾರದ ಗುಂಡು ಎಸೆತದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಅರಮಣಮಾಡ ಮಮತಾ ಭಾರದ ಗುಂಡು ಎಸೆತದಲ್ಲಿ ಪ್ರಥಮ ಭರ್ಜಿ ಎಸೆತದಲ್ಲಿ ಪ್ರಥಮ, ಸರಪಳಿ ಗುಂಡು ಎಸೆತದಲ್ಲಿ ತೃತೀಯ ಸ್ಥಾನ ಪಡೆದರೆ, ಐಮುಡಿಯಂಡ ಶೈಲಾ ಇವರು 200ಮೀ ಅಡೆತಡೆ ಓಟದಲ್ಲಿ ಪ್ರಥಮ ಸ್ಥಾನ, 100ಮೀ ಅಡೆ ತಡೆ ಓಟದ ಓಟದಲ್ಲಿ ಪ್ರಥಮ ಹಾಗೂ 1500 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.



ಆಶಾ ಅನಂತ್ ಕುಮಾರ್ ಅವರು ಭಾರದ ಗುಂಡು ಎಸೆತದಲ್ಲಿ ಪ್ರಥಮ, ಚಕ್ರ ಎಸೆತದಲ್ಲಿ ದ್ವಿತೀಯ, ಸರಪಳಿ ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದು, ಅಚ್ಚಪಂಡ ಟೀನಾ ಸೋಮಣ್ಣ ಅವರು ಉದ್ದ ಜಿಗಿತದಲ್ಲಿ ಪ್ರಥಮ, ಪಟ್ಟಚೆರುವಂಡ ಗಗನ್ ಮೇದಪ್ಪ ಅವರು ಉದ್ದ ಜಿಗಿತದಲ್ಲಿ ಪ್ರಥಮ, 200ಮೀ ಓಟದಲ್ಲಿ ದ್ವಿತೀಯ, 100ಮೀ ಅಡೆ ತಡೆ ಓಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಘೋಷಣೆ

ಮಂಜೇಶ್ವರದ ಸಮಗ್ರ ಅಭಿವೃದ್ಧಿ ಬಿಜೆಪಿ ಪಕ್ಷದಿಂದ ಮಾತ್ರ ಸಾಧ್ಯ

ಮಂಜೇಶ್ವರ: ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಘೋಷಣೆಯಾದ ಬಳಿಕ ಕೆ.ಸುರೇಂದ್ರನ್ ಮಂಜೇಶ್ವರ ತೂಮಿನಾಡಿನಲ್ಲಿ ಬಿಜೆಪಿ ಮಂಜೇಶ್ವರ ಪಂಚಾಯತ್ ಸಮಿತಿ ವತಿಯಿಂದ ಭರ್ಜರಿ ಸ್ವಾಗತ ನೀಡಲಾಯಿತು. ಹುಲಿವೇಷದ ತಾಸೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಸಭೆಯನ್ನು ಉದ್ದೇಶಿಸಿ ಕೆ.ಸುರೇಂದ್ರನ್ ಮಾತನಾಡಿ, ಮಂಜೇಶ್ವರದ ಸಮಗ್ರ ಅಭಿವೃದ್ಧಿ ಬಿಜೆಪಿಯಿಂದ ಮಾತ್ರ ಸಾಧ್ಯ. ಕಳೆದ 40ವರ್ಷಗಳಿಂದ ಮಂಜೇಶ್ವರದಲ್ಲಿ ಗೆದ್ದವರು ಮಂಜೇಶ್ವರವನ್ನು ಅಭಿವೃದ್ಧಿಪಡಿಸಿಲ್ಲ.

ಕೇಂದ್ರದಲ್ಲಿ ಮೋದಿ ಬಿಜೆಪಿ ಆಡಳಿತ ಇರುವಾಗ ಮಂಜೇಶ್ವರದಲ್ಲಿ ಬಿಜೆಪಿ ಶಾಸಕರಿದ್ದರೆ ಅದು ಮಂಜೇಶ್ವರದ ಸಮಗ್ರ ಅಭಿವೃದ್ಧಿಗೆ ಬೇಕಾದ ಆಧುನಿಕ, ಉದ್ಯೋಗ ಆಧಾರಿತ, ಸ್ಥಳೀಯ ಕನ್ನಡ ಭಾಷಾ ಮಾತನಾಡುವ ಜನರ ಬೇಡಿಕೆಗಳಿಕೆ ಸ್ಪಂದಿಸುವ ಕಾರ್ಯ ಬಿಜೆಪಿ ಮಾಡಲಿದೆ ಮಂಜೇಶ್ವರದ ಸಮಗ್ರ ಅಭಿವೃದ್ಧಿಗೆ ಬೇಕಾದ ಯೋಜನೆಯನ್ನು ಬಿಜೆಪಿ ಜನರ ಮುಂದೆ ಇಡಲಿದೆ ಎಂದು ಅವರು ಹೇಳಿದರು.



ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ. ಮಾತನಾಡಿ, ಶಾಸಕ ಎ.ಕೆ.ಎಂ.ಅಶ್ರಫ್ ಅವರ ಬೇಜವಾಬ್ದಾರಿತನ, ಕಳೆದ 5 ವರ್ಷ ಮಂಜೇಶ್ವರಕ್ಕೆ ತಟ್ಟಿದ ಶಾಪ ಮೋಕ್ಷಕ್ಕೆ ಬಿಜೆಪಿಗೆ ಮತ ನೀಡಿ ಎಂದರು.

ಮುಖಂಡರಾದ ಯಾದವ ಬಡಾಜೆ ಪದ್ಮನಾಭ ಕಡಪರ, ವಕೀಲ ನವೀನ್ ರಾಜ್, ಸುರೇಶ್ ಶೆಟ್ಟಿ, ಕಾರ್ತಿಕ್ ಶೆಟ್ಟಿ, ಪವನ್ ಅಂಜರೆ, ಆಶಾಲತಾ, ರಾಜೇಶ್ ತೂಮಿನಾಡು, ಸಂತೋಷ್ ಅಡ್ಕ ಮೊದಲಾದವರು ಉಪಸ್ಥಿತರಿದ್ದರು.

ಸಮಾಜಕ್ಕೆ ದುಡಿದ ಇವರ ನೋವು ಪರಿಹರಿಸುವ ಕೆಲಸ ಆಗಬೇಕಾಗಿದೆ...

ಉಪ್ಪಿನಂಗಡಿ: ಇವರು ಪ್ರಸಾದ್ ಕೆ.ಪಿ., ಗೋಳಿತೊಟ್ಟು ಗ್ರಾಮದ ಸುಲ್ತಾಜೆ ಮನೆ ನಿವಾಸಿ. ತನ್ನ ತಾರುಣ್ಯದಿಂದ ಹಿಡಿದು ನಿನ್ನೆ ಮೊನ್ನೆ ತನಕ ಸಮಾಜಕ್ಕಾಗಿ ದುಡಿದವರು. ಶ್ರಮಿಸಿದವರು. ಒಂದರ್ಥದಲ್ಲಿ ಸಮಾಜಕ್ಕಾಗಿ ಸಮರ್ಪಿಸಲ್ಪಟ್ಟವರು. ಅಂತವರು ಇಂದು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಸಮಾಜದ ಹಿತ ಚಿಂತನೆಯಿಂದ ಶ್ರಮಿಸಿದವರು ಸಂಕಷ್ಟಕ್ಕೆ ಸಿಲುಕಿದಾಗ ಒಂಟಿಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಾಗರಿಕ ಸಮಾಜದ್ದಾಗಿದೆ.

ಅದು 1999ನೇ ಇಸವಿ. ಸಮಾಜದ ಕೆಲಸಕ್ಕೆಂದೇ ತೊಡಗಿದ್ದ ಸಮಯದಲ್ಲಿ ಉಂಟಾದ ವಾಹನ ಅಪಘಾತದಲ್ಲಿ ಜರ್ಝರಿತವಾಗಿ ಗಾಯಗೊಂಡಿದ್ದರು. ಬದುಕುವುದೇಇಲ್ಲಎಂಬಂತಿದ್ದ ಸ್ಥಿತಿಯಲ್ಲಿ ಪವಾಡವೆಂಬಂತೆ ಬದುಕಿ ಉಳಿದರು. ಈ ಮಧ್ಯೆ ಅಪಘಾತದಿಂದ ಹಾನಿಗೊಳಗಾದ ಅವರ ಸಣ್ಣ ಕರಳನ್ನು ಕತ್ತರಿಸಬೇಕಾಗಿ ಬಂದು, ದಿನ ನಿತ್ಯ ಎಚ್ಚರಿಕೆಯಿಂದ ಜೀವನ ನಡೆಸುವ ಅನಿವಾರ್ಯತೆ ಅವರದ್ದಾಯಿತು.

ಆ ಬಳಿಕ ಆರೋಗ್ಯದಲ್ಲಿ ಚೇತರಿಕೆ ಕಂಡು ಮತ್ತೆ ಸ್ವ ಕಾರ್ಯದ ಜೊತೆಗೆ ಸಮಾಜದ ಕಾರ್ಯವನ್ನು ನಡೆಸಲು ಪ್ರಾರಂಭಿಸಿದಾಗ ಮತ್ತೊಂದು ಅಪಘಾತ ಅವರಿಗೆ ಎದುರಾಯಿತು. ಇದನ್ನೂ ಎದುರಿಸಿ ಬದುಕು ನಡೆಸಬೇಕೆಂಬ ಹಂಬಲದೊಂದಿಗೆ ಹೈನುಗಾರಿಕೆಗೆ ಮುಂದಾದಾಗ, ಹೈನುಗಾರಿಕೆಯಲ್ಲಿ ಕುಳಿತು ಕೆಲಸ ಮಾಡುವುದರಿಂದ ಹೊಟ್ಟೆಯೊಳಗಿನ ಸಣ್ಣ ಕರುಳಿಗೆ ಒತ್ತಡವುಂಟಾಗಿ ಆರೋಗ್ಯ ಸಮಸ್ಯೆ ಕಾಡಲಾರಂಭಿಸಿತ್ತು. ವೈದ್ಯರ ಸೂಚನೆ ಮೇರೆಗೆ ಜಾನುವಾರುಗಳನ್ನು ಮಾರಾಟ ಮಾಡಿ ಹೈನುಗಾರಿಕೆಯನ್ನು ಸ್ಥಗಿತಗೊಳಿಸಲಾಯಿತು.



ಸಂಪರ್ಕಿಸಿ

ಪ್ರಸಾದ್ ಅವರ ಚಿಕಿತ್ಸೆಗೆ ಆರ್ಥಿಕ ಸಹಾಯ ನೀಡಬಯಸುವವರು ಅವರ ಪತ್ನಿ ಹರಿಣಾಕ್ಷಿ ಅವರ ಬ್ಯಾಂಕ್ ಖಾತೆಯನ್ನು ಬಳಸಬಹುದಾಗಿದೆ. ಖಾತೆಯ ವಿವರ: ಯೂನಿಯನ್ ಬ್ಯಾಂಕ್ ಆಫ್ ಇಂಡಿಯ, ನೆಲ್ಯಾಡಿ ಶಾಖೆ ಖಾತೆದಾರರ ಹೆಸರು ಹರಿಣಾಕ್ಷಿ, ಖಾತೆ ಸಂಖ್ಯೆ: 520101034450471, ಐಎಫ್ ಎಸ್‌ಸಿ ಕೋಡ್: ಯುಬಿಐಎನ್ 0907278. ಗೂಗಲ್ ಪೇ ಯಾ ಫೋನ್ ಪೇ ಗಾಗಿ 9632663637 ನಂಬ್ರವನ್ನು ಸಂಪರ್ಕಿಸಬಹುದಾಗಿದೆ.

ಜೀವನ ನಿರ್ವಹಣೆಗಾಗಿ ಎಣ್ಣೆ ಗಿರಣಿಯನ್ನು ಪ್ರಾರಂಭಿಸಲಾಗಿದೆಯಾದರೂ ಈ ಸ್ಪರ್ಧಾತ್ಮಕ ಯುಗದಲ್ಲಿ ಅದು ಅಲ್ಲಿಂದಲ್ಲಿಗೆ ಎಂಬಂತಿದೆ.

ಈ ಮಧ್ಯೆ ಕತ್ತರಿಸಲ್ಪಟ್ಟಿದ್ದ ಅವರ ಸಣ್ಣ ಕರುಳಿನಲ್ಲಿ ಬಾವು ಕಾಣಿಸಿಕೊಂಡು ಆರೋಗ್ಯ ಸಮಸ್ಯೆ ಉಲ್ಬಣಿಸಿದಾಗ ವೈದ್ಯರು ಶಸ್ತ್ರಚಿಕಿತ್ಸೆಯನ್ನು ಮಾಡುವ ಅನಿವಾರ್ಯತೆಯನ್ನು ಮುಂದಿಡುತ್ತಾರೆ. ಆರ್ಥಿಕ ಸಮಸ್ಯೆಯಿಂದ ಆಸ್ಪತ್ರೆಗೆ ಹೋಗುವುದನ್ನು ವಿಳಂಬಿಸಿದಾಗ ಪರಿಚಯಸ್ಥರೊಬ್ಬರು ಸಹಾಯ ಹಸ್ತ ನೀಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿಸಲು ಸಹಕರಿಸುತ್ತಾರೆ. ಸಣ್ಣ ಕರುಳಿನ ಎರಡು ಭಾಗದಲ್ಲಿ ಸಮಸ್ಯೆ ಕಾಣಿಸಿದ ಕಾರಣಕ್ಕೆ ಒಂದು ಭಾಗವನ್ನು ದೇಹದಿಂದ ಹೊರಗಿರಿಸಿ, ಇನ್ನೊಂದು ಭಾಗವನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿದ್ದಾರೆ. ಅದು ಸಂಪೂರ್ಣ ಗುಣಮುಖವಾದರೆ ದೇಹದಿಂದ ಹೊರಗಿರಿಸಿದ ಕರುಳನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿ ಮತ್ತೆ ದೇಹದೊಳಗಿರಿಸುವ ಪ್ರಕ್ರಿಯೆ ನಡೆಯಬೇಕಾಗಿದೆ.

ಒಂದೆಡೆ ಪತ್ನಿ, ಮೂವರು ಮಕ್ಕಳನ್ನು ಸಾಕಿ ಸಲಹುವ ಅನಿವಾರ್ಯತೆ, ಇನ್ನೊಂದೆಡೆ ತನ್ನ ಅನಾರೋಗ್ಯಕ್ಕೆ ತಗಲುವ ವೆಚ್ಚವನ್ನು ಭರಿಸುವ ಬಗ್ಗೆ ಕಾಡುವ ಅಸಹಾಯಕತೆ ಅವರನ್ನು ಅತಂತ್ರಗೊಳಿಸಿದೆ. ಸಮಾಜದ ಸಂಕಷ್ಟಕ್ಕೆ ಕೈ ಎತ್ತಿ ಸಹಾಯ ಹಸ್ತ ನೀಡುತ್ತಿದ್ದ ಅವರು, ಇಂದು ತನ್ನ ಸಮಸ್ಯೆಗೆ ಸಹಾಯ ಯಾಚಿಸಲಾಗದ ಸೂಕ್ಷ್ಮತೆಯಲ್ಲಿದ್ದಾರೆ. ಇಂತಹ ಸಂಕಷ್ಟಮಯ ಸಂದರ್ಭದಲ್ಲಿ ಸಮಾಜದ ಬಂಧುಗಳು ಅವರಿಗೆ ತಮ್ಮಿಂದಾದ ಬಿಂದು ಸಹಾಯವನ್ನು ನೀಡಿ ಅವರ ಬಾಳಿಗೆ ಬೆಳಕಾಗಬೇಕಾಗಿದೆ. ಸಮಾಜದ ಹಿತ ಕಾಯುವ ಮಂದಿ ವಿಧಿ ಲೀಲೆಗೆ ಸಿಲುಕಿ ಸಂಕಷ್ಟಕ್ಕೆ ತುತ್ತಾದಾಗ ಅವರನ್ನು ಒಂಟಿಯಾಗಿಸಬಾರದೆಂಬ ಆಶಯ ಈ ವರದಿಯದ್ದಾಗಿದೆ.

ಕಿರುಸುದ್ದಿ

ಬೆಂಗಳೂರು 10ಕೆಯಲ್ಲಿ ಖ್ಯಾತ ಓಟಗಾರರು ಭಾಗಿ

ಬೆಂಗಳೂರು: ಪುರುಷರ ವಿಭಾಗದಲ್ಲಿ ಉಗಾಂಡಾದ ಹಾರ್ಬರ್ಟ್ ಕಿಬೆಟ್ ಅಗ್ರಸ್ಥಾನದಲ್ಲಿದ್ದರೆ, ಸಾರಾ ಚೆಲಂಗಟ್ ಬೆಂಗಳೂರಿನಲ್ಲಿ ಸತತವಾಗಿ ಪ್ರಶಸ್ತಿ ಗೆಲ್ಲುವತ್ತ ಕಣ್ಣಿಟ್ಟಿದ್ದಾರೆ. ಏಪ್ರಿಲ್ 26 ರಂದು ನಡೆಯಲಿರುವ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿಗಾಗಿ ವಿಶ್ವ ದರ್ಜೆಯ ಆಟಗಾರರು ಭಾಗವಹಿಸುವುದಾಗಿ ತಿಳಿಸಿದ್ದಾರೆ. ಪುರುಷರ ವಿಭಾಗದಲ್ಲಿ ಉಗಾಂಡಾದ ಖ್ಯಾತ ರನ್ನರ್ ಹಾರ್ಬರ್ಟ್ ಕಿಬೆಟ್ ಭಾಗವಹಿಸುವಿಕೆ ಖಚಿತ ಪಡಿಸಿದ್ದಾರೆ. ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲಿಸ್ಟ್(ರನ್ನರ್ ಅಪ್) ಆಗಿದ್ದ 20 ವರ್ಷದ ಕಿಬೆಟ್, ವರ್ಷದ ಆರಂಭದಲ್ಲಿ 10ಕೆಯಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡರು. ಸ್ಪ್ಯಾನಿಷ್ ಪಟ್ಟಣವಾದ ಕ್ಯಾಸ್ಟೆಲ್ಲನ್‌ನಲ್ಲಿ ವಿಶ್ವದ ಪ್ರಮುಖರೊಂದಿಗೆ 26:39 ನಿಮಿಷಗಳಲ್ಲಿ ಜಯಗಳಿಸಿದ್ದರು. ಈ ವರ್ಷ 27 ನಿಮಿಷಗಳ ಅವಧಿಗೆ ಪ್ರವೇಶಿಸಿದ ಐವರು ಕ್ರೀಡಾಪಟುಗಳಲ್ಲಿ ಕಿಬೆಟ್ ಸಹ ಒಬ್ಬರಾಗಿದ್ದರೆ, ಬೆಂಗಳೂರು ಕೂಟ ದಾಖಲೆಗಿಂತ ವೇಗವಾಗಿ ವೈಯಕ್ತಿಕ ಅತ್ಯುತ್ತಮ ಪ್ರದರ್ಶನ ನೀಡಿದ ಒಟ್ಟು 11 ಕ್ರೀಡಾಪಟುಗಳು ಸಹ ಕಣದಲ್ಲಿದ್ದಾರೆ. ಭಾರತದಲ್ಲಿ ಇದು ನನ್ನ ಮೊದಲ ಸ್ಪರ್ಧೆಯಾಗಿದೆ ಮತ್ತು ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನಲ್ಲಿ, ನಾನು ಅದ್ಭುತ ಫಾರ್ಮ್‌ನಲ್ಲಿರುವುದರಿಂದ ನಾನು ಅದರಿಂದ ಹೆಚ್ಚಿನದನ್ನು ಬಯಸುತ್ತೇನೆ ಎಂದು ಹಾರ್ಬರ್ಟ್ ಕಿಬೆಟ್ ಹೇಳಿದರು.

ಇನ್ನುಳಿದಂತೆ ಕಿಬೆಟ್ ಇಥಿಯೋಪಿಯನ್ ಖೈರಿ ಬೆಜಿಗಾ (26:51) ಮತ್ತು ಇಬ್ಬರು ಪ್ಲಾಟಿನಂ ಮಟ್ಟದ ಓಟಗಾರರಾದ ಬುರುಂಡಿಯ ರೊಡ್ರಿಗ್ ಕ್ವಿಜೆರಾ ಮತ್ತು ಇಥಿಯೋಪಿಯಾದ ಗೆಮೆಚು ಡಿಡಾ ಅವರಿಂದ ಕಠಿಣ ಸವಾಲನ್ನು ಎದುರಿಸಲಿದ್ದಾರೆ. ಪ್ರಬಲ ಕೀನ್ಯಾದ ಉಪಸ್ಥಿತಿಯ ನಡುವೆ ಸತತವಾಗಿ ಪ್ರಶಸ್ತಿಗಳಿಗಾಗಿ ಚೆಲಂಗಟ್ ಸಜ್ಜಾಗಿದ್ದಾರೆ. ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ತನ್ನ ಪ್ರಶಸ್ತಿಯನ್ನು ರಕ್ಷಿಸಿಕೊಳ್ಳಲು ಮರಳಲಿದ್ದಾರೆ.

ಐಸಿಸಿ ರ್‍ಯಾಂಕಿಂಗ್: 7ನೇ ಸ್ಥಾನಕ್ಕೆ ಕೌರ್

ಮುಂಬೈ: ಭಾರತದ ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಏಳನೇ ಸ್ಥಾನಕ್ಕೆ ಜಿಗಿದಿದ್ದಾರೆ. ಮಂಗಳವಾರ ಬಿಡುಗಡೆಯಾದ ಪಟ್ಟಿಯಲ್ಲಿ ಮಂಧಾನ ಅವರೇ ಮೊದಲ ಸ್ಥಾನದಲ್ಲಿ ಮುಂದುವರಿದಿರುವುದು ವಿಶೇಷ. ಭಾರತ ತಂಡದ ಪ್ರಮುಖ ಆಟಗಾರರಲ್ಲಿ ಜಮಿಮಾ ರಾಡ್ರಿಗ್ಸ್ 12ನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ನ್ಯೂಜಿಲೆಂಡ್‌ನ ಸೋಫಿ ಡಿವೈನ್ 11ನೇ ಸ್ಥಾನಕ್ಕೆ ಇಳಿದಿದ್ದಾರೆ. ವಿಶ್ವಕಪ್ ಸೆಮಿಫೈನಲ್ ಸೇರಿದಂತೆ ಪ್ರಮುಖ ಪಂದ್ಯಗಳಲ್ಲಿ ಆಶಾಕಿರಣವಾಗಿ ಗೆಲುವಿನಲ್ಲಿ ಮಿಂಚಿರುವ ಕೌರ್ ಇತ್ತೀಚಿಗೆ ನಡೆದ ಆಸ್ಟ್ರೇಲಿಯಾ ಸರಣಿಯಲ್ಲೂ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಪರಿಣಾಮ ಅವರ ಸ್ಥಾನ ಏರಿಕೆಯಾಗಿದೆ.

ಸಂಸ್ಥೆಯ ಕ್ರಿಕೆಟಿಗರಿಗೆ ಕ್ರಿಕೆಟ್ ಆಸ್ಟ್ರೇಲಿಯಾ ಖಡಕ್ ಸೂಚನೆ

ಪೇಶಾವರಕ್ಕೆ ಕಾಲಿಡಬೇಡಿ: ಆಟಗಾರರಿಗೆ ಸಿಎ ಎಚ್ಚರಿಕೆ

ಪರ್ತ್: ಅಫ್ಘಾನಿಸ್ತಾನ ಮೇಲೆ ದಾಳಿ ನಡೆಸಿದ ನಂತರ ಪಾಕಿಸ್ತಾನದಲ್ಲಿ ಉದ್ವೇಗ ಸೃಷ್ಟಿಯಾಗಿರುವ ಬೆನ್ನಲ್ಲೇ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆ ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಭಾಗವಹಿಸಲಿರುವ ಆಸೀಸ್ ಆಟಗಾರರಿಗೆ ಪೇಶಾವರ ಅಂತಹ ಸೂಕ್ಷ್ಮ ಸ್ಥಳಗಳಿಗೆ ಪ್ರಯಾಣಿಸಬಾರದೆಂದು ಎಚ್ಚರಿಕೆ ನೀಡಿದೆ.



ಅಫ್ಘಾನಿಸ್ತಾನದ ಕಾಬುಲಿನಲ್ಲಿ ನಡೆದ ಪಾಕಿಸ್ತಾನ ದಾಳಿಯ ನಂತರ ಪಾಕ್ ಹಾಗೂ ಅಫ್ಘಾನ್ ನಡುವಿನ ಪರಿಸ್ಥಿತಿ ಉದ್ವೇಗಕ್ಕೇರಿದ ನಂತರ ಇಂಡಿಯನ್ ಪ್ರೀಮಿಯರ್ ಲೀಗ್‌ಗೂ ಮುನ್ನವೇ ಶುರುವಾಗಬೇಕಿದ್ದ ಪಾಕಿಸ್ತಾನ ಸೂಪರ್ ಲೀಗ್ ಮುಂದೂಡುವ ಅನಿವಾರ್ಯತೆಗೆ ಸಿಲುಕಿಕೊಂಡಂತಿದೆ. ಈ ನಡುವೆ ಆಸ್ಟ್ರೇಲಿಯಾ ಆಟಗಾರರನ್ನು ಯಾವುದೇ ಕಾರಣಕ್ಕೂ ಪಾಕ್‌ನ ಪೇಶಾವರ ಹಾಗೂ ಆಯ್ದ ಸೂಕ್ಷ್ಮ ಪ್ರದೇಶಗಳಿಗೆ ತೆರಳಬೇಡಿ ಎಂಬ ಎಚ್ಚರಿಕೆ ನೀಡಿದೆ. ಇರಾನ್ ಹಾಗೂ ಇಸ್ರೇಲಿನ ನಡುವೆ ನಡೆಯುತ್ತಿರುವ ಯುದ್ಧದ ಬೆನ್ನಲ್ಲೇ ಮೊದಲೇ ಆಟಗಾರರ ಆಗಮನದ ಹಿನ್ನಡೆ ಅನುಭವಿಸಿದ್ದ ಪಿಎಸ್‌ಎಲ್‌ಗೆ ಇದೀಗ ಮತ್ತೊಂದು ಹಿನ್ನಡೆಯಾಗಿದೆ. ಟೂರ್ನಿಗಳಲ್ಲಿ ಸೋತು ಶರಣಾಗಿ ಭಾರೀ ಆರ್ಥಿಕ ನಷ್ಟಗಳನ್ನು ಎದುರಿಸಿರುವ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆಗೆ ಮತ್ತೊಂದು ಬಲವಾದ ಪೆಟ್ಟು ಬಿದ್ದಿದೆ.

ಆತಂಕ ಮೊದಲ ಬಾರಿಯಲ್ಲ: ಕಳೆದ ಬಾರಿ ಪಾಕಿಸ್ತಾನ ಭಾರತದೊಂದಿಗೆ ಉದ್ವೇಗ ಹೆಚ್ಚಿಸಿಕೊಂಡಿತ್ತು. ಈ ವೇಳೆ ಪಿಎಸ್‌ಎಲ್‌ಗೆ ತೆರಳಿದ್ದ ಆಟಗಾರರು ಅಲ್ಲಿನ ಪರಿಸ್ಥಿತಿ ನೋಡಿ ಗಾಬರಿಗೊಂಡಿದ್ದರು. ಟಾಮ್ ಕರ್ರನ್, ರಿಶಾದ್ ಪಾಕ್‌ನಲ್ಲಿ ಅಸುರಕ್ಷತೆಯ ಭಾವ ವ್ಯಕ್ತ ಪಡಿಸಿ ಕಣ್ಣೀರಿಟ್ಟಿದ್ದರು. ಮತ್ತೊಮ್ಮೆ ಪಾಕಿಸ್ತಾನಕ್ಕೆ ಬರಲಾರೆ ಎಂಬ ನಿರ್ಧಾರವನ್ನೂ ಮಾಡಿದ್ದರು. ಇದಲ್ಲದೆ, 2009ರಲ್ಲಿ ಸರಣಿ ಆಡುವುದಕ್ಕೆ ಪಾಕಿಸ್ತಾನ ತಲುಪಿದ್ದ ಶ್ರೀಲಂಕಾ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಕೆಲವು ಕ್ರಿಕೆಟಿಗರು ಗಾಯಗೊಂಡಿದ್ದರು. ಇದಲ್ಲದೆ ಹಲವಾರು ಬಾರಿ ಕ್ರಿಕೆಟಿಗರಿಗೆ ಸುರಕ್ಷತೆ ನೀಡುವ ವಿಚಾರದಲ್ಲಿ ಪಾಕಿಸ್ತಾನ ವಿಫಲವಾಗಿದೆ.

ಆಸ್ಟ್ರೇಲಿಯಾ ಆಟಗಾರರಿಗೆ ಎಚ್ಚರಿಕೆ

ಐಪಿಎಲ್‌ನಲ್ಲಿ ಬಿಕರಿಯಾಗದ ಆಟಗಾರರನ್ನು ಆರಿಸಿಕೊಂಡು ನಡೆಸುವ ಪಿಎಸ್‌ಎಲ್ ಟೂರ್ನಿಗೆ ಯುದ್ಧದ ಬಿಸಿ ತಟ್ಟಿರುವುದು ಒಂದು ಕಡೆಯಾದರೆ, ಸ್ವಂತ ದೇಶದಲ್ಲಿ ನಡೆಯುತ್ತಿರುವ ಸಂಘರ್ಷ ಮತ್ತೊಂದು ಹೊಡೆತ ನೀಡಿದೆ. ಇದೇ ವೇಳೆ ಲೀಗ್‌ನಲ್ಲಿ ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್, ಲಾಬುಷೇನ್, ಗ್ಲೇನ್ ಮ್ಯಾಕ್ಸವೇಲ್ ಅಂತಹ ಆಟಗಾರರು ಭಾಗವಹಿಸಬೇಕಿತ್ತು. ಕೋಚ್‌ಗಳಾದ ಟಿಮ್ ಪೈನ್, ಜೇಸನ್ ಗಿಲಿಪ್ಸ್ ಕೂಡ ಪಾಕಿಸ್ತಾನದ ಲೀಗ್‌ನಲ್ಲಿ ಭಾಗವಹಿಸಬೇಕಿತ್ತು. ಆಸ್ಟ್ರೇಲಿಯಾದ ಸ್ಥಳೀಯ ಕ್ರೀಡಾ ಪತ್ರಿಕೆಯಾದ ಕೋಡ್ ಸ್ಪೋರ್ಟ್ಸ್ ವರದಿಯ ಪ್ರಕಾರ, ಆಟಗಾರರಿಗೆ ಪಾಕಿಸ್ತಾನಕ್ಕೆ ತೆರಳಲು ಅವಕಾಶ ಕೊಟ್ಟರೂ ಪೇಶಾವರಕ್ಕೆ ಮಾತ್ರ ಕಾಲಿಡದಂತೆ ಸೂಚಿಸಿದೆ. ಇದಲ್ಲದೆ, ಯುದ್ಧದ ಸನ್ನಿವೇಶ ಸೃಷ್ಟಿಯಾದರೆ ಸಂಸ್ಥೆಯಿಂದ ವಿಶೇಷ ವಿಮಾನ ಕಳುಹಿಸುವುದಾಗಿ ತಿಳಿಸಿದೆ. ಪೇಶಾವರದಲ್ಲಿ ಹಲವು ಪಂದ್ಯಗಳು ನಡೆಯಬೇಕಿದ್ದವು.

ಪಿಎಸ್‌ಎಲ್ ತ್ಯಜಿಸಿದ ಆಫ್ಘನ್



ಇದಲ್ಲದೆ ಪಾಕಿಸ್ತಾನ ಸೂಪರ್ ಲೀಗ್‌ಗೆ ಮೊದಲೇ ಹಿನ್ನಡೆಯಾಗಿದೆ. ಹಲವು ತಂಡಗಳಿಗೆ ಆಯ್ಕೆಯಾಗಿದ್ದ ಅಫ್ಘಾನಿಸ್ತಾನ ಆಟಗಾರರು ಯಾವುದೇ ಕಾರಣಕ್ಕೂ ಪಾಕ್‌ನ ಅಂತಹ ದೇಶಗಳಲ್ಲಿ ನಾವು ಆಡಲ್ಲ ಎಂಬ ನಿರ್ಧಾರ ಕೈಗೊಂಡಿದ್ದರು. ಇಲ್ಲಿಂದ ಶುರುವಾದ ಪಿಎಸ್‌ಎಲ್ ಹಿನ್ನಡೆ ಈಗ ನಿಷೇಧವಾಗುವ ತನಕ ವಿಸ್ತರಿಸಿದೆ.

ಮೋದಿ ಕ್ರೀಡಾಂಗಣದಲ್ಲಿ ಗೆಲ್ಲಲೇಬೇಕಿತ್ತು: ಸೂರ್ಯ

ಹೊಸದಿಲ್ಲಿ: ಭಾರತದಲ್ಲಿ ಅದರಲ್ಲೂ ಅದೇ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಾವು ಕಪ್ ಗೆಲ್ಲಲೇಬೇಕಿತ್ತು ಎಂದು ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪ್ರತಿಪಾದಿಸಿದರು. ವಿಶ್ವಕಪ್ ಗೆದ್ದ ಬಳಿಕ ಪಿಟಿಐದೊಂದಿಗೆ ಮಾತನಾಡಿದ ಅವರು, ನಾವು ಇಲ್ಲೇ ಕಳೆದ ವಿಶ್ವಕಪ್ ಕಳೆದುಕೊಂಡಿದ್ದೇವು. ಇಲ್ಲೇ ಪಡೆಯುವುದು ಅನಿವಾರ್ಯವಾಗಿತ್ತು. 2024ರ ತಂಡಕ್ಕೂ, ಈಗಿನ ತಂಡಕ್ಕೂ ವ್ಯತ್ಯಾಸವಿದೆ. ಆಗ ತಂಡದಲ್ಲಿ ಅನುಭವವಿತ್ತು. ಈ ತಂಡದಲ್ಲಿ ಉತ್ಸಾಹವಿತ್ತು ಎಂದಿದ್ದಾರೆ.

ಮೈದಾನಕ್ಕೆ ಸಾವಿರಾರು ಜನರು ಬರುತ್ತಾರೆ. ಮೊನ್ನೆಯ ಪಂದ್ಯದಲ್ಲಿ ಲಕ್ಷ ಜನರು ಬಂದಿದ್ದರು.



ತವರಲ್ಲಿ ನಡೆಯುವ ಪ್ರತಿ ಪಂದ್ಯದಲ್ಲೂ ಹೀಗೆ ಲಕ್ಷಾಂತರ ಜನರು ಬಂದು ಬೆಂಬಲಿಸುತ್ತಾರೆ. ಅವರಿಗೆ ತವರಲ್ಲೇ ಗೆದ್ದು ಗಿಫ್ಟ್ ಕೊಡುವುದು ತುಂಬಾ ಮುಖ್ಯವಾಗಿತ್ತು ಎಂದರು.

ಯಾರಿಗೂ ಸೋಲುವ ಆಸೆ ಇರಲ್ಲ: ಸೂರ್ಯಕುಮಾರ್ ಯಾದವ್ ನಾಯಕರಾದ ಮೇಲೆ ಹೊಸ ತಂಡ ಕಟ್ಟಬೇಕಾದ ಜವಾಬ್ದಾರಿಯಿತ್ತು. ಇದರ ಹೊರತಾಗಿ ತಂಡವನ್ನು ಕಟ್ಟಿ, ಶೇಕಡ 80ರಷ್ಟು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಶಾಲೆಯಲ್ಲಿದ್ದಾಗ ವಿದ್ಯಾಭ್ಯಾಸದಲ್ಲಿ ತೆಗೆದುಕೊಳ್ಳಬೇಕಾದ ಫಲಿತಾಂಶ ಇಲ್ಲಿ ಪಡೆಯುತ್ತಿದ್ದೇನೆ. ಆದರೆ ನಾಯಕನಾದ ಯಾವುದೇ ವ್ಯಕ್ತಿಗೆ ಗೆಲ್ಲುವುದೊಂದೇ ಗುರಿಯಾಗಿರುತ್ತದೆ. ಶೇಕಡಾವಾರು ಲೆಕ್ಕಾಚಾರ ಬಿಟ್ಟಾಗ ಯಾವುದೇ ತಂಡದ ಯಾವುದೇ ನಾಯಕರೂ ಸೋಲಲು ಇಚ್ಛಿಸುವುದಿಲ್ಲ. ಆದರೂ ಇಂತಹ ಫಲಿತಾಂಶ ಬಂದ ತಕ್ಷಣ ಖುಷಿ ಸಿಗುತ್ತದೆ ಎಂದರು.

ತಂಡಗಳಿಗೆ ಗಾಯದ ಬಿಸಿ

ಮುಂಬೈ: ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಭರವಸೆಯ ಬೌಲರ್ ಜೋಶ್ ಹ್ಯಾಜೆಲ್ವುಡ್ ಐಪಿಎಲ್ ಆಡುವ ಬಗ್ಗೆ ಅನಿಶ್ಚಿತತೆ ಸೃಷ್ಟಿಯಾಗಿದೆ. ಗಾಯದಿಂದ ಚೇತರಿಸಿಕೊಳ್ಳದಿರುವ ನಿಟ್ಟಿನಲ್ಲಿ ಮೊದಲಿನ ಪಂದ್ಯಗಳಲ್ಲಿ ಲಭ್ಯರಿರುವುದಿಲ್ಲ ಎಂದು ತಿಳಿದುಬಂದಿದೆ.



ಐಪಿಎಲ್‌ಗೆ ಕೆಲವೇ ದಿನಗಳು ಇರುವ ಬೆನ್ನಲ್ಲೇ ಬಹುತೇಕ ತಂಡಗಳಿಗೆ ಗಾಯದ ಸಮಸ್ಯೆ ಎದುರಾಗಿದೆ. ಈ ಮಧ್ಯೆ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡ ಮಹತ್ವದ ನಿರ್ಧಾರ ಪ್ರಕಟಿಸಿದ್ದು, ವೇಗದ ಬೌಲರ್‌ಗಳಾದ ಹರ್ಷಿತ್ ರಾಣಾ ಮತ್ತು ಮತೀಶಾ ಪಥಿರಾಣ ಅವರಿಗೆ ಬದಲಿ ಆಟಗಾರರನ್ನು ಹುಡುಕುವುದಿಲ್ಲವೆಂದು ಫ್ರಾಂಚೈಸಿ ಸ್ಪಷ್ಟಪಡಿಸಿದೆ. ಹರ್ಷಿತ್ ರಾಣಾ ಇತ್ತೀಚೆಗೆ ಮೊಣಕಾಲಿನ ಗಾಯದಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸಂಪೂರ್ಣ ಚೇತರಿಕೆಗೆ ಸಮಯ ಬೇಕಾಗಿದೆ. ಇದರಿಂದ ಅವರು ಈ ಸೀಸನ್‌ಗೆ ಲಭ್ಯವಿರುವುದಿಲ್ಲ. ಕಳೆದ ಎರಡು ಸೀಸನ್‌ಗಳಲ್ಲಿ ರಾಣಾ ಉತ್ತಮ ಪ್ರದರ್ಶನ ನೀಡಿದ್ದು, 2024ರಲ್ಲಿ 19 ಮತ್ತು 2025ರಲ್ಲಿ 15 ವಿಕೆಟ್‌ಗಳನ್ನು ಪಡೆದು ತಂಡದ ಪ್ರಮುಖ ಬೌಲರ್ ಆಗಿ ಹೊರಹೊಮ್ಮಿದ್ದರು. ತಂಡದ ಬಳಿಯಲ್ಲಿ ಸಾಕಷ್ಟು ಭಾರತೀಯ ವೇಗದ ಬೌಲರ್‌ಗಳಿರುವುದರಿಂದ ಬದಲಿ ಆಟಗಾರರ ಅಗತ್ಯವಿಲ್ಲವೆಂದು ನಿರ್ವಹಣೆಯ ಅಭಿಪ್ರಾಯವಾಗಿದೆ. ವೇಗಿಗಳಾದ ವೈಭವ್ ಆರೋರಾ, ಉಮ್ರಾನ್ ಮಲಿಕ್, ಕಾರ್ತಿಕ್ ತ್ಯಾಗಿ ಮತ್ತು ಆಕಾಶ್‌ದೀಪ್ ಇರುವುದು ತಂಡಕ್ಕೆ ಬಲ ತಂದಿದೆ ಎಂದು ಹೇಳಿದೆ. ಇನ್ನೊಂದೆಡೆ, ಪತಿರಣಾ ಗಾಯದಿಂದ ಹೊರಗುಳಿದರೂ, ಅವರು ಟೂರ್ನಿಯ ಕೆಲವು ಹಂತಗಳಲ್ಲಿ ಲಭ್ಯವಾಗಬಹುದು ಎಂಬ ನಿರೀಕ್ಷೆಯಿದೆ. ಈ ಕಾರಣದಿಂದಲೇ ಅವರನ್ನು ತಕ್ಷಣ ಬದಲಾಯಿಸುವ ಯೋಚನೆ ಇಲ್ಲ ಎಂದಿದೆ.

ಬೆಂಗಳೂರು ಎಫ್‌ಸಿ ಪಂದ್ಯ ಡ್ರಾ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಹಾಗೂ ಮೋಹನ್ ಬಗಾನ್ ನಡುವಿನ ರೋಚಕ ಪಂದ್ಯ ಡ್ರಾದಲ್ಲಿ ಮುಕ್ತಾಯವಾಯಿತು.



ಪಂದ್ಯದ ಮೊದಲಾರ್ಧದಲ್ಲಿ ಎರಡೂ ತಂಡಗಳು ಸಮಾನ ಪೈಪೋಟಿ ನೀಡಿದವು. ಮೋಹನ್ ಬಗಾನ್ ತಂಡದ ಒತ್ತಡವನ್ನು ಸಮರ್ಥವಾಗಿ ಎದುರಿಸಿದ ಬೆಂಗಳೂರು ಎಫ್‌ಸಿ, ವೇಗದ ಪ್ರತಿದಾಳಿ ನಡೆಸಲು ಪ್ರಯತ್ನಿಸಿತು. ಕೊನೆಯಲ್ಲಿ ಪ್ರತಿರೋಧದೊಂದಿಗೆ ಪಂದ್ಯಾವನ್ನು ಡ್ರಾ ಮಾಡಿಕೊಂಡಿತು. ಪಂದ್ಯದ ಮೊದಲ 2 ನಿಮಿಷಗಳಲ್ಲೇ ರಿಯಾನ್ ವಿಲಿಯಮ್ಸ್ ಗೋಲು ಗಳಿಸುವ ಸನಿಹಕ್ಕೆ ಬಂದಿದ್ದರು, ಆದರೆ ವಿಶಾಲ್ ಕೈತ್ ಆ ಹೊಡೆತವನ್ನು ಅದ್ಭುತವಾಗಿ ತಡೆದು ಕಾರ್ನರ್ ಆಗುವಂತೆ ನೋಡಿಕೊಂಡರು.

ಅದಾದ ಸ್ವಲ್ಪ ಸಮಯದಲ್ಲೇ ಮ್ಯಾಕ್ಲಾರೆನ್ ಅವರ ಕಠಿಣ ಹೊಡೆತವನ್ನು ಗುರುಪ್ರೀತ್ ಸಿಂಗ್ ಸಂಧು ತಡೆದರು. ಎರಡೂ ತಂಡಗಳ ರಕ್ಷಣಾ ವಿಭಾಗವು ಶಿಸ್ತಿನ ಪ್ರದರ್ಶನ ನೀಡಿದ್ದರಿಂದ, ವಿರಾಮದ ವೇಳೆಗೆ ಪಂದ್ಯವು ಗೋಲುರಹಿತ ಸಮಬಲದಲ್ಲಿತ್ತು. ದ್ವಿತೀಯಾರ್ಧದಲ್ಲಿಯೂ ಮೈದಾನದ ಮಧ್ಯಭಾಗದಲ್ಲಿ ಜಿದ್ದಾಜಿದ್ದಿನ ಹೋರಾಟ ಮುಂದುವರಿಯಿತು.

ಹೋರಾಡಿದರೂ ದಕ್ಕದ ಗೋಲು: 60ನೇ ನಿಮಿಷದಲ್ಲಿ ಬ್ರಿಯಾನ್ ಮಾಡಿದ ಕಠಿಣ ಟ್ಯಾಕಲ್‌ನಿಂದಾಗಿ ಅವರಿಗೆ ಹಳದಿ ಕಾರ್ಡ್ ನೀಡಲಾಯಿತು. ಮೋಹನ್ ಬಗಾನ್ ತಂಡಕ್ಕೆ ಫ್ರೀ ಕಿಕ್ ಲಭಿಸಿತು. ಈ ಅಪಾಯಕಾರಿ ಅವಕಾಶದಲ್ಲಿ ಗೋಲಾಗದಂತೆ ತಡೆದ ಗುರುಪ್ರೀತ್ ಸಿಂಗ್ ಸಂಧು, ಬಿಎಫ್‌ಸಿ ಪರ ರಕ್ಷಣಾ ಗೋಡೆಯಾಗಿ ನಿಂತರು. ಮತ್ತೊಂದೆಡೆ, ಆಶಿಕ್ ಕುರುನಿಯನ್ ಎಡಭಾಗದಿಂದ ಅತ್ಯಂತ ವೇಗವಾಗಿ ಓಡಿಬಂದು ಸುನಿಲ್ ಛೇಟ್ರಿ ಅವರಿಗೆ ಚೆಂಡನ್ನು ಪಾಸ್ ಮಾಡಿದರು. ಛೇಟ್ರಿ ಅವರಿಗೆ ಸತತ ಎರಡು ಬಾರಿ ಅವಕಾಶ ಸಿಕ್ಕಿತಾದರೂ ಮೋಹನ್ ಬಗಾನ್‌ನ ಗೋಲ್ ಕೀಪರ್ ಅವುಗಳನ್ನು ವಿಫಲಗೊಳಿಸಿದರು. 85ನೇ ನಿಮಿಷದಲ್ಲಿ ಪೆಟ್ರಾಟೋಸ್ ಅವರಿಗೆ ಗೋಲು ಗಳಿಸುವ ಸುವರ್ಣಾವಕಾಶ ಲಭಿಸಿತ್ತು. ಗುರುಪ್ರೀತ್ ಅವರ ಎದುರು ಒಬ್ಬಂಟಿಯಾಗಿ ಗೋಲು ಗಳಿಸುವ ಹಂತದಲ್ಲಿದ್ದರೂ, ಆ ನಂಬರ್ 9 ಆಟಗಾರ ಚೆಂಡನ್ನು ಪೋಸ್ಟ್‌ನ ಹೊರಕ್ಕೆ ಹೊಡೆದರು. ಅಂತಿಮವಾಗಿ ಈ ರೋಚಕ ಪಂದ್ಯವು 0–0 ಡ್ರಾನಲ್ಲಿ ಅಂತ್ಯಗೊಂಡಿತು.

ದಾವಣಗೆರೆ ದಕ್ಷಿಣ ಕ್ಷೇತ್ರ ಮೊದಲ ಬಾರಿಗೆ ಉಪಚುನಾವಣೆ

ಮಹಿಳಾ ಮತದಾರರೇ ನಿರ್ಣಾಯಕ

ಆರ್ಪಿತ್ ಎನ್.ಜಿ

ದಾವಣಗೆರೆ: ಕ್ಷೇತ್ರ ರಚನೆಗೊಂಡ ಬಳಿಕ ಇದುವರೆಗೂ ನಾಲ್ಕು ಸಾರ್ವತ್ರಿಕ ಚುನಾವಣೆ ಕಂಡಿರುವ ದಾವಣಗೆರೆ ದಕ್ಷಿಣ ಕ್ಷೇತ್ರ ಮೊದಲ ಬಾರಿಗೆ ಉಪಚುನಾವಣೆ ಕಾಣುತ್ತಿದೆ. ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ಕ್ಷೇತ್ರದಲ್ಲಿ ಉಪ ಚುನಾವಣೆ ಎದುರಾಗಿದೆ.



ಕ್ಷೇತ್ರದಲ್ಲಿ ಕಳೆದ 18 ವರ್ಷಗಳಲ್ಲಿ ಶೇ.40ರಷ್ಟು ಮತದಾರರ ಪ್ರಮಾಣ ಹೆಚ್ಚಳಗೊಂಡಿದೆ. ಆದರೆ ನಾಲ್ಕು ಚುನಾವಣೆಗಳಲ್ಲೂ ಶೇ.30ಕ್ಕೂ ಹೆಚ್ಚು ಮತದಾರರು ನಿರಾಸಕ್ತಿ ತೋರಿದ್ದಾರೆ. ಮತದಾನ ಪ್ರಮಾಣ ಮೂರು ಚುನಾವಣೆಯಲ್ಲಿ ಏರಿಕೆ ಕಂಡಿರುವುದು ಸಮಾಧಾನಕರ. ಕ್ಷೇತ್ರದಲ್ಲಿ ಶೇ.69.47ರಷ್ಟು ಮತದಾನ ಪ್ರಮಾಣವೇ ಇದುವರೆಗಿನ ಗರಿಷ್ಠ.

ಮತದಾನ ಹೆಚ್ಚಳಕ್ಕೆ ಪ್ರತಿ ಬಾರಿಯೂ ಜಿಲ್ಲಾಡಳಿತ ಮತದಾರರ ಪರಿಷ್ಕರಣೆ, ಹೊಸದಾಗಿ ಸೇರ್ಪಡೆ ಹಾಗೂ ಮತದಾನ ಹೆಚ್ಚಳಕ್ಕೆ ಬೀದಿ ನಾಟಕ, ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದಾಗ್ಯೂ ಶೇ.70ರ ಗಡಿಯನ್ನು ಒಮ್ಮೆಯೂ ದಾಟಿಲ್ಲ. ಮೊದಲ ಉಪಚುನಾವಣೆ ಹೊಸ ದಾಖಲೆ ನಿರ್ಮಿಸುವುದೇ ಎಂದು ಕಾದುನೋಡಬೇಕಿದೆ.

ದಿಗಂತ ವಿಶೇಷ

2023ರ ಚುನಾವಣೆಯಲ್ಲಿ 1,01,874 ಪುರುಷ ಮತದಾರರು, 1,02,533 ಮಹಿಳಾ ಮತದಾರರಿದ್ದರು. ಪ್ರಸ್ತುತ ಉಪಚುನಾವಣೆಯಲ್ಲಿ 1,13,654 ಪುರುಷರು, 1,17,986 ಮಹಿಳಾ ಮತದಾರರು ಇದ್ದಾರೆ. ಕಳೆದ ಬಾರಿ ಅಲ್ಪಪ್ರಮಾಣದಲ್ಲಿ ಹೆಚ್ಚಿದ್ದ ಮಹಿಳಾ ಮತದಾರರ ಸಂಖ್ಯೆ ಈ ಬಾರಿ ಮತ್ತಷ್ಟು ಹೆಚ್ಚಳಗೊಂಡಿದೆ. ಹೀಗಾಗಿ ಮಹಿಳೆಯರೇ ಫಲಿತಾಂಶದಲ್ಲಿ ನಿರ್ಣಾಯಕರೂ ಆಗಲಿದ್ದಾರೆ.

ಕಾಂಗ್ರೆಸ್-ಬಿಜೆಪಿ ಹಣಾಹಣಿ: ಪ್ರತೀ ಬಾರಿಯೂ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯೇ ನೇರ ಹಣಾಹಣಿ ನಡೆದಿದೆ. ಒಮ್ಮೆ ಮಾತ್ರ ಜೆಡಿಎಸ್ ಇಲ್ಲಿ ಗಣನೀಯ ಮತಗಳನ್ನು ಗಳಿಸಿದೆ. ಮತ್ತೊಂದೆಡೆ ಶಾಮನೂರು ಕುಟುಂಬದೆದುರು ಅಲ್ಪಸಂಖ್ಯಾತರು ಹಿಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡಿದ್ದರೂ ಅವರಾರೂ ಗಣನೀಯ ಮತ ಪಡೆದಿಲ್ಲ. ಅಲ್ಪಸಂಖ್ಯಾತರೇ ಇಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿದ್ದರೂ ಬಿಜೆಪಿಯೇ ಕಾಂಗ್ರೆಸ್‌ಗೆ ಪೈಪೋಟಿ ನೀಡಿದೆ.

ಕುಸಿತ ಕಂಡಿದ್ದ ನೋಟಾ ಮತ: ನೋಟಾ ಮತ ಚಲಾವಣೆ 2018, 2023ರ ಚುನಾವಣೆಯಲ್ಲಿ ದಾಖಲಾಗಿದೆ. 2018ರ ಚುನಾವಣೆಯಲ್ಲಿ 888 ಮತದಾರರು ಯಾವುದೇ ಅಭ್ಯರ್ಥಿಗೂ ತಮ್ಮ ಮತ ನೀಡದೇ ನೋಟಾ ಒತ್ತಿದ್ದರು. ಆದರೆ 2023ರ ಚುನಾವಣೆಯಲ್ಲಿ ನೋಟಾ ಕೊಂಚ ಇಳಿಕೆ ಕಂಡು 655 ಮತ ದಾಖಲಾಗಿದೆ. 2018ರ ಚುನಾವಣೆಯಲ್ಲಿ ಒಟ್ಟು 11 ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, 6 ಅಭ್ಯರ್ಥಿಗಳು ನೋಟಾ ಮತಗಳಿಗಿಂತಲೂ ಕಡಿಮೆ ಮತ ಪಡೆದಿದ್ದಾರೆ. 2023ರಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 16 ಅಭ್ಯರ್ಥಿಗಳು ಕಣದಲ್ಲಿದ್ದು 10 ಮಂದಿ ನೋಟಾ ಮತಗಳಿಗಿಂತ ಕಡಿಮೆ ಮತ ಪಡೆದಿದ್ದಾರೆ. ಜೆಡಿಎಸ್‌ನ ಅಮಾನುಲ್ಲಾ ಖಾನ್ ಅವರು 2018ರಲ್ಲಿ 6020 ಮತ, 2023ರ ಚುನಾವಣೆಯಲ್ಲಿ 1296 ಮತ ಗಳಿಸಿ ನೋಟಾಗಿಂತ ಹೆಚ್ಚು ಮತ ಪಡೆದ ಸಾಮೀಪ್ಯದ ಅಭ್ಯರ್ಥಿಯಾಗಿದ್ದಾರೆ.

2008
ಮತದಾರರು 1,61,435
ಮತ ಚಲಾಯಿಸಿದ ಮತದಾರರು 1,00,415
ಮತ ಪ್ರಮಾಣ ಶೇ.62.02

2013
ಮತದಾರರು 1,82,370
ಮತ ಚಲಾಯಿಸಿದ ಮತದಾರರು 1,20,410
ಮತಪ್ರಮಾಣ ಶೇ.66.03

2018
ಮತದಾರರು 2,01,158
ಮತ ಚಲಾಯಿಸಿದ ಮತದಾರರು 1,36,073
ಮತಪ್ರಮಾಣ ಶೇ.65.81
ನೋಟಾ 888

2023
ಮತದಾರರು 2,04,442
ಪುರುಷ 1,01,874
ಮಹಿಳೆ 1,02,533
ಇತರೆ 35
ಮತ ಚಲಾಯಿಸಿದ ಮತದಾರರು 1,46,382
ಮತಪ್ರಮಾಣ ಶೇ.69.47
ನೋಟಾ 655

ಹಾಲಿ ಇರುವ ಮತದಾರರು
ಮತದಾರರು 2,31,683
ಪುರುಷ 1,13,654
ಮಹಿಳೆ 1,17,986
ಇತರೆ 43



» 18 ವರ್ಷಗಳಲ್ಲಿ ಶೇ.40ರಷ್ಟು ಮತದಾರರ ಪ್ರಮಾಣ ಹೆಚ್ಚಳ

ಆರೆಸ್ಸೆಸ್ ನಿಷೇಧ ಅಸಾಧ್ಯ: ಈಶ್ವರಪ್ಪ

ಕಲಬುರಗಿ: ಭಾರತವಲ್ಲದೇ ಇಡೀ ವಿಶ್ವದ ಗಮನ ಸೆಳೆದಿರುವ ಆರೆಸ್ಸೆಸ್‌ನ್ನು ನಿಷೇಧ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.



ನಗರರ ಐವನ್ ಶಾಹಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಆಂತರಿಕ ವಿಷಯಗಳಲ್ಲಿ ಅಮೇರಿಕಾ ಹಸ್ತಕ್ಷೇಪ ಮಾಡುತ್ತಿದ್ದು,ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆ ಮಾಡುತ್ತಿರುವ ಆರೆಸ್ಸೆಸ್‌ನ್ನು ನಿಷೇಧ ಮಾಡುವಂತೆ ಆಗ್ರಹ ಮಾಡುತ್ತಿದೆ. ಆರೆಸ್ಸೆಸ್ ಎಂದಿಗೂ ಕೂಡ ಧರ್ಮ,ವ್ಯಕ್ತಿಗಳ ವಿರುದ್ಧ ಗಲಾಟೆ ಮಾಡಿಲ್ಲ. ದೇಶದ ಲಕ್ಷಾಂತರ ನಗರಗಳಲ್ಲಿ, ಗ್ರಾಮಾಂತರಗಳಲ್ಲಿ ಕಳೆದ ನೂರು ವರ್ಷಗಳಿಂದ ದೇಶ, ಧರ್ಮದ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದೆ ಎಲ್ಲೂ ಗಲಾಟೆ ನಡೆದಿಲ್ಲ ಎಂದರು.

ಹಿಂದೂ ವಿರೋಧಿ ಸರ್ಕಾರ: ರಾಜ್ಯದ ಮದ್ದೂರು, ನೆಲಮಂಗಲದಲ್ಲಿ ಶಾಂತಿಯಿಂದ ಹೋದ ಗಣೇಶನ ಮೆರವಣಿಗೆಯಲ್ಲಿ ಕಲ್ಲೂ ತೂರಾಟ, ಬಾಗಲಕೋಟೆಯಲ್ಲಿ ಶಿವಾಜಿ ಮೆರವಣಿಗೆ ವೇಳೆ ಮಸೀದಿ ಬಳಿ ನಿಂತು ಕಲ್ಲು, ಚಪ್ಪಲಿ ಎಸೆತ ಹೀಗೆ ದಾವಣಗೆರೆ, ಶಿವಮೊಗ್ಗದಲ್ಲಿ ಹುಡುಕಿ ಹಲ್ಲೆ ಮಾಡುತ್ತಿದ್ದಾರೆ. ಹೀಗಾಗಿ ಮುಸ್ಲಿಂರ ಮನಸ್ಥಿತಿ ಬದಲಾಗಬೇಕಿದೆ, ಇಲ್ಲಾಂದ್ರೆ ರಾಜ್ಯದಲ್ಲಿ ಹಾಗೂ ದೇಶದಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಇನ್ನೊಂದೆಡೆ ಭಾರತದ ಮುಸ್ಲಿಮರು ದೇಶದಲ್ಲಿ ಸಾಕಷ್ಟು ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಅಮೆರಿಕಾ-ಇಸ್ರೇಲ್ ಜೊತೆಗೆ ಇರಾನ್ ಯುದ್ಧದ ಸಂದರ್ಭದಲ್ಲಿ ಇರಾನಿನಲ್ಲಿ ಖಮೇನ ಹತ್ಯೆಯಾದರೇ, ಭಾರತದಲ್ಲಿ ಏಕೆ ಪ್ರತಿಭಟನೆ? ಇರಾನಿನಲ್ಲಿ ನಡೆದ ಹತ್ಯೆಗೂ ಭಾರತಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದ ಅವರು, ಇಡೀ ವಿಶ್ವದಲ್ಲಿಯೇ ಮುಸಲ್ಮಾನರು ಸುರಕ್ಷಿತವಾಗಿ, ಸುಭದ್ರವಾಗಿ ಇದ್ದರೆ ಎಂದು ಅದು ಭಾರತದಲ್ಲಿ ಮಾತ್ರ ಎಂದು ಹೇಳಿದರು.

ಖೋಟಾ ನೋಟು ಜಾಲ ಪತ್ತೆ: ಬಂಧನ

ಬೆಳಗಾವಿ: ದೊಡ್ಡ ವ್ಯಾಪಾರಿಗಳಿಗೆ ಪಂಗನಾಮ ಹಾಕಲು ಯತ್ನಿಸಿದ್ದ ಅಂತರ್ ರಾಜ್ಯ ಖೋಟಾ ನೋಟು ಜಾಲದ ಕಿಲಾಡಿಗಳು ಇದೀಗ ನ್ಯಾಯಾಂಗ ಬಂಧನದ ಭೀತಿ ಎದುರಾಗಿದೆ. ನಗರ ಪೊಲೀಸ್ ಆಯುಕ್ತರ ಭರ್ಜರಿ ಕಾರ್ಯಾಚರಣೆಯ ಬಳಿಕ, ಬಂಧಿತ ನಾಲ್ವರು ಆರೋಪಿಗಳನ್ನು ಮಾರ್ಚ್ 27ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.



ನಗರದ ಖಡೇಬಜಾರ್ ಹಾಗೂ ಬಾಜಿ ಮಾರ್ಕೆಟ್ ಪ್ರದೇಶದಲ್ಲಿ ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಗೋವಾ ಮತ್ತು ಬಿಹಾರ ಮೂಲದ ನಾಲ್ವರು ಆರೋಪಿಗಳನ್ನು ಬೆಳಗಾವಿ ಜೆ.ಎನ್.ಎಂ.ಸಿ ಎರಡನೇ ನ್ಯಾಯಾಲಯವು ಮಾರ್ಚ್ 27ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಪ್ರಕರಣದ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಡಿದ ನಗರ ಪೊಲೀಸ್ ಆಯುಕ್ತ ಭೂಷಣ ಬೋರಸೆ ಅವರು, ಆರೋಪಿಗಳಿಂದ 500 ರೂಪಾಯಿ ಮುಖ ಬೆಲೆಯ 495 ನಕಲಿ ನೋಟುಗಳು, ಒಂದು ಕಾರು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ವ್ಯಾಪಾರಿಯೊಬ್ಬರು ನೀಡಿದ ಸಮಯೋಚಿತ ಮಾಹಿತಿಯಿಂದ ಈ ಬೃಹತ್ ಜಾಲವನ್ನು ಭೇದಿಸಲು ಸಾಧ್ಯವಾಯಿತು ಎಂದು ಹೇಳಿದರು. ಈ ಜಾಲವು ಕೇವಲ ಬೆಳಗಾವಿ ಮಾತ್ರವಲ್ಲದೆ ಅಕ್ಕಪಕ್ಕದ ರಾಜ್ಯಗಳಿಗೂ ಹರಡಿರುವ ಶಂಕೆ ವ್ಯಕ್ತವಾಗಿದ್ದು, ತಲೆಮರೆಸಿಕೊಂಡಿರುವ ಇನ್ನಿಬ್ಬರು ಆರೋಪಿಗಳ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಮಾರ್ಕೆಟ್ ಠಾಣೆಯ ಇನ್ಸ್ ಪೆಕ್ಟರ್ ಜೆ.ಎಂ.ಕಾಲಮಿರ್ಚಿ ನೇತೃತ್ವದ ತಂಡದ ಕಾರ್ಯದಕ್ಷತೆಯನ್ನು ಆಯುಕ್ತರು ಶ್ಲಾಘಿಸಿದ್ದಾರೆ.

ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ಸಣ್ಣ ವ್ಯಾಪಾರಿಗಳು 500 ರೂಪಾಯಿ ನೋಟುಗಳನ್ನು ಸ್ವೀಕರಿಸುವಾಗ ಹೆಚ್ಚಿನ ಜಾಗರೂಕತೆ ವಹಿಸಬೇಕು ಮತ್ತು ಯಾವುದೇ ಅನುಮಾನ ಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಅವರು ಮನವಿ ಮಾಡಿದರು.

ಸರ್ವಪಕ್ಷ ನಿಯೋಗ ಕೊಂಡೊಯ್ಯಲು ತೀರ್ಮಾನ

ಹೊಸದಿಲ್ಲಿ: ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ (ಯುಕೆಪಿ-3) ಕಾಮಗಾರಿ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಬಳಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸರ್ವಪಕ್ಷಗಳ ಸಂಸದರೂ ಸಮ್ಮತಿ ಸೂಚಿಸಿದ್ದಾರೆ.



ಮಂಗಳವಾರ ದಿಲ್ಲಿಯಲ್ಲಿ ರಾಜ್ಯದ ಸಂಸದರು, ವಕೀಲರ ತಂಡದೊಂದಿಗೆ ಸಭೆ ನಡೆಸಿದ ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ರಾಜ್ಯ ಸಚಿವರು ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಮುಂದಿನ ಹೆಜ್ಜೆ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಇದುವರೆಗೆ ಯೋಜನೆಗಳ ಸ್ಥಿತಿಗತಿ ಏನೇನಾಗಿದೆ, ನಮ್ಮ ಸರ್ಕಾರ ಏನೆಲ್ಲಾ ಮಾಡಿದೆ ಎಂಬುದನ್ನು ವಿವರಿಸಿದರಲ್ಲದೆ, ಕಾನೂನು ಸಂಘರ್ಷಗಳಿಂದ ಹೊರಬರುವುದರ ಜತೆಗೆ ಕೇಂದ್ರ ಸರ್ಕಾರದ ಅನುಮತಿಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆಯೂ ವಿಸ್ತೃತ ಚರ್ಚೆ ನಡೆಸಲಾಯಿತು.


ನಾಡು, ನುಡಿ, ಜಲ ವಿಚಾರವಾಗಿ ರಾಜ್ಯದ ಹಿತ ದೃಷ್ಟಿಯಿಂದ ಪಕ್ಷಭೇದ ಮರೆತು ಒಂದಾಗಿರುತ್ತೇವೆ. ಸಮಸ್ಯೆಗಳ ನಿವಾರಣೆಗೆ ನಾವು ಕೇಂದ್ರದ ಮೇಲೆ ಒತ್ತಡ ಹಾಕುತ್ತೇವೆ.
■ ಬಸವರಾಜ ಬೊಮ್ಮಾಯಿ, ಸಂಸದ

ಒಮ್ಮತದ ತೀರ್ಮಾನ

ಮುಂದಿನ ಹೆಜ್ಜೆಗಳ ಬಗ್ಗೆ ಇನ್ನೊಮ್ಮೆ ರಾಜ್ಯದ ಸಂಸದರು, ಕಾನೂನು ತಂಡದೊಂದಿಗೆ ದಿಲ್ಲಿಯಲ್ಲೇ ಸಭೆ ನಡೆಸಿ, ಪ್ರಧಾನಿ ಹಾಗೂ ಜಲಶಕ್ತಿ ಸಚಿವರ ಭೇಟಿಗೆ ದಿನಾಂಕಗಳನ್ನು ನಿಗದಿಪಡಿಸುತ್ತೇವೆ. ಒಟ್ಟಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯುತ್ತೇವೆ. ಎಲ್ಲರೂ ಒಮ್ಮತದಿಂದ ಈ ತೀರ್ಮಾನ ಕೈಗೊಂಡಿದ್ದೇವೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದರು.
ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷ್ಣಾ, ಕಾವೇರಿ, ತುಂಗಭದ್ರಾ ಸೇರಿದಂತೆ ಹಲವು ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಬಹಳ ವರ್ಷಗಳಿಂದ ಇರುವ ಸಮಸ್ಯೆ, ಹೋರಾಟಗಳಿಗೆ ಪರಿಹಾರ ಹತ್ತಿರ ಬಂದಿದೆ ಎಂದು ಆಶಾವಾದ ವ್ಯಕ್ತಪಡಿಸಿದರು. ಯುಕೆಪಿ-3 ಗೆ 1.33 ಲಕ್ಷ ಎಕರೆ ಭೂಮಿ ಒಂದೇ ಬಾರಿಗೆ ಸ್ವಾಧೀನ ಮಾಡಿಕೊಳ್ಳಲು ನಿರ್ಧರಿಸಿದ್ದು, ನೀರಾವರಿ ಜಮೀನಿಗೆ 40ಲಕ್ಷ ರೂ., ಒಣಭೂಮಿಗೆ 30 ಲಕ್ಷ ರೂ.ನಂತೆ ಪ್ರತಿ ಎಕರೆಗೆ ಪರಿಹಾರ ನಿಗದಿಪಡಿಸಿರುವುದರಲ್ಲದೆ, ಈ ಬಾರಿಯ ಬಜೆಟ್‌ನಲ್ಲೂ ಘೋಷಿಸಿದ್ದೇವೆ. ಸುಪ್ರೀಂ ಕೋರ್ಟ್ ಆದೇಶದಂತೆ ತಯಾರಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5927

5926 ಉತ್ತರ

ಎಡದಿಂದ ಬಲಕ್ಕೆ:
2.ಗರಡಿ 5.ಗುಬ್ಬಿಗೂಡು
6.ಗೇರುಬೀಜ
7.ಕುಂಬಾರ 8.ನಜರು
10.ಅಂತರಿಕ್ಷ 11.ಸಂಕುಚಿತ
13.ಕೀರ್ತನಕಾರ
15.ಕರುಳು 16.ಸಹಿಸು
ಮೇಲಿನಿಂದ ಕೆಳಕ್ಕೆ :
1.ತೆಂಗು 2.ಗಡುತರ
3.ನಗೆಗೇಡಿ 4.ರಾಜ
7.ಕುಂಠಿತ 9.ಚಿಗುರು
10.ಅಂಗಾರಕ 12.ತತ್ತರಿಸು
13.ಕೀಳು 14.ರಸ

ಎಡದಿಂದ ಬಲಕ್ಕೆ
2.ಮತದ ನಡುವೆ ಗಾಳಿ ಬೀಸುತ್ತಿದೆ (3)
5.ಯಶಸ್ಸನ್ನು ಹೊಂದಿದವ-ಪ್ರಸಿದ್ಧ ವ್ಯಕ್ತಿ (4)
6.ಕಲಿಸು-ವಿದ್ಯಾಭ್ಯಾಸ ಮಾಡಿಸು (4)
7.ಹೋರಾಟಕ್ಕೆ ಇಳಿಯುವುದು (3)
8.ಮದುವೆಯಾಗುವಿಕೆ ತಿರುಗಿದೆ (3)
10.ಕೆಲಸ ವ್ಯವಸ್ಥೆಗೊಳಿಸುವ ವ್ಯಕ್ತಿ (4)
12.ಇದು ಗಜಾಸುರನ ವೈರಿ-ಸಿಂಹ (4)
14.ಮಟ್ಟಸ, ಚಪ್ಪಟೆಯಾದುದು (3)
15.ಸುರನ ನಡುವೆ ಅಡಗಿದ ಚಂದ್ರ (4)
16.ಈ ರೀತಿಯಲ್ಲಿ ಬಿಡಲ್ಪಟ್ಟದ್ದು (4)
ಮೇಲಿನಿಂದ ಕೆಳಕ್ಕೆ
1.ವ್ಯಕ್ತಿಗಳ ಪರ ವಾದ ಮಾಡುವ ಕಾನೂನು ತಜ್ಞ (3)
2.ಜನರ ಪ್ರಜಾಪ್ರಭುತ್ವದ ಮುಖ್ಯ ಹಕ್ಕು (4)
3.ಕೂಲಂಕಷವಾಗಿ ಪರಿಶೀಲಿಸು (4)
4.ಜೀವಮಾನ-ಸಂಸಾರದ ಸಮಾನಪದ (3)
7.ವಾಹನ ಓಡಿಸುವ ವ್ಯಕ್ತಿ ತಲೆಕೆಳಗಾಗಿದ್ದಾನೆ (3)
9.ಮಂತ್ರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
10.ಸೂಚನೆಯನ್ನು ನೀಡು (4)
11. ಕಸದಲ್ಲಿ ಅವರ ಕಣ್ಣಿಗೆ ಬಿದ್ದ ಚಿನ್ನ (4)
12.ಇದು ಸಮರ್ಪಕವಲ್ಲದ ಕಾರಣ (4)
13.ಸಾಲವನ್ನು ಸಂಪೂರ್ಣವಾಗಿ ತೀರಿಸಿಕೊಳ್ಳುವುದು (4)

ಕಿರುಸುದ್ದಿ

ಇಂದು ಕುಂಬಳೆಗೆ ಕೇಂದ್ರ ಸಚಿವ ಸುರೇಶ್ ಗೋಪಿ



ಕುಂಬಳೆ: ಕೇಂದ್ರ ಸಚಿವ ಸುರೇಶ್ ಗೋಪಿ ಅವರು ಮಾ.18ರಂದು ಕುಂಬಳೆಗೆ ಆಗಮಿಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನಕ್ಕೆ ಭೇಟಿ ನೀಡಲಿರುವ ಅವರು ಬಳಿಕ 11 ಗಂಟೆಗೆ ವಿಧಾನಸಭಾ ಚುನಾವಣೆಯ ಅಂಗವಾಗಿ ಕುಂಬಳೆ ಪೇಟೆಯಲ್ಲಿ ಗೋಡೆಬರಹವನ್ನು ಉದ್ಘಾಟಿಸಿ ಮಾತನಾಡುವರು. ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಉಪಸ್ಥಿತರಿರುವರು.

ತಲೆಮರೆಸಿಕೊಂಡಿದ್ದ ವಾರೆಂಟ್ ಆಸಾಮಿ ಕೊನೆಗೂ ಪೊಲೀಸ್ ಬಲೆಗೆ



ಉಡುಪಿ: ನ್ಯಾಯಾಲಯಕ್ಕೆ ಹಾಜರಾಗದೆ ಕಳೆದ 13 ವರ್ಷಗಳಿಂದ ತಲೆಮರೆಸಿಕೊಂಡಿದ್ದ ವಾರೆಂಟ್ ಆಸಾಮಿಯನ್ನು ಮಲ್ಪೆ ಪೊಲೀಸ್ ಠಾಣಾ ಸಿಬ್ಬಂದಿಗಳು ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಸಮೀಪದ ಕೊಯ್ಲ ಗ್ರಾಮದ ನಿವಾಸಿ ಆರಿಫ್ ಬಂಧಿತ ಆರೋಪಿ. ಈತನ ಮೇಲೆ ಮಲ್ಪೆ ಪೊಲೀಸ್ ಠಾಣೆಯಲ್ಲಿ 2013ರಲ್ಲಿ ನಂಬಿಕೆ ದ್ರೋಹದ ಪ್ರಕರಣ ದಾಖಲಾಗಿತ್ತು. ಉಡುಪಿಯ ಸಿ.ಜೆ.ಎಂ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ಆರೋಪಿಯು 13 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಪ್ಪಿಸಿಕೊಳ್ಳುತ್ತಿದ್ದ.ಮಲ್ಪೆ ಠಾಣಾ ವಾರೆಂಟ್ ಸಿಬ್ಬಂದಿಗಳಾದ ಹೆಚ್.ಸಿ. ಸುರೇಶ್ ಕುಮಾರ್ ಮತ್ತು ಹೆಚ್.ಸಿ. ವಿಶ್ವನಾಥ್ ಅವರು ಮಾ. 16ರ ಮುಂಜಾನೆ 7 ಗಂಟೆಗೆ ಉಪ್ಪಿನಂಗಡಿಯ ಕೊಯ್ಲಾದಲ್ಲಿ ಆರೋಪಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಿದ್ದಾರೆ. ಬಂಧಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಮಾನ್ಯ ನ್ಯಾಯಾಲಯವು ಆರೋಪಿಗೆ ಮಾರ್ಚ್ 28ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದೆ.

ಹುಲಿ ದಾಳಿಗೆ ಕರು ಬಲಿ

ಮಡಿಕೇರಿ: ಹುಲಿ ದಾಳಿ ನಡೆಸಿ ಕರುವನ್ನು ಕೊಂದಿರುವ ಘಟನೆ ಸಿದ್ದಾಪುರ ಸಮೀಪದ ಬಾಡಗ ಬಾಣಂಗಾಲ ಗ್ರಾಮದಲ್ಲಿ ನಡೆದಿದೆ. ಬಾಡಗ ಬಾಣಂಗಾಲ ಗ್ರಾಮದ ಬಜೆಗೊಲ್ಲಿ ನಿವಾಸಿ ಚೊಕ್ಕಲಿಂಗಂ ಎಂಬವರಿಗೆ ಸೇರಿದ ಹಸುವನ್ನು ತೋಟದ ಬಳಿ ಮೇಯಲು ಬಿಟ್ಟು, ಕರುವನ್ನು ಕಟ್ಟಿ ಹಾಕಲಾಗಿತ್ತು. ಈ ವೇಳೆ ಹುಲಿ ದಾಳಿ ನಡೆಸಿ ಕರುವನ್ನು ಕೊಂದು ಹಾಕಿದೆ. ಕಾರ್ಮಿಕರು ನೋಡಿದಾಗ ಕರುವಿನ ಕಳೇಬರ ಪತ್ತೆಯಾಗಿದ್ದು, ಸ್ವಲ್ಪ ಸಮಯದ ಬಳಿಕ ಕಳೇಬರ ಸಹ ನಾಪತ್ತೆಯಾಗಿದೆ. ಹುಲಿಯು ಕಳೇಬರವನ್ನು ಹೊತ್ತೊಯ್ದಿರಬಹುದು ಎಂದು ಕಾರ್ಮಿಕರು ತಿಳಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆಯ ಸಿಬ್ಬಂದಿ ಭೇಟಿ ನೀಡಿ ರಾತ್ರಿಯವರೆಗೂ ಕಳೇಬರಕ್ಕಾಗಿ ಹುಡುಕಾಟ ನಡೆಸಿದರು. ಈ ಸಂದರ್ಭ ರಕ್ತದ ಗುರುತುಗಳು ಮಾತ್ರ ಪತ್ತೆಯಾಗಿತ್ತು. ಇತ್ತೀಚೆಗೆ ಇದೇ ಗ್ರಾಮದಲ್ಲಿ ಹುಲಿ ದಾಳಿಗೆ ಜಾನುವಾರು ಸಾವನ್ನಪ್ಪಿತ್ತು. ಆ ಸಂದರ್ಭ ಹುಲಿ ಸೆರೆಗೆ ಅರಣ್ಯ ಇಲಾಖೆ ಬೋನು ಅಳವಡಿಸಿದ್ದು, ಬಳಿಕ ಹುಲಿ ಸುಳಿದಿರಲಿಲ್ಲ. ಇದೀಗ ಮತ್ತೆ ಹುಲಿ ದಾಳಿಯಿಂದ ಗ್ರಾಮಸ್ಥರು ಹಾಗೂ ಕಾರ್ಮಿಕರು ಭಯಭೀತರಾಗಿದ್ದಾರೆ. ಹುಲಿಯನ್ನು ಸೆರೆಹಿಡಿದು ಸ್ಥಳಾಂತರಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಸ್ಥಳಕ್ಕೆ ತಿತಿಮತಿ ಉಪವಲಯ ಅರಣ್ಯಾಧಿಕಾರಿ ಶಶಿ, ಆರ್.ಆರ್.ಟಿ ಸಿಬ್ಬಂದಿ ಭೇಟಿ ನೀಡಿದ್ದಾರೆ.

ಕಾರು ಡಿಕ್ಕಿಯಾಗಿ ತಾಯಿ-ಮಗಳಿಗೆ ಗಾಯ

ನಾಪೋಕ್ಲು: ರಸ್ತೆ ಬದಿಯಲ್ಲಿ ಸಾಗುತ್ತಿದ್ದ ತಾಯಿ-ಮಗಳಿಗೆ ಕಾರು ಡಿಕ್ಕಿಯಾಗಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದ ಘಟನೆ ಇಲ್ಲಿಗೆ ಸಮೀಪದ ಬೇತು ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಪಾಲೂರು ಗ್ರಾಮದ ನಿವಾಸಿಗಳಾದ ಪಿ .ಎಮ್ ಲೀಲಾ ಹಾಗೂ ಮಗಳು ಮೋಕ್ಷಿತ ಎಂಬವರು ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಗುತ್ತಿದ್ದ ಸಂದರ್ಭ ಈ ಘಟನೆ ಜರುಗಿದೆ. ವಿರಾಜಪೇಟೆಯಿಂದ ನಾಪೋಕಪಿಗೆ ತೆರಳುತ್ತಿದ್ದ ಎಮ್ಮೆಮಾಡು ನಿವಾಸಿ, ಜಂಶೀರ್ ಚಲಾಯಿಸುತ್ತಿದ್ದ ಕಾರು ಡಿಕ್ಕಿಯಾಗಿ ತಾಯಿ ಮಗಳು ರಸ್ತೆಗೆಸಯ ಲ್ಪಟ್ಟಿದ್ದಾರೆ. ಗಾಯಗೊಂಡವರಿಗೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಗೆ ಕಳಿಸಿಕೊಡಲಾಯಿತು. ಘಟನಾ ಸ್ಥಳಕ್ಕೆ ಸ್ಥಳಕ್ಕೆ ಪೊಲೀಸರು ತೆರಳಿದ್ದು ಕಾರನ್ನು ವಶ ಪಡಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆತುರ್ತು ಚಿಕಿತ್ಸಾ ವಾಹನದ ಸೌಲಭ್ಯ ದೊರೆಯದೇ ಗಾಯಾಳುಗಳು ಪರದಾಡಬೇಕಾದ ಪ್ರಸಂಗದ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭ | ಶಾಲಾ ಶಿಕ್ಷಣ ಇಲಾಖೆ ಸರ್ವ ಸಜ್ಜು | ಮುನ್ನೆಚ್ಚರಿಕಾ ಕ್ರಮ

ಮಕ್ಕಳೇ, ಧೈರ್ಯದಿಂದ ಪರೀಕ್ಷೆ ಬರೆಯಿರಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬುಧವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ಆರಂಭವಾಗಲಿದ್ದು, ಶಾಲಾ ಶಿಕ್ಷಣ ಇಲಾಖೆ ಎಲ್ಲ ಸಿದ್ಧತೆ ಪೂರ್ಣಗೊಳಿಸಿದೆ.

ಜಿಲ್ಲೆಯ ಏಳು ಶೈಕ್ಷಣಿಕ ಬ್ಲಾಕ್ ಗಳ ಒಟ್ಟು 91 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಈ ಬಾರಿ 27,633 ರೆಗ್ಯುಲರ್ ವಿದ್ಯಾರ್ಥಿಗಳು, 979 ಖಾಸಗಿ ಅಭ್ಯರ್ಥಿಗಳು, 632 ಪುನರಾವರ್ತಿತರು, 153 ಖಾಸಗಿ ಪುನರಾವರ್ತಿತರು ಸೇರಿ ಒಟ್ಟು 29,397 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷಾ ಕೊಠಡಿಗಳಲ್ಲಿ ಮಂಗಳವಾರ ಶಿಕ್ಷಕರು, ಡೆಸ್ಕ್ ಮೇಲೆ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಬರೆಯುವುದು ಸಹಿತ ಕೊನೆಯ ಕ್ಷಣದ ಸಿದ್ಧತೆ ನಡೆಸಿದರು.

ಪರೀಕ್ಷೆಸಿದ್ಧತೆಸಿದ್ಧತೆಬಗ್ಗೆಪ್ರತಿಕ್ರಿಯಿಸಿರುವಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಜಿ.ಎಸ್. ಶಶಿಧರ್, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ವೆಬ್ ಕಾಸ್ಟಿಂಗ್ ಇರಲಿದೆ.ತಾಪಮಾನಹೆಚ್ಚುತ್ತಿರುವಕಾರಣ ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಪ್ರತಿ ಕೊಠಡಿಯಲ್ಲಿ ಫ್ಯಾನ್ ಸೇರಿದಂತೆ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಅನುಕೂಲ ಕಲ್ಪಿಸಲಾಗಿದೆ. ಪರೀಕ್ಷೆ ನಡೆಯುವ ವೇಳೆ ನಮ್ಮ ಸಿಬ್ಬಂದಿ, ವಿದ್ಯಾರ್ಥಿಗಳು ಕುಳಿತಲ್ಲಿಯೇ ಕುಡಿಯುವ ನೀರು ಒದಗಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಅಂಗವಿಕಲ ಮಕ್ಕಳಿಗೆ ನೆಲ ಮಹಡಿಯಲ್ಲಿರುವ ಪರೀಕ್ಷಾ ಕೊಠಡಿಯಲ್ಲೇ ಸೌಲಭ್ಯ ಒದಗಿಸಲಾಗುತ್ತದೆ. ಎಲ್ಲ ಕೇಂದ್ರಗಳಲ್ಲೂ ರ್‍ಯಾಂಪ್‌ಗಳು ಇರುತ್ತವೆ. ಉತ್ತಮ ಫಲಿತಾಂಶಕ್ಕಾಗಿ ಸಾಕಷ್ಟು ಪ್ರಯತ್ನ ನಡೆಸಲಾಗಿದ್ದು, ವಿಶೇಷವಾಗಿ ಜಿಲ್ಲೆಯಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಲ್ಲಿ ಗರಿಷ್ಠ ಫಲಿತಾಂಶಕ್ಕೆ ಒತ್ತು ನೀಡಲಾಗಿದೆ. ಮೂರನೇ ಪೂರ್ವಭಾವಿ ಪರೀಕ್ಷೆಯಲ್ಲಿ ಶೇ 50ರಿಂದ 70ರಷ್ಟು ಫಲಿತಾಂಶ ಬಂದಿರುವ ಶಾಲೆಗಳನ್ನು ಗುರುತಿಸಿ, ಅಲ್ಲಿನ ಮುಖ್ಯ ಶಿಕ್ಷಕರು, ಶಿಕ್ಷಕರ ಜೊತೆ ಆನ್ ಲೈನ್ ಸಭೆ ನಡೆಸಲಾಗಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಆದ್ಯತೆ ನೀಡಿ, ಅವರು ಪರೀಕ್ಷೆಯಲ್ಲಿ ಉತ್ತೀರ್ಣರಾಗುವಲ್ಲಿ ಶಿಕ್ಷಕರು ಪರಿಶ್ರಮವಹಿಸುವಂತೆ ತಿಳಿಸಲಾಗಿದೆ ಎಂದು ವಿವರಿಸಿದ್ದಾರೆ. ಪದುವಾ ಪರೀಕ್ಷಾ ಕೇಂದ್ರದಲ್ಲಿ ಈ ಬಾರಿ ಒಂದು ವಿಶೇಷ ಮಗು ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯಲಿದೆ. ಗೃಹಾಧಾರಿತ ಶಿಕ್ಷಣ ಪಡೆಯುತ್ತಿರುವ ಈ ಮಗುವಿನ ಪಾಲಕರ ವಿನಂತಿ ಮೇರೆಗೆ ಈ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.





ಪುತ್ತೂರಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸರ್ವ ಸನ್ನದ್ಧ



ಪುತ್ತೂರು: 2025-26ನೇ ಸಾಲಿನ ಎಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಮಾ.18 ಬುಧವಾರದಿಂದ ಆರಂಭಗೊಳ್ಳುತ್ತಿದೆ. ಪುತ್ತೂರು ತಾಲೂಕಿನ 9 ಹಾಗೂ ಕಡಬ ತಾಲೂಕಿನ 4 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಉಭಯ ತಾಲೂಕುಗಳಲ್ಲಿ ಒಟ್ಟು 4,878 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಅವರ ನೇತೃತ್ವದಲ್ಲಿ ಶಿಕ್ಷಣ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮಾ.18ರಂದು ಪ್ರಥಮ ಭಾಷೆ, ಮಾ.23ರಂದು ವಿಜ್ಞಾನ, ಮಾ.25ರಂದು ದ್ವಿತೀಯ ಭಾಷೆ, ಮಾ.28ರಂದು ಗಣಿತ, ಮಾ.30ರಂದು ತೃತೀಯ ಭಾಷೆ, ಏ.2ರಂದು ಸಮಾಜ ವಿಜ್ಞಾನ ಪರೀಕ್ಷೆ ನಡೆಯಲಿದೆ.

ಉಭಯ ತಾಲೂಕುಗಳಲ್ಲಿ ರೆಗ್ಯುಲರ್ 4,649 ವಿದ್ಯಾರ್ಥಿಗಳು, 153 ಖಾಸಗಿ ವಿದ್ಯಾರ್ಥಿಗಳು, ರಿಪೀಟರ್ಸ್ 64, ಖಾಸಗಿ ರಿಪೀಟರ್ಸ್ 12 ಹಾಗೂ 3 ಮಂದಿ ವಿಶೇಷ ಚೇತನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾ.18ರಿಂದ ಏ.2ರ ತನಕ ನಡೆಯಲಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದ ಸುತ್ತ ನಿಷೇದಾಜ್ಞೆ ಜಾರಿಯಲ್ಲಿ ಇರಲಿದೆ. ಪರೀಕ್ಷಾ ಕೇಂದ್ರದ 200 ಮೀ. ವ್ಯಾಪ್ತಿಯಲ್ಲಿ ಜೆರಾಕ್ಸ್ ಅಂಗಡಿಗಳು ಕಾರ್ಯ ನಿರ್ವಹಿಸುವುದು ಮತ್ತು ಧ್ವನಿವರ್ಧಕ ಬಳಕೆಯನ್ನು ನಿಷೇಧಿಸಲಾಗಿದೆ.

ಉಡುಪಿ ಜಿಲ್ಲೆಯ 14,151 ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರ

ಉಡುಪಿ: ಜಿಲ್ಲೆಯಾದ್ಯಂತ ಬುಧವಾರದಿಂದ (ಮಾ. 18) ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭವಾಗಲಿದ್ದು, ಒಟ್ಟು 14,151 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ. ಜಿಲ್ಲಾಡಳಿತವು ಪರೀಕ್ಷಾ ಪಾವಿತ್ರ್ಯತೆ ಕಾಪಾಡಲು ಸಕಲ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದು, ಸುಗಮ ನಿರ್ವಹಣೆಗೆ 1,350 ಅಧಿಕಾರಿ-ಸಿಬ್ಬಂದಿಗಳನ್ನು ನಿಯೋಜಿಸಿದೆ.

ಪರೀಕ್ಷಾ ಅಂಕಿ-ಅಂಶಗಳು

ಒಟ್ಟು ವಿದ್ಯಾರ್ಥಿಗಳು	14,151 (7,353 ಗಂಡು ಮಕ್ಕಳು, 6,798 ಹೆಣ್ಣು ಮಕ್ಕಳು.)
ಹೊಸ ಅಭ್ಯರ್ಥಿಗಳು	13,516
ಪುನರಾವರ್ತಿತ ಅಭ್ಯರ್ಥಿಗಳು	295 ರೆಗ್ಯುಲರ್, 47 ಖಾಸಗಿ.
ಖಾಸಗಿ ಅಭ್ಯರ್ಥಿಗಳು	293

ಕೇಂದ್ರಗಳ ವಿವರ

ಜಿಲ್ಲೆಯ 51 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 686 ಕೊಠಡಿಗಳನ್ನು ಪರೀಕ್ಷೆಗಾಗಿ ಮೀಸಲಿಡಲಾಗಿದೆ.

ಉಡುಪಿ ವಲಯ	15 ಕೇಂದ್ರಗಳು
ಬ್ರಹ್ಮಾವರ	11 ಕೇಂದ್ರಗಳು
ಕಾರ್ಕಳ	09 ಕೇಂದ್ರಗಳು
ಬೈಂದೂರು ಮತ್ತು ಕುಂದಾಪುರ	ತಲಾ 08 ಕೇಂದ್ರಗಳು

ಸುರಕ್ಷತಾ ವ್ಯವಸ್ಥೆ:

ಪರೀಕ್ಷಾ ಅಕ್ರಮ ತಡೆಯಲು ಎಲ್ಲಾ 51 ಕೇಂದ್ರ ಹಾಗೂ ಕ್ಯಾಂಪಸ್‌ಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಅಳವಡಿಸಲಾಗಿದೆ.



ಉಡುಪಿ ಮಠಾಧೀಶರಿಂದ ಪವಿತ್ರಸ್ನಾನ

ಉಡುಪಿ: 'ಕೃಷ್ಣಾಂಗಾರಕ ಚತುರ್ದಶೀ' ಪುಣ್ಯಕಾಲದ ಪ್ರಯುಕ್ತ ಪೆರಂಪಳ್ಳಿಯ ಶೀಂಬ್ರ ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಸನಿಹದ ಸುವರ್ಣಾ ನದಿಯಲ್ಲಿ ಮಂಗಳವಾರ ಭಕ್ತಿಪೂರ್ವಕ ನದೀ ಸ್ನಾನದ ಪರ್ವ ನಡೆಯಿತು. ಅಷ್ಟಮಠದ ಯತಿವರ್ಯರು ಹಾಗೂ ಉಡುಪಿ ಶಾಸಕ ಯಶಪಾಲ್ ಎ. ಸುವರ್ಣ ಅವರು ಪವಿತ್ರ ಸ್ನಾನಗೈದು ನದೀ ದೇವತೆಗೆ ಪ್ರಾರ್ಥನೆ ಸಲ್ಲಿಸಿದರು.

ಸೋದೆ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರ ಸಂಕಲ್ಪದಂತೆನಡೆದಈಪವಿತ್ರಸ್ನಾನೋತ್ಸವದಲ್ಲಿ ಪಲಿಮಾರು ಮಠದ ಉಭಯ ಶ್ರೀಗಳು, ಪೇಜಾವರ ಶ್ರೀಗಳು, ಕಾಣಿಯೂರು ಶ್ರೀಗಳು ಹಾಗೂ ಅದಮಾರು ಮಠದ ಕಿರಿಯ ಶ್ರೀಪಾದರು ಭಕ್ತರೊಂದಿಗೆ ಆಗಮಿಸಿ ನದೀ ಸ್ನಾನಗೈದರು. ಮಠದ ವತಿಯಿಂದ ಧಾರ್ಮಿಕ ವಿಧಿವಿಧಾನಗಳೊಂದಿಗೆ ಸ್ನಾನಘಟ್ಟವನ್ನು ಭಕ್ತರಿಗಾಗಿ ಮುಕ್ತಗೊಳಿಸಲಾಯಿತು.



ನಸುಮುಂಜಾನೆಯಿಂದಲೇನೂರಾರು ಭಕ್ತರು ನದಿಯಲ್ಲಿ ಮುಳುಗೆದ್ದು ಪುನೀತರಾದರು.

ವಾಸುದೇವ ಭಟ್ ಪೆರಂಪಳ್ಳಿ ಅವರು ಧಾರ್ಮಿಕ ವಿಧಿಗಳನ್ನು ನೆರವೇರಿಸಿಕೊಟ್ಟರು. ಬಳಿಕ ಸಿದ್ಧಿವಿನಾಯಕ ದೇವರ ದರ್ಶನ ಪಡೆದ ಶಾಸಕರಿಗೆ ಅರ್ಚಕ ನವೀನ್ ಶಿವತ್ತಾಯರು ಪ್ರಸಾದ ನೀಡಿ ಆಶೀರ್ವದಿಸಿದರು.

₹2.25 ಕೋ. ವೆಚ್ಚದ ಸುಸಜ್ಜಿತ ಸ್ನಾನಘಟ್ಟ

ಸೋದೆ ಶ್ರೀಗಳ ಮಾರ್ಗದರ್ಶನ ಹಾಗೂ ಶಾಸಕ ಯಶ್‌ಪಾಲ್ ಸುವರ್ಣರ ವಿಶೇಷ ಪ್ರಯತ್ನದಿಂದ ಸಣ್ಣ ನೀರಾವರಿ ಇಲಾಖೆಯ 2.25 ಕೋಟಿ ರೂ. ಅನುದಾನದಲ್ಲಿ ನೂತನ ಸ್ನಾನಘಟ್ಟ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಈ ಹಿಂದೆ ಡಾ. ವಿ.ಎಸ್. ಆಚಾರ್ಯರು ಸಚಿವರಾಗಿದ್ದಾಗ ಸ್ನಾನಘಟ್ಟ ನಿರ್ಮಾಣದ ಕನಸು ಕಂಡಿದ್ದರು. ನಂತರ ಕೋಟ ಶ್ರೀನಿವಾಸ ಪೂಜಾರಿ, ಸುನಿಲ್ ಕುಮಾರ್ ಹಾಗೂ ಮಾಜಿ ಶಾಸಕ ಕೆ. ರಘುಪತಿ ಭಟ್ ಅವರು ಇದರ ಪ್ರಗತಿಗೆ ಶ್ರಮಿಸಿದ್ದರು. ಮಳೆಯಿಂದಾಗಿ ಭೂಕುಸಿತ ಉಂಟಾದಾಗ ಸೋದೆ ಶ್ರೀಗಳು ತಡೆಗೋಡೆ ನಿರ್ಮಿಸಿ ದೇವಸ್ಥಾನವನ್ನು ರಕ್ಷಿಸಿದ್ದರು. ಏಪ್ರಿಲ್ ಅಂತ್ಯಕ್ಕೆ ಈ ಕಾಮಗಾರಿ ಪೂರ್ಣಗೊಂಡು ಅಧಿಕೃತವಾಗಿ ಉದ್ಘಾಟನೆಗೊಳ್ಳಲಿದೆ.

ನಂದಿನಿ ನದಿ ಮಾಲಿನ್ಯ : ಲೋಕಾಯುಕ್ತ ಪೊಲೀಸರಿಂದ ಮುಂದುವರಿದ ವಿಚಾರಣೆ



ಸುರತ್ಕಲ್ : ಮಂಗಳೂರು: ಖಂಡಿಗೆ ಹಾಗೂ ನಂದಿನಿ ನದಿ ಮಾಲಿನ್ಯಕ್ಕೆ ಪರೋಕ್ಷ ಕಾರಣರಾಗಿರುವ ಆರೋಪದ ಮೇಲೆ ಕರ್ನಾಟಕ ಲೋಕಾಯುಕ್ತವು 9 ಮಂದಿ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡ ಬಳಿಕ ವಿಚಾರಣೆ ಮುಂದುವರಿಸಿದ್ದು, ಮಂಗಳವಾರ ಲೋಕಾಯುಕ್ತ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಮಹಜರು ನಡೆಸಿ ಸ್ವಚ್ಛತಾ ಪ್ರಗತಿ ಕುರಿತಂತೆ ಮಾಹಿತಿ ಕಲೆ ಹಾಕಿದರು.

ಲೋಕಾಯುಕ್ತ ಡಿವೈಎಸ್‌ಪಿ ಗಾನಾ ಕುಮಾರಿ ಅವರ ತಂಡ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ , ಮಹಜರು ನಡೆಸಿದರು. ಮುಂದಿನ ವಿಚಾರಣೆಯನ್ನು ಎ . 21ಕ್ಕೆ ನಿಗದಿ ಪಡಿಸಲಾಯಿತು. 2025ರ ಮಾರ್ಚ್‌ನಲ್ಲಿ ಮಾಲಿನ್ಯ ಕುರಿತಂತೆ ಕೇಸು ದಾಖಲು ಮಾಡಿ ವಿಚಾರಣೆ ಆರಂಭ ವಾಗಿತ್ತು. ಆ ಬಳಿಕ ಸ್ವಚ್ಛತಾ ಕಾರ್ಯದಲ್ಲಿ ಪ್ರಗತಿ ಕಂಡು ಕಳೆ ತೆಗೆದು ಮೀನು ಹಿಡಿಯುವ ಜಾತ್ರೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ಒಳಚರಂಡಿ ತ್ಯಾಜ್ಯ ಸೋರಿಗೆಗೆ ಇದುವರೆಗೆ ಸೂಕ್ತ ಕ್ರಮ ಕೈಗೊಳ್ಳಲು ಸ್ಥಳೀಯ ಆಡಳಿತ ವಿಫಲವಾಗಿದೆ. ನಂದಿನಿ, ಖಂಡಿಗೆ ನದಿ ಹಾಗೂ ಉಪನದಿಗಳು ಕಲುಷಿತಗೊಂಡಿದ್ದರೂ ಅದರ ಬಗ್ಗೆ ಕ್ರಮ ಕೈಗೊಳ್ಳದ ಆರೋಪದ ಮೇಲೆ ಒಂಬತ್ತು ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕರ್ನಾಟಕ ಲೋಕಾಯುಕ್ತವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(2)ರ ಅಡಿಯಲ್ಲಿ ಮಾರ್ಚ್ 24ರಂದು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿತ್ತು. ಮಾರ್ಚ್ 7 ಮತ್ತು 8ರಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಭೇಟಿ ನೀಡಿದ್ದ ವೇಳೆ, ಇಲ್ಲಿನ ನದಿ ಬದಿ ಹಿಂಭಾಗದ ಹೊಳೆಗೆ ಮಣ್ಣು ತುಂಬಿಸಿ, ಒತ್ತುವರಿ ಮಾಡಿ, ಕಟ್ಟಡ ನಿರ್ಮಿಸಲಾಗುತ್ತಿದೆ. ತ್ಯಾಜ್ಯ ನೀರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯ ಎಸ್‌ಟಿಪಿ ಘಟಕದ ಹೊಲಸು ನೀರನ್ನು ಖಂಡಿಗೆ ನದಿ ಹಾಗೂ ನಂದಿನಿ ನದಿಗೆ ಬಿಡುವುದರಿಂದ ಸ್ಥಳೀಯ ಜಲಮೂಲಗಳು ಕಲುಷಿತಗೊಂಡಿವೆ ಎಂದು ಸುಕೇಶ್ ಶೆಟ್ಟಿ ಎಂಬವರು ದೂರು ನೀಡಿದ್ದರು.

ರಾಜ್ಯದ 3ನೇ ಅತೀ ಎತ್ತರದ ಧ್ವಜಸ್ತಂಭ

ಗಾಳಿ ಸಹಿತ ಮಳೆಗೆ ದಾರ ಕಿತ್ತು ನೆಲಕ್ಕೆ ಅಪ್ಪಳಿಸಿದ ರಾಷ್ಟ್ರ ಧ್ವಜ

ಪುತ್ತೂರು: ನಗರದ ಮಧ್ಯೆ ನೆಲ್ಲಿಕಟ್ಟೆಯಲ್ಲಿ ನಿರ್ಮಾಣಗೊಂಡ ರಾಜ್ಯದ ಮೂರನೇ ಅತೀ ಎತ್ತರದ ಧ್ವಜಸ್ತಂಭದಿಂದ ರಾಷ್ಟ್ರಧ್ವಜ ಹರಿದು ಕೆಳಗೆ ಬಿದ್ದಿದೆ. ಪುತ್ತೂರಿನಲ್ಲಿ ಮಾ.16ರ ರಾತ್ರಿ ಬೀಸಿದ ಗಾಳಿ ಮಳೆಗೆ ಈ ಧ್ವಜ ದಾರ ಕಿತ್ತು ನೆಲಕ್ಕೆ ಅಪ್ಪಳಿಸಿದೆ. ಉದ್ಘಾಟನೆಗೊಂಡು ಒಂದು ತಿಂಗಳು ಕಳೆಯುವುದರೊಳಗೆ ಧ್ವಜ ಬಿದ್ದಿರುವುದು ಪರ ವಿರೋಧ ಚರ್ಚೆಗಳಿಗೂ ಕಾರಣವಾಗಿದೆ.



ಹಲವುಮಂದಿಸಾರ್ವಜನಿಕರು ಈ ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದರೆ, ಮಹಾಲಿಂಗೇಶ್ವರ ದೇವಸ್ಥಾನದ ಭಕ್ತರು ಇದು ದೇವರ ಅಸಹಕಾರದಿಂದ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಹಾಲಿಂಗೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಅಂದರೆ ಗದ್ದೆಯ ತುದಿಯಲ್ಲಿ ನಿರ್ಮಾಣಗೊಂಡಿರುವ ಧ್ವಜಸ್ತಂಭ ವಿವಾದದ ಕೇಂದ್ರಬಿಂದುವಾಗಿದೆ. ದೇವಸ್ಥಾನದ ಮುಂಭಾಗದಲ್ಲಿ ನಗರಸಭೆಯ ಜಾಗದಲ್ಲಿ ರಾಜ್ಯದ ಮೂರನೇ ಅತೀ ಎತ್ತರದ ಧ್ವಜಸ್ತಂಭ ನಿರ್ಮಿಸಲಾಗಿದೆ. ರೂ.1 ಕೋಟಿ ವೆಚ್ಚದಲ್ಲಿ ಈ ಧ್ವಜಸ್ತಂಭವನ್ನು ನಿರ್ಮಿಸಲಾಗಿದ್ದು, ಈ ಧ್ವಜಸ್ತಂಭಕ್ಕೆ ಅಳವಡಿಸಲಾಗಿದ್ದ ರಾಷ್ಟ್ರಧ್ವಜ ಹರಿದು ಬಿದ್ದಿರುವುದು ಈ ವಿವಾದಕ್ಕೆ ಕಾರಣವಾಗಿದೆ. ಧ್ವಜಸ್ತಂಭದ ಪಕ್ಕದಲ್ಲೇ ಇರುವ ವಿದ್ಯುತ್ ತಂತಿ ಮೇಲೆ ಬಿದ್ದು, ಇಡೀ ನಗರದಲ್ಲಿ ಕೆಲವು ಸಮಯ ವಿದ್ಯುತ್ ಸಂಪರ್ಕವನ್ನೇ ಕಳೆದುಕೊಂಡಿತ್ತು. ಈ ಧ್ವಜಸ್ತಂಭ ಒಂದೇ ಮಳೆಗೆ ಕೊಂಚ ಬಾಗಿದಂತೆ ಕಂಡು ಬರುತ್ತಿದ್ದು, ಧ್ವಜ ಹರಿದು ಹೋಗಿದೆ. ಕಳಪೆ ಕಾಮಗಾರಿಯ ಪರಿಣಾಮವೇ ಎನ್ನುವ ಆರೋಪಗಳು ಕೇಳಿ ಬಂದಿವೆ.

ಅತ್ಯಂತ ತರಾತುರಿಯಲ್ಲಿ ಈ ಧ್ವಜಸ್ತಂಭದ ಕಾಮಗಾರಿಯನ್ನು ಮುಗಿಸಲಾಗಿದ್ದು, ಇದರ ಭದ್ರತೆಯ ವಿಚಾರದಲ್ಲೂ ಇದೀಗ ಆತಂಕ ಮೂಡ ಲಾರಂಭಿಸಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಂಜಿನಿಯರ್‌ಗಳು ಧ್ವಜಸ್ತಂಭದ ಕುರಿತು ಮೂಡಿರುವ ಸಂಶಯಗಳಿಗೆ ಸ್ಪಷ್ಟನೆ ನೀಡಬೇಕು ಎನ್ನುವ ಒತ್ತಾಯವೂ ಕೇಳಿ ಬರಲಾರಂಭಿಸಿದೆ.



ಶುಭ ಲಕ್ಷಣವಲ್ಲ!

ದೇವಸ್ಥಾನದ ಕೊಡಿಮರಕ್ಕೆ ಎದುರುಮುಖವಾಗಿ ಮತ್ತು ಕೊಡಿಮರದಿಂದ ಎತ್ತರಕ್ಕೆ ಈ ಧ್ವಜಸ್ತಂಭ ನಿರ್ಮಿಸುವುದಕ್ಕೆ ಈ ಹಿಂದೆಯೇ ವಿರೋಧಗಳು ಕೇಳಿ ಬಂದಿದ್ದವು. ದೇವಸ್ಥಾನಕ್ಕೆ ಸಂಬಂಧಪಟ್ಟ ವಿದ್ವಾಂಸರೊಬ್ಬರು ಕೊಡಿಮರಕ್ಕೆ ಎತ್ತರವಾಗಿ ಮತ್ತು ಅದರ ಎದುರಾಗಿ ಧ್ವಜಸ್ತಂಭ ನಿರ್ಮಾಣ ಮಾಡುವುದು ದೇವಸ್ಥಾನದ ದೃಷ್ಟಿಯಿಂದ ಒಳ್ಳೆಯದಲ್ಲ ಎಂದಿದ್ದರು. ಈ ನಡುವೆ ದೇವಸ್ಥಾನದ ವಾರ್ಷಿಕ ಜಾತ್ರೋತ್ಸವದ ನಿಮಿತ್ತ ದೇವರ ಬ್ರಹ್ಮರಥವನ್ನು ಹೊರಗಡೆ ಇಡುವ ದಿನ ಧ್ವಜ ಬಿದ್ದಿರುವುದು ಶುಭ ಲಕ್ಷಣಗಳಲ್ಲ ಎನ್ನುವ ಮಾತುಗಳೂ ಕೇಳಿ ಬರಲಾರಂಭಿಸಿದೆ.

ಭ್ರಷ್ಟಾಚಾರದ ಸಂಶಯ

ಸುಮಾರು ರೂ.1 ಕೋಟಿ ಖರ್ಚು ಮಾಡಿರೋದು ಈ ರೀತಿ ಹರಿದು ಬೀಳಲು ಕಾಮಗಾರಿಯಲ್ಲಿ ಭ್ರಷ್ಟಾಚಾರ ನಡೆದಿದೆಯೇ ಎನ್ನು ಸಂಶಯವನ್ನು ಸಾರ್ವಜನಿಕ ವಲಯದಲ್ಲಿ ಹುಟ್ಟು ಹಾಕಿದೆ. ಈ ಕುರಿತು ತನಿಖೆ ಆಗಲಿ.

■ **ಶಿವಕುಮಾರ್,** ಅಧ್ಯಕ್ಷರು, ಪುತ್ತೂರು ಬಿಜೆಪಿ ನಗರ ಮಂಡಲ

ದೂರು ಕೊಟ್ಟವರ ಮೇಲೂ ಹಲವು ಕೇಸುಗಳಿವೆ: ಪೊಲೀಸ್ ಆಯುಕ್ತ

ಮಹಿಳೆಯರಿಗೆ ಕಿರುಕುಳ ಆರೋಪ : ಮೂಡುಬಿದಿರೆ ಇನ್‌ಸ್ಪೆಕ್ಟರ್ ಅಮಾನತು

ಮಂಗಳೂರು: ಮಹಿಳೆಯರಿಗೆ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿ ತನಿಖೆ ನಡೆಸಿದ ಎಸಿಪಿ ಅವರು ನೀಡಿದ ವರದಿ ಹಿನ್ನೆಲೆಯಲ್ಲಿ ಮೂಡುಬಿದಿರೆ ಠಾಣೆಯ ಇನ್‌ಸ್ಪೆಕ್ಟರ್ ಸಂದೇಶ್ ಅವರನ್ನು ಕರ್ತವ್ಯದಿಂದ ಅಮಾನತುಗೊಳಿಸಿ ಮಂಗಳೂರು ನಗರ ಪೊಲೀಸ್ ಆಯುಕ್ತರು ಆದೇಶಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತರು, ಸುಮತಿ ನಾಯ್ಕ್ ದೂರು ನೀಡುವ ಜತೆಗೆ ಮಾಧ್ಯಮ ಹೇಳಿಕೆ ನೀಡಿದ್ದಾರೆ. ಅವರ ಮತ್ತು ಅವರ ಸಹೋದರಿಯ ನಡುವೆ ಕೌಟುಂಬಿಕ ಸಮಸ್ಯೆಗಳಿವೆ. ಸುಮತಿ ನಾಯ್ಕ್ ವಿರುದ್ಧಎರಡುಪ್ರಕರಣಗಳುಮತ್ತುಅವರ ಸಹೋದರಿಯ ವಿರುದ್ಧ ಎರಡು ಪ್ರಕರಣಗಳು ದಾಖಲಾಗಿದೆ. ಅವರ ದೂರುಗಳ ಮೇಲೆ ಇನ್ಸ್‌ಪೆಕ್ಟರ್ ವಿರುದ್ಧವೂ ಪ್ರಕರಣ ದಾಖಲಾಗಿದೆ. ಈ ಬಗ್ಗೆ ತನಿಖೆಯಲ್ಲಿರುವ ಒಂದು ಪ್ರಕರಣವನ್ನು ಹೊರತುಪಡಿಸಿ, ಉಳಿದೆಲ್ಲವೂ ಹೈಕೋರ್ಟ್‌ನಲ್ಲಿ ತಡೆಹಿಡಿಯಲ್ಪಟ್ಟಿದ್ದು ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಬೇಕಿದೆ ಎಂದು ಹೇಳಿದ್ದಾರೆ.

ಇನ್ಸ್‌ಪೆಕ್ಟರ್ ವಿರುದ್ಧ ಮಾಧ್ಯಮ ಹೇಳಿಕೆ ನೀಡಿದ ಎರಡನೇ ಮಹಿಳೆ ಅವಿತ ಮಿನೇಜಸ್. ಅವರ ಪತಿಯ ವಿರುದ್ಧ ನಾಲ್ಕು ಪ್ರಕರಣಗಳು ದಾಖಲಾಗಿದ್ದು (ಒಂದು ಖುಲಾಸೆಗೊಂಡಿದೆ) ಆ ಪ್ರಕರಣಗಳಲ್ಲಿ ಒಂದರಲ್ಲಿ, ಅವರು ಮತ್ತು ಅವರ ಪತಿಯ ಮೇಲೆ ಬಡವರ ಮೂತ್ರಪಿಂಡ ಚಿಕಿತ್ಸೆಗಾಗಿ ಸಂಗ್ರಹಿಸಿದ ಹಣವನ್ನು ಬಳಸಿದ್ದಾರೆ ಎಂದು ಆರೋಪಿಸಲಾಗಿದೆ.

ಸಾಕ್ಷ್ಯಗಳನ್ನು ಸಂಗ್ರಹಿಸಿದ ನಂತರ ಅವರ ಮತ್ತು ಅವರ ಪತಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ ಈ ಮಹಿಳೆಯರು ವಿಡಿಯೋ ಮತ್ತು ಆಡಿಯೋದಲ್ಲಿ ಕಂಡುಬರುವ ಮಹಿಳೆಯರಿಗಿಂತ ಭಿನ್ನವಾಗಿದ್ದಾರೆ. ಆದರೆ ವಿಡಿಯೋ ಮತ್ತು ಆಡಿಯೋದಲ್ಲಿ ಇನ್ಸ್‌ಪೆಕ್ಟರ್ ಪ್ರಶ್ನಾರ್ಹ ನಡವಳಿಕೆಯನ್ನು ತೋರಿಸುವುದರ ಜೊತೆಗೆ ಮಹಿಳೆಯೊಂದಿಗೆ ಫೋನ್‌ನಲ್ಲಿ ಅನುಚಿತವಾಗಿ ಮಾತನಾಡುವುದು ಚಿತ್ರಿತವಾಗಿದೆ. ಇಬ್ಬರೂ ಮಹಿಳೆಯರು ಯಾವುದೇ ದೂರು ನೀಡಲು ನಿರಾಕರಿಸಿದ್ದು, ನಂತರ ಅವರು ತಮ್ಮ ಹೇಳಿಕೆಗಳನ್ನು ನೀಡಬಹುದು ಎಂದು ಮಾಹಿತಿ ದೊರೆತಿದೆ. ಆದರೆ, ಆಡಿಯೋ ಮತ್ತು ವಿಡಿಯೋದಲ್ಲಿ ಅವರು ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂಬುದು ಕಂಡುಬರುತ್ತದೆ. ಹಾಗಾಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂದೇಶ್ ಅವರನ್ನು ಅಮಾನತುಗೊಳಿಸಿ ಆದೇಶಿಸಲಾಗಿದ್ದು, ಬಳಿಕ ಈ ಪ್ರಕರಣದ ವಿವರವಾದ ವಿಚಾರಣೆ ನಡೆಯಲಿದೆ ಎಂದು ನಗರ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಉಡುಪಿಯಲ್ಲಿ ನಡೆದ ಉದ್ಯೋಗ ಮೇಳಕ್ಕೆ ಅಭೂತಪೂರ್ವ ಸ್ಪಂದನೆ

3 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗಿ

ಉಡುಪಿ: ನಗರದ ಅಮೃತ್ ಗಾರ್ಡನ್‌ನಲ್ಲಿ ಮಂಗಳವಾರ ಆಯೋಜಿಸಲಾಗಿದ್ದ 'ಪ್ರಧಾನಮಂತ್ರಿ ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಮೇಳ' ಹಾಗೂ 'ಬೃಹತ್ ಉದ್ಯೋಗ ಮೇಳಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಾವಿರಾರು ನಿರುದ್ಯೋಗಿ ಯುವಕ-ಯುವತಿಯರು ಈ ವೇದಿಕೆಯನ್ನು ಸದುಪಯೋಗಪಡಿಸಿಕೊಂಡರು.

ಮೂಡಬಿದರೆಯ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಅಧ್ಯಕ್ಷ ಡಾ. ಮೋಹನ ಆಳ್ವ ಅವರು ಮೇಳವನ್ನು ಉದ್ಘಾಟಿಸಿ ಚಾಲನೆ ನೀಡಿದರು. ಕನ್ಯಾಡಿ-ಧರ್ಮಸ್ಥಳ ಶ್ರೀರಾಮಕ್ಷೇತ್ರದ ಮಹಾ ಮಂಡಲೇಶ್ವರ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಅವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನನೀಡುತ್ತಾ, ಯುವಜನತೆಕೌಶಲಗಳನ್ನು ಮೈಗೂಡಿಸಿಕೊಂಡು ಉದ್ಯೋಗಸ್ಥರಾಗುವಂತೆ ಕರೆ ನೀಡಿದರು.

ಕೇವಲ ಉಡುಪಿ ಮತ್ತು ದಕ್ಷಿಣ ಕನ್ನಡ ಮಾತ್ರವಲ್ಲದೆ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದಲೂ ಬಂದಿದ್ದ 3 ಸಾವಿರಕ್ಕೂ ಅಧಿಕ ಉದ್ಯೋಗಾಕಾಂಕ್ಷಿಗಳು ಮೇಳದಲ್ಲಿ ನೋಂದಾಯಿಸಿಕೊಂಡುಸಂದರ್ಶನಎದುರಿಸಿದರು. ನೂರಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಈ ಬೃಹತ್ ಮೇಳದಲ್ಲಿ ಪಾಲ್ಗೊಂಡಿದ್ದು, ನೇರ ಸಂದರ್ಶನದ ಮೂಲಕ ಅರ್ಹ ಅಭ್ಯರ್ಥಿಗಳನ್ನು ಉದ್ಯೋಗಕ್ಕಾಗಿ ಆಯ್ಕೆ ಮಾಡಿಕೊಂಡವು.



ಧರ್ಮಸ್ಥಳ ಶ್ರೀ ರಾಮಕ್ಷೇತ್ರ ಉಡುಪಿ ಸಮಿತಿ, ಎಜುಕೇಶನಲ್ ಟ್ರಸ್ಟ್‌ನ ಬಿಲ್ಲಾಡಿ ಮಾನ್ಯ ಆತ್ಮಾನಂದ ಸರಸ್ವತಿ ಐಟಿಐ ಕೇಂದ್ರದ ನೇತೃತ್ವದಲ್ಲಿ, ಕೌಶಲ ಅಭಿವೃದ್ಧಿ ಇಲಾಖೆ ಹಾಗೂ ಉದ್ಯೋಗ ಇಲಾಖೆಯ ಸಹಯೋಗದೊಂದಿಗೆ ಈ ಮೇಳವನ್ನು ಆಯೋಜಿಸಲಾಗಿತ್ತು. ಎಂಜಿಎಂ ಕಾಲೇಜಿನ ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ನೋಂದಣಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಸಹಕರಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 33° 23° | ಉಡುಪಿ 31° 23°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 18, ಮಾರ್ಚ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ನದಿ ಒಡಲಿಗೆ ತ್ಯಾಜ್ಯ: ಕಲುಷಿತಗೊಳ್ಳುತ್ತಿದೆ 'ಫಲ್ಗುಣಿ' ನದಿ



ಪುಟ 5

ಟೇಕ್ ಎ ಬ್ರೇಕ್ ಕೇಂದ್ರಗಳು ಕಾರ್ಯ ನಿರ್ವಹಣೆಗೆ ಸಜ್ಜು

ಉಡುಪಿ ಮಠಾಧೀಶರಿಂದ ಭಕ್ತರೊಂದಿಗೆ ಪವಿತ್ರ ಸ್ನಾನ





ಶ್ರೀವಾದಿರಾಜರು ತೀರ್ಥಪ್ರಬಂಧದಲ್ಲಿ ವರ್ಣಿಸಿರುವ ಸುವರ್ಣಾ ನದಿ ಕೃಷ್ಣಾಂಗಾರ ಚತುರ್ದಶಿಯ ಅಂಗವಾಗಿ ಸುವರ್ಣಾ ನದಿ ಸ್ನಾನ ಘಟ್ಟಕ್ಕೆ ಆಗಮಿಸಿದ ಪಲಿಮಾರು ಉಭಯ ಶ್ರೀಗಳು, ಪೇಜಾವರ ಶ್ರೀಗಳು, ಕಾಣಿಯೂರು ಶ್ರೀಗಳು, ಸೋದೆಶ್ರೀ, ಅದಮಾರು ಮಠದ ಕಿರಿಯ ಶ್ರೀಪಾದರು ಭಕ್ತರೊಂದಿಗೆ ಪವಿತ್ರ ಸ್ನಾನಗೈದರು.

ಸುತ್ತಮುತ್ತ

ಬೇಳ ಪರಿಸರದಲ್ಲಿ ಬೀದಿ ನಾಯಿ ದಾಳಿ: ಬಾಲಕ ಆಸ್ಪತ್ರೆಗೆ

ಬದಿಯಡ್ಕ: ಬೇಳ ಪರಿಸರದಲ್ಲಿ ಬೀದಿ ನಾಯಿಗಳ ಹಾವಳಿ ವ್ಯಾಪಕಗೊಂಡಿದೆ. ಈ ನಡುವೆ ನಾಲ್ಕು ವರ್ಷದ ಬಾಲಕನೋರ್ವನಿಗೆ ಬೀದಿ ನಾಯಿ ದಾಳಿ ಮಾಡಿದ್ದು, ಬಾಲಕನನ್ನು ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಬೇಳ ವಿ.ಎಂ.ನಗರದ ನಾರಾಯಣನ್ ಅವರ ಮಗ ಪ್ರಣವ್ ಎಂಬ ಬಾಲಕ ಮಂಗಳವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ಮಾನ್ಯದ ಎಲ್‌ಕೆಜಿ ಶಾಲೆಗೆ ಹೋಗಲು ಆಟೋರಿಕ್ಷಾ ಹತ್ತುತ್ತಿದ್ದಾಗ ಹಿಂದಿನಿಂದ ನಾಯಿ ದಾಳಿ ಮಾಡಿದೆ. ಬೀದಿ ನಾಯಿಗಳ ಕಾಟ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕೋಟಾ ಕಾಯ್ದೆಯ ಉಲ್ಲಂಘನೆ: ಬಿತ್ತು 1800 ರೂ. ದಂಡ

ಮಡಿಕೇರಿ: ಮಡಿಕೇರಿ ತಾಲೂಕಿನ ಬಿಳಿಗೇರಿ ಮತ್ತು ಕಗ್ಗೋಡ್ಲು ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಹಾಗೂ ಕೋಟ್ಪಾ ಕಾಯ್ದೆ ಉಲ್ಲಂಘನೆ ಕುರಿತು ಅಂಗಡಿ/ ಹೋಟೆಲ್ ಗಳಿಗೆ ಅನಿರೀಕ್ಷಿತ ಭೇಟಿ ನೀಡಿದಾಗ ಸೆಕ್ಷನ್ 04 ರ ಅಡಿಯಲ್ಲಿ 10 ಪ್ರಕರಣಗಳಿಗೆ ರೂ.1800ಗಳ ದಂಡ ವಿಧಿಸಿ ನಿಯಮಗಳ ಕುರಿತು ಆರೋಗ್ಯ ಶಿಕ್ಷಣ ನೀಡಲಾಯಿತು. ತಾಲೂಕು ಆರೋಗ್ಯಾಧಿಕಾರಿ ಕಚೇರಿಯ ಆರೋಗ್ಯ ಶಿಕ್ಷಣಾಧಿಕಾರಿ ಪಾಲಾಕ್ಷ ಮತ್ತು ಆರೋಗ್ಯ ನಿರೀಕ್ಷಣಾಧಿಕಾರಿ ಜಿ.ವಿ.ಶ್ರೀನಾಥ್ ಹಾಗೂ ಜಿಲ್ಲಾ ತಂಬಾಕು ಕೋಶದ ಮಂಜುನಾಥ್, ಪೊಲೀಸ್ ಇಲಾಖೆಯವರು ಇದ್ದರು.

ಏತ ನೀರಾವರಿ ಯೋಜನೆ ವಿಸ್ತರಣೆಗೆ 23 ಲ.ರೂ.ಅನುದಾನ

ಬಂಟ್ವಾಳ: ಗ್ರಾಮೀಣ ಭಾಗದ ರೈತರಿಗೆ ವರದಾನವಾಗಿರುವ ಸಜೀಪ ಮುನ್ನೂರು, ಸಜೀಪ ಮೂಡ ಏತ ನೀರಾವರಿ ಯೋಜನೆಗಳ ಪೈಪ್ ಲೈನ್ ವಿಸ್ತರಣೆಗೆ ತಲಾ 23 ಲಕ್ಷ ರೂ. ಅನುದಾನ ಮಂಜೂರಾಗಿದೆ ಎಂದು ಸಜೀಪಮುನ್ನೂರು ಏತ ನೀರಾವರಿ ನೀರು ಬಳಕೆದಾರರ ಸಂಘದ ಅಧ್ಯಕ್ಷ ಮಹೇಶ್ ನಾಯಕ್ ಖಂಡಿಗ ತಿಳಿಸಿದ್ದಾರೆ. ಈ ಎರಡು ಏತ ನೀರಾವರಿ ಯೋಜನೆಗಳು 90 ಹೆಚ್ ಪಿ ಪಂಪ್ ಸೆಟ್‌ಗಳ ಮೂಲಕ ರೈತರಿಗೆ ನೇತ್ರಾವತಿ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುತ್ತಿದ್ದು ಇದೀಗ ಸ್ಥಳೀಯ ರೈತರ ಬೇಡಿಕೆಯಂತೆ ಹೆಚ್ಚುವರಿ ಜಮೀನುಗಳಿಗೆ ನೀರಾವರಿ ಸೌಲಭ್ಯ ವಿಸ್ತರಣೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಬರಿದಾಗುತ್ತಿದೆ ಜಿಲ್ಲೆಯ ಜೀವನದಿಗಳ ಒಡಲು

ಹರಿವು ನಿಲ್ಲಿಸಿದ ಪಯಸ್ವಿನಿ

ಸದ್ಯ ಸುಳ್ಯ ನಗರವಾಸಿಗಳಿಗೆ ಕಿರು ಡ್ಯಾಂ ಆಸರೆ


ಸುಳ್ಯ: ಕರಾವಳಿಯಲ್ಲಿ ಬಿಸಿಲ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಜಲಮೂಲಗಳು ಬತ್ತುತ್ತಿವೆ. ಜಿಲ್ಲೆಗೆ ನೀರುಣಿಸುವ ಜೀವನದಿಗಳಾದ ನೇತ್ರಾವತಿ, ಫಲ್ಗುಣಿ, ಕುಮಾರಧಾರ ನದಿಗಳು ಜೀವ ಸೆಳೆ ಕಳೆದುಕೊಂಡಿದ್ದು, ಇದೀಗ ಸುಳ್ಯ ತಾಲೂಕಿನಲ್ಲಿ ಪಯಸ್ವಿನಿ ನದಿಯ ಹರಿವು ನಿಂತಿದೆ. ನದಿ ಬರಿದಾಗಿ ಅಲ್ಲಲ್ಲಿ ಬಂಡೆಗಳು ಎದ್ದು ಕಾಣುತ್ತಿದ್ದು, ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದ ಪಯಸ್ವಿನಿ ನದಿ ಇದುವೆಯೇ? ಎಂಬ ಪ್ರಶ್ನೆ ಮೂಡಿಸುತ್ತಿದೆ.

ನೀರಿನ ಅಭಾವವಿಲ್ಲ

ಪಯಸ್ವಿನಿ ನದಿಯಲ್ಲಿ ನೀರಿನ ಹರಿವು ಕುಂಠಿತವಾಗಿದ್ದರೂ ಸದ್ಯ ಡ್ಯಾಂನಲ್ಲಿ ನೀರು ತುಂಬಿರುವುದರಿಂದ ಪಟ್ಟಣಕ್ಕೆ ನೀರಿನ ಸಮಸ್ಯೆಯಂತೂ ಇಲ್ಲ. ಆದರೆ ಎಪ್ರಿಲ್ ಮೇ ವೇಳೆಗೆ ನೀರಿನ ಸಮಸ್ಯೆ ಕಾಡಲಿದೆಯೆ? ಎಂಬ ಪ್ರಶ್ನೆ ಜನತೆ ಕಾಡುತ್ತಿದೆ.

ಡ್ಯಾಂ ನಿರ್ಮಿಸಿ ನೀರು ಸಂಗ್ರಹ

ಕಲ್ಲುಮುಟ್ಲು ಎಂಬಲ್ಲಿ ನದಿಗೆ ಡ್ಯಾಂ ನಿರ್ಮಿಸಿ ನೀರನ್ನು ಸಂಗ್ರಹಿಸಿ ಅಲ್ಲಿಂದ ನೀರನ್ನು ಪಟ್ಟಣ ಪಂಚಾಯತ್ ವ್ಯಾಪ್ತಿ ಯಲ್ಲಿ ಒದಗಿಸಲಾಗುತ್ತಿದೆ. ಡ್ಯಾಂ ಕೆಳಭಾಗದಲ್ಲಿ, ಮೇಲ್ಭಾಗದಲ್ಲಿ ಪಯಸ್ವಿನಿಯ ಒಡಲು ಬಿಸಿಲ ಬೇಗೆಗೆ ಬರಿದಾಗುತ್ತಿರುವುದು ಆತಂಕ ಮೂಡಿದೆ.



ನೀರಿನ ಸಮಸ್ಯೆ ಇಲ್ಲ

ಸುಳ್ಯ ನ.ಪಂ. ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಸದ್ಯ ಕಂತೂ ಇಲ್ಲ. ಈಗಾಗಲೇ ಕಲ್ಲುಮುಟ್ಲು ಡ್ಯಾಂಗೆ ಗೇಟ್ ಅಳವಡಿಸಿ ನೀರು ಸಂಗ್ರಹ ಆರಂಭಿಸಲಾಗಿದ್ದು, ಅಲ್ಲಿ ನಗರಕ್ಕೆ ಬೇಕಾಗುವಷ್ಟು ನೀರು ಇದೆ.

● ಬಸವರಾಜ್ ಎಚ್.ಆರ್., ಸುಳ್ಯ ಪ.ಪಂ.ಮುಖ್ಯಾಧಿಕಾರಿ

ನೀರಿನ ಹರಿವು ಕುಂಠಿತ

ಕಲ್ಲುಮುಟ್ಲು ಡ್ಯಾಂಗೆ ಗೇಟ್ ಅಳವಡಿಸಿ ನೀರು ಸಂಗ್ರಹವನ್ನು ಡಿಸೆಂಬರ್ ತಿಂಗಳಿನಲ್ಲಿ ಆರಂಭಿಸಲಾಗಿದೆ. ಇದೀಗ ಡ್ಯಾಂನಲ್ಲಿ ನೀರು ಸಮೃದ್ಧವಾಗಿ ಸಂಗ್ರಹ ಗೊಂಡು ಹೆಚ್ಚುವರಿ ನೀರು ಹೊರ ಹರಿಯುತ್ತಿದೆ. ಆದರೆ, ಬಿಸಿಲ ತಾಪಕ್ಕೆ ಪಯಸ್ವಿನಿ ನದಿ ಯಲ್ಲಿ ನೀರಿನ ಹರಿವಿನ ಮಟ್ಟ ಕುಸಿಯುತ್ತಿದ್ದು, ಡ್ಯಾಂನ ಕೆಳ ಭಾಗ ಹಾಗೂ ಮೇಲ್ಭಾಗದ ಹಲವೆಡೆ ನದಿ ಬರಿದಾದಂತೆ ಕಾಣುತ್ತಿದೆ. ಮಾರ್ಚ್ ಆರಂಭದಲ್ಲಿಯೇ ನೀರಿನ ಹರಿವು ಕುಸಿಯುತ್ತಿರು ವುದರಿಂದ ಮುಂದಿನ ಎಪ್ರಿಲ್, ಮೇ ತಿಂಗಳಲ್ಲಿ ಉತ್ತಮ ಮಳೆ ಆಗದೇ ಇದ್ದಲ್ಲಿ ನದಿಯಲ್ಲಿ ನೀರಿನಮಟ್ಟ ಇನ್ನಷ್ಟು ಕುಸಿತವಾಗುವ ಸಾಧ್ಯತೆ ಹೆಚ್ಚಿದ್ದು, ಜನತೆ ನೀರಿನ ಅಪವ್ಯಯಕ್ಕೆ ಕಡಿವಾಣ ಹಾಕಬೇಕಿದೆ.

5 ದಿನಗಳ ಕಾಲ ಗುಡುಗು ಮಳೆ?

ಕರಾವಳಿ ಜಿಲ್ಲೆಗಳಲ್ಲಿ ವರುಣ ಕೃಪೆ ನಿರೀಕ್ಷೆ

ಹವಾಮಾನ ಇಲಾಖೆಯಿಂದ ಮಾಹಿತಿ

ಉಡುಪಿ: ಬಿಸಿಲಿನ ಬೇಗೆಯಿಂದ ಕಂಗಾಲಾಗಿರುವ ಕರಾವಳಿ ಜನತೆಗೆ ಹವಾಮಾನ ಇಲಾಖೆ ಮಳೆ ಸಿಹಿ ಸುದ್ದಿ ನೀಡಿದೆ. ಉಡುಪಿ ಹಾಗೂ ದ.ಕ.ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಬೆಂಗಳೂರು ಕೇಂದ್ರ ವರದಿ ಮಾಡಿದೆ.

ಮಾ.17 ರಿಂದ ಮಾರ್ಚ್ 21ರವರೆಗೆ ಉಡುಪಿ-ದ.ಕ. ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ಮಳೆ ಜೊತೆಗೆ ಬಿರುಗಾಳಿ ಬೀಸುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕೆ ವಹಿಸುವಂತೆ ಇಲಾಖೆ ತಿಳಿಸಿದೆ.

ಮಧ್ಯಾಹ್ನ ಸುಡುಬಿಸಿಲು ಸಂಜೆ ಮೋಡದ ಮುಸುಕು

ಜಿಲ್ಲೆಯಲ್ಲಿ ಕಳೆದ ಕೆಲ ದಿನಗಳಿಂದ ಹವಾಮಾನದಲ್ಲಿ ವೈಪರೀತ್ಯ ಕಂಡು ಬರುತ್ತಿದೆ.ಮಧ್ಯಾಹ್ನ ವೇಳೆ ಸೂರ್ಯನ ಪ್ರಖರತೆ ಹೆಚ್ಚಾಗಿ ವಿಪರೀತ ತಾಪಮಾನ ದಾಖಲಾಗುತ್ತಿದ್ದು ಸಾರ್ವಜನಿಕರು ಬಿಸಿಲಿನ ಬೇಗೆ ಯಿಂದ ಕಂಗಾಲಾಗಿದ್ದಾರೆ. ಆದರೆ, ಸಂಜೆಯಾಗುತ್ತಿದ್ದಂತೆ ವಾತಾವರಣದಲ್ಲಿ ದಿಢೀರ್ ಬದಲಾವಣೆಯಾಗುತ್ತಿದ್ದು, ದಟ್ಟವಾದ ಮೋಡಗಳು ಮುಸುಕುತ್ತಿವೆ.

ಸಾಂದರ್ಭಿಕ ಚಿತ್ರ



ಭೂಮಿ ತಂಪೆರೆದ ಮಳೆ

ಹವಾಮಾನ ಇಲಾಖೆಯ ಮುನ್ಸೂಚನೆ ಬೆನ್ನಲ್ಲೇ ಸೋಮವಾರ ತಡರಾತ್ರಿ ಉಡುಪಿ ಜಿಲ್ಲೆಯ ಹಲವೆಡೆ ಮಳೆಯಾಗಿರುವುದು ವರದಿಯಾಗಿದೆ. ವಿಶೇಷವಾಗಿ ಕಟಪಾಡಿ, ಶಂಕರಪುರ, ಅಲೆವೂರು ಹಾಗೂ ಉಡುಪಿ ನಗರದ ಆಸುಪಾಸಿನಲ್ಲಿ ಮಳೆಯಾಗಿದ್ದು, ಸುಡು ಬಿಸಿಲಿಗೆ ಭೂಮಿ ತುಸು ತಂಪಾಗಿದೆ. ಇದಲ್ಲದೆ ಕಾರ್ಕಳ ಮತ್ತು ಹೆಬ್ರಿ ಭಾಗದಲ್ಲಿಯೂ ಗುಡುಗು ಸಹಿತ ಮಳೆಯಾಗಿದೆ.

ನಿಲ್ಲದ ಯುದ್ಧ: ತೈಲಬಿಕ್ಕಟ್ಟಿನಿಂದ ಹೊಟೇಲ್ ಉದ್ಯಮಿಗಳಿಗೆ ಸಂಕಷ್ಟ

ಬಿ.ಸಿ.ರೋಡಿಗೂ ತಟ್ಟಿದೆ ಗ್ಯಾಸ್ ಟ್ರಬಲ್ ಬಿಸಿ

ಬಂಟ್ವಾಳ: ಯುದ್ಧ ತೈಲಬಿಕ್ಕಟ್ಟು ಅಡುಗೆ ಅನಿಲವನ್ನೇ ನಂಬಿಕೊಂಡಿರುವ ಹೊಟೇಲ್ ಉದ್ಯಮಿಗಳಿಗೆ ಸಮಸ್ಯೆಯನ್ನು ಉಂಟುಮಾಡಿದೆ. ವಾಣಿಜ್ಯ ಗ್ಯಾಸ್ ಟ್ರಬಲ್ ಈಗ ಬಿ.ಸಿ.ರೋಡ್ ಗೂ ತಟ್ಟಿದೆ. ಸೋಮವಾರ ಇಲ್ಲಿನ ಪ್ರಸಿದ್ದ ನಾಗ ಕ್ಯಾಂಟೀನ್ (ಹೆಗ್ಡೆ ಕ್ಯಾಂಟೀನ್) ಸಿಲಿಂಡರ್ ಕೊರತೆಯಿಂದಾಗಿ ಬಾಗಿಲು ಹಾಕಬೇಕಾದ ಪರಿಸ್ಥಿತಿ ಬಂದೊದಗಿದೆ. ಗೃಹಬಳಕೆಯ ಗ್ಯಾಸ್ ಸಮಸ್ಯೆ ಇಲ್ಲ, ಆದರೆ ಹೊಟೇಲ್‌ಗಳಿಗೆ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಬಿ.ಸಿ.ರೋಡ್, ಬಂಟ್ವಾಳದಲ್ಲಿ ಕೆಲ ಊಟದ ಹೊಟೇಲ್ ಸಹಿತ ಹಲವೆಡೆ ಗ್ಯಾಸ್ ಕೊರತೆಯಿಂದ ಸಮಸ್ಯೆ ಉಂಟಾಗಿದೆ.



ಕಮರ್ಷಿಯಲ್ ಸಿಲಿಂಡರ್ ಸಿಗದೇ ಇದ್ದರೆ ಬಾಗಿಲು ಹಾಕಬೇಕಷ್ಟೇ ಎಂದು ಹೊಟೇಲ್ ಮಾಲೀಕರು ತಿಳಿಸಿದ್ದಾರೆ.

ಕ್ಯಾಂಟೀನ್ ಬಂದ್

ಸರಿಸುಮಾರು ದಿನವೊಂದಕ್ಕೆ 500ರಷ್ಟು ಗ್ರಾಹಕರು ಬರುವ ಮಿನಿ ವಿಧಾನ ಸೌಧದ ಮುಂಭಾಗ ಇರುವ ನಾಗ ಕ್ಯಾಂಟೀನ್ ಗೆ ಪ್ರತಿ ದಿನ ಬೆಳಗ್ಗಿನ ಅವಧಿಯಲ್ಲಿ ಚಾ ಸೇವನೆಗೆಂದು ಆಗಮಿಸುವವರು ವಾಪಸಾಗುತ್ತಿದ್ದಾರೆ. ಕಮರ್ಷಿಯಲ್ ವಿತರಣೆ ಸಮಸ್ಯೆ ಇದ್ದು, ಶೀಘ್ರ ಈ ಸಮಸ್ಯೆಗೂ ಪರಿಹಾರ ದೊರಕಿಸಿಕೊಡಬೇಕೆಂದು ಹೊಟೇಲ್ ಮಾಲೀಕರಷ್ಟೇ ಅಲ್ಲ, ಗ್ರಾಹಕರೂ ಹೇಳುತ್ತಿದ್ದಾರೆ.

ಕಂಗಾಲಾಗಿದ್ದಾರೆ

ಕಟ್ಟಿಗೆ ಒಲೆ ಇರುವ ಹೊಟೇಲ್‌ನವರು ಸದ್ಯಕ್ಕೆ ಸಮಸ್ಯೆ ಎದುರಿಸುತ್ತಿಲ್ಲ, ಇನ್ನು ಕಚೇರಿಗಳಲ್ಲಿ ಮೀಟಿಂಗ್‌ಗೆಂದು ಚಾ, ತಿಂಡಿ ಆರ್ಡರ್ ಮಾಡುವವರು, ನಿತ್ಯ ಹೊಟೇಲನ್ನೇ ನಂಬಿಕೊಂಡವರು ಕಂಗಾಲಾಗಿದ್ದಾರೆ.

ಸೌದೆಯಿಂದ ಅಡುಗೆ

ಬಿ.ಸಿ.ರೋಡಿನಲ್ಲಿರುವ ಏಕೈಕ ಇಂದಿರಾ ಕ್ಯಾಂಟೀನ್‌ನಲ್ಲಿ ಸೌದೆ ಬಳಸಿ ಅನ್ನ ಬೇಯಿಸಿದ್ದಾರೆ. ಸಾರು, ಪಲ್ಯವನ್ನು ಅನ್ನದ ಜೊತೆ ನೀಡಲಾಗುತ್ತಿದ್ದ ಚಪಾತಿಯನ್ನು ರದ್ದುಗೊಳಿಸಲಾಗಿದೆ.ಬೆಳಿಗ್ಗೆ ಇಡ್ಲಿ, ಸಾಂಬಾರು, ಚಾ ದ ವ್ಯವಸ್ಥೆ ಮಾಡಿದ್ದು ಬಿಟ್ಟರೆ ಹೆಚ್ಚುವರಿ ತಿಂಡಿ, ತಿನಸು ಮಾಡಿರುವುದಿಲ್ಲ.ಇನ್ನೆರಡು ದಿನದ ಮಟ್ಟಿಗೆ ಅಡುಗೆ ಅನಿಲ ಇದೆ.ಮತ್ತೆ ಸೌದೆ ಬಳಸಿ ಅಡುಗೆ ತಯಾರಿಸಬೇಕಾಗಿದೆ ಎಂದು ಇಂದಿರಾ ಕ್ಯಾಂಟೀನ್ ನೌಕರರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ತಯಾರಿ



ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾ.18ರಿಂದ ಆರಂಭಗೊಳ್ಳಲಿದ್ದು, ಮಂಗಳೂರಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಮಂಗಳವಾರ ಶಿಕ್ಷಕರು, ಶಾಲಾ ಸಿಬ್ಬಂದಿ ಪರೀಕ್ಷೆಗೆ ಪೂರಕ ವ್ಯವಸ್ಥೆ ಕೈಗೊಂಡರು.

ಅಪರಾಧಿಗಳ ಪರಾರಿ ತಡೆಗೆ 9 ಜೈಲುಗಳಿಗೆ ಶೀಘ್ರ ಬೇಲಿ ನಿರ್ಮಿಸಲು ಚಿಂತನೆ

4.79 ಕೋ.ರೂ. ವೆಚ್ಚದಲ್ಲಿ ಬರಲಿದೆ ವಿದ್ಯುತ್ ಬೇಲಿ

ಕಾಸರಗೋಡು: ಕೈದಿಗಳು ಜೈಲುಗಳಿಂದ ಪರಾರಿಯಾಗುವುದನ್ನು ತಡೆಗಟ್ಟಲು ಸುರಕ್ಷತೆ ಯನ್ನು ತೀವ್ರಗೊಳಿಸಲು ರಾಜ್ಯದ 9 ಜೈಲುಗಳಲ್ಲಿ ವಿದ್ಯುತ್ ಬೇಲಿ ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಜೈಲುಗಳ ಪೈಕಿ ಒಂದು ಕಾಸರಗೋಡು ವಿಶೇಷ ಸಬ್ ಜೈಲ್ ಸೇರಿದೆ. ತವನೂರು ಸೆಂಟ್ರಲ್ ಜೈಲು ಸಹಿತ ಸಣ್ಣದು, ದೊಡ್ಡದಾದ 12 ಜೈಲುಗಳಲ್ಲಿ ಸುರಕ್ಷಾ ವ್ಯವಸ್ಥೆಗಳನ್ನು ಬಿಗಿಗೊಳಿಸಲು ತೀರ್ಮಾನಿಸಲಾಗಿದೆ.

ಗುತ್ತಿಗೆ ನವೀಕರಿಸಲು ತೀರ್ಮಾನ

ಜೈಲುಗಳ ಸುರಕ್ಷಾ ಗೋಡೆಗಳ ಮೇಲೆ ವಿದ್ಯುತ್ ಬೇಲಿ ವ್ಯವಸ್ಥೆ ಅಳವಡಿಸುವ ಯೋಜನೆ 4.79 ಕೋ.ರೂ. ವೆಚ್ಚದಲ್ಲಿ



ಅನುಷ್ಠಾನಕ್ಕೆ ಬರಲಿದೆ. ಒಂಭತ್ತು ಜೈಲುಗಳಲ್ಲಿ ಹೊಸದಾಗಿ ವಿದ್ಯುತ್ ಬೇಲಿ ಅಳವಡಿಸಲಾಗುವುದು. ಇತರ ಜೈಲುಗಳಲ್ಲಿ ಈಗಾಗಲೇ ಸ್ಥಾಪಿಸಿದ ವಿದ್ಯುತ್ ಬೇಲಿಯನ್ನು ದುರಸ್ತಿಗೊಳಿಸಿ ಮರು ಅಳವಡಿಕೆಗೆ

ನೂತನ ವ್ಯವಸ್ಥೆ

ತವನೂರು ಸೆಂಟ್ರಲ್ ಜೈಲು ಮಾನಂದವಾಡಿ ಜಿಲ್ಲಾ ಜೈಲು, ಕೊಲ್ಲಂ ಜಿಲ್ಲಾ ಜೈಲು, ಕಣ್ಣೂರು ಜಿಲ್ಲಾ ಜೈಲು, ಕಣ್ಣೂರು ಮಹಿಳಾ ಜೈಲು ಕೂತುಪರಂಬ್ ವಿಶೇಷ ಜೈಲು, ಕಾಸರಗೋಡು ವಿಶೇಷ ಉಪಜೈಲು, ಪೊನ್ನಾನಿ ಉಪಜೈಲು, ವಿಯೂರ್ ಉಪಜೈಲು ಸಹಿತ ವಿವಿಧ ಕಡೆಗಳಲ್ಲಿ ನೂತನ ವಿದ್ಯುತ್ ಬೇಲಿ ವ್ಯವಸ್ಥೆ ಅಳವಡಿಸಲಾಗುವುದು.

ವಾರ್ಷಿಕ ನಿರ್ವಹಣೆ ಗುತ್ತಿಗೆ ನವೀಕರಿಸಲು ತೀರ್ಮಾನಿಸಲಾಗಿದೆ.

ಜೈಲುಗಳಲ್ಲಿ ಸುರಕ್ಷೆಗಾಗಿ 24.81 ಕೋಟಿ ರೂ. ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಜೈಲು ಮುಖ್ಯಸ್ಥ ಬಲ್‌ರಾಮ್ ಕುಮಾರ್ ಉಪಾಧ್ಯಾಯ ಸರಕಾರಕ್ಕೆ ವರದಿ ಸಲ್ಲಿಸಿದ್ದರು. ಬಳಿಕ ವಿದ್ಯುತ್ ಬೇಲಿ ನಿರ್ಮಿಸಲು ಅನುಮತಿ ನೀಡಲಾಗಿದೆ. »ಪುಟ 6

ವಿವಾದ ಸೃಷ್ಟಿಸಿತ್ತು

ಸೌಮ್ಯಾ ಕೊಲೆ ಪ್ರಕರಣದ ಆರೋಪಿ ಗೋವಿಂದಚಾಮಿ ಕಳೆದ ವರ್ಷ ಕಣ್ಣೂರು ಸೆಂಟ್ರಲ್ ಜೈಲಿನಿಂದ ಪರಾರಿ ಯಾಗಿದ್ದು, ವಿವಾದ ಸೃಷ್ಟಿಸಿತ್ತು. ರಾಜ್ಯದ ಜೈಲುಗಳ ಸುರಕ್ಷತೆ ಬಗ್ಗೆ ವಿವಾದ ಉಂಟಾದ ಹಿನ್ನೆಲೆ ಇಂತಹ ಪರಿಸ್ಥಿತಿ ಬಾರದಂತೆ ಮಾಡುವ ಉದ್ದೇಶದಿಂದ ಇನ್ನಷ್ಟು ಜೈಲುಗಳಲ್ಲಿ ವಿದ್ಯುತ್ ಬೇಲಿ ಸ್ಥಾಪಿಸಲು ಸರಕಾರ ತೀರ್ಮಾನಿಸಿದೆ.

ಅವೈಜ್ಞಾನಿಕ ತ್ಯಾಜ್ಯ ನಿರ್ವಹಣೆ: ಮಾಲಕರಿಗೆ ಬಿತ್ತು 10 ಸಾವಿರ ರೂಪಾಯಿ ದಂಡದ ಬರೆ

ಉಲ್ಲಂಘನೆಗಳ ಬಗ್ಗೆ ಬಂದ ದೂರಿನ ಆಧಾರದ ಮೇಲೆ ತಪಾಸಣೆ

ಕಾಸರಗೋಡು: ಪಡನ್ನ ಗ್ರಾ.ಪಂ. ವ್ಯಾಪ್ತಿಯ ದಕ್ಷಿಣ ಭಾಗದಲ್ಲಿ ವಲಸೆ ಕಾರ್ಮಿಕರು ವಾಸಿಸುವ ಕ್ವಾರ್ಟರ್ಸ್ ಮುಂದೆ ಸಾವಯವ ಮತ್ತು ಅಜೈವಿಕ ತ್ಯಾಜ್ಯ ಸುಡುವುದರಿಂದ ಪರಿಸರ ಮಾಲಿನ್ಯ ಉಂಟಾಗಿದೆ ಎಂದು ಕಂಡುಬಂದ ಹಿನ್ನೆಲೆ ಸ್ಥಳದ ಮಾಲಕರ ವಿರುದ್ಧ ಜಿಲ್ಲಾ ಜಾರಿ ದಳದ ನೇತೃತ್ವದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಅಲ್ಲದೆ 10,000 ರೂ. ದಂಡ ವಿಧಿಸಲಾಯಿತು. ತಿಂಗಳ ಹಿಂದೆ ಜಿಲ್ಲಾ ತಂಡವೇ 5,000 ರೂ. ದಂಡ ವಿಧಿಸಿತ್ತು. ಆದರೆ ಉಲ್ಲಂಘನೆ ಪುನರಾವರ್ತನೆಯಾಗಿರುವ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡಲಾಯಿತು. ಆವರಣ ಸ್ವಚ್ಛವಾಗಿಟ್ಟುಕೊಳ್ಳದಿದ್ದಕ್ಕಾಗಿ ಹಾಗೂ ವಿವಿಧ ಸಂಸ್ಥೆಗಳ ಮಾಲಕರ ವಿರುದ್ಧ ವಿವಿಧ ವಿಭಾಗಗಳ ಅಡಿಯಲ್ಲಿ ದಂಡವನ್ನು ವಿಧಿಸಲಾಯಿತು. »ಪುಟ 6



ಕಸದ ರಾಶಿ...

ಚೆಂಗಳ ಗ್ರಾ.ಪಂ.ನ ಪಾಡಿಯಲ್ಲಿ ವಿದೇಶಿ ಕಾರ್ಮಿಕರ ವಸತಿಗಾಗಿ ಒದಗಿಸಲಾದ ಕ್ವಾರ್ಟರ್ಸ್ ನ ಎದುರು , ಹಿಂದೆ ಕಸ ರಾಶಿ ಹಾಕಿದ್ದಕ್ಕಾಗಿ ಮಾಲಕರಿಗೆ 5 ಸಾವಿರ ರೂ. ದಂಡ ವಿಧಿಸಲಾಯಿತು.

ಫಲಾಪೇಕ್ಷೆ ಇಲ್ಲದೇ ಸೇವೆ ಮಾಡಿದರೆ ಭಗವಂತನ ಅನುಗ್ರಹ ಪ್ರಾಪ್ತಿಯಾಗಲಿದೆ 2

ಕಿನ್ನಿಗೋಳಿ ಪ.ಪಂ.:18 ವಾರ್ಡ್ ರಸ್ತೆ ನಾಮಫಲಕಕ್ಕೆ ತುಳುವಿನಲ್ಲಿ ಹೆಸರು 3

ಆದಿವಾಸಿ ಕುಟುಂಬಗಳಿಗೆ ಸಿಗದ ನಿವೇಶನ, ಮೂಲಸೌಲಭ್ಯ 4

ಸಿರಿಧಾನ್ಯಗಳು ಆರೋಗ್ಯಕ್ಕೆ ಪೋಷಕಾಂಶಗಳ ಸಂಜೀವಿನಿ 6

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಬುಧವಾರ 18, ಮಾರ್ಚ್ 2026

ಸುತ್ತ ಮುತ್ತ

ರಾಜ್ಯ ಸರ್ಕಾರದ ವಿರುದ್ಧ ಇಂದು ಬಿಜೆಪಿಯಿಂದ ಪ್ರತಿಭಟನೆ

ಮಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿಯವರ ಅಧೀನದಲ್ಲಿರುವ ಮಂಗಳೂರು ಮಹಾನಗರ ಪಾಲಿಕೆಯ ದುರಾಡಳಿತ, ಭ್ರಷ್ಟಾಚಾರ, ಜನ ನೀತಿ ವಿರೋಧಿ ಹಾಗೂ ಆಡಳಿತ ವೈಫಲ್ಯದ ವಿರುದ್ಧ ಬಿಜೆಪಿ ಮಂಗಳೂರು ನಗರ ದಕ್ಷಿಣ ಹಾಗೂ ಉತ್ತರದ ನೇತೃತ್ವದಲ್ಲಿ ಮಾ.18ರಂದು ಮಧ್ಯಾಹ್ನ 3.30ಕ್ಕೆ ಲಾಲ್‌ಭಾಗ್‌ನಲ್ಲಿರುವ ಪಾಲಿಕೆ ಕಚೇರಿ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದೆ. ಪಾಲಿಕೆಯಲ್ಲಿ ಬಿಜೆಪಿ ಆಡಳಿತದ ಅವಧಿ ಅಂತ್ಯಗೊಂಡು ವರ್ಷಗಳು ಕಳೆದಿದ್ದು, ಇದೀಗ ಯಾವುದೇ ಜನಪ್ರತಿನಿಧಿಗಳಿಲ್ಲದೇ ಇರುವ ಪಾಲಿಕೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಆಡಳಿತಾಧಿಕಾರಿ ಮೂಲಕ ಆಡಳಿತ ನಡೆಸುತ್ತಿದ್ದು ಜನರ ಸಮಸ್ಯೆಗೆ ಕಿವಿಗೊಡುವವರೇ ಇಲ್ಲವಾಗಿದೆ. ಇಂದಿಗೂ ಜನಸಾಮಾನ್ಯರು ಪಾಲಿಕೆ ನಿಕಟಪೂರ್ವ ಸದಸ್ಯರಿಗೇ ಕರೆ ಮಾಡಿ ಸಮಸ್ಯೆ ಹೇಳಿಕೊಳ್ಳುತ್ತಿದ್ದು, ಪಾಲಿಕೆ ಅಧಿಕಾರಿಗಳು ಅವರಿಗೂ ಸೂಕ್ತ ಸ್ಪಂದನೆ ನೀಡುತ್ತಿಲ್ಲ, ಹೀಗಾಗಿ ಜನಸಾಮಾನ್ಯರ ಪರವಾಗಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಇ-ಖಾತಾ ಸಿಗದೇ ಪರಿತಪಿಸುತ್ತಿರುವವರು, ತಿಂಗಳಾನುಗಟ್ಟಲೆ ಜನನ-ಮರಣ ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗದೇ ರೋಸಿ ಹೋಗಿರುವವರು, ಕುಡಿಯಲು ನೀರು ಸಿಗದೇ ಸಮಸ್ಯೆ ಅನುಭವಿಸುತ್ತಿರುವ ಕುಟುಂಬಗಳು, ತೀವ್ರ ಕಸದ ಸಮಸ್ಯೆ ಇರುವ ವಾರ್ಡಿನ ಸಾರ್ವಜನಿಕರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಎಂದು ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ಇಂದು ನಾರಾಯಣ ಸನಿಲ್‌ರ ಸ್ಮರಣೆ

ಮುಲ್ಕಿ: ಹಳೆಯಂಗಡಿ ಪ್ರಿಯದರ್ಶಿನಿ ಕೋ-ಆಪರೇಟಿವ್ ಸೊಸೈಟಿ ಆಶ್ರಯದಲ್ಲಿ ಸಂಘದ ಪ್ರೇರಣಾಶಕ್ತಿ, ಸಹಕಾರಿ ರಂಗದ ಭೀಷ್ಮ ಎಚ್. ನಾರಾಯಣ ಸನಿಲ್ ಅವರ ಸ್ಮರಣಾ ಕಾರ್ಯಕ್ರಮ ಮಾ.18ಕ್ಕೆ ಬೆಳಿಗ್ಗೆ 10.30ಕ್ಕೆ ಸಂಘದ ಸಭಾಭವನದಲ್ಲಿ ನಡೆಯಲಿದೆ. ಸಮಾರಂಭದ ಮುಖ್ಯ ಅತಿಥಿಗಳಾಗಿ ಜ್ಯೋತಿಷಿ ವಿಶ್ವನಾಥ್ ಭಟ್ ಮತ್ತು ಉಷಾ ವಿಶ್ವನಾಥ್ ಎಸ್ ಕೋಡಿ ,ಉದ್ಯಮಿ ಪ್ರವೀಣ್ ಕುಮಾರ್, ಬೊಳ್ಳೂರು ಉಪಸ್ಥಿತರಿರುವರು ಎಂದು ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಚ್. ವಸಂತ್ ಬೆರ್ನಾರ್ಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಳ್ಯ ಸ್ವರ್ಣಂ ಜ್ಯುವೆಲ್ಸ್: ಸ್ವರ್ಣಂ ಯುಗಾದಿ ಚಿನ್ನಾಭರಣಗಳ ಸಂಭ್ರಮ

ಸುಳ್ಯ: ಇಲ್ಲಿನ ಕೆ.ಎಸ್.ಆರ್. ಟಿ.ಸಿ ಬಸ್ ನಿಲ್ದಾಣ ಮುಂಭಾಗದ ಸೂಂತೋಡು ಎಂಪೋರಿಯಂ ಬಿಲ್ಡಿಂಗ್‌ನಲ್ಲಿರುವ ಸ್ವರ್ಣಂ ಜ್ಯುವೆಲ್ಸ್‌ನಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಮಾ.19ರಿಂದ ಮಾ.25ರ ವರೆಗೆ ಸ್ವರ್ಣಂ ಯುಗಾದಿ ಚಿನ್ನಾಭರಣಗಳ ಸಂಭ್ರಮ ನಡೆಯಲಿದೆ. ಹಾಗೂ ವಿಶೇಷವಾಗಿ ಯುಗಾದಿ ಹಬ್ಬದ ಪ್ರಯುಕ್ತ ಉಚಿತ ಶಾಸ್ತ್ರೋಕ್ತವಾಗಿ ಕಿವಿ ಮೂಗು ಚುಚ್ಚುವ ವ್ಯವಸ್ಥೆ ಇದೆ. ಹಾಗೂ 916ನ ವಿವಿಧ ವಿನ್ಯಾಸಗಳ ಚಿನ್ನಾಭರಣಗಳ ಸಂಗ್ರಹ ಹಾಗೂ ಕಿವಿಯೋಲೆ ಮಕ್ಕಳ ಚಿನ್ನಾಭರಣಗಳ ಅಪೂರ್ವ ಸಂಗ್ರಹವಿದ್ದು ಪವನಿಗೆ 3,000 ಕಡಿತವಾಗಲಿದೆ. ಅಲ್ಲದೇ ನಿಮ್ಮ ಹಳೆಯ ಆಭರಣಗಳನ್ನು 916 ಗೆ ಎಕ್ಸ್ಚೇಂಜ್ ಮಾಡಿ ಅಧಿಕ ಲಾಭ ಪಡೆಯಬಹುದಾಗಿದೆ. ಈ ಸುವರ್ಣಾವಕಾಶವನ್ನು ಗ್ರಾಹಕರು ಸದುಪಯೋಗ ಪಡಿಸಿಕೊಳ್ಳಲು ಸಂಸ್ಥೆ ಪಾಲುದಾರರು ತಿಳಿಸಿದ್ದಾರೆ.

ಪಂಚಾಯತ್‌ರಾಜ್ ಇಲಾಖೆಯ ಚಾಲಕ ಅಣ್ಣುಗೆ ವರ್ಗಾವಣೆ

ಪುತ್ತೂರು: ಪುತ್ತೂರು ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆಯಲ್ಲಿ ಚಾಲಕರಾಗಿ ಕರ್ತವ್ಯದಲ್ಲಿದ್ದ ಅಣ್ಣು ಎಂಬವರನ್ನು ಹೊಸಕೋಟೆ ಲೋಕೋಪಯೋಗಿ ಇಲಾಖೆ ಉಪವಿಭಾಗಕ್ಕೆ ಚಾಲಕರಾಗಿ ವರ್ಗಾವಣೆಗೊಳಿಸಿ ಆದೇಶಿಸಲಾಗಿದೆ. ಹಲವು ವರ್ಷಗಳಿಂದ ಪುತ್ತೂರಿನಲ್ಲಿ ಕರ್ತವ್ಯದಲ್ಲಿದ್ದ ಅಣ್ಣು ಅವರ ವಿರುದ್ಧ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿದ್ದವು.

ಸರಕಾರಿ ನೌಕರನಾಗಿದ್ದರೂ ಸಾರ್ವಜನಿಕವಾಗಿ ಅವರು ನಡೆದುಕೊಳ್ಳುವ ರೀತಿಯ ಬಗ್ಗೆ ಆರೋಪಗಳು ಇದ್ದವು. ಕೆಲ ದಿನಗಳ ಹಿಂದೆ ಹಾರಾಡಿ ಸರಕಾರಿ ಹಿ.ಪ್ರಾ. ಶಾಲೆಯಲ್ಲಿ ಅಲ್ಲಿನ ವಿದ್ಯಾರ್ಥಿಗಳು ಮತ್ತು ಪೋಷಕರ ಜೊತೆ ವಾಗ್ವಾದ ನಡೆಸಿ ಬೆದರಿಕೆ ಒಡ್ಡಿದ್ದರು ಎಂದು ಆರೋಪಿಸಿ ಶಾಲೆಯ ಪೋಷಕರು, ಶಿಕ್ಷಕರು ಅಣ್ಣು ವಿರುದ್ಧ ಮಹಿಳಾ ಠಾಣೆಗೆ ದೂರು ನೀಡಿದ್ದರು. ಅಣ್ಣು ಅವರನ್ನು ವರ್ಗಾವಣೆ ಮಾಡುವಂತೆ ಹಾರಾಡಿ ಶಾಲಾ ಪೋಷಕರ ನಿಯೋಗ ಶಾಸಕ ಅಶೋಕ್ ರೈ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಕ್ರಮ ವಹಿಸುವುದಾಗಿ ಶಾಸಕರು ಭರವಸೆ ನೀಡಿದ್ದರು.

ಮಾ. 21: ರಾಷ್ಟ್ರೀಯ ತುಳು ವಿಚಾರಗೋಷ್ಠಿಯ ಸ್ವಾಗತ ಸಮಿತಿ ಸಭೆ

ಮುಲ್ಕಿ: ತುಳುವ ಮಹಾಸಭೆ ಇಂಟರ್‌ನ್ಯಾಷನಲ್ ಮೂಲ್ಕಿ ತಾಲೂಕು, ವತಿಯಿಂದ ಮುಲ್ಕಿ ಬಂಟರ ಸಂಘದ ಸಹಯೋಗದೊಂದಿಗೆ 'ಅಪ್ಪೆಬೇರ್ ತುಳುನಾಡ್' ರಾಷ್ಟ್ರೀಯ ತುಳು ವಿಚಾರಗೋಷ್ಠಿಯ ಸ್ವಾಗತ ಸಮಿತಿ ಸಭೆಯು ಮಾ.21ರಂದು ಬೆಳಿಗ್ಗೆ 11 ಗಂಟೆಗೆ ಮುಲ್ಕಿ ಪುನರೂರು ಟೂರಿಸ್ಟ್ ಹೋಮ್‌ನ ಸಭಾಂಗಣದಲ್ಲಿ ನಡೆಯಲಿದೆ ಎಂದು ಮುಲ್ಕಿ ರಾಷ್ಟ್ರೀಯ ತುಳು ವಿಚಾರಗೋಷ್ಠಿ ಸಮಿತಿಯ ಅಧ್ಯಕ್ಷೆ ಭಾನುಮತಿ ಶೆಟ್ಟಿ ಕಕ್ವಗುತ್ತು ಹಾಗೂ ಕಾರ್ಯದರ್ಶಿ ಪುಷ್ಪರಾಜ್ ಚೌಟ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಣಾಲಿನ ಸೇತುವೆ ಬಳಿ ನದಿ ಒಡಲಿಗೆ ತ್ಯಾಜ್ಯ

ಕಲುಷಿತಗೊಳ್ಳುತ್ತಿದೆ 'ಫಲ್ಗುಣಿ'





ಕೈಕಂಬ: ಮಂಗಳೂರು ತಾಲೂಕು ಮತ್ತು ಬಂಟ್ವಾಳ ತಾಲೂಕುಗಳ ನಡುವೆ ಹರಿಯುವ ಫಲ್ಗುಣಿ ನದಿಯ ನೋಣಾಲು ಸೇತುವೆಯ ಬಳಿ ಫಲ್ಗುಣಿ ನದಿಗೆ ತ್ಯಾಜ್ಯ ಕಂಟಕವಾಗಿ ಪರಿಣಮಸಿದೆ. ಇಲ್ಲಿ ಸೇತುವೆಯ ಮೇಲಿಂದ ರಾತ್ರಿ ಸಮಯದಲ್ಲಿ ಮೂಟೆಗಟ್ಟಲೆ ಕೋಳಿ ತ್ಯಾಜ್ಯ ಸೇರಿದಂತೆ ರಾಶಿ ರಾಶಿ ತ್ಯಾಜ್ಯವನ್ನು ನಿರಂತರವಾಗಿ ಯಾರ ಭಯವೂ ಇಲ್ಲದೆ ಸುರಿಯಲಾಗುತ್ತಿದೆ. ಪರಿಣಾಮವಾಗಿ ಪಲ್ಗುಣಿಯ ಒಡಲು ಕಲುಷಿತಗೊಳ್ಳುತ್ತಿದೆ.

ಇದೇ ನೀರನ್ನು ನದಿಯ ಎರಡೂ ಭಾಗದ ಜನರಿಗೆ ಕುಡಿಯಲು ಒದಗಿಸಲಾಗುತ್ತಿದೆ. ಕೋಳಿ ತ್ಯಾಜ್ಯ ಸಹಿತ ಎಲ್ಲಾ ತ್ಯಾಜ್ಯವನ್ನು ಸೇತುವೆ ಮೇಲಿಂದ ನದಿಗೆ ಎಸೆಯಲಾಗುತ್ತಿದೆ. ನದಿಯಲ್ಲಿ ನೀರಿನ ಹರಿವು ಇಲ್ಲದ ಕಾರಣ ತ್ಯಾಜ್ಯ ಕೊಳೆತು ದುರ್ನಾತ ಬೀರುತ್ತಿದೆ. ಇದೇ ನದಿಯ ನೀರನ್ನು ಮುಂದೆ ಗುರುಪುರ, ಮರವೂರು ಡ್ಯಾಮ್ ಮೂಲಕ ಕುಡಿಯಲು ಬಳಸಲಾಗುತ್ತಿದೆ. ರಾತ್ರಿ ಸಮಯದಲ್ಲಿ ವಾಹನಗಳಲ್ಲಿ ಬಂದು ತ್ಯಾಜ್ಯದ ಮೂಟೆಗಳನ್ನು ಸೇತುವೆಯ ಮೇಲಿಂದ ನದಿಗೆ ಎಸೆಯುತ್ತಾರೆ. ತ್ಯಾಜ್ಯ ನೀರಿಗೆ ಎಸೆಯುವಾಗ ಶಬ್ದ ಕೇಳಿಸುತ್ತದೆ ಎಂದು ಸ್ಥಳೀಯರು ದೂರಿದ್ದಾರೆ. ಅಲ್ಲದೇ ಸ್ಥಳೀಯ ವಾಗಿಯೂ ತ್ಯಾಜ್ಯವನ್ನು ಮದ್ಯದ ಖಾಲಿ ಬಾಟಲಿಗಳನ್ನೂ ನದಿಗೆ ಎಸೆಯಾಗುತ್ತಿದೆ. ನದಿಯ ಬಂಟ್ವಾಳ ಭಾಗದಲ್ಲಿಯೂ ಇದೇ ಪರಿಸ್ಥಿತಿ ಇದ್ದು ನದಿಯ ನೀರು ಕಲುಷಿತಗೊಳ್ಳುತ್ತಿದೆ. ಅದೇ ನೀರನ್ನು ಕುಡಿಯಲು ಬಳಸಲಾಗುತ್ತಿದೆ. ನದಿಗೆ ಎಸೆದ ಪ್ಲಾಸ್ಟಿಕ್, ಪ್ಯಾಡ್ ಗಳನ್ನು ತಿಂದ ಪರಿಣಾಮ ನದಿಯ ಪಕ್ಕದಲ್ಲಿರುವ ಮನೆಯ ಹಸುವೊಂದು ಎರಡು ದಿನಗಳ ಹಿಂದೆ ಸಾವಿಗೀಡಾಗಿದ್ದು ನದಿ ನೀರು ಕುಡಿದಿರಬಹುದು ಎಂದು ಅನುಮಾನಿಸಲಾಗಿದೆ. ಒಟ್ಟಿನಲ್ಲಿ ಆಡಳಿತ ನದಿಯ ರಕ್ಷಣೆಗೆ ಮುಂದಾಗಬೇಕಿದೆ ಎಂಬುದು ಸ್ಥಳೀಯರ ಒತ್ತಾಯವಾಗಿದೆ.

ಸುಬ್ರಹ್ಮಣ್ಯ-ಚೆರ್ಕಳ ಹೆದ್ದಾರಿ ಇಕ್ಕೆಲಗಳಲ್ಲಿ ಅವ್ಯವಸ್ಥೆ | ಕ್ರಮಕ್ಕೆ ಮನವಿ

ಎಲ್ಲೆಂದರಲ್ಲಿ ತ್ಯಾಜ್ಯ ರಾಶಿ!

ಸುಳ್ಯ: ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮವಾಗಿ ಸುಬ್ರಹ್ಮಣ್ಯ ಚೆರ್ಕಳ ಸಂಪರ್ಕಿತ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಕಾಣಸುತ್ತಿದ್ದು ಇಡೀ ಪ್ರಕೃತಿಯ ಸೌಂದರ್ಯವನ್ನೇ ನಾಶ ಮಾಡುತ್ತಿದೆ.

ಜಾಲ್ಸೂರು ಗ್ರಾಮದ ಮಹಾಬಲಡ್ಕ ಎಂಬಲ್ಲಿ ಕೂಗಳತೆ ದೂರದಲ್ಲಿ ಈ ರೀತಿಯಲ್ಲಿ ಕಸದ ರಾಶಿಗಳು ಕಂಡು ಬರುತ್ತಿದೆ. ಅಂತಾರಾಜ್ಯ ಸಂಪರ್ಕಿತ ಹಾಗೂ ಸಾವಿರಾರು ವಾಹನಗಳು ನಿತ್ಯ ಸಂಚರಿಸುವ ಪ್ರಮುಖ ರಸ್ತೆಯಾಗಿದ್ದು, ಈ ರಸ್ತೆಯ ಕೆಲ ಭಾಗಗಳಲ್ಲಿ ಇದೇ ಮಾದರಿಯಲ್ಲಿ ಕಸದ ಗುಡ್ಡೆಗಳು ಗೋಚರಿಸುತ್ತಿದೆ. ಸ್ಥಳೀಯ ಆಡಳಿತ ಹಾಗೂ ತಾಲೂಕು ಆಡಳಿತ ಯಾವುದೇ ಕ್ರಮ ಕೈಗೊಳ್ಳದೇ ತಾಲೂಕಿನ ಮಾನವನ್ನು ಕಸದ ಮೂಲಕ ಹರಾಜು ಹಾಕುತ್ತಿದ್ದರೆ, ಇತ್ತ ಪ್ರಕೃತಿಗೂ ಪ್ಲಾಸ್ಟಿಕ್ ಹಾಗೂ ಕಸಗಳು ಕಂಟಕವಾಗಿ ಪರಿಣಮಿಸಿದೆ.



ವ್ಯಾಪಕ ಆಕ್ರೋಶ

ಇತ್ತ ಕೇರಳ ಗಡಿ ಗ್ರಾಮಗಳಲ್ಲಿ ಕಸಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆಗೊಳಿಸಿ ಶುಚಿಯಾಗಿ ಇರಿಸಿದ್ದು, ಇತ್ತ ಕರ್ನಾಟಕ ಸ್ವಾಗತ ಫಲಕ ಹೊಂದಿರುವ ಸ್ಥಳದಿಂದ ಅರಣ್ಯ ಪ್ರದೇಶದಲ್ಲಿ ತ್ಯಾಜ್ಯಗಳ ಕಟ್ಟುಗಳು ಅಲ್ಲಲ್ಲಿ ಬಿದ್ದುಕೊಂಡಿರುವುದು ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ಕೂಡಲೇ ಸ್ಥಳೀಯ ಆಡಳಿತ ಮತ್ತು ತಾಲೂಕು ಆಡಳಿತ ಕ್ರಮ ಕೈಗೊಳ್ಳಬೇಕಿದೆ. ಇತ್ತ ತ್ಯಾಜ್ಯದ ರಾಶಿಗಳು ಪತ್ತೆಯಾದ ಪ್ರದೇಶ ಕರ್ನಾಟಕಕ್ಕೆ ಸೇರಿರುವುದು ಎಂಬುದು ಇಲ್ಲಿನ ಸ್ಥಳೀಯರ ವಾದವಾಗಿದ್ದು, ಆಡಳಿತ ಮಾತ್ರ ಮೌನ ವಹಿಸಿದೆ. ಮಳೆಗಾಲಕ್ಕೆ ಮೊದಲು ಈ ರಸ್ತೆ ಬದಿಗಳನ್ನು ಸ್ವಚ್ಛಗೊಳಿಸುವುದು ಅನಿವಾರ್ಯವಾಗಿದ್ದು, ಇಲ್ಲವಾದಲ್ಲಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಶುರುವಾಗಿದೆ.

> ಈ ಪ್ರದೇಶವು ಕೇರಳ ರಾಜ್ಯಕ್ಕೆ ಸಂಬಂಧಿಸಿ ದಾಗಿದ್ದು ಮಂಗಳವಾರ ಮುಂಜಾನೆ ಈ ಕುರಿತು ನನ್ನ ಗಮನಕ್ಕೆ ಬಂದಿದೆ. ನಾನು ಇಲ್ಲಿಗೆ ಬಂದು ಕೇವಲ ನಾಲ್ಕು ತಿಂಗಳುಗಳಾಗಿದೆ. ಈ ಬಗ್ಗೆ ಪರಿಶೀಲಿಸಲಾಗುವುದು.
>
> ● ಶೈಲಜಾ ಎ., ಜಾಲ್ಸೂರು ಪಂಚಾಯತ್ ಅಭಿವೃದ್ಧಿ ಅಧಿಕಾರಿ

'ಆಯುಷ್ಮಾನ್ ವಯೋ ವಂದನಾ' ಜಾರಿಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯ

ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವೃದ್ಧರ ಪರದಾಟ: ಕಿಶೋರ್

ಪುತ್ತೂರು: ಕೇಂದ್ರ ಸರ್ಕಾರ 70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ಜಾರಿಗೆ ತಂದಿರುವ ಅತ್ಯಂತ ಮಹತ್ವಾಕಾಂಕ್ಷೆಯ 'ಆಯುಷ್ಮಾನ್ ವಯೋ ವಂದನಾ' ಆರೋಗ್ಯ ವಿಮಾ ಯೋಜನೆಯನ್ನು ರಾಜ್ಯದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸದೆ ಹಿರಿಯ ಜೀವಗಳನ್ನು ಅಲೆದಾಡಿಸುತ್ತಿರುವ ರಾಜ್ಯ ಸರ್ಕಾರದ ನಡೆಯನ್ನು ಉಡುಪಿ-ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ವಿಧಾನ ಪರಿಷತ್ತಿನ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿ, ವಿತರಣೆಯಾಗಿರುವ ಲಕ್ಷಾಂತರ ಕಾರ್ಡ್ ಗಳು ಯಾವುದೇ ಪ್ರಯೋಜನಕ್ಕೆ ಬಾರದಂತಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ಆಯುಷ್ಮಾನ್ ಭಾರತ್-ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯನ್ನು ವಿಸ್ತರಿಸಿ, 70 ವರ್ಷ ಮೇಲ್ಪಟ್ಟ ಎಲ್ಲರಿಗೂ ರೂ.5 ಲಕ್ಷ ರೂ. ಗಳವರೆಗೆ ಉಚಿತ ಆರೋಗ್ಯ ವಿಮೆ ಒದಗಿಸುವ 'ವಯೋ ವಂದನಾ' ಯೋಜನೆಯನ್ನು ಜಾರಿಗೆ ತಂದಿದೆ. ರಾಜ್ಯದಲ್ಲಿ ಈ ಯೋಜನೆ ಜಾರಿಗೆ 2025ರ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಸಚಿವ ಸಂಪುಟದ ಅನುಮೋದನೆ ದೊರೆತು, ಆರೋಗ್ಯ ಇಲಾಖೆಯು ಆದೇಶವನ್ನೂ ಹೊರಡಿಸಿದೆ. ಆದರೆ, ದುರಂತವೆಂದರೆ ಈವರೆಗೂ ಯೋಜನೆ ಮಾತ್ರ ವಾಸ್ತವದಲ್ಲಿ ಅನುಷ್ಠಾನಗೊಂಡಿಲ್ಲ ಎಂದು ಅವರು ಸದನದ ಗಮನಕ್ಕೆ ತಂದರು.

> **ಜಾರಿಯಾಗದ ಯೋಜನೆ**
>
> ರಾಜ್ಯದಲ್ಲಿ ಈ ಯೋಜನೆ ಜಾರಿಗೆ 2025ರ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಸಚಿವ ಸಂಪುಟದ ಅನುಮೋದನೆ ದೊರೆತು, ಆರೋಗ್ಯ ಇಲಾಖೆಯು ಆದೇಶವನ್ನೂ ಹೊರಡಿಸಿದೆ. ಆದರೆ, ದುರಂತವೆಂದರೆ ಈವರೆಗೂ ಯೋಜನೆ ಮಾತ್ರ ವಾಸ್ತವದಲ್ಲಿ ಅನುಷ್ಠಾನಗೊಂಡಿಲ್ಲ.
>
> ● ಕಿಶೋರ್ ಕುಮಾರ್ ಪುತ್ತೂರು



'ಊಟಕ್ಕಿಲ್ಲದ ಉಪ್ಪಿನಕಾಯಿ'!

ರಾಜ್ಯದಲ್ಲಿ ಈಗಾಗಲೇ 2,16,265 ಮಂದಿ ಹಿರಿಯ ನಾಗರಿಕರಿಗೆ ಈ ಯೋಜನೆಯಡಿ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಆದರೆ, ಆಸ್ಪತ್ರೆಗಳಲ್ಲಿ ಈ ಕಾರ್ಡ್‌ಗಳನ್ನು ಸ್ವೀಕರಿಸುತ್ತಿಲ್ಲವಾದ್ದರಿಂದ ಚಿಕಿತ್ಸೆಗಾಗಿ ವೃದ್ಧರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ದುಃಸ್ಥಿತಿ ನಿರ್ಮಾಣವಾಗಿದೆ. ಅನುಷ್ಠಾನವೇ ಆಗದ ಕಾರಣ ಈ ಕಾರ್ಡ್‌ಗಳು 'ಊಟಕ್ಕಿಲ್ಲದ ಉಪ್ಪಿನಕಾಯಿ'ಯಂತಾಗಿವೆ ಎಂದು ಅವರು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ದೇಶದ ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬ ನಾಗರಿಕನಿಗೂ ಗೌರವಯುತ ಜೀವನ ಹಾಗೂ ಆರೋಗ್ಯದ ಹಕ್ಕನ್ನು ನೀಡಿದೆ. ಅದರಲ್ಲೂ ಸಮಾಜದ ದುರ್ಬಲ ವರ್ಗಗಳಾದ ವಯೋವೃದ್ಧರ ಕಲ್ಯಾಣವನ್ನು ಕಾಪಾಡುವುದು ಹಾಗೂ ಅವರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಯಾವುದೇ ಸರ್ಕಾರದ ಮೂಲಭೂತ ಕರ್ತವ್ಯವಾಗಿದೆ. ಒಂದು ಸಮಾಜದ ಸಂಸ್ಕೃತಿಯನ್ನು ಆ ಸಮಾಜ ತನ್ನ ಹಿರಿಯರನ್ನು ನಡೆಸಿಕೊಳ್ಳುವ ರೀತಿಯಿಂದಲೇ ಅಳೆಯಲಾಗುತ್ತದೆ. ತಮ್ಮ ಸಂಧ್ಯಾಕಾಲದಲ್ಲಿರುವ ಹಿರಿಯ ನಾಗರಿಕರು ಗೌರವಯುತ ಹಾಗೂ ಭದ್ರತೆಯ ಜೀವನ ನಡೆಸಲು, ಚಿಕಿತ್ಸೆ ಪಡೆಯಲು ಈ ಯೋಜನೆ ಅತ್ಯಂತ ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇನ್ನು ಮುಂದಾದರೂ ಕಾಲಹರಣ ಮಾಡದೆ 'ಆಯುಷ್ಮಾನ್ ವಯೋ ವಂದನಾ' ಯೋಜನೆಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಅವರು ಸದನದಲ್ಲಿ ಒತ್ತಾಯಿಸಿದರು.

ಕಟೀಲು ಮೇಳದ ಸಂಚಾಲಕ ಕಲ್ಲಾಡಿ ದೇವಿಪ್ರಸಾದ್ ಶೆಟ್ಟಿ ಪ್ರಶಸ್ತಿ

ಮಾ.21ರಂದು ಸುರತ್ಕಲ್‌ನಲ್ಲಿ ಅಗರಿ ಸಂಸ್ಮರಣೆ

ಸುರತ್ಕಲ್: ಗೋವಿಂದ ದಾಸ ಕಾಲೇಜು ಅಗರಿ ಶ್ರೀನಿವಾಸ ಭಾಗವತ ಸಂಸ್ಮರಣ ವೇದಿಕೆ ಸುರತ್ಕಲ್ ಇದರ ಸಹಯೋಗದಲ್ಲಿ ಯಕ್ಷಯಾನ 2026, ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ತೆಂಕುತಿಟ್ಟು ಯಕ್ಷಗಾನ ಸ್ಪರ್ಧೆ, ಮತ್ತು ಅಗರಿ ಸಂಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಮಾ. 21ರಂದು ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಯಕ್ಷ ಕೇಸರಿ ಅಗರಿ ರಘುರಾಮ ಭಾಗವತ ವೇದಿಕೆಯಲ್ಲಿ ಜರುಗಲಿದೆ.



ಕಾರ್ಯಕ್ರಮದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅಗರಿ ಸಂಸ್ಮರಣ ವೇದಿಕೆಯ ಅಗರಿ ರಾಘವೇಂದ್ರ ರಾವ್ ಅವರು ಬೆಳಗ್ಗೆ 8:30 ರಿಂದ ಯಕ್ಷಗಾನ ಸ್ಪರ್ಧೆ, ಸಂಜೆ 4:30ರಿಂದ ಅಗರಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಈ ಬಾರಿ ಶ್ರೀ ಕಟೀಲು ಮೇಳದ ಸಂಚಾಲಕರಾದ ಕಲ್ಲಾಡಿ ದೇವಿ ಪ್ರಸಾದ್ ಶೆಟ್ಟಿ ಅವರಿಗೆ ಅಗರಿ ಪ್ರಶಸ್ತಿ ಮತ್ತು 35 ಸಾವಿರ ನಗದು ಪುರಸ್ಕಾರ, ಸಿರಿ ಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ಕಾಸರಗೋಡು ಸಂಸ್ಥೆಗೆ ಅಗರಿ ರಘುರಾಮ ಭಾಗವತ ಪ್ರಶಸ್ತಿ, 52 ಇಂಚಿನ ಎಲ್‌ಇಡಿ ಟಿವಿ ಹಸ್ತಾಂತರ ಮಾಡಲಾಗುವುದು. ಅಗರಿ ಸಂಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕಟೀಲು ಕ್ಷೇತ್ರದ ವೇದಮೂರ್ತಿ ಕಮಲಾದೇವಿ ಪ್ರಸಾದ ಆಸ್ರಣ್ಣ ಉದ್ಘಾಟಿಸುವರು. ಉದ್ಯಮಿ ಶ್ರೀಪತಿ ಭಟ್ ಅಧ್ಯಕ್ಷತೆ ವಹಿಸುವರು. ಹಿಂದೂ ವಿದ್ಯಾ ದಾಯನಿ ಸಂಘದ ಅಧ್ಯಕ್ಷ ಜಯಚಂದ್ರ ಹತ್ವಾರ್, ಶಾಸಕ ಡಾ. ವೈ. ಭರತ್ ಶೆಟ್ಟಿ, ಯುಗಪುರುಷ ಕಿನ್ನಿಗೋಳಿ ಇದರ ಭುವನಾಭಿರಾಮ ಉಡುಪ, ಶ್ರೀನಿವಾಸ ಕಾಲೇಜಿನ ಪ್ರೊ. ಶ್ರೀನಾಥ್ ರಾವ್, ಕಾಲೇಜಿನ ಆಡಳಿತಾತ್ಮಕ ನಿರ್ದೇಶಕ ಪ್ರೊ. ರಮೇಶ್ ಭಟ್ ಎಸ್ ಜಿ, ಪ್ರಾಂಶುಪಾಲ ಪ್ರೊ. ಹರೀಶ್ ಆಚಾರ್ಯ, ಯಕ್ಷಯಾನ ಸಂಚಾಲಕ ಪೂರ್ಣಿಮಾ ಯತಿಶ್ ರೈ ಉಪಸ್ಥಿತರಿರುವರು. ಕೃಷ್ಣ ಪ್ರಕಾಶ ಉಳಿತ್ತಾಯ ಅಗರಿ ಸಂಸ್ಮರಣೆ, ಡಾ. ವಾದಿರಾಜ ಕಲ್ಲೂರಾಯ ಅವರು ಅಭಿನಂದನಾ ಭಾಷಣ ಮಾಡುವರು. ಅಗರಿ ಪ್ರಶಸ್ತಿ ಹಾಗೂ ಯಕ್ಷಗಾನ ಸ್ಪರ್ಧೆಯೊಂದಿಗೆ ಯುವ ಕಲಾವಿದರನ್ನು ರೂಪಿಸಲು ಅವರಿಗೆ ವೇದಿಕೆಯನ್ನ ಕಲ್ಪಿಸಲು ಈ ಒಂದು ಕಾರ್ಯಕ್ರಮ 25 ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದು ಸಂತೋಷ ತಂದಿದೆ. ಗೋವಿಂದ ದಾಸ ಕಾಲೇಜು ಉತ್ತಮ ಸಹಕಾರ ನೀಡುತ್ತಾ ಬಂದಿದೆ ಎಂದರು.

ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಹರೀಶ್ ಆಚಾರ್ಯ ಅವರು ಮಾತನಾಡಿ, ಯಕ್ಷಯಾನ ಯಕ್ಷಗಾನ ಸ್ಪರ್ಧೆಯನ್ನು ಉದ್ಯಮಿ ರಘುನಾಥ ಶೆಟ್ಟಿ ಕೃಷ್ಣಾಪುರ ಉದ್ಘಾಟಿಸಲಿದ್ದಾರೆ. ಬೆಳಗ್ಗೆ 8:30ಕ್ಕೆ ಸ್ವಸ್ತಿಕ ನ್ಯಾಷನಲ್ ಬಿಜಿನೆಸ್ ಸ್ಕೂಲ್ ಇವರಿಂದ ನರಕಾಸುರ ಮೋಕ್ಷ, 10.15 ರಿಂದ ನಿಟ್ಟೆ ತಾಂತ್ರಿಕ ಮಹಾವಿದ್ಯಾಲಯದಿಂದ ಭೀಷ್ಮ ಪ್ರತಿಜ್ಞೆ, 11.30ರಿಂದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ ಪ್ರಥಮ ದರ್ಜೆ ಕಾಲೇಜು ಇವರಿಂದ ರತ್ನಾವತಿ ಕಲ್ಯಾಣ, ಮಧ್ಯಾಹ್ನ 1:00 ಯಿಂದ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಇವರಿಂದ ಬಬ್ರುವಾಹನ ಕಾಳಗ, 2.15 ಗಂಟೆಯಿಂದ ಎಸ್‌ಡಿಎಂ ಉಜಿರೆ ಕಾಲೇಜು ತಂಡದಿಂದ ತರಣಿಸೇನ ಕಾಳಗ, ಸಂಜೆ 3:30 ಗಂಟೆಯಿಂದ ಗೋವಿಂದ ದಾಸ ಕಾಲೇಜು ಯಕ್ಷಗಾನ ಮತ್ತು ಲಲಿತಕಲಾ ಅಧ್ಯಯನ ಕೇಂದ್ರ ತಂಡದಿಂದ ಸುಧನ್ವ ಮೋಕ್ಷ ಪ್ರದರ್ಶನ ಯಕ್ಷಗಾನ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯಕ್ಷಯಾನ ಸಮಿತಿಯ ಸಂಚಾಲಕಿ ಪೂರ್ಣಿಮಾ ಯತೀಶ್ ರೈ, ಪ್ರಮುಖರಾದ ಗಂಗಾಧರ ಪೂಜಾರಿ ಚೇಳಾರು, ಪುಂಡಲಿಕ ಹೊಸಬೆಟ್ಟು, ಪ್ರಕಾಶ್ ಕುಳಾಯಿ ಉಪಸ್ಥಿತರಿದ್ದರು

ಪೂರ್ವಾಗ್ರಹಗಳಿಂದ ಕನ್ನಡ ಸಾಹಿತ್ಯ ವಿಮರ್ಶೆ ಮುಕ್ತವಾಗಲಿ: ಪ್ರೊ. ಸಬಿಹಾ



ಕೊಣಾಜೆ: ಕನ್ನಡ ವಿಮರ್ಶೆ ಸಾಹಿತ್ಯ ಗುಂಪು, ಜಾತಿ, ಧರ್ಮ ಪ್ರದೇಶ ಮೊದಲಾದ ವಿವಿಧ ಪೂರ್ವಾಗ್ರಹಗಳಿಂದ ತುಂಬಿ ಮಸುಕಾಗಿದೆ. ಅದರಿಂದ ಹೊರಬಂದು ಸಮಚಿತ್ತದ ವಿಮರ್ಶೆಗೆ ತೊಡಗಿಕೊಳ್ಳಬೇಕಿದೆ ಎಂದು ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಹೇಳಿದರು.

ಅವರು ಮಂಗಳೂರು ವಿವಿಯ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಹಾಗೂ ಗಿಳಿವಿಂಡು ಮಂಗಳೂರು ಇದರ ವತಿಯಿಂದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ. ವಿವೇಕ್ ರೈ ವಿಚಾರ ವೇದಿಕೆಯಲ್ಲಿ ನಡೆದ 'ಎಂ.ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ.ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ. ಜಯಪ್ರಕಾಶ್ ಶೆಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಪ್ರೊ.ನಾಗಪ್ಪ ಗೌಡ ಅವರು ಸ್ವಾಗತಿಸಿದರು. ಡಾ. ಯಶುಕುಮಾರ್ ನಿರೂಪಿಸಿದರು. ಗಿಳಿವಿಂಡುವಿನ ಅಧ್ಯಕ್ಷ ಪ್ರೊ.ಶಿವರಾಮ ಶೆಟ್ಟಿ ಇದ್ದರು. ಬಳಿಕ ನಡೆದ ಗೋಷ್ಠಿಯಲ್ಲಿ ಡಾ.ರಾಜಶೇಖರ್ ಹಳೆಮನೆ, ಡಾ.ಭಾರತೀ ದೇವಿ ಪಿ, ಪ್ರೊ.ಕೇಶವ ಶರ್ಮ ಅವರು ವಿಚಾರ ಮಂಡನೆ ಮಾಡಿದರು. ಪ್ರಾಧ್ಯಾಪಕ ಪ್ರೊ.ಸೋಮಣ್ಣ ಹೊಂಗಳ್ಳಿ, ಡಾ.ಧನಂಜಯ ಕುಂಬ್ಳೆ ಡಾ.ಯಶು ಕುಮಾರ್ ಸಮನ್ವಯಕಾರರಾಗಿ ಭಾಗವಹಿಸಿದ್ದರು.

ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ ದೇವಳದಲ್ಲಿ ಮಾ.20ಕ್ಕೆ ದೈವಗಳ ಪ್ರತಿಷ್ಠೆ

ಉಪ್ಪಿನಂಗಡಿ: ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ ದೇವಾಲಯದಲ್ಲಿ ಪುನರ್ ನಿರ್ಮಿಸಲಾದ ಚಾಮುಂಡಿ, ಪಂಜುರ್ಲಿ, ಗುಳಿಗ ದೈವಗಳ ಗುಡಿ ಕಟ್ಟೆಗಳಲ್ಲಿ ಮಾ.20ಕ್ಕೆ ಪ್ರತಿಷ್ಠಾ ಕಾರ್ಯ ನಡೆಯಲಿದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಾಯಕ್ ತಿಳಿಸಿದರು.

ಅವರು ದೇವಳದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇವಾಲಯದ ರಥದ ಕೊಟ್ಟಿಗೆ ಮುಂಭಾಗದಲ್ಲಿ ನಿರ್ಮಿಸಲಾದ ಈ ನೂತನ ಗುಡಿಯಲ್ಲಿ ಕ್ಷೇತ್ರದ ತಂತ್ರಿಗಳಾದ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ ಮಾ.19ರ ರಾತ್ರಿ ವಾಸ್ತು ಹೋಮ, ವಾಸ್ತು ಬಲಿ, ರಕ್ಷೋಘ್ನ ಹೋಮ ನಡೆದು ಮಾ.20ರ ಪೂರ್ವಾಹ್ನ 8.30ರಿಂದ ಪ್ರತಿಷ್ಠೆ ನಡೆಯಲಿದೆಂದು ವಿವರಿಸಿದರು.



ನನೆಗುದಿಗೆ ಬಿದ್ದಿದ್ದ ಗುಡಿಗಳು

ಈ ಹಿಂದೆ ದೇವಾಲಯದಲ್ಲಿ ನಡೆದ ಅಭಿವೃದ್ಧಿ ಕಾರ್ಯದ ಸಮಯದಲ್ಲಿ ಮೂರು ದೈವಗಳ ಗುಡಿ ಕಟ್ಟೆಗಳು ಮಣ್ಣು ಬಿದ್ದು ಗುಂಡಿಯಲ್ಲಿ ಇದ್ದಂತಾಗಿ, ಕಡೆಗಣಿಸಲ್ಪಟ್ಟಂತಿತ್ತು. ಇದರಿಂದಾಗಿ ಸನಿಹದಲ್ಲೇ ಇದ್ದ ದೇವಾಲಯದ ಬಸವ (ನಂದಿ) ಆಲಯದಲ್ಲಿ ವಾಸಿಸುತ್ತಿದ್ದ ಎರಡು ಬಸವಗಳು ಸಾವನ್ನಪ್ಪಿರುವುದು ಮಾತ್ರವಲ್ಲದೆ ದೇವಾಲಯದ ಅಭಿವೃದ್ಧಿ ಕಾರ್ಯಗಳಲ್ಲಿಯೂ ನಿರೀಕ್ಷಿತ ಪ್ರಗತಿ ಕಾಣಿಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ನಡೆಸಲಾದ ಪ್ರಶ್ನಾ ಚಿಂತನೆಯ ವೇಳೆ ಗುಂಡಿಯಲ್ಲಿರುವ ದೈವಗಳ ಗುಡಿಯನ್ನು ಸುವ್ಯವಸ್ಥಿತವಾಗಿ ನಿರ್ಮಿಸಬೇಕೆಂದು ಸೂಚಿಸಲ್ಪಟ್ಟಿತ್ತು. ಅದರಂತೆ ಆಕರ್ಷಕವಾದ ಪಾರಂಪರಿಕ ಶೈಲಿಯಲ್ಲಿ ದೈವದ ಗುಡಿಯನ್ನು ನಿರ್ಮಿಸಲಾಗಿದ್ದು ಮಣೆ ಮಂಚಾದಿಗಳನ್ನು ಸಿದ್ಧಪಡಿಸಲಾಗಿದೆ. ತನ್ಮೂಲಕ ಸೀಮೆ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೂ ಕ್ಷೇಮ ಉಂಟಾಗಲಿದೆ ಎಂದು ಅವರು ತಿಳಿಸಿದರು.

ಮಾ.20ಕ್ಕೆ ಮಹಾಕಾಳಿ ಮೆಚ್ಚಿ

ದೇವಾಲಯದ ಮಹಾಕಾಳಿ ಅಮ್ಮನವರಿಗೆ ಪ್ರತಿ ವರ್ಷ ಜರಗುವ ಮೆಚ್ಚಿ ಯಾನೇಮವು ಈ ಬಾರಿ ಮಾ.20ರ ಶುಕ್ರವಾರದಂದು ರಾತ್ರಿ ದೇವಾಲಯದಲ್ಲಿ ನಡೆಯಲಿದ್ದು ಎಂದಿನಂತೆ ಸಹಸ್ರಾರು ಭಕ್ತಾದಿಗಳ ಆಗಮನದ ನಿರೀಕ್ಷೆ ಇದೆ. ಅಂದು ರಾತ್ರಿ ಆಗಮಿಸಿದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯೂ ಜರಗಲಿದೆ ಎಂದು ರಾಧಾಕೃಷ್ಣ ನ್ಾಯಕ್ ವಿವರಿಸಿದರು.

ದೇವಳದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಬಿ. ಗೋಪಾಲಕೃಷ್ಣ ರೈ, ವೆಂಕಪ್ಪ ಪೂಜಾರಿ ಮರುವೇಲು ಇದ್ದರು.

ಮಾ.25ಕ್ಕೆ ಆತ್ಮಶಕ್ತಿ ಬೋಳಾರ ಶಾಖೆ ಉದ್ಘಾಟನೆ: ಆಮಂತ್ರಣ ಬಿಡುಗಡೆ



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನೂತನ 34ನೇ ಬೋಳಾರ ಶಾಖೆಯನ್ನು ಮಂಗಳೂರಿನ ಬೋಳಾರದ ಜೆಪ್ಪು ಮಾರ್ಕೆಟ್‌ನ ಭಗಿನಿ ಸಮಾಜದ ಬಳಿಯಿರುವ 'ಯುನಿಕ್ ಸ್ಟ್ರೀಕ್' ಕಾಂಪ್ಲೆಕ್ಸ್‌ನಲ್ಲಿ ಮಾ.25ರಂದು ಪೂರ್ವಾಹ್ನ 11.00 ಗಂಟೆಗೆ ಸಾರ್ವಜನಿಕ ಸೇವೆಗಾಗಿ ಲೋಕಾರ್ಪಣೆಗೊಳಿಸಲಿದೆ.

ನೂತನ 34ನೇ ಬೋಳಾರ ಶಾಖೆಯ ಆಮಂತ್ರಣ ಪತ್ರಿಕೆಯ ಬಿಡುಗಡೆ ಕಾರ್ಯಕ್ರಮವು ಮಂಗಳವಾರ ಸಂಘದ ಅಧ್ಯಕ್ಷ 'ಸಹಕಾರ ರತ್ನ' ಚಿತ್ತರಂಜನ್ ಬೋಳಾರ್ ರವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ಜರುಗಿತು.

ನೂತನ 34ನೇ ಬೋಳಾರ ಶಾಖೆಯ ಆಮಂತ್ರಣ ಪತ್ರಿಕೆಯನ್ನು ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಎಂ. ಅರುಣ್ ಐತಾಳ್ ಅವರು ಬಿಡುಗಡೆಗೊಳಿಸಿದರು. ಈ ಸಂದರ್ಭ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕ ದಿವಾಕರ್ ಬಿ.ಪಿ, ಉಮಾವತಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್, ಸ್ಥಳೀಯ ಮಂಗಳೂರು ನಗರ ಪಾಲಿಕೆಯ ನಿಕಟಪೂರ್ವ ಸದಸ್ಯರಾದ ಭಾನುಮತಿ, ಬಿಲ್ಲವ ಸಂಘ ಮಂಗಳಾದೇವಿಯ ಗೌರವ ಅಧ್ಯಕ್ಷ ಸದಾನಂದ ಸಾಲಿಯಾನ್, ಅಧ್ಯಕ್ಷ ರಾಜರತ್ನ ಸನಿಲ್, ಉಪಾಧ್ಯಕ್ಷ ದಿನೇಶ್, ಕಾರ್ಯದರ್ಶಿ ರಮಾನಂದ ಪೂಜಾರಿ, ಸಂಚಾಲಕ ಉದಯ ಕುಮಾರ್, ಲಲಿತಾ ಬಿ., ನೂತನ ಶಾಖೆಯ ಸಲಹಾ ಸಮಿತಿ ಸದಸ್ಯರಾದ ಮೋಹನ್ ರಾಜ್, ಚಂದ್ರಹಾಸ್ ಸುವರ್ಣ, ಆನಂದ, ಮೋಹನ್ ಕುಮಾರ್, ಅರುಣ್ ಕುಮಾರ್ ಸುವರ್ಣ, ಮತ್ತಿತರರಿದ್ದರು.

ಹನುಮಗಿರಿ ಬ್ರಹ್ಮಕಲಶೋತ್ಸವ ಹಿನ್ನೆಲೆ ಉಪಸಮಿತಿಗಳ ಸಮಾಲೋಚನ ಸಭೆ | ನಳಿನ್ ಕುಮಾರ್ ಕಟೀಲ್ ಅಭಿಪ್ರಾಯ

ಫಲಾಪೇಕ್ಷೆ ಇಲ್ಲದೇ ಸೇವೆ ಮಾಡಿದರೆ ಭಗವಂತನ ಅನುಗ್ರಹ ಪ್ರಾಪ್ತಿಯಾಗಲಿದೆ

ಪುತ್ತೂರು: ಕರಾವಳಿ ಭಾಗದ ಜನರಿಗೆ ಧಾರ್ಮಿಕ ಕಾರ್ಯಕ್ರಮಗಳನ್ನು ಸಂಘಟಿಸುವ ಅನುಭವವಿರುವುದರಿಂದ ಹಾಗೂ ಯಶಸ್ವಿಗೊಳಿಸುವ ಕಾರ್ಯ ನಿರಂತರವಾಗಿ ನಡೆಸುತ್ತಾರೆ. ದೇವರ ಸೇವೆ ಮಾಡುವ ಭಾಗ್ಯ ನಮಗೆಲ್ಲರಿಗೂ ಸಿಕ್ಕಿದೆ. ಯಾವುದೇ ಫಲಾಪೇಕ್ಷೆ ಇಲ್ಲದೇ ಸೇವೆ ಮಾಡಿದರೆ ಭಗವಂತನ ಅನುಗ್ರಹ ಪ್ರಾಪ್ತಿಯಾಗುತ್ತದೆ ಎಂದು ಹನುಮಗಿರಿ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಹನುಮಗಿರಿ ವೈದೇಹಿ ಸಭಾಭವನದಲ್ಲಿ ನಡೆದ ಶ್ರೀ ಕೋದಂಡರಾಮ, ಪಂಚಮುಖಿ ಆಂಜನೇಯ ಕ್ಷೇತ್ರದ ಬ್ರಹ್ಮಕಲಶೋತ್ಸವದ ಉಪಸಮಿತಿಗಳ ಸಮಾಲೋಚನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಏ.9ರಿಂದ ಬ್ರಹ್ಮಕಲಶೋತ್ಸವ

ಏ.9ರಿಂದ ನಡೆಯುವ ಬ್ರಹ್ಮಕಲಶೋತ್ಸವ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಸ್ಥಳೀಯರನ್ನು ಸೇರಿಸಿ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ನಿರ್ಧಾರದಂತೆ ಕಾರ್ಯಗಳು ನಡೆಯುತ್ತದೆ ಎಂದು ಹೇಳಿದ ಅವರು, ವಿವಿಧ ಸಮಿತಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಮಾಹಿತಿ ನೀಡಿದರು.

ದೈವಜ್ಞರ ನಿರ್ದೇಶನ ಪಾಲನೆ

ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ ಮಾತನಾಡಿ, ದೈವಜ್ಞರ ನಿರ್ದೇಶನದಂತೆ ಬ್ರಹ್ಮಕಲಶೋತ್ಸವಕ್ಕೆ ಸಕಲ ತಯಾರಿಗಳು ನಡೆಯುತ್ತಿದೆ. ಎಲ್ಲರು ಸಕ್ರಿಯವಾಗಿ ತೊಡಗಿಸಿಕೊಂಡು ಯಶಸ್ವಿಗೊಳಿಸಬೇಕು. ಜಪದೀಕ್ಷೆ ನಿರಂತರವಾಗಿ ನಡೆಯುತ್ತಿದೆ. ಊರ ಪರವೂರ ಭಕ್ತರನ್ನು ಸೇರಿಸಿ 30 ಸಮಿತಿಗಳನ್ನು ರಚಿಸಲಾಗಿದೆ. ಮಾ.19ರಂದು ಬ್ರಹ್ಮಕಲಶೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳ್ಳಲಿದೆ ಎಂದು ಹೇಳಿದರು.

ವಿವಿಧ ಉಪಸಮಿತಿಗಳ ಸಂಚಾಲಕರಿಗೆ ಜವಾಬ್ದಾರಿಯ ಪುಸ್ತಕವನ್ನು ನಳಿನ್ ಕುಮಾರ್ ಹಸ್ತಾಂತರಿಸಿದರು. ರಾಮ ತಾರಕ ಯಜ್ಞದ ಸಂಚಾಲಕ ಸೀತಾರಾಮ್ ರೈ ಕೆದಂಬಾಡಿಗುತ್ತು, ಎಸ್‌ಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಮನ್ಮಥ ಎಸ್.ಎನ್., ಸುಳ್ಯ ತಾಲೂಕು ಸಮಿತಿಯ ಪ್ರಮುಖ್ ರಾಕೇಶ್ ರೈ ಕಡೆಂಜಿ ಇದ್ದರು. ಸಾಮಾಜಿಕ ಜಾಲತಾಣದ ಪ್ರಮುಖ್ ಹರಿಪ್ರಸಾದ್ ವಂದಿಸಿದರು. ರಾಜೇಂದ್ರ ಪ್ರಸಾದ್ ಮೇನಾಲ ನಿರ್ವಹಿಸಿದರು.

> **ಎಲ್ಲರೂ ತೊಡಗಿಸಿಕೊಳ್ಳಿ**
>
> ಕರಾವಳಿ ಭಾಗದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತದೆ. ಈ ಕಾರ್ಯಕ್ರಮಗಳಲ್ಲಿ ಎಲ್ಲರೂ ಶ್ರದ್ಧಾಭಕ್ತಿಯಿಂದ ತೊಡಗಿಸಿಕೊಳ್ಳುವುದರಿಂದ ಕಾರ್ಯಕ್ರಮ ಯಶಸ್ವಿಯಾಗುತ್ತದೆ. ಅದೇ ರೀತಿ ಹನುಮಗಿರಿ ಕ್ಷೇತ್ರದ ಬ್ರಹ್ಮಕಲಶೋತ್ಸವವೂ ಕೂಡ ಯಶಸ್ವಿಯಾಗಲಿದೆ.
>
> ● ನಳಿನ್ ಕುಮಾರ್ ಕಟೀಲ್

ಸುತ್ತ ಮುತ್ತ

ಸ್ವ-ಉದ್ಯೋಗ ತರಬೇತಿಗೆ ಅರ್ಜಿ ಆಹ್ವಾನ

ಮಡಿಕೇರಿ: ಕೊಡಿಗೆ ಯೂನಿಯನ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗಿ ಯುವತಿಯರಿಗೆ ಊಟ ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿ ನೀಡಲಾಗುವ ಸ್ವ-ಉದ್ಯೋಗ ತರಬೇತಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಸಲು 18 ರಿಂದ 50 ವರ್ಷ ವಯೋಮಿತಿಯೊಳಗಿನ ಯುವತಿಯರಿಗೆ ಮಾತ್ರ ಅವಕಾಶ. ಆಸಕ್ತಿ ಉಳ್ಳವರು ಸಂಸ್ಥೆಯನ್ನು ನೇರವಾಗಿ ಅಥವಾ ಕರೆ ಮಾಡಿ ಮಾಹಿತಿ ಪಡೆಯಬಹುದು.
ಬ್ಯೂಟಿ ಪಾರ್ಲರ್ ತರಬೇತಿ: 35 ದಿನಗಳು. ಪ್ರಾರಂಭ 01.04.2026 ರಿಂದ 05.05.2026 ರ ವರೆಗೆ., ಮಹಿಳೆಯರ ಹೊಲಿಗೆ ತರಬೇತಿ: 31 ದಿನಗಳು. ಪ್ರಾರಂಭ 06.05.2026 ರಿಂದ 05.06.2026 ರ ವರೆಗೆ., ಕಂಪ್ಯೂಟರ್ ಲೆಕ್ಕಪತ್ರ ನಿರ್ವಹಣೆ ತರಬೇತಿ 38 ದಿನಗಳು. ಪ್ರಾರಂಭ 13.05.2026 ರಿಂದ 19.06.2026ರ ವರೆಗೆ, ಅಣಬೆ ಬೇಸಾಯ ತರಬೇತಿ : 10 ದಿನಗಳು. ಪ್ರಾರಂಭ 27.05.2026 ರಿಂದ 05.06.2026 ರ ವರೆಗೆ ನಡೆಯಲಿದೆ.
ಆಸಕ್ತರು ಹೆಚ್ಚಿನ ಮಾಹಿತಿಗೆ 9686406181, 9449402081, 8618471801, 9900142602 ನ್ನು ಸಂಪರ್ಕಿಸುವಂತೆ ಸಂಸ್ಥೆಯ ನಿರ್ದೇಶಕ ಪ್ರಕಾಶ್ ಕುಮಾರ್ ಅವರು ತಿಳಿಸಿದ್ದಾರೆ.

5-16 ವರ್ಷದೊಳಗಿನ ಮಕ್ಕಳಿಗೆ ಬೇಸಿಗೆ ಶಿಬಿರ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಬಾಲ ಭವನ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 5 ರಿಂದ 16 ವರ್ಷದೊಳಗಿನ ಮಕ್ಕಳಿಗೆ ಏಪ್ರಿಲ್ 13 ರಿಂದ ಮೇ 16 ರವರೆಗೆ ದಕ್ಷಿಣ ಕನ್ನಡ ಜಿಲ್ಲಾ ಬಾಲ ಭವನ ಕದ್ರಿಯಲ್ಲಿ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಒಟ್ಟು 70 ಮಕ್ಕಳಿಗೆ ವಿನೂತನ ಚಟುವಟಿಕೆಗಳ ಕುರಿತು ತರಬೇತಿ ನೀಡಲಾಗುತ್ತದೆ. ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿದ್ದು, ಇತರ ಮಕ್ಕಳಿಗೆ ರೂ. 500 ಶುಲ್ಕ ನಿಗದಿಪಡಿಸಲಾಗಿದೆ. ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಪ್ರತಿ ದಿನ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಶಿಬಿರವು ನಡೆಯಲಿದೆ. ಆಸಕ್ತರು ದಿನಾಂಕ ಏಪ್ರಿಲ್ 6 ರೊಳಗಾಗಿ ನಗರದ ಬಿಜೈ ಮೆಸ್ಕಾಂ ಬಳಿ ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಯಿಂದ ನಿಗದಿತ ನಮೂನೆಯನ್ನು ಪಡೆದು ಜನ್ಮ ದಿನಾಂಕ ಹಾಗೂ ಶಾಲಾ ದೃಢೀಕರಣದೊಂದಿಗೆ ಅರ್ಜಿ ಸಲ್ಲಿಸಬೇಕು. ಮೊದಲು ಅರ್ಜಿ ಸಲ್ಲಿಸಿದ 70 ಮಕ್ಕಳಿಗೆ ಮಾತ್ರ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿ ವಿಜಿಲ್ ನಿಯಂತ್ರಣ ಕೊಠಡಿ ಉದ್ಘಾಟನೆ

ಕಾಸರಗೋಡು: ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಕಲೆಕ್ಟರೇಟ್‌ನಲ್ಲಿ ಸಿ ವಿಜಿಲ್ ನಿಯಂತ್ರಣ ಕೊಠಡಿಯನ್ನು ಪ್ರಾರಂಭಿಸಲಾಗಿದೆ. ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಮತ್ತು ಚುನಾವಣಾ ವೆಚ್ಚಗಳಿಗೆ ಸಂಬಂಧಿಸಿದ ದೂರುಗಳನ್ನು ಸಿ ವಿಜಿಲ್ ನಿಯಂತ್ರಣ ಕೊಠಡಿ ನಿರ್ವಹಿಸುತ್ತದೆ. ಚುನಾವಣೆ ಕುರಿತು ಯಾವುದೇ ಮಾಹಿತಿಗೆ ಸಿ ವಿಜಿಲ್ ದೂ. ಸಂ.04994292650 ಕರೆ ಮಾಡಬಹುದು.

ಎಣ್ಮಕಜೆ ಗ್ರಾ.ಪಂ.ನಲ್ಲಿ ಸೌಹಾರ್ದ ಸಂಗಮ ಇಫ್ತಾರ್ ಕೂಟ

ಪೆರ್ಲ: ಎಣ್ಮಕಜೆ ಗ್ರಾ.ಪಂ.ವತಿಯಿಂದ ಪಂ. ಸಭಾಂಗಣದಲ್ಲಿ ಸೌಹಾರ್ದ ಸಂಗಮ ಇಫ್ತಾರ್ ಕೂಟ ನಡೆಯಿತು. ಗ್ರಾ.ಪಂ.ಅಧ್ಯಕ್ಷೆ ಕುಸುಮಾವತಿ ಬಿ. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಪಂ. ಉಪಾಧ್ಯಕ್ಷ ಅಬೂಬಕ್ಕರ್ ಸಿದ್ದಿಕ್ ವಳಮೊಗರು, ಜಿ.ಪಂ.ಸದಸ್ಯ ಸೋಮಶೇಖರ ಜೆ.ಎಸ್., ಪಂ. ಸದಸ್ಯರು, ನಿವೃತ್ತ ನೋಂದಣಾಧಿಕಾರಿ ಮುಹಮ್ಮದಲಿ ಪೆರ್ಲ, ನವಜೀವನ ವಿಶೇಷ ಶಾಲೆ ವ್ಯವಸ್ಥಾಪಕ ಫಾ.ಜೋಸ್ ಚೆಂಬೋಟ್ಟಿಕ್ಕಲ್, ಬದಿಯಡ್ಕ ಪೊಲೀಸ್ ಅಧಿಕಾರಿಗಳು ಮತ್ತಿತರರಿದ್ದರು.

ಅಡುಗೆ ಅನಿಲ ಬೆಲೆ ಏರಿಕೆ ವಿರುದ್ಧ ಧರಣಿ

ಪೆರ್ಲ: ಅಡುಗೆ ಅನಿಲ ಬೆಲೆ ಏರಿಕೆ ಹಾಗೂ ಅಗತ್ಯಕ್ಕೆ ತಕ್ಕಂತೆ ಅಡುಗೆ ಅನಿಲ ದೊರೆಯದಿರುವುದನ್ನು ವಿರೋಧಿಸಿ ಪ್ರಜಾವಾದಿ ಮಹಿಳಾ ಅಸೋಸಿಯೇಶನ್ ನ ಎಣ್ಮಕಜೆ ವಿಲೇಜ್ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಧರಣಿ ನಡೆಯಿತು. ಮಹಿಳಾ ಅಸೋಸಿಯೇಶನ್ ಜಿಲ್ಲಾ ಸಮಿತಿ ಸದಸ್ಯೆ ಸೌದಾಬಿ ಹನೀಫ್ ಉದ್ಘಾಟಿಸಿದರು. ಮಮತಾ ಅಧ್ಯಕ್ಷತೆ ವಹಿಸಿದ್ದರು. ಪುಷ್ಪಾ ಬೆದ್ರಂಪಳ್ಳ, ಜಾನಕಿ ಮತ್ತಿತರರಿದ್ದರು.

ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನ ಮಾಸಿಕ ಸಭೆಯಲ್ಲಿ ನಿರ್ಣಯ | ಬಜೆಟ್ ಮಂಡನೆಗೆ ಅನುಮೋದನೆ

18 ವಾರ್ಡ್ ರಸ್ತೆಗಳ ನಾಮಫಲಕಕ್ಕೆ ತುಳುವಿನಲ್ಲಿ ಹೆಸರು

ಕಿನ್ನಿಗೋಳಿ: ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಂತೆ, ಮಾರುಕಟ್ಟೆ, ಹೊಟೇಲು ವ್ಯವಹಾರಗಳಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಬಳಸದಿರುವಂತೆ ಜನಜಾಗೃತಿ ಮಾಡಿ, ವಿವಿಧ ಪ್ರಯತ್ನಗಳ ಮೂಲಕ ಜನರ, ಅಂಗಡಿ ಮಾಲಿಕರ ಮನ ಒಲಿಸಿ, ಕಾರ್ಯರೂಪಕ್ಕೆ ತರುವಂತೆ ಪ್ರಯತ್ನ ಮಾಡಲಾಗುವುದು ಎಂದು ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಸೋಮವಾರ ನಡೆದ ಮಾಸಿಕ ಸಭೆಯಲ್ಲಿ ಹೇಳಿದರು.

ಕಿನ್ನಿಗೋಳಿ ಮಾರುಕಟ್ಟೆಯಲ್ಲಿ ಪ್ರತಿ ಗುರುವಾರ ನಡೆಯುತ್ತಿದ್ದ ವಾರದ ಸಂತೆ ಲಿಟ್ಲ್ ಫ್ಲವರ್ ಶಾಲೆಯ ಬಳಿಗೆ ಸ್ಥಳಾಂತರವಾಗಿತ್ತು. ಈ ಸಂತೆಯನ್ನು ಮತ್ತೆ ಮಾರುಕಟ್ಟೆಗೆ ಸ್ಥಳಾಂತರಿಸುವ ಬಗ್ಗೆ ಚರ್ಚಿಸಲಾಯಿತು. ಸಂತೆಯ ಹಾಗೂ ಇತರ ದಿನ ರಸ್ತೆ ಬದಿಯಲ್ಲಿ ವ್ಯಾಪಾರ ವಹಿವಾಟು ಮಾಡುವಂತಿಲ್ಲ ಎಂದು ತಿಳಿಸಲಾಯಿತು.

ಪಟ್ಟಣ ಪಂಚಾಯತ್ 18 ವಾರ್ಡ್‌ಗಳ ರಸ್ತೆಗಳಿಗೆ ನಾಮ ಫಲಕ ಹಾಗೂ ತುಳುವಿನಲ್ಲಿ ಹೆಸರು ಬರೆಯುವ ಬಗ್ಗೆ ನಿರ್ಣಯ ಮಾಡಲಾಯಿತು. ಬಜೆಟ್ ಮಂಡನೆಗೆ ಅನುಮೋದನೆ ನೀಡಲಾಯಿತು.



ಕೊಡೆತ್ತೂರು ನವೋದಯ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿದ್ದು ಮುಂದಿನ ದಿನದಲ್ಲಿ ಟ್ಯಾಂಕರ್ ಮೂಲಕ ಟ್ಯಾಂಕ್‌ಗಳಿಗೆ ತುಂಬಿಸಿ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗುವುದು ಎಂದು ಗುರುರಾಜ್ ತಿಳಿಸಿದರು.

ವಾಣಿಜ್ಯ ಕಟ್ಟಡ ತೆರಿಗೆ ಪರಿಷ್ಕರಣೆ ಚರ್ಚೆ ಕೇಳಿಬಂತು. ಮುಂಚಿಕಾಡಿನಲ್ಲಿ ನೀರಿನ ಸಮಸ್ಯೆ ಪರಿಹಾರಕ್ಕೆ ಅಲ್ಲಿನ ತೆರೆದ ಬಾವಿ ದುರಸ್ತಿ ಮಾಡಬೇಕು ಎಂದು ಸದಸ್ಯ ಪ್ರಕಾಶ್ ಆಚಾರ್ ತಿಳಿಸಿದರು.

ಕಟೀಲು ಮಿತ್ತಬೈಲುವಿನಲ್ಲಿ ಕೆಲವು ಮನೆಗಳ ಸುತ್ತಮುತ್ತಲಿನಲ್ಲಿ ಅಪರಿಚಿತರು ಘನ ತಾಜ್ಯ ಹಾಗೂ ಬಂಡಲ್ ಬಿಸಾಡುತ್ತಿದ್ದು ಇದರ ನಿಮಿತ್ತ ಮನವಿ ಬಂದಿದ್ದು ಈ ನಿಟ್ಟಿನಲ್ಲಿ ಜನರನ್ನು ಪತ್ತೆ ಹಚ್ಚಲು ತತ್ಕಾಲಿಕ ನೆಲೆಯಲ್ಲಿ ಸಿ.ಸಿ. ಕ್ಯಾಮರ ಅಳವಡಿಸುಂತೆ ನಿರ್ಣಯಿಸಲಾಯಿತು. ಟ್ರಾಫಿಕ್ ವ್ಯವಸ್ಥೆಯ ಬಗ್ಗೆ ನಿತ್ಯ ಸಂಚಾರಿ ಪೋಲೀಸರು ಬಂದು ಟ್ರಾಫಿಕ್ ವ್ಯವಸ್ಥೆ ಹಾಗೂ ಪಾರ್ಕಿಂಗ್ ವ್ಯವಸ್ಥೆಯಲ್ಲಿ ಸುಧಾರಣೆ ಆಗಬೇಕಾಗಿದೆ ಎಂಬ ಬಗ್ಗೆ ಸಭೆಯಲ್ಲಿ ಕೇಳಿಬಂತು. ಪಂಚಾಯತ್ ವ್ಯಾಪ್ತಿಯ ಮಾರ್ಕೆಟ್ ಹಾಗೂ ಇನ್ನಿತರ ಸ್ಥಳದಲ್ಲಿ ಇದ್ದ ಅಂಗಡಿ ಕೋಣೆಗಳ ಏಲಂ ಆಗಬೇಕು ಹಾಗೂ ಇದರ ಸಮಗ್ರ ವರದಿ ಮಾಡಿ ಸಭೆಯಲ್ಲಿ ತಿಳಿಸಬೇಕಾಗಿದೆ ಎಂದು ಅಧ್ಯಕ್ಷರು ಹೇಳಿದರು.

ಉಪಾಧ್ಯಕ್ಷೆ ಪದ್ಮಲತಾ ರಾವ್, ಸದಸ್ಯರಾದ ಸಂತಾನ್ ಡಿಸೋಜ, ಪ್ರಣೆಕ್ ಕೋಟ್ಯಾನ್, ಲೋಕಯ್ಯ ಸಾಲ್ಯಾನ್, ಶೈಲೇಶ್ ಅಂಚನ್, ಧನುಷ್ ಶೆಟ್ಟಿಗಾರ್, ಗೋಪಾಲಕೃಷ್ಣ ಪುನರೂರು, ಸುನೀತಾ ರೋಡ್ರಿಗಸ್, ಚಂದ್ರ ರಾಣ್ಯ, ಸುನೀತಾ, ಕುಶಲತಾ, ಮಲ್ಲಿಕಾ ಆಚಾರ್ಯ, ಮಲ್ಲಿಕಾ ಪ್ರಕಾಶ್, ಸಿಬಂದಿ ಚಂದ್ರಶೇಖರ್, ರಂಜಿತಾ ಉಪಸ್ಥಿತರಿದ್ದರು. ಮುಖ್ಯಾಧಿಕಾರಿ ಜಯಶಂಕರ್ ಭಟ್ ಸ್ವಾಗತಿಸಿದರು. ಸಿಬಂದಿ ಪುಷ್ಪಲತಾ ನಿರೂಪಿಸಿದರು.

ಹದಗೆಟ್ಟ ರಸ್ತೆ ದುರಸ್ತಿಗೆ ಆಗ್ರಹ

ಅಮೃತ್ ಕಾಮಗಾರಿಯಡಿ ಒಳ ರಸ್ತೆಯಲ್ಲಿ ಚರಂಡಿಗಳು ಹದಗೆಟ್ಟು ಹೋಗಿದೆ. ರಸ್ತೆ ಅಗೆತ ಮಾಡಲಾಗಿದೆ. ಈ ಬಗ್ಗೆ ಅವರಲ್ಲಿ ಮಳೆಗಾಲದ ಮುನ್ನ ಸರಿಡಿಸುವಂತೆ ತಿಳಿಸಬೇಕು. ಮುಖ್ಯ ರಸ್ತೆ ಸುಖಾನಂದ ಶೆಟ್ಟಿ ಸರ್ಕಲ್‌ನಿಂದ ರಾಜಾಂಗಣದ ತನಕ ಚರಂಡಿ ವ್ಯವಸ್ಥೆ ಹದಗೆಟ್ಟು ಹೋಗಿದೆ ಎಂದು ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಸಂದರ್ಭ ಹೆದ್ದಾರಿ ಇಲಾಖೆಯ ಜೊತೆಗೆ ಈ ಕುರಿತು ಮಾತುಕತೆ ನಡೆಸುವುದಾಗಿ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಹೇಳಿದರು.

ತ್ಯಾಜ್ಯ ಘಟಕಕ್ಕೆ 3 ಕೋ.ರೂ. ಮಂಜೂರು

ಮೆನ್ನಬೆಟ್ಟು ತಾಜ್ಯ ಘಟಕಕ್ಕೆ ಈಗಾಗಲೇ ಮೂರು ಕೋಟಿ ರೂಪಾಯಿ ಮಂಜೂರಾಗಿದ್ದು, ಇನ್ನೂ ರೂ. ಮೂರು ಕೋಟಿ ಮಂಜೂರಾಗಿದ್ದು ಮೂರು ಎಕ್ರ ಜಾಗ ಸರ್ವೆ ಮಾಡಲಾಗಿದ್ದು, ಮುಂದಿನ ದಿನದಲ್ಲಿ ದ್ರವ ತಾಜ್ಯ ಘಟಕವು ಕಾರ್ಯಾರಂಭ ಆಗಲಿದೆ ಎಂದು ಪಂ.ಪಂ. ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಸಭೆಯಲ್ಲಿ ತಿಳಿಸಿದರು.

ಸಮಾಜಕ್ಕೆ ಪ್ರೊ.ಜೋಗನ್ ಶಂಕರ್‌ರ ಕೊಡುಗೆ ಅಪಾರ: ಪ್ರೊ.ಸಮತಾ ದೇಶ್ಮನೆ



ಕೊಣಾಜೆ: ಪ್ರೊ.ಜೋಗನ್ ಶಂಕರ್ ಅವರು ಸಮ ಸಮಾಜದ ನಿರ್ಮಾಣ ಹಾಗೂ ಸಮಾಜದ ನೈಜ ಅಭಿವೃದ್ಧಿಯ ಕನಸಿನೊಂದಿಗೆ ಸಮಾಜಕ್ಕೆ ಕೊಡುಗೆ ನೀಡಿದ ಸಮಾಜ ಶಾಸ್ತ್ರಜ್ಞರಾಗಿದ್ದಾರೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಸಮತಾ ದೇಶ್ಮನೆ ಹೇಳಿದ್ದಾರೆ.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಮಂಗಳವಾರ ನಡೆದ ಪ್ರೊ.ಜೋಗನ್ ಶಂಕರ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಗೌರವ ಪ್ರಾಪ್ತಿಯಾಗುವುದು ಶಿಕ್ಷಣದಿಂದ ಮಾತ್ರ ಎಂಬುದು ಅವರ ನಿಲುವುಗಿತ್ತು. ಸಮಾಜದ ಧನಾತ್ಮಕ ಚಿಂತಕರಾಗಿದ್ದ ಪ್ರೊ.ಜೋಗನ್ ಶಂಕರ್ ದೇವದಾಸಿ ಪದ್ಧತಿಯ ಬಗ್ಗೆ ನಡೆಸಿದ ಹೋರಾಟ ಅವಿಸ್ಮರಣೀಯವಾದುದು. ದೇವದಾಸಿಯರ ಮಕ್ಕಳಿಗಾಗಿ ವಿಮೋಚನಾ ಶಾಲೆಯನ್ನು ತೆರದು ಶಿಕ್ಷಣ ನೀಡಿದ ಮಹಾನ್ ವ್ಯಕ್ತಿತ್ವ ಅವರದ್ದು. ಶಿಕ್ಷಣದಿಂದಾಗಿ ಅದೆಷ್ಟೋ ದಲಿತ ಮಹಿಳೆಯರು ಸಮಾಜದ ಮುನ್ನಲೆಗೆ ಬಂದಿದ್ದಾರೆ. ಇಂತಹ ಪ್ರಾಧ್ಯಾಪಕರ ಹೆಸರಿನಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮ ಅರ್ಥಪೂರ್ಣವಾದುದು ಎಂದರು.

ಕಲಾ ನಿಕಾಯದ ಡೀನ್ ಪ್ರೊ.ಪರಿಣಿತ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ತ್ರಿವೇಣಿ, ಪ್ರಾಧ್ಯಾಪಕರಾದ ಡಾ.ನರಸಿಂಹಯ್ಯ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಭಾಗದ ಅಧ್ಯಕ್ಷರಾದ ಡಾ.ಗೋವಿಂದ ರಾಜು ಸ್ವಾಗತಿಸಿದರು. ಪ್ರಾಧ್ಯಾಪಕಿ ಡಾ.ಸಬಿತಾ ಗುಂಡ್ಮಿ ವಂದಿಸಿದರು. ವಿದ್ಯಾರ್ಥಿನಿ ಅಕ್ಷತಾ ಕಾರ್ಯಕ್ರಮ ನಿರೂಪಿಸಿದರು.

ಕೆಎಚ್‌ಆರ್‌ಎ ಕಾಸರಗೋಡು ಜಿಲ್ಲಾ ಸಮಿತಿ: ನೈರ್ಮಲ್ಯ ಮೇಲ್ವಿಚಾರಣಾ ಸಮಿತಿ ರಚನೆ

ಕಾಸರಗೋಡು: ಜಿಲ್ಲೆಯ ಹೊಟೇಲ್‌ಗಳು ಮತ್ತು ರೆಸ್ಟೋರೆಂಟ್‌ಗಳ ನೈರ್ಮಲ್ಯ ಗುಣಮಟ್ಟ ಸುಧಾರಿಸಲು , ಗ್ರಾಹಕರಿಗೆ ಗುಣಮಟ್ಟದ ಸೇವೆ ಖಚಿತಪಡಿಸಿಕೊಳ್ಳಲು ಕೇರಳ ಹೊಟೇಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಶನ್ (ಕೆಎಚ್‌ಆರ್‌ಎ) ಕಾಸರಗೋಡು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ವಿಶೇಷ ನೈರ್ಮಲ್ಯ ಮೇಲ್ವಿಚಾರಣಾ ಸಮಿತಿ ರಚಿಸಲಾಯಿತು. ಹೊಟೇಲ್ ವಲಯದ ವಿಶ್ವಾಸಾರ್ಹತೆ ಹೆಚ್ಚಿಸುವ ಉದ್ದೇಶದಿಂದ ಈ ಸಮಿತಿಯ ರಚನೆ ಸೋಮವಾರ ಅಧಿಕೃತವಾಗಿ ರಚಿಸಲಾಯಿತು.

ತಪಾಸಣೆ ಮತ್ತು ಸಲಹೆಗಳು

ಜಿಲ್ಲೆಯ ಹೊಟೇಲ್‌ಗಳಲ್ಲಿ ಸಮಿತಿಯ ನೇತೃತ್ವದಲ್ಲಿ ನಿಯಮಿತವಾಗಿ ತಪಾಸಣೆ ನಡೆಸುವುದು ಮತ್ತು ಅಗತ್ಯ ಸಲಹೆಗಳನ್ನು ನೀಡುವುದು ಸಮಿತಿಯ ಮುಖ್ಯ ಉದ್ದೇಶವಾಗಿದೆ. ಸರಕಾರ ನಿಗದಿಪಡಿಸಿದ ಆಹಾರ ಸುರಕ್ಷತಾ ಮಾನದಂಡಗಳನ್ನು ಎಲ್ಲಾ ಸಂಸ್ಥೆಗಳಲ್ಲಿ ಅನುಸರಿಸಲಾಗುತ್ತಿದೆ ಎಂದು ಈ ಸಮಿತಿ ಖಚಿತಪಡಿಸುತ್ತದೆ. ಹೊಟೇಲ್ ಉದ್ಯೋಗಿಗಳು ಮತ್ತು ಮಾಲೀಕರಲ್ಲಿ ಆರೋಗ್ಯಕರ ಆಹಾರ ಸಂಸ್ಕೃತಿಯನ್ನು ಉತ್ತೇಜಿಸಲು ಸಮಿತಿಯು ಕ್ರಮಗಳನ್ನು ಕೈಗೊಳ್ಳುತ್ತಿದೆ.

ಪದಾಧಿಕಾರಿಗಳ ಆಯ್ಕೆ

ತಪಾಸಣಾ ಸಮಿತಿಯ ಜಿಲ್ಲಾಧ್ಯಕ್ಷರಾಗಿ ನಾರಾಯಣ ಊಟುಪುರ ಮತ್ತು ಜಿಲ್ಲಾ ಸಂಚಾಲಕರಾಗಿ ಸವದ್ ತಾಜ್ ಆಯ್ಕೆಯಾಗಿದ್ದಾರೆ. ಸಮಿತಿಯ ಚಟುವಟಿಕೆಗಳಿಗೆ ಕೆಎಚ್‌ಆರ್‌ಎ ಜಿಲ್ಲಾ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಜಾಗೃತಿ ಕಾರ್ಯಕ್ರಮ

ಹೊಟೇಲ್ ವಲಯದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಮತ್ತು ಗ್ರಾಹಕರಿಗೆ ಸುರಕ್ಷಿತ ಆಹಾರವನ್ನು ಖಚಿತಪಡಿಸಿಕೊಳ್ಳಲು ಸಮಿತಿಯು ವಿವಿಧ ಜಾಗೃತಿ ತರಗತಿಗಳನ್ನು ಆಯೋಜಿಸುತ್ತಿದೆ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿಜು ಚುಳಿಕರ ಅವರು ಮುಂದಿನ ದಿನಗಳಲ್ಲಿ ಸಮಿತಿಯ ನೇತೃತ್ವದಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ತಪಾಸಣೆ ಮತ್ತು ತರಗತಿಗಳು ಪ್ರಾರಂಭವಾಗಲಿದೆ. ಈ ಕ್ರಮವು ಆಹಾರದಲ್ಲಿನ ವಿಷದಂತಹ ಘಟನೆಗಳನ್ನು ತಡೆಯಲು ಮತ್ತು ಹೊಟೇಲ್‌ಗಳ ಗುಣಮಟ್ಟವನ್ನು ಸುಧಾರಿಸಲು ಸಹಾಯ ಮಾಡುವುದು ಎಂದು ಸಮಿತಿ ತಿಳಿಸಿದೆ.



ನರಹರಿ ಪರ್ವತದಲ್ಲಿ ನಡೆಯುವ ಭಜನಾಸಂಕೀರ್ತನೆಗೆ ಕಲ್ಲಡ್ಕ ಶ್ರೀರಾಮ ಭಜನಾ ಮಂಡಳಿ ಅಧ್ಯಕ್ಷರಾದ ಹರೀಶ್ ಆಚಾರ್ಯ ಹಾಗೂ ವಿದ್ಯಾ ಹರೀಶ ಆಚಾರ್ಯ ದಂಪತಿಗಳು, ದೀಪ ಪ್ರಜ್ವಲನೆಗೈದು ಚಾಲನೆ ನೀಡಿದರು. ಭಜನೆ ಸಂಯೋಜಕರಾದ ಶಂಕರ ಆಚಾರ್ಯ, ಅರ್ಚಕರಾದ ನರೇಶ ಮಯ್ಯ ಮೆನೇಜರ್ ಆನಂದ್, ನಾಗೇಶ ಬೋಳಂಗಡಿ, ಹರೀಶ ಶೆಣೈ, ಸಾತ್ವಿಕ್,ವರುಣ್, ದಿಕ್ಷೀತ್, ಚೇತನ್, ಧನುಷ್ , ಎಂ.ಎನ್. ಕುಮಾರ್ ಮುಂತಾದವರಿದ್ದರು.



ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲಾ ಶಾಸ್ತ್ರೀಯ ನೃತ್ಯ ಕಲಾವಿದರ ಸಂಘಟನೆ ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್ ಮಂಗಳೂರು , ಕನ್ನಡ ಸಂಸ್ಕೃತಿ ಇಲಾಖೆ ಬೆಂಗಳೂರು ಇವುಗಳ ಸಹಯೋಗದಲ್ಲಿ ಶ್ರೀಮದ್ ಎಡನೀರು ಮಠದ ಭಾರತೀ ಕಲಾಸದನದಲ್ಲಿಭರತಮುನಿ ಜಯಂತಿ ಕಾರ್ಯಕ್ರಮದಲ್ಲಿ ಕುಚೇಲ ವೃತಂ ಕಥಕ್ಕಳಿ ಪ್ರದರ್ಶನಗೊಂಡಿತು. ನಾಟ್ಯರತ್ನಂ ಕಣ್ಣನ್ ಪಾಟಾಳಿ ಸ್ಮಾರಕ ಕಥಕ್ಕಳಿ ಟ್ರಸ್ ಬೇಕಲ ಕಾಸರಗೋಡು ಇದರ ಸಂಯೋಜನೆಯಲ್ಲಿ ವಿದುಷಿ ಮೃದುಲಾ ಹರೀಶ್ ಸಹಪ್ರಾಯೋಜಕತ್ವದಲ್ಲಿ ಹಮ್ಮಿಕೊಳ್ಳಲಾಯಿತು.

ಶಿರ್ವ ಸಂತ ಮೇರಿ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಶಿರ್ವ: ಶಿರ್ವ ಸಂತ ಮೇರಿ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ಸಂಘ ಹಾಗೂ ಮಹಿಳಾ ಸಂಘಗಳ ಜಂಟಿ ಆಶ್ರಯದಲ್ಲಿ ಐಕ್ಯೂಎಸಿ ಘಟಕದ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಾಲೇಜಿನ ದೃಶ್ಯ ಶ್ರಾವ್ಯ ಕೊಠಡಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯ ವ್ಯಾಪ್ತಿ ವಿಸ್ತರಿಸಬೇಕು

ಮುಖ್ಯ ಅತಿಥಿಗಳಾಗಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಗುಲಾಬಿ ಪೂಜಾರಿ ಮಾತನಾಡಿ, ಸ್ತ್ರೀ ಸಂವೇದನೆಯು ಇಂದು ಕೇವಲ ಮಹಿಳೆಯರಿಗೆ ಮಾತ್ರ ಸೀಮಿತವಾಗಿರದೆ, ಪುರುಷರು ಸಹ ಅದರ ಭಾಗವಾಗಬೇಕಿದೆ. ಮಹಿಳೆಯರಿಗೆ ಅವಕಾಶಗಳು ಹೆಚ್ಚುತ್ತಿವೆ ಎಂಬ ವಾದದ ನಡುವೆ ಮಹಿಳೆಯರು ನಿರ್ದಿಷ್ಟ ಅವಕಾಶಗಳಿಗೆ ಸೀಮಿತಗೊಳ್ಳದೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬೇಕಾದ ಅವಶ್ಯಕತೆ ಇದೆ ಎಂದರು.

ಉತ್ತಮ ಶಿಕ್ಷಣ ಪಡೆಯಬೇಕು

ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಹೆರಾಲ್ಡ್ ಐವನ್ ಮೋನಿಸ್ ಮಾತನಾಡಿ, ಮಹಿಳೆಯರು ಉತ್ತಮ ಶಿಕ್ಷಣವನ್ನು ಪಡೆದು ಸಮಾನ ಅವಕಾಶಗಳ ಪಡೆದಾಗ ಮಹಿಳಾ ದಿನಾಚರಣೆಯು ಹೆಚ್ಚು ಅರ್ಥಪೂರ್ಣ ವಾಗುತ್ತದೆ ಎಂದರು.

ವಿನಿಷಾ ತೃತೀಯ ಬಿ.ಕಾಂ. ಅತಿಥಿಗಳನ್ನು ಸ್ವಾಗತಿಸಿ, ಶಿವಾನಿ ವಂದಿಸಿದರು. ಪೂರ್ವಿ ನಿರೂಪಿಸಿದರು. ವೇದಿಕೆಯಲ್ಲಿ ಐಕ್ಯೂಎಸಿ ಸಂಯೋಜಕ ಜಗದೀಶ ಆಚಾರ್ಯ, ವಿದ್ಯಾರ್ಥಿ ಕ್ಷೇಮಪಾಲನಾ ಸಂಘದ ನಿರ್ದೇಶಕ ಮೆಲ್ವಿನ್ ಕ್ಯಾಸ್ತಲಿನೊ, ಮಹಿಳಾ ಸಂಘದ ಅಧ್ಯಕ್ಷೆ ಎಲ್ವಿಷಾ ಉಪಸ್ಥಿತರಿದ್ದರು.

ಸುಳ್ಯ ಯಾದವ ಯುವ ವೇದಿಕೆ: ಕೆವಿಜಿ ಮೆಡಿಕಲ್ ಕಾಲೇಜಿನಲ್ಲಿ ರಕ್ತದಾನ ಶಿಬಿರ



ಸುಳ್ಯ: ಸುಳ್ಯ ತಾಲೂಕು ಯಾದವ ಯುವ ವೇದಿಕೆ ವತಿಯಿಂದ ಕೆವಿಜಿ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆ ಸಹಯೋಗದೊಂದಿಗೆ ರಕ್ತದಾನ ಶಿಬಿರ ಕೆ.ವಿ.ಜಿ. ಮೆಡಿಕಲ್ ಕಾಲೇಜಿನಲ್ಲಿ ನಡೆಯಿತು.

ಶಿಬಿರವನ್ನು ಕಾಲೇಜಿನ ಡೀನ್ ಡಾ. ನೀಲಾಂಬಿಕೈ ನಟರಾಜನ್ ಉದ್ಘಾಟಿಸಿ, ರಕ್ತದಾನ ಶ್ರೇಷ್ಠವಾದ ದಾನ ಎಂದರು. ಯುವ ವೇದಿಕೆ ಅಧ್ಯಕ್ಷೆ ಸಾವಿತ್ರಿ ಕಣೆಮರಡ್ಕ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಕಾಲೇಜಿನ ರಿಜಿಸ್ಟ್ರಾರ್ ಡಾ. ಸಂದೇಶ್ ರೈ, ಪೆಥಾಲಜಿ ವಿಭಾಗದ ಮುಖ್ಯಸ್ಥೆ ಡಾ. ಸತ್ಯವತಿ ಆರ್. ಆಳ್ವ, ಬ್ಲಡ್ ಬ್ಯಾಂಕ್ ಅಧಿಕಾರಿಗಳಾದ ಡಾ.ನವ್ಯ ಬಿ.ಎನ್., ಡಾ. ಅಂಜಲಿ ರಾವ್, ಯಾದವ ಸಭಾ ಜಿಲ್ಲಾಧ್ಯಕ್ಷ ಎ.ಕೆ. ಮಣಿಯಾಣಿ, ತಾಲೂಕು ಅಧ್ಯಕ್ಷ ಕರುಣಾಕರ ಹಾಸ್ಪಾರೆ, ಮಹಿಳಾ ವೇದಿಕೆ ಅಧ್ಯಕ್ಷೆ ಜಯಾಕೃಷ್ಣ, ಯಾದವ ಸಭಾ ತಾಲೂಕು ಕಾರ್ಯದರ್ಶಿ ಕೃಷ್ಣ ಬೆಟ್ಟ, ಕೋಶಾಧಿಕಾರಿ ಕರುಣಾಕರ ಕೇನಾಜೆ, ಕೆ.ವಿ.ಜಿ. ಆಸ್ಪತ್ರೆಯ ಸಂಪರ್ಕಾಧಿಕಾರಿ ರಘುಪತಿ ಉಗ್ರಾಣಿಮನೆ, ಯುವ ವೇದಿಕೆ ಪೂರ್ವಾಧ್ಯಕ್ಷರಾದ ಸುರೇಶ್ ಕಣೆಮರಡ್ಕ, ಪ್ರಕಾಶ್ ಯಾದವ್, ಕ್ಯಾಪ್ಟನ್ ಸುಧಾನಂದ ಬೆಳ್ಳಾರೆ, ಯುವ ವೇಧಿಕೆ ಕಾರ್ಯದರ್ಶಿ ಪ್ರಣೀತ್ ಕಣಕ್ಕೂರು, ಶ್ರೀಧರ ಮೇನಾಲ, ಯುವ ವೇಧಿಕೆ ಕೋಶಾಧಿಕಾರಿ ತೀರ್ಥೇಶ್ ನಾರ್ಣಕಜೆ, ಜತೆ ಕಾರ್ಯದರ್ಶಿ ಅಶೋಕ್ ಕಿಲಾರ್ಕಜೆ, ಪ್ರಮುಖರಾದ ರೋಹಿತ್ ಬೆಟ್ಟಂಪಾಡಿ, ನಿತೀಶ್ ಸುಳ್ಯ ಮೊದಲಾದವರು ಉಪಸ್ಥಿತರಿದ್ದರು.

ಸುರೇಶ್ ಕಣೆಮರಡ್ಕ ಸ್ವಾಗತಿಸಿ, ಪ್ರಣೀತ್ ಕಣಕ್ಕೂರು ವಂದಿಸಿದರು.

ಪುಣ್ಯಕೋಟಿ ಗೋಶಾಲೆಗೆ ಉದ್ಯಮಿಗಳಿಂದ ಆಹಾರ ಸಾಮಗ್ರಿಗಳ ಹಸ್ತಾಂತರ, ಗೋ ಪೂಜೆ



ಮಡಿಕೇರಿ: ಗೋವುಗಳು ಮಾನವನಿಗೆ ಹುಟ್ಟಿನಿಂದ ಸಾವಿನ ತನಕ ಅಮೃತ ಸಮಾನವಾದ ಹಾಲು ಮತ್ತಿತರ ಔಷಧ ಮೂಲಗಳನ್ನು ಕರುಣಿಸುವ ಮೂಲಕ ವಿಜ್ಞಾನ ಯುಗದಲ್ಲಿ 'ನಡೆದಾಡುವ ಆಸ್ಪತ್ರೆ'ಯಂತೆ ಕೆಲಸ ನಿರ್ವಹಿಸುತ್ತವೆ ಎಂದು ಸ್ವಾಮಿ ಸೋಮನಾಥಾನಂದಪುರಿ ಅಭಿಪ್ರಾಯಪಟ್ಟರು.

ಕುಶಾಲನಗರ ಸಮೀಪದ ಮಾದಾಪಟ್ಟಣ ಗ್ರಾಮದಲ್ಲಿ ಪುಣ್ಯಕೋಟಿ ಗೋಶಾಲೆಗೆ ಮಡಿಕೇರಿಯ ಉದ್ಯಮಿಗಳಾದ ಜಯಶ್ರೀ ಅಜಿತ್ ಕುಮಾರ್ ದಂಪತಿಯ ಹುಟ್ಟುಹಬ್ಬ ಅಂಗವಾಗಿ ಅಗತ್ಯ ಆಹಾರ ಸಾಮಗ್ರಿ ಹಸ್ತಾಂತರ ಕಾರ್ಯಕ್ರಮದಲ್ಲಿ ಗೋಪೂಜೆ ನೆರವೇರಿಸಿ ಅವರು ಆಶೀರ್ವಚನ ನೀಡಿದರು.

ಗೋವುಗಳ, ಪಾಲನೆ, ಸಂರಕ್ಷಣೆಯಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಸಂದರ್ಭ ಮಾತನಾಡಿದ ಗೋಶಾಲೆ ಮಾಲಕ ಶ್ರೀನಿವಾಸ್ ಅವರು, ಕಳೆದ ಕೆಲವು ವರ್ಷಗಳಿಂದ ಮಾದಾಪಟ್ಟಣ ಗ್ರಾಮದಲ್ಲಿರುವ ತನ್ನ ನಾಲ್ಕು ಎಕರೆ ಪ್ರದೇಶದಲ್ಲಿ ಗೋಶಾಲೆ ಆರಂಭಿಸಿದ್ದು ಇದೀಗ ಸುಮಾರು 60ಕ್ಕೂ ಅಧಿಕ ಗೋವುಗಳು ನೆಲೆಸಿವೆ. ಈ ಸಂಬಂಧ ಎಲ್ಲರ ಸಹಕಾರ ಅಗತ್ಯವಿದೆ ಎಂದರು.

ಉದ್ಯಮಿ ಅಜಿತ್ ಕುಮಾರ್, ಜಯಶ್ರೀ ಅಜಿತ್ ಕುಮಾರ್, ಪ್ರಮುಖರಾದ ಮಧುಸೂದನ್, ಜನಾರ್ದನ್, ರಾಜೀವ್, ಅನೀಶ್, ಕೃಷ್ಣಮೂರ್ತಿ, ಮನು ರೈ, ಅರುಣ, ಪುಣ್ಯಕೋಟಿ ಗೋಶಾಲೆ ಟ್ರಸ್ಟ್ ಅಧ್ಯಕ್ಷೆ ನಸ್ಮಿತಾ ಶ್ರೀನಿವಾಸ್ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಶ್ವ ಮಹಿಳಾ ದಿನಾಚರಣೆ

ಜೀವನದಲ್ಲಿ ಮಾನಸಿಕ -ದೈಹಿಕ ದೃಢತೆ ಅತೀ ಅಗತ್ಯ: ಪೂರ್ಣಿಮಾ

ಪುತ್ತೂರು: ಪ್ರತಿಯೊಬ್ಬರಲ್ಲಿಯೂ ಒಂದೊಂದು ವಿಶೇಷ ಶಕ್ತಿಗಳು, ಪ್ರತಿಭೆಗಳು ಅಡಕವಾಗಿದ್ದು ಯಾವುದೋ ಕಾಲಘಟ್ಟದಲ್ಲಿ ಅದು ಅನಾವರಣಗೊಳ್ಳುತ್ತದೆ ಎಂದು ಕ್ರೋಶೆ ಆನ್ಸ್ ವೀಲ್ಸ್‌ನ ಕ್ರೋಶೆ ಕಲಾವಿದೆ ಪೂರ್ಣಿಮಾ ಕೆ. ಹೇಳಿದ್ದಾರೆ. ನಗರದ ವಿವೇಕಾನಂದ ಕಾಲೇಜ್ ಆಫ್ ಇಂಜಿನಿ ಯರಿಂಗ್ ಎಂಡ್ ಟೆಕ್ನಾಲಜಿ, ಐಇಇಇ ವಿಸಿಇಟಿ ವಿದ್ಯಾರ್ಥಿ ವಿಭಾಗ – ಕಾಲೇಜಿನ ಆಂತರಿಕ ದೂರು ಸಮಿತಿಯ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಅಪಘಾತಕ್ಕೆ ತುತ್ತಾಗಿ ಬದುಕೇ ಬೇಡ ಎನ್ನುವ ಸ್ಥಿತಿಯಿಂದ ಹೊರ ಬಂದ ವಿಷಯಗಳನ್ನು ಹಂಚಿಕೊಂಡ ಅವರು ಜೀವನದಲ್ಲಿ ಮಾನಸಿಕ ಮತ್ತು ದೈಹಿಕ ದೃಢತೆ ಅತೀ ಅಗತ್ಯ. ಗಾಲಿಕುರ್ಚಿಯಲ್ಲಿ ಜೀವನ ಸಾಗಿಸಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ಮೈತ್ರೇಯಿ ಗುರುಕುಲದಲ್ಲಿ ಕಲಿಯುವ ಸಂದರ್ಭ ಕಲಿತ ಕ್ರೋಶೆ ಕಲೆಯು ನನ್ನ ಬಾಳಿಗೆ ಒಂದು ದಿಕ್ಕನ್ನು ತೋರಿಸಿತು. ವಿದ್ಯಾರ್ಥಿಗಳಿಗೆ ಹವ್ಯಾಸಗಳು, ಪಠ್ಯೇತರ ಚಟುವಟಿಕೆಗಳು ಅತೀ ಅವಶ್ಯಕ. ಪೋಷಕರು ಮಕ್ಕಳ ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಅವರನ್ನು ಹುರಿದುಂಬಿಸಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿ ನಿರ್ದೇಶಕಿ ಡಾ. ಯಶೋದಾ ರಾಮಚಂದ್ರ, ತಾಯಿಯಾಗಿ, ಸಹೋದರಿಯಾಗಿ, ಮಡದಿಯಾಗಿ ವಿವಿಧ ಜವಾಬ್ದಾರಿಯನ್ನು ನಿಭಾಯಿಸುವ ಮಹಿಳೆಯು ತನ್ನ ಕುಟುಂಬದ ಏಳಿಗೆಯಲ್ಲಿ ಮತ್ತು ಸಮಾಜದ ಉನ್ನತಿಯಲ್ಲಿ ಅತಿ ದೊಡ್ಡ ಕೊಡುಗೆ ನೀಡುತ್ತಾಳೆ. ಸಮಾಜದ ಕಟ್ಟುಪಾಡುಗಳ ಹೊರತಾಗಿಯೂ ಶಿಕ್ಷಕಿಯಾಗಿ, ವೈದ್ಯೆಯಾಗಿ, ಇಂಜಿನಿಯರ್ ಆಗಿ ಹೀಗೆ ಪ್ರತಿಯೊಂದು ವಿಭಾಗಗಳಲ್ಲಿ ಅವಳು ಸಾಧನೆಯ ಶಿಖರ ಏರುತ್ತಿದ್ದಾಳೆ. ಮಹಿಳೆಯರಿಗೆ ಸಿಕ್ಕಿದ ಸ್ವಾತಂತ್ರ್ಯ ಅದು ಸ್ವೇಚ್ಛಾಚಾರವಲ್ಲ ಬದಲಿಗೆ ಸಮಾಜದಲ್ಲಿ ಅವಳಿಗೆ ಸೂಕ್ತ ಸ್ಥಾನಮಾನ ಗಳಿಸುವುದಕ್ಕೆ ನೀಡಿದ ಅವಕಾಶ ಇದನ್ನು ತಿಳಿದು ನಡೆಯಬೇಕಾದ ಜವಾಬ್ದಾರಿ ಮಹಿಳೆಯ ಮೇಲಿದೆ ಎಂದರು.

ಐಇಇಇ ವಿಮೆನ್ ಇನ್ ಇಂಜಿನಿಯರಿಂಗ್ ಅಧ್ಯಾಪಕ ಸಲಹೆಗಾರ್ತಿ ಪ್ರೊ. ರಜನಿ ರೈ, ಕಾಲೇಜಿನ ಆಂತರಿಕ ದೂರು ಸಮಿತಿ ಸಂಚಾಲಕಿ ಪ್ರೊ. ರೂಪಾ ಜಿ.ಕೆ. ಮತ್ತು ಐಇಇಇ ವಿಮೆನ್ ಇನ್ ಇಂಜಿನಿಯರಿಂಗ್ ವಿದ್ಯಾರ್ಥಿ ಪ್ರತಿನಿ ಚೈತನ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ಐಇಇಇ ಶಾಖಾ ಸಲಹೆಗಾರ್ತಿ ಡಾ. ಜೀವಿತ ಬಿ.ಕೆ. ಮಾರ್ಗದರ್ಶನ ನೀಡಿದರು. ಪ್ರೀತಾ ಎಸ್.ಎಂ. ಸ್ವಾಗತಿಸಿ, ಚೈತನ್ಯ ವಂದಿಸಿದರು. ತನ್ಮಯಿ ರೈ ನಿರೂಪಿಸಿದರು.

ಮುಳಿಯಾರು ಆರೋಗ್ಯ ಕೇಂದ್ರದಿಂದ ಕಾರ್ಯಾಗಾರ

ಮುಳ್ಳೇರಿಯ: ಮುಳಿಯಾರು ಬ್ಲಾಕ್ ಕುಟುಂಬ ಆರೋಗ್ಯ ಕೇಂದ್ರದ ಆಶ್ರಯದಲ್ಲಿ ಮುಳಿಯಾರು ಮತ್ತು ಪೆರಿಯ ಆರೋಗ್ಯ ಬ್ಲಾಕ್‌ಗಳ ಆಶಾ ಕಾರ್ಯಕರ್ತೆಯರು, ಹಸಿರು ಕ್ರಿಯಾ ಸೇನಾ ಪ್ರತಿನಿಧಿಗಳು ಮತ್ತು ಕುಟುಂಬಶ್ರೀ ಸದಸ್ಯೆಯರಿಗಾಗಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಆರೋಗ್ಯ ಕಾಪಾಡಿಕೊಳ್ಳಬೇಕು

ಮುಳಿಯಾರು ಬ್ಲಾಕ್ ಕುಟುಂಬ ಆರೋಗ್ಯ ಕೇಂದ್ರದಲ್ಲಿ ನಡೆದ ಈ ಕಾರ್ಯಕ್ರಮವನ್ನು ಮುಳಿಯಾರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಬಿ.ಮುಹಮ್ಮದ್ ಕುಂಞಿ ಉದ್ಘಾಟಿಸಿ, ಪ್ರತಿಯೋರ್ವರೂ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಆರೋಗ್ಯವೇ ಭಾಗ್ಯ ಎಂಬ ಧ್ಯೇಯವಾಕ್ಯ ಗಮನದಲ್ಲಿರಿಸಿಕೊಂಡು ಆರೋಗ್ಯಕರ ಆಹಾರ ಸೇವನೆಗೆ ವಿಶೇಷ ಆದ್ಯತೆ ನೀಡಬೇಕು ಎಂದು ಅವರು ಹೇಳಿದರು.



ಆರೋಗ್ಯ ಮೇಲ್ವಿಚಾರಕ, ಮುಳಿಯಾರು ಬ್ಲಾಕ್ ಕುಟುಂಬ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಕ ಪಿ.ಕುಂಞಿಕೃಷ್ಣನ್ ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು ನೀರಿನಿಂದ ಹರಡುವ ರೋಗಗಳು, ತಡೆಗಟ್ಟುವ ಕ್ರಮಗಳು ಮತ್ತು ಕೈ ತೊಳೆಯುವ ಕೆಯ ಕುರಿತು ಸಮಗ್ರ ತರಗತಿ ನಡೆಸಿದರು.

ಆರೋಗ್ಯ ಮೇಲ್ವಿಚಾರಕ ಬಿಜು ವಿ.ಎಂ. ಅಧ್ಯಕ್ಷತೆ ವಹಿಸಿದ್ದರು. ಕಿರಿಯ ಆರೋಗ್ಯ ಅಧಿಕಾರಿಗಳಾದ ಲತಿಕಾ ಎಂ. ಸ್ವಾಗತಿಸಿ, ಮನೋಜ್ ಕುಮಾರ್ ವಂದಿಸಿದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಬುಧವಾರ 18, ಮಾರ್ಚ್ 2026

ಸುತ್ತಮುತ್ತ

ಕೊಡಗಿನಲ್ಲಿ ಅನಿಲ ಸಿಲಿಂಡರ್ ವಿತರಣೆ ಅಬಾಧಿತ: ಜಿಲ್ಲಾಧಿಕಾರಿ

ಮಡಿಕೇರಿ: ಜಿಲ್ಲೆಯಲ್ಲಿ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಸಮರ್ಪಕ ಸಂಗ್ರಹವಿದ್ದು, ಗೃಹ ಬಳಕೆಯ ಅನಿಲ ಸಿಲಿಂಡರ್‌ಗಳ ಸರಬರಾಜಿನಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ ಎಂದು ಕೊಡಗು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು, ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಗ್ರಾಹಕರು ಕಿವಿಗೊಡಬಾರದು ಹಾಗೂ ಯಾವುದೇ ಆತಂಕಕ್ಕೆ ಒಳಗಾಗದೆ ಅಗತ್ಯವಿರುವ ಪ್ರಮಾಣದಲ್ಲಿ ಮಾತ್ರ ಬುಕ್ ಮಾಡಿ ಗ್ಯಾಸ್ ಸಿಲಿಂಡರ್ ಪಡೆದುಕೊಳ್ಳಬಹುದಾಗಿದೆ ಎಂದು ಹೇಳಿದ್ದಾರೆ. ಅಡುಗೆ ಅನಿಲವನ್ನು ಮಿತ ಬಳಕೆ ಪೂರೈಕೆಗಾಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಎಲ್ ಪಿಜಿ ವಿತರಕರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಸಮರ್ಪಕ ಸಂಗ್ರಹ ಮತ್ತು ಸರಬರಾಜು ಲಭ್ಯವಿದ್ದು ಎಂದಿನಂತೆ ಎಲ್ ಪಿಜಿ ವಿತರಕರು ಗ್ರಾಹಕರ ಮನೆಬಾಗಿಲಿಗೆ ಸರಬರಾಜು ಮಾಡಲಿದ್ದಾರೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಸಿಲಿಂಡರ್‌ಗಳ ವಿತರಣೆಯಲ್ಲಿ ಏನಾದರೂ ಕುಂದುಕೊರತೆಗಳು ಕಂಡುಬಂದಲ್ಲಿ ಸಹಾಯವಾಣಿ ತೆರೆಯಲಾಗಿದ್ದು ಉಪ ನಿರ್ದೇಶಕರ ಕಚೇರಿ, ಕೊಡಗು ಜಿಲ್ಲೆ, 9845706980, ಮಾರಾಟ ವ್ಯವಸ್ಥಾಪಕರು (ಎಲ್.ಪಿ.ಜಿ) – ಐಓಸಿ 9585515389, ಮಾರಾಟ ವ್ಯವಸ್ಥಾಪಕರು (ಎಲ್.ಪಿ.ಜಿ) – ಬಿಪಿಸಿ 9853735944, ಸಹಾಯಕ ಮಾರಾಟ ವ್ಯವಸ್ಥಾಪಕರು (ಎಲ್.ಪಿ.ಜಿ) – ಹೆಚ್ ಪಿಸಿ 7001642556, ತಾಲೂಕು ಕಚೇರಿ ದೂರವಾಣಿ ಸಂಖ್ಯೆ: ಮಡಿಕೇರಿ 9480544531, ವಿರಾಜಪೇಟೆ 8105072869, ಸೋಮವಾರಪೇಟೆ 9480072632, ಕುಶಾಲನಗರ 9380032721, ಪೊನ್ನಂಪೇಟೆ 9108940875 ಅವರನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ತೆಂಗಿನ ಮರದಿಂದ ಬಿದ್ದು ಸಾವು

ಕುಂದಾಪುರ: ಕಕುರ್ಂಜೆ ಗ್ರಾಮದ ಗೋಪಾಲ (66) ಎಂಬುವರು ಮಾ.15ರಂದು ಕುಂದಾಪುರ ತಾಲೂಕು ಗುಲ್ವಾಡಿ ಗ್ರಾಮದ ಶೆಟ್ರಕಟ್ಟೆ ಎಂಬಲ್ಲಿ ಅವರಿಗೆ ಸಂಬಂಧಿಸಿದ ತೋಟದಲ್ಲಿ ತೆಂಗಿನ ಕಾಯಿ ತೆಗೆಯಲು ತೆಂಗಿನ ಮರ ಹತ್ತಿದವರು ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಗಾಯಗೊಂಡಿದ್ದರು. ಕೂಡಲೇ ಅವರನ್ನು ಮಣಿಪಾಲ ಕೆ.ಎಂ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟಿದ್ದಾರೆ. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.21, 22ರಂದು ಕ್ರೀಡಾಕೂಟ

ಮಡಿಕೇರಿ: ಕೊಡಗು ಜಿಲ್ಲಾ ಮರಾಠ, ಮರಾಟಿ ಸಮಾಜ ಸೇವಾ ಸಂಘ, ತಾಳತ್ತಮನೆಯ ಅಂಬಾಭವಾನಿ ಯುವಕ–ಯುವತಿ ಕ್ರೀಡಾ ಮತ್ತು ಮನೋರಂಜನಾ ಸಂಘದ ಸಂಯುಕ್ತಾಶ್ರಯದಲ್ಲಿ ಮಾ.21 ಮತ್ತು 22 ರಂದು 9ನೇ ವರ್ಷದ ಕ್ರೀಡಾಕೂಟ ಹಾಗೂ ಎಂಪಿಎಲ್ ಸೀಸನ್ 2 ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಮಾ.21 ರಂದು ಬೆಳಿಗ್ಗೆ 8 ಗಂಟೆಗೆ ಅಂಬಾಭವಾನಿ ಯುವಕ–ಯುವತಿ ಕ್ರೀಡಾ ಮತ್ತು ಮನೋರಂಜನಾ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುವ ಕ್ರೀಡಾಕೂಟವನ್ನು ಕಟ್ಟಡ ಸಮಿತಿ ಕಾರ್ಯದರ್ಶಿ ಯೋಗೇಂದ್ರ ಎಂ.ಎಸ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಮರಾಠ, ಮರಾಟಿ ಸಮಾಜ ಸೇವಾ ಸಂಘದ ಅಧ್ಯಕ್ಷ ಎಂ.ಎಂ.ಪರಮೇಶ್ವರ, ಅತಿಥಿಗಳಾಗಿ ಮರಾಠ, ಮರಾಟಿ ಸಮಾಜ ಸೇವಾ ಸಂಘದ ಉಪಾಧ್ಯಕ್ಷೆ ದೇವಕಿ ಜಿ.ಆರ್ ನಾಯ್ಕ, ಮಹಿಳಾ ವೇದಿಕೆಯ ಅಧ್ಯಕ್ಷೆ ರತ್ನಮಂಜರಿ ನರಸಿಂಹ ಮತ್ತಿತರರು ಉಪಸ್ಥಿತರಿರುವರು. ಮಾ.22ರಂದು ಮಧ್ಯಾಹ್ನ 3.30 ಗಂಟೆಗೆ ಬಹುಮಾನ ವಿತರಣಾ ಸಮಾರಂಭವನ್ನು ಚೆಸ್ಕಾಂ ನ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ ಎಂ. ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಮರಾಠ, ಮರಾಟಿ ಸಮಾಜ ಸೇವಾ ಸಂಘದ ಅಧ್ಯಕ್ಷ ಎಂ.ಎಂ. ಪರಮೇಶ್ವರ, ಉಪಾಧ್ಯಕ್ಷೆ ದೇವಕಿ ಜಿ.ಆರ್ ನಾಯ್ಕ, ಕಟ್ಟಡ ಸಮಿತಿಯ ಅಧ್ಯಕ್ಷ ಎಂ.ಟಿ.ಗುರುವಪ್ಪ, ಮಹಿಳಾ ವೇದಿಕೆಯ ಅಧ್ಯಕ್ಷೆ ರತ್ನಮಂಜರಿ ನರಸಿಂಹ, ಎರಡನೇ ಮೊಣ್ಣಂಗೇರಿ ಉಪ ಸಮಿತಿಯ ಅಧ್ಯಕ್ಷ ವೆಂಕಪ್ಪ ಎಂ.ಎಸ್, ಕಾನೂರು ಉಪ ಸಮಿತಿಯ ಅಧ್ಯಕ್ಷ ನಿರಾಳ್ ಎಂ.ಎ., ಕುಂಡಾಡು ಉಪ ಸಮಿತಿಯ ಅಧ್ಯಕ್ಷ ಧನಂಜಯ, ಕರಿಕೆ ಉಪ ಸಮಿತಿಯ ಅಧ್ಯಕ್ಷ ಹೊನ್ನಪ್ಪ ಕೆ.ಜಿ. ಹಾಗೂ ಕುದ್ರೆಪಾಯ ಉಪ ಸಮಿತಿಯ ಅಧ್ಯಕ್ಷ ಶಶಿಕಾಂತ್ ಕೆ.ಜಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯಿಂದ ಕೊಡಗು ಡಿಸಿ ಕಚೇರಿ ಎದುರು ಪ್ರತಿಭಟನೆ

ಆದಿವಾಸಿ ಕುಟುಂಬಗಳಿಗೆ ಸಿಗದ ನಿವೇಶನ, ಮೂಲಸೌಲಭ್ಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿರುವ ಆದಿವಾಸಿ ಕುಟುಂಬಗಳಿಗೆ ನಿವೇಶನ ನೀಡಿ ಮನೆ ನಿರ್ಮಿಸಿಕೊಡಬೇಕು, ಮೂಲಭೂತ ಸೌಲಭ್ಯ ಕಲ್ಪಿಸಬೇಕೆಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ಈ ಸಂದರ್ಭ ಮಾತನಾಡಿದ ಸಮಿತಿಯ ಪ್ರಮುಖರು, ಸರಕಾರ ದುರ್ಬಲ ವರ್ಗವನ್ನು ನಿರ್ಲಕ್ಷಿಸುತ್ತಿದೆಯೆಂದು ಆರೋಪಿಸಿದರು. ಜಿಲ್ಲೆಯ ವಿವಿಧ ತೋಟಗಳ ಲೈನ್ ಮನೆಗಳಲ್ಲಿ ವಾಸಿಸುತ್ತಿರುವ ಆದಿವಾಸಿ ಕುಟುಂಬಗಳನ್ನು ಮುಕ್ತಗೊಳಿಸಿ, ಸ್ವಂತ ನಿವೇಶನ ಮತ್ತು ಮನೆಯನ್ನು ನೀಡಬೇಕು, ಒತ್ತುವರಿ ಭೂಮಿಯನ್ನು ಅತ್ಯಂತ ಕಡಿಮೆ ದರದಲ್ಲಿ ಆಸ್ತಿ ಹೊಂದಿರುವವರಿಗೆ ಗುತ್ತಿಗೆ ಆಧಾರದಲ್ಲಿ ನೀಡುವ ಆದೇಶವನ್ನು ಸರಕಾರ ವಾಪಾಸ್ಸು ಪಡೆಯಬೇಕು, ಒತ್ತುವರಿ ಭೂಮಿಯನ್ನು ಆದಿವಾಸಿ ಕುಟುಂಬಗಳಿಗೆ ಹಂಚಿಕೆ ಮಾಡಬೇಕು. ಜಿಲ್ಲೆಯಲ್ಲಿರುವ ಆದಿವಾಸಿ ಕುಟುಂಬಗಳಲ್ಲಿ



ಸಮರ್ಪಕವಾಗಿ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಜಾತಿ ಪ್ರಮಾಣ ಪತ್ರ ಮತ್ತಿತರ ದಾಖಲೆಗಳು ಇಲ್ಲದೆ ಇರುವುದರಿಂದ, ಸರಕಾರ ನೀಡುವ ಯಾವುದೇ ಸೌಲಭ್ಯಗಳು ಅರ್ಹರಿಗೆ ತಲುಪುತ್ತಿಲ್ಲ, ಆದ್ದರಿಂದ ಜಿಲ್ಲಾಡಳಿತ ಆದಿವಾಸಿಗಳಿಗೆ ದಾಖಲಾತಿ ಒದಗಿಸುವ ನಿಟ್ಟಿನಲ್ಲಿ ವಿಶೇಷ ಅಭಿಯಾನ ರೂಪಿಸಬೇಕು. ಆದಿವಾಸಿಗಳ ಮೂಲಭೂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಆದಿವಾಸಿಗಳ ವಿಶೇಷ ಸಭೆ ನಡೆಸಬೇಕು. ರಾಷ್ಟ್ರೀಯ ಉದ್ಯಾನವನ, ಮೀಸಲು ಅರಣ್ಯ, ಹುಲಿ ಮೀಸಲು ಪ್ರದೇಶ, ಇತ್ಯಾದಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳನ್ನು ಹೊರ ಹಾಕುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ಅರಣ್ಯ ಹಕ್ಕು ಕಾಯ್ದೆ 2006ನ್ನು ಅನುಷ್ಠಾನಗೊಳಿಸಿ ಖಚಿತಪಡಿಸಬೇಕು. ಭೂಮಿ ಮತ್ತು ಅರಣ್ಯದ ಮೇಲೆ ಆದಿವಾಸಿಗಳಿಗೆ ಇರುವ ಹಕ್ಕುಗಳನ್ನು ಗುರುತಿಸಬೇಕು ಹಾಗೂ ಅವರ ಮೇಲಾಗುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಆದಿವಾಸಿಗಳಲ್ಲಿ ಕೋಮು ದ್ವೇಷವನ್ನು ಹರಡುವ ಎಲ್ಲಾ ಪ್ರಯತ್ನಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಆದಿವಾಸಿಗಳ ಮೇಲಿನ ದೌರ್ಜನ್ಯ ಮತ್ತು ತಾರತಮ್ಯಗಳನ್ನು ನಿಲ್ಲಿಸಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ದೌರ್ಜನ್ಯ ಕಾಯ್ದೆ 1989ನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ಪ್ರತಿಭಟನಾಕಾರರು ಜಿಲ್ಲಾಡಳಿತದ ಮೂಲಕ ಸರಕಾರಕ್ಕೆ ಸಲ್ಲಿಸಿದರು.

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಜಿಲ್ಲಾ ಸಂಚಾಲಕರಾದ ಪಿ.ಆರ್.ಭರತ್, ಜೆ.ಆರ್.ಪ್ರೇಮಾ, ಹೆಚ್.ಬಿ.ರಮೇಶ್, ಪ್ರಮುಖರಾದ ಭಾಗ್ಯ, ಬಸವ, ಅಯ್ಯಪ್ಪ, ಪಾರ್ವತಿ, ರವಿ, ರಾಧಿಕಾ, ಸುರೇಶ, ಪಿ.ಸಿ.ಗೀತಾ ಮತ್ತಿತರರು ಪಾಲ್ಗೊಂಡಿದ್ದರು.

ಆಡಳಿತಕ್ಕೆ ಹಲವು ಬಾರಿ ಮನವಿ ಸಲ್ಲಿಕೆ

ಕೊಡಗು ಜಿಲ್ಲೆಯಲ್ಲಿರುವ ಆದಿವಾಸಿ ಕುಟುಂಬಗಳಿಗೆ ನಿವೇಶನ ನೀಡಿ ಮನೆ ನಿರ್ಮಿಸಿಕೊಡಬೇಕು, ಮೂಲಭೂತ ಸೌಲಭ್ಯ ಕಲ್ಪಿಸಬೇಕೆಂಬುದು ಆಡಳಿತಕ್ಕೆ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು. ಕೊಡಗು ಜಿಲ್ಲೆಯ ಕೆಲ ಕಾಲನಿಗಳಲ್ಲಿ ಇನ್ನೂ ಸಮರ್ಪಕ ರಸ್ತೆ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯದೇ ಉಳಿದಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಪ್ರತಿಭಟನೆಯ ಹಾದಿ ತುಳಿದಿದೆ.

ಮಣ್ಣಗುಡ್ಡೆ ಗುರ್ಜಿ ಕಪ್ ಕ್ರಿಕೆಟ್ ಪಂದ್ಯಾಟ: ರೈಸಿಂಗ್ ಸ್ಟಾರ್ ಚಾಂಪಿಯನ್



ಮಂಗಳೂರು: ಮಣ್ಣಗುಡ್ಡೆ ಗುರ್ಜಿ ಸೇವಾ ಸಮಿತಿ ಟ್ರಸ್ಟ್, ಮಣ್ಣಗುಡ್ಡೆ ಗುರ್ಜಿ ಕ್ರೀಡಾ ಸಮಿತಿಯ ಆಶ್ರಯದಲ್ಲಿ ನಗರದ ಉರ್ವ ಮಾರ್ಕೆಟ್ ಮೈದಾನದಲ್ಲಿ ಮಣ್ಣಗುಡ್ಡೆ ಗುರ್ಜಿ ಕಪ್ 2026 ಕ್ರಿಕೆಟ್ ಪಂದ್ಯಾಟ ನಡೆಯಿತು.

ಅವಿಭಾಜಿತ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವಿವಿಧ ಭಾಗಗಳಿಂದ ಬಂದ ಹದಿನಾರು ತಂಡಗಳು ಭಾಗವಹಿಸಿದ್ದವು. ರೈಸಿಂಗ್ ಸ್ಟಾರ್ ಯು.ಕೆ. ಫ್ರೆಂಡ್ಸ್ ಉಡುಪಿ ತಂಡ ಪಂದ್ಯ ವಿಜೇತರಾದರೆ, ಮಹಾಲಿಂಗೇಶ್ವರ ಭಜಕೂಡ್ಲು ತಂಡ ದ್ವಿತೀಯ ಸ್ಥಾನ ಪಡೆಯಿತು. ಮಹಾಲಿಂಗೇಶ್ವರ ಭಜಕೂಡ್ಲು ತಂಡದ ಕೇಶವ ಶರ್ಮಗೆ ಶ್ರೇಷ್ಠ ಬೌಲರ್ ಪ್ರಶಸ್ತಿ, ರೈಸಿಂಗ್ ಸ್ಟಾರ್ ಯು.ಕೆ.ಫ್ರೆಂಡ್ಸ್ ಉಡುಪಿ ತಂಡದ ರಿತೇಶ್‌ಗೆ ಶ್ರೇಷ್ಠ ಬ್ಯಾಟ್ಸ್‌ಮ್ಯಾನ್ ಮತ್ತು ಪಂದ್ಯ ಶ್ರೇಷ್ಠ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶರವು ಶ್ರೀ ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರ ಶ್ರೀ ರಾಘವೇಂದ್ರ ಶಾಸ್ತ್ರಿಗಳು ಪಂದ್ಯ ಉದ್ಘಾಟಿಸಿದರು.

ಕಲ್ಲಾವಿ ಕ್ಯಾಶ್ಯೂಸ್‌ನ ಮಾಲಿಕರಾದ ಪ್ರಕಾಶ್ ರಾವ್ ಕಲ್ಲಾವಿ ಮತ್ತು ಮಾಂಡವಿ ಮೋಟಾರ್ಸ್‌ನ ಜನರಲ್ ಮ್ಯಾನೇಜರ್ ಶಶಿಧರ್ ಐತಾಳ್, ಮಣ್ಣಗುಡ್ಡೆ ಗುರ್ಜಿ ಸೇವಾ ಸಮಿತಿ ಮಹಿಳಾ ಘಟಕದ ಕಾರ್ಯದರ್ಶಿ ಮನೋರಮಾ ಉಮೇಶನ್, ವರಲಕ್ಷ್ಮಿ ವಿಜೇತರಿಗೆ ಬಹುಮಾನ ವಿತರಿಸಿದರು.ಮಣ್ಣಗುಡ್ಡೆ ಗುರ್ಜಿ ಸೇವಾ ಸಮಿತಿ ಟ್ರಸ್ಟ್‌ನ ಪದಾಧಿಕಾರಿ ರಮಾನಂದ ಪಾಂಗಳ, ಮೋಹನ್ ದಾಸ್, ಹರೀಶ್ ರಾವ್ ಅಲ್ಲದೆ ಇತರ ಸದಸ್ಯರು ಇದ್ದರು. ಮಣ್ಣಗುಡ್ಡೆ ಗುರ್ಜಿ ಕ್ರೀಡಾ ಸಮಿತಿಯ ಅಧ್ಯಕ್ಷ ವಿನಯ ಕೃಷ್ಣ ಕಾರ್ಯದರ್ಶಿ ಶರತ್ ರಾವ್, ಕೋಶಾಧಿಕಾರಿ ಶ್ರೀರಾಮ್ ವಿ.ರಾವ್, ಸದಸ್ಯರಾದ ಪ್ರವೀಣ್ ಉಡುಪ, ಸುರೇಂದ್ರ, ಗಿರೀಶ್, ಸುಭಾಷ್ ರಾವ್ ಇಡ್ಯಾ, ಅಮರೇಶ್ ,ಇತರ ಸದಸ್ಯರ ಮೇಲ್ವಿಚಾರಣೆಯಲ್ಲಿ ಪಂದ್ಯ ನಡೆಯಿತು. ಪುರುಷೋತ್ತಮ್, ವಿಜಯ್, ಲತೀಫ್ ಪಂದ್ಯದ ಅಂಪೈರ್ ಗಳಾಗಿ, ಶ್ರೀಕಾಂತ್, ಶ್ರೇಯಸ್, ಶ್ರೇಯಸ್, ತರುಣ್ ಪಂದ್ಯದ ಕಾಮೆಂಟ್ರೇಟರ್, ಮತ್ತು ಸ್ಕೋರರ್‌ಗಳಾಗಿ ಸಹಕರಿಸಿದರು.

ಸುಳ್ಯ ತಾಲೂಕಿನ ವಿವಿಧ ಇಲಾಖೆಗಳಿಂದ ಮಹಿಳಾ ದಿನಾಚರಣೆ: ಸಾಧಕರಿಗೆ ಸನ್ಮಾನ



ಸುಳ್ಯ: ಇಲ್ಲಿನ ಸುಳ್ಯ ತಾಲೂಕು ಪಂಚಾಯತ್, ಸುಳ್ಯ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ಸುಳ್ಯ, ಜಿಲ್ಲಾ ಮಹಿಳಾ ಸಬಲೀಕರಣ ಇಲಾಖೆ ಮಂಗಳೂರು, ಪಯಸ್ವಿನಿ ಸಂಜೀವಿನಿ ತಾಲೂಕು ಮಟ್ಟದ ಒಕ್ಕೂಟ ಸುಳ್ಯ ಇವರ ಜಂಟಿ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸೋಮವಾರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಂಗವಾಗಿ ಸಭಾ ಕಾರ್ಯಕ್ರಮ, ಮಾಹಿತಿ ಕಾರ್ಯಗಾರ ಮತ್ತು ಸಾಧಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಭರತ್ ಮುಂಡೋಡಿ ಕಾರ್ಯಕ್ರಮ ಉದ್ಘಾಟಿಸಿದರು. ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ರಾಜಣ್ಣ ಅಧ್ಯಕ್ಷತೆ ವಹಿಸಿದ್ದರು. ವೆನ್‌ಲಾಕ್ ಆಸ್ಪತ್ರೆಯ ಸಖಿವನ್ ಸ್ಟಾಪ್ ಸೆಂಟರ್‌ನ ಆಡಳಿತಾಧಿಕಾರಿ ಪ್ರಿಯಾ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಸುಳ್ಯ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್ ಕುತ್ತಮೊಟ್ಟೆ, ಸುಳ್ಯ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶೈಲಜಾ ಬಿ., ಮಿಷನ್ ಶಕ್ತಿ ಯೋಜನೆಯ ಮಹಿಳಾ ಸಬಲೀಕರಣ ಘಟಕದ ಜಿಲ್ಲಾ ಕಾರ್ಯಕ್ರಮ ಸಂಯೋಜಕಿ ಅಶ್ವಿನಿ, ಸುಳ್ಯ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಧನುಷ್ ಕುಕ್ಕೇಟ್ಟಿ, ಕಾಂತಿ ಮೋಹನ್, ಎನ್ ಆರ್‌ಎಲ್‌ಎಂ ಒಕ್ಕೂಟದ ತಾಲೂಕು ಅಧ್ಯಕ್ಷೆ ಯಶೋಧಾ ಬಾಳೆಗುಡ್ಡೆ, ಎನ್‌ಆರ್‌ಎಲ್‌ಎಂ ತಾಲೂಕು ಕಾರ್ಯಕ್ರಮ ಸಂಯೋಜಕಿ ಶ್ವೇತಾ, ಪೊಲೀಸ್ ಕಾನ್‌ಸ್ಟೇಬಲ್ ಜ್ಯೋತಿ, ಸಾಂತ್ವನ ಕೇಂದ್ರದ ಅಧ್ಯಕ್ಷೆ ಹರಿಣಿ ಸದಾಶಿವ ಉಪಸ್ಥಿತರಿದ್ದರು. ನವ್ಯಾ ಅಕ್ಕ ಪಡೆ ಕುರಿತು ಮಾಹಿತಿ ನೀಡಿದರು. ಎನ್‌ಆರ್‌ಎಲ್‌ಎಂ. ತಾಲೂಕು ಕಾರ್ಯಕ್ರಮ ಸಂಯೋಜಕಿ ಶ್ವೇತಾ ಸ್ವಾಗತಿಸಿ, ಉಷಾ ವಂದಿಸಿ, ರವಿಶ್ರೀ ನಿರೂಪಿಸಿದರು. ವಿಜಯ, ದೀಪಿಕಾ ಸಹಕಾರ ನೀಡಿದರು.

ಕುಳದಪಾರೆ: ಗೇರು ಕೃಷಿ ಸಂರಕ್ಷಣೆ, ಮೌಲ್ಯವರ್ಧನೆ ಕುರಿತು ತರಬೇತಿ



ಮುಳ್ಳೇರಿಯ: ಕೇರಳ ಕೃಷಿ ವಿವಿ ಉತ್ತರ ವಲಯ ಕೃಷಿ ಸಂಶೋಧನಾ ಕೇಂದ್ರ ಪಿಲಿಕ್ಕೋಡು – ಟ್ರೈಬಲ್ ಸಬ್ ಪ್ಲಾನ್ ಗೇರು ಕೃಷಿ ಸಂರಕ್ಷಣೆ ಮತ್ತು ಮೌಲ್ಯವರ್ಧನೆ ತರಬೇತಿ ಕಾರ್ಯಕ್ರಮ ಬೆಳ್ಳೂರು ಗ್ರಾಮ ಪಂಚಾಯತ್ ಕುಳದಪಾರೆ ಕಜೆ ಕಮ್ಯೂನಿಟಿ ಹಾಲ್‌ನಲ್ಲಿ ಶನಿವಾರ ಜರಗಿತು. ಗ್ರಾಮ ಪಂಚಾಯತ್ ಅಧ್ಯಕ್ಷೆ ಮಾಲಿನಿ ಎ. ಉದ್ಘಾಟಿಸಿದರು. ಕ್ಷೇಮ ಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಸುಕುಮಾರ ಎನ್. ಅಧ್ಯಕ್ಷತೆ ವಹಿಸಿದ್ದರು. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಸತ್ಯವತಿ ರೈ, ಬ್ಲಾಕ್ ಪಂಚಾಯತ್ ಸದಸ್ಯ ಜಯಾನಂದ ಕುಳ, ವಾರ್ಡ್ ಸದಸ್ಯೆ ಭಾಗೀರಥಿ, ಕೃಷಿ ಅಧಿಕಾರಿ ಅದ್ವೈತ್, ಕೃಷಿ ಇಲಾಖೆ ಅಧಿಕಾರಿಗಳು ಇದ್ದರು.



ಮುಲ್ಕಿಯ ಬಪ್ಪನಾಡು ಶ್ರೀದುರ್ಗಾ ಪರಮೇಶ್ವರೀ ದೇವಸ್ಥಾನದ ಆಡಳಿತಕ್ಕೊಳಪಟ್ಟ ಕೊಳಚಿಕಂಬಳ ಶ್ರೀ ಜಾರಂದಾಯ ಧೂಮಾವತಿ ದೈವಸ್ಥಾನದಲ್ಲಿ ಏ.11ರಿಂದ 13ರವರೆಗೆ ನಡೆಯಲಿರುವ ಶ್ರೀ ಜಾರಂದಾಯ,ಧೂಮಾವತಿ ಮತ್ತು ಪರಿವಾರ ದೈವಗಳ ನೇಮದ ಆಮಂತ್ರಣವನ್ನು ಕೊಳಚಿಕಂಬಳ ಶ್ರೀ ಜಾರಂದಾಯ ದೈವಸ್ಥಾನದಲ್ಲಿ ಬಿಡುಗಡೆಗೊಳಿಸಲಾಯಿತು. ದೈವಸ್ಥಾನದ ಗುರಿಕಾರರು, ಸಮಿತಿಯ, ಮಹಿಳಾ ಮಂಡಳಿಯ ಮತ್ತು ,ಜಾರಂದಾಯ ಧೂಮಾವತಿ ಯೂತ್ ಕ್ಲಬ್ ನ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.



ಬೆಳ್ಳೂರು ಗ್ರಾಮ ಪಂಚಾಯತ್‌ನ 2025-26ನೇ ವಾರ್ಷಿಕ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಪಾದೆಗದ್ದೆ – ವೀರಮೂಲೆ ರಸ್ತೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷೆ ಮಾಲಿನಿ ಎ. ಉದ್ಘಾಟಿಸಿದರು. ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಸುಕುಮಾರ ಎನ್., ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಸತ್ಯವತಿ ರೈ, ಬ್ಲಾಕ್ ಪಂಚಾಯತ್ ಸದಸ್ಯ ಜಯಾನಂದ ಕುಳ ಹಾಗೂ ರಸ್ತೆ ಊರವರು ಉಪಸ್ಥಿತರಿದ್ದರು.



ಕಾಸ ಸೇವಾ ಸಂಸ್ಥೆ ಕಾರ್ಕಳ ಮತ್ತು ನಂದಳಿಕೆ ಬೊಲ್ಲು ನಾಗರಿಕ ಸೇವಾ ಸಮಿತಿ ಗೋಳಿಕಟ್ಟೆ, ಬಿಜೆಪಿ ಗ್ರಾಮ ಸಮಿತಿ ನಂದಳಿಕೆ ಹಾಗೂ ಬಿಜೆಪಿ ಯುವಮೋರ್ಚಾ ಕಾರ್ಕಳ ಇವರ ಸಂಯುಕ್ತ ಆಶ್ರಯದಲ್ಲಿ ಪುಷ್ಪ ಅವರಿಗೆ ನಿರ್ಮಿಸಿದ ನೂತನ ಮನೆಯನ್ನು ಶನಿವಾರ ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್ ಅವರು ಹಸ್ತಾಂತರಿಸಿ ಶುಭ ಹಾರೈಸಿದರು.

ರೋಟರಿ ಕ್ಲಬ್, ಧರ್ಮಸ್ಥಳ ಗ್ರಾ. ಯೋ.ಆಶ್ರಯದಲ್ಲಿ ಮಹಿಳಾ ದಿನ, ಸನ್ಮಾನ



ಕೋಟ: ರೋಟರಿ ಕ್ಲಬ್ ಹಂಗಾರಕಟ್ಟೆ–ಸಾಸ್ತಾನ ಇವರ ನೇತೃತ್ವದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪಾಂಡೇಶ್ವರ ವಲಯ ಇವರ ಸಹಯೋಗದಲ್ಲಿ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ 'ಪ್ರೇರಣಾ ಸಮಾನತೆಯ ಹೂರಣ' ಎಂಬ ಶೀರ್ಷಿಕೆಯಡಿ ಮಾ.15ರಂದು ಕರಾವಳಿ ಮೊಗವೀರ ಸಭಾಭವನ ಸಾಲಿಗ್ರಾಮ ಇಲ್ಲಿ ಕಾರ್ಯಕ್ರಮ ಆಯೋಜಿಸಿತು.

ಈ ವೇಳೆ ರೇಡಿಯೋ ನಿರೂಪಕಿ ಆರ್.ಜೆ ನಯನ ಶೆಟ್ಟಿ ಮತ್ತು ಆಶಾ ಕಾರ್ಯಕರ್ತೆ ರತ್ನ ಸಾಸ್ತಾನ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಹಂಗಾರಕಟ್ಟೆ ಸಾಸ್ತಾನ ಅಧ್ಯಕ್ಷೆ ಜ್ಯೋತಿ ಉದಯ್ ಕುಮಾರ್ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ರೇಡಿಯೋ ನಿರೂಪಕಿ ಆರ್. ಜೆ. ನಯನ ಶೆಟ್ಟಿ ಭಾಗವಹಿಸಿ ಮಾತನಾಡಿದರು. ಮುಖ್ಯ ಅಭ್ಯಾಗತರಾಗಿ ರೊ. ಸಹಾಯಕ ಗವರ್ನರ್ ಆನಂದ ಶೆಟ್ಟಿ, ಚೇತನಾ ಹೈಸ್ಕೂಲ್ ಹಂಗಾರಕಟ್ಟೆ ಮುಖ್ಯ ಶಿಕ್ಷಕಿ ಕಲ್ಪನಾ ಶೆಟ್ಟಿ, ಸೋಮೇಶ್ವರ ಆಯುಷ್ ವೈದ್ಯಾಧಿಕಾರಿ ಡಾ. ರಶ್ಮಿ, ಪ್ರಾಥಮಿಕ ಆರೋಗ್ಯ ಕೇಂದ್ರ ಸಾಸ್ತಾನ ಇದರ ಫಾರ್ಮಸಿ ಆಫೀಸರ್ ಸೀಮಾ ಮ್ಯಾಥ್ಯು, ಧರ್ಮಸ್ಥಳ ಗ್ರಾ.ಯೋಜನೆ ಯೋಜನಾಧಿಕಾರಿ ರಮೇಶ್ ಪಿ.ಕೆ., ಗ್ರಾ. ಯೋ. ಪಾಂಡೇಶ್ವರ ವಲಯ ಮೇಲ್ವಿಚಾರಕಿ ಜಯಲಕ್ಷ್ಮೀ, ರೋಟರಿ ವಲಯ ಸೇನಾನಿ ಸುಲತಾ ಎಸ್. ಹೆಗ್ಡೆ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಉಪನ್ಯಾಸಕ ನರೇಂದ್ರ ಕುಮಾರ್ ಕೋಟ ನಿರೂಪಿಸಿದರು. ಕಾರ್ಯದರ್ಶಿ ಮುರುಳೀಧರ ನಾಯರಿ ವಂದಿಸಿದರು.

ಸೋಮೇಶ್ವರ ರಕ್ತೇಶ್ವರೀ ಬಳಗದ ವಾರ್ಷಿಕೋತ್ಸವ: ಸಾಧಕರಿಗೆ ಸನ್ಮಾನ



ಉಳ್ಳಾಲ: ಸೋಮೇಶ್ವರದ ಮಣ್ಣಲ್ಲಿ ಸಣ್ಣ ಗುಡಿಯೊಂದು ಕೆಲವೇ ವರುಷಗಳಲ್ಲಿ ಪವಾಡ ಸದೃಶವಾಗಿ ಬೆಳೆದು ನಿಂತದನ್ನ ಕಂಡಾಗ ನಿಜಕ್ಕೂ ದಿಗ್ಭ್ರಮೆಯಾಗುತ್ತದೆ. ಭಕ್ತಿ ಶ್ರದ್ಧೆಯ ಆರಾಧನೆ ಮತ್ತು ದಾನ,ಧರ್ಮಗಳ ಆಧಾರದಡಿ ಯಾವುದೇ ಕ್ಷೇತ್ರಗಳ ಶಕ್ತಿ ಬೆಳಗುತ್ತದೆ. ರಕ್ತೇಶ್ವರೀ ಕ್ಷೇತ್ರದ ಅಭಿವೃದ್ಧಿ ಕಾರ್ಯದ ಜೊತೆ ಕಳೆದ ಇಪ್ಪತ್ತೈದು ವರುಷಗಳಲ್ಲಿ ಸಾವಿರಾರು ಜನರಿಗೆ ಉಪಯುಕ್ತಕಾರಿ ಸಾರ್ಥಕ ಕಾರ್ಯಗಳನ್ನ ಮಾಡಿರುವ ಸೋಮೇಶ್ವರದ ರಕ್ತೇಶ್ವರಿ ಬಳಗದವರ ಸಮಾಜಮುಖಿ ಕಾರ್ಯಗಳು ಎಲ್ಲರಿಗೂ ಮಾದರಿಯಾಗಿದೆ ಎಂದು ನಿವೃತ್ತ ಶಿಕ್ಷಕ ಕೆ.ಆರ್.ಚಂದ್ರ ಅಭಿಪ್ರಾಯಪಟ್ಟರು.

ಸೋಮೇಶ್ವರದ ರಕ್ತೇಶ್ವರೀ ಕ್ಷೇತ್ರದ ವಾರ್ಷಿಕ ಜಾತ್ರೆ ಪ್ರಯುಕ್ತ ಭಾನುವಾರ ನಡೆದ ರಕ್ತೇಶ್ವರೀ ಬಳಗದ 26ನೇ ವಾರ್ಷಿಕೋತ್ಸವದ ಸಭಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸನ್ಮಾನ

ಸೋಮೇಶ್ವರ ರಕ್ತೇಶ್ವರೀ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ ಹಿರಿಯ ಪತ್ರಕರ್ತ ವಿದ್ಯಾಧರ ಶೆಟ್ಟಿ, ಭಜಕರಾದ ನಾಗೇಶ್ ಗಟ್ಟಿ ಕೊಲ್ಯ, ಪ್ರಮುಖರಾದ ಸಂದೀಪ್ ಶೆಣ್ಯೆ, ರಘುರಾಮ ಸುವರ್ಣ ಹಾಗೂ ಉಳ್ಳಾಲ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಶಿಧರ ಪೊಯ್ಯತ್ತಬೈಲು, ಶಿಲ್ಪಿ ಶಂಕರನಾರಾಯಣ ಆಚಾರ್ಯ ಕೋಟೆಕಾರು, ನಾಟಿ ವೈದ್ಯರಾದ ತಿಲಕ್ ಸೋಮೇಶ್ವರ,ಅಂತರಾಷ್ಟ್ರೀಯ ಮಟ್ಟದ ಪವರ್ ಲಿಫ್ಟರ್ ಕುಮಾರಿ ಗೀತಾಭಾಯಿ, ಅಂತರಾಷ್ಟ್ರೀಯ ಮಟ್ಟದ ಓಟಗಾರ ಚಂದ್ರಶೇಖರ ಪೆರಿಬೈಲು,ರಾಜ್ಯ ಮಟ್ಟದ ಕರಾಟೆ ಪಟು ಚಿರಾಗ್ ಸೋಮೇಶ್ವರ ಅವರನ್ನು ಸನ್ಮಾನಿಸಲಾಯಿತು.

ಸೋಮೇಶ್ವರ ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಪುರುಷೋತ್ತಮ ಗಟ್ಟಿ ಪರ್ಯತ್ತೂರು ಅಧ್ಯಕ್ಷತೆ ವಹಿಸಿದ್ದರು. ಹೇಮಲತಾ ಆರ್.ಶೆಟ್ಟಿ,ರಕ್ತೇಶ್ವರಿ ಕ್ಷೇತ್ರದ ಅಧ್ಯಕ್ಷ ರಾಮದಾಸ್ ಸೋಮೇಶ್ವರ ಇದ್ದರು. ರಕ್ತೇಶ್ವರೀ ಬಳಗದ ಅಧ್ಯಕ್ಷ ರವಿಶಂಕರ್ ಸೋಮೇಶ್ವರ ಸ್ವಾಗತಿಸಿ, ಪತ್ರಕರ್ತ ವಿದ್ಯಾಧರ ಶೆಟ್ಟಿ ನಿರೂಪಿಸಿದರು. ವರುಣ್ ರಾಜ್ ವಂದಿಸಿದರು.

ವಿಟ್ಲ ಪಟ್ಟಣ ಪಂಚಾಯತ್‌ನ 26-27ನೇ ಸಾಲಿನ ಆಯವ್ಯಯ ಮಂಡನೆ | ನೀರಿನ ಸಮಸ್ಯೆ ಬಗ್ಗೆ ಆಡಳಿತದ ಗಮನ ಸೆಳೆದ ಸದಸ್ಯರು

ರೂ.92.81 ಲಕ್ಷ ಉಳಿಕೆ ಬಜೆಟ್ ಮಂಡನೆ, ಒಟ್ಟು 5.13 ಕೋ.ರೂ. ರಾಜಸ್ವ ಕಂದಾಯ ನಿರೀಕ್ಷೆ

ವಿಟ್ಲ: ವಿಟ್ಲ ಪಟ್ಟಣ ಪಂಚಾಯತ್‌ಗೆ ರಾಜಸ್ವ ಆದಾಯ ರೂ.2.92 ಕೋಟಿ ಮತ್ತು ವಿವಿಧ ನಿಧಿಗಳ ಅನುದಾನದ ಮೂಲಕ ರೂ.2.20 ಕೋಟಿ ಸೇರಿ ರೂ.5.13 ಕೋಟಿ ರಾಜಸ್ವ ಕಂದಾಯವನ್ನು ನಿರೀಕ್ಷಿಸಲಾಗಿದೆ. ಆರಂಭಿಕ ಶುಲ್ಕ ಸೇರಿ ರೂ.10,15,51,848 ಒಟ್ಟು ಮೊತ್ತದಲ್ಲಿ ರೂ.9,22,70,144. 2026–27ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಹಾಗೂ ಅಗತ್ಯಗಳಿಗೆ ಹಂಚಿಕೆ ಮಾಡಲಾಗಿದೆ. ರೂ.92,81,704 ಉಳಿಕೆಯಾಗಲಿದೆ ಎಂದು ಪ.ಪಂ. ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಹೇಳಿದರು.

ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ 206–27ನೇ ಸಾಲಿನ ಆಯವ್ಯಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಬಜೆಟ್ ಮಂಡಿಸಿದರು. ಆಸ್ತಿ ತೆರಿಗೆಯಲ್ಲಿ ರೂ.98.88 ಲಕ್ಷ, ಕಟ್ಟಡ ಪರವಾನಿಗೆಯಲ್ಲಿ ರೂ.8 ಲಕ್ಷ, ಉದ್ಯಮ ಪರವಾನಿಗೆ ರೂ.11 ಲಕ್ಷ, ಅಭಿವೃದ್ಧಿ ಶುಲ್ಕ



ರೂ.13.50 ಲಕ್ಷ, ಘನ ತ್ಯಾಜ್ಯ ವಸ್ತು ನಿರ್ವಹಣೆಯಲ್ಲಿ ರೂ.25 ಲಕ್ಷ, ವಾಣಿಜ್ಯ ಸಂಕೀರ್ಣದ ಬಾಡಿಗೆ ರೂ.13.50 ಲಕ್ಷ, ಮಾರುಕಟ್ಟೆ ಮತ್ತು ನೆಲಬಾಡಿಗೆ ರೂ.5.50 ಲಕ್ಷ, ಖಾತೆಗಳ ಮೂಲಕ ರೂ.3.50 ಲಕ್ಷ, ಆಸ್ತಿ ತೆರಿಗೆ ದಂಡದಲ್ಲಿ ರೂ.3.50 ಲಕ್ಷ, ಜಾಹೀರಾತು ಶುಲ್ಕ ರೂ.1.10 ಲಕ್ಷ, ಮುದ್ರಾಂಕ ಶುಲ್ಕ ರೂ.2 ಲಕ್ಷ, ನೀರಿನ ಶುಲ್ಕ ರೂ.26.50 ಲಕ್ಷ ಸಂಗ್ರಹದ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ ಎಂದು ತಿಳಿಸಿದರು.

ಉಪಾಧ್ಯಕ್ಷೆ ಸಂಗೀತ ಪಾಣೆಮಜಲು, ಸ್ಥಾಯಿ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಮುಖ್ಯಕಾರಿ ಕರುಣಾಕರ ಉಪಸ್ಥಿತರಿದ್ದರು. ಬೆರಳೆಣಿಗೆ ಸದಸ್ಯರು ಬಜೆಟ್ ಸಭೆಗೆ ಗೈರಾಗಿದ್ದರು.

ನೀರಿಗೆ ರೇಷನಿಂಗ್

ಮಳೆ ಬಾರದ ಕಾರಣ ನೀರಿನ ಕೊರತೆ ಕಾಣಿಸಲು ಪ್ರಾರಂಭವಾಗಿದೆ. ಈ ಕಾರಣದಿಂದ ನೀರಿನ ರೇಷನಿಂಗ್ ಪ್ರಾರಂಭ ಮಾಡಲಾಗುವುದು. ಕೆಲವು ಕಡೆ ನೀರಿನ ಲಭ್ಯತೆಯ ಆಧಾರದಲ್ಲಿ ಎರಡು ದಿನಕ್ಕೊಮ್ಮೆ ನೀರು ಬಿಡಲಾಗುವುದು. ಸಾರ್ವಜನಿಕರು ನೀರಿನ ಕೊರತೆಯನ್ನು ಗಮನಿಸಿ ಸಹಕರಿಸಬೇಕು ಎಂದು ಮುಖ್ಯಾಧಿಕಾರಿ ಕರುಣಾಕರ ವಿ. ಹೇಳಿದರು.

ಸಂಚಾರ ನಿಯಂತ್ರಣಕ್ಕೆ ಸಹಕಾರವಿಲ್ಲ

ಮುಖ್ಯ ರಸ್ತೆಯಲ್ಲಿ ಬಸ್ ನಿಂತು ನಿಂತು ಹೋಗುವುದರಿಂದ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಟ್ರಾಫಿಕ್ ವಿಚಾರದಲ್ಲಿ ಪೊಲೀಸ್ ಇಲಾಖೆಯಿಂದ ಅಗತ್ಯ ಕ್ರಮಕ್ಕೆ ಮುಂದಾಗುತ್ತಿಲ್ಲ, ಪೊಲೀಸರು ನಾಲ್ಕು ಮಾರ್ಗ ಹಾಗೂ ಬಸ್ ನಿಲ್ದಾಣದಲ್ಲಿ ಕಡ್ಡಾಯ ನಿಲ್ಲಬೇಕು. ಡಾಂಬರ್ ರಸ್ತೆಯಲ್ಲಿ ನೋ ಪಾರ್ಕಿಂಗ್ ಹಾಕಿದರೂ, ಇದುವರೆಗೆ ಪ್ರಕರಣ ದಾಖಲಿಸಿಲ್ಲ ಎಂಬುದು ವಿಟ್ಲ ಪಟ್ಟಣ ಪಂಚಾಯತ್‌ನ ಸದಸ್ಯರ ಆರೋಪ.

ಕೊಲ್ಯ ಭಾಗಕ್ಕೆ 8 ದಿನಗಳಿಂದ ನೀರು ಸಮಸ್ಯೆಯಿದೆ. ದುರಸ್ಥಿಗೊಳಿಸುವ ಸಂದರ್ಭ ಸ್ಥಳೀಯ ಸದಸ್ಯರಿಗೆ ಮಾಹಿತಿಯೂ ನೀಡುತ್ತಿಲ್ಲ, ಸಮಸ್ಯೆ ಸರಿಪಡಿಸಿದ ಬಳಿಕವೂ, 1ನೇ ವಾರ್ಡ್‌ನ ಸಮಸ್ಯೆ ಹಾಗೇ ಇಟ್ಟು 4ನೇ ವಾರ್ಡ್‌ಗೆ ನೀರು ನೀಡಲಾಗುತ್ತಿದೆ ಎಂದು ಸದಸ್ಯರು ಆರೋಪಿಸಿದರು.

ಜಿಲ್ಲಾಧಿಕಾರಿಗಳೇ ಬಂದು ಕೂರಲಿ

ಸಂತೆ ಏಲಂ ಅನ್ನು ನಮಗೆ ಬೇಕಾದ ಹಾಗೆ ಮಾಡಲು ಅವಕಾಶವಿಲ್ಲ ಎಂದು ಡಿಸಿ ಸಭೆಯಲ್ಲಿ ಉತ್ತರ ಲಭಿಸಿದೆ. ಎಲ್ಲವನ್ನೂ ಜಿಲ್ಲಾಧಿಕಾರಿಗಳಲ್ಲಿ ಕೇಳಿ ಮಾಡುವುದಾದರೆ ಅವರೇ ಇಲ್ಲಿ ಬಂದು ಕೂರಲಿ. ಶೌಚಾಲಯ ಟೆಂಡರ್ ಪ್ರಕ್ರಿಯೆಗೆ ಯಾರೂ ಭಾಗವಹಿಸಿಲ್ಲ ಎಂಬ ಕಾರಣಕ್ಕೆ ಮೊದಲಿನ ಟೆಂಡರ್ ಮೊತ್ತಕ್ಕಿಂತ ಕಡಿಮೆಯಲ್ಲಿ ಹಂಚಿಕೆ ಮಾಡಲಾಗಿದೆ ಎಂದು ಸದಸ್ಯರು ಆರೋಪಿಸಿದರು.

ಕಾಸರಗೋಡು ಜಿಲ್ಲೆಯಲ್ಲಿ ಮಾಲಿನ್ಯ ಮುಕ್ತ ಕೇರಳ ಯೋಜನೆ ಸಮಗ್ರ ಅನುಷ್ಠಾನ
ಟೇಕ್ ಎ ಬ್ರೇಕ್ ಕೇಂದ್ರಗಳು ಕಾರ್ಯನಿರ್ವಹಣೆಗೆ ಸಜ್ಜು

ಕಾಸರಗೋಡು: ರಾಜ್ಯ ಸರಕಾರದ ತ್ಯಾಜ್ಯ ಮುಕ್ತ ಕೇರಳ ಯೋಜನೆಯನ್ನು ಕಾಸರಗೋಡು ಜಿಲ್ಲೆಯಲ್ಲಿ ಸಮಗ್ರವಾಗಿ, ವಿವಿಧ ಕಾರ್ಯಚಟುವಟಿಕೆಗಳೊಂದಿಗೆ ಜಾರಿಗೊಳಿಸಲಾಗುತ್ತಿದೆ. ಈ ಹಿನ್ನೆಲೆ ಯೋಜನೆಯ ಅಂಗವಾಗಿ ಸ್ಥಳೀಯಾಡಳಿತ ಇಲಾಖೆ ಮತ್ತು ಶುಚಿತ್ವ ಮಿಷನ್ ಕಾರ್ಯಗತಗೊಳಿಸಿರುವ ಟೇಕ್ ಎ ಬ್ರೇಕ್ ಸೆಂಟರ್ ಎಂಬ ವಿಶೇಷ ಹಾಗೂ ವಿಶಿಷ್ಟ ಯೋಜನೆಯು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದೆ.

ಪ್ರಯಾಣಿಕರು ಮತ್ತು ಸಾರ್ವಜನಿಕರಿಗೆ ರಸ್ತೆ ಬದಿಗಳಲ್ಲಿ ಸ್ವಚ್ಛ ಮತ್ತು ಸುರಕ್ಷಿತ ಶೌಚಾಲಯಗಳು ಹಾಗೂ ವಿಶ್ರಾಂತಿ ಪಡೆಯುವ ನಿಟ್ಟಿನಲ್ಲಿ ಈ ಮಹತ್ವದ ಯೋಜನೆ ಆರಂಭಿಸಲಾಗಿದೆ. ಟೇಕ್ ಎ ಬ್ರೇಕ್ ಸೆಂಟರ್‌ಗಳನ್ನು ಮುಖ್ಯವಾಗಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣ ಪರಿಸರ, ಶಾಪಿಂಗ್ ಕಾಂಪ್ಲೆಕ್ಸ್‌ಗಳಂತಹ ಜನರು ಅಪಾರ ಸಂಖ್ಯೆಯಲ್ಲಿ ಸೇರುವ ಪ್ರದೇಶಗಳನ್ನು ಆಯ್ಕೆ ಮಾಡಿ ನಿರ್ಮಿಸಲಾಗುತ್ತಿದೆ.





ಉದ್ಘಾಟನೆಗೆ ಸಿದ್ಧವಾಗಿವೆ ಇನ್ನಷ್ಟು ಕೇಂದ್ರಗಳು

ಮಡಿಕೈ ಗ್ರಾ.ಪಂ. ವ್ಯಾಪ್ತಿಯ ಬಂಗಲಮ್ ಟೇಕ್ ಎ ಬ್ರೇಕ್ ಕೇಂದ್ರ ಹಾಗೂ ವಲಿಯಪರಂಬ ಗ್ರಾ.ಪಂ. ವ್ಯಾಪ್ತಿಯ ಒರಿಪುಲಿಮುಟ್ಟು ಎಂಬಲ್ಲಿ ನಿರ್ಮಿಸಲಾದ ಕೇಂದ್ರವು ಉದ್ಘಾಟನೆಗೆ ಸಿದ್ಧವಾಗಿವೆ. ಮಂಗಲ್ಪಾಡಿ ಗ್ರಾಮ ಪಂಚಾಯತ್‌ನ ಉಪ್ಪಳ ಮೀನು ಮಾರುಕಟ್ಟೆ ಸಮೀಪದಲ್ಲಿ ನಿರ್ಮಾಣವಾಗುತ್ತಿರುವ ಸೆಂಟರ್‌ನ ಗ್ರೌಂಡ್ ಫ್ಲೋರ್ ಸ್ಟ್ರಕ್ಚರ್ ಕಾಮಗಾರಿಗಳು ಪೂರ್ತಿಯಾಗಿವೆ. ಅಲ್ಲದೆ ಮೊದಲ ಮಹಡಿಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ದೇಲಂಪಾಡಿ ಗ್ರಾ.ಪಂ.ನ ವೆಲ್ಲಚ್ಚೇರಿಯಲ್ಲಿಯೂ ಕೇಂದ್ರದ ನಿರ್ಮಾಣ ಕೆಲಸ ತ್ವರಿತವಾಗಿ ನಡೆಯುತ್ತಿದೆ.

ಶುಚಿತ್ವ ಯೋಜನೆಯಡಿ ಕಟ್ಟಡ ನಿರ್ಮಾಣ

ಕಾಸರಗೋಡು ಜಿಲ್ಲೆಯಲ್ಲಿ ಶುಚಿತ್ವ ಯೋಜನೆಯಲ್ಲಿ ಸೇರ್ಪಡೆಗೊಳಿಸಿ ಟೇಕ್ ಎ ಬ್ರೇಕ್ ಸೆಂಟರ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಸಾರ್ವಜನಿಕ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕಸಕಡ್ಡಿಗಳ, ಪ್ಲಾಸ್ಟಿಕ್‌ಗಳನ್ನು ಎಸೆಯುವುದನ್ನು ತಪ್ಪಿಸಿ ಸೆಂಟರ್‌ಗಳ ಬಳಿಯಲ್ಲಿ ನಿರ್ಮಿಸಲಾಗುವ ಡೆಸ್ಟ್‌ಬಿನ್‌ಗಳಲ್ಲಿಯೇ ಮಾಲಿನ್ಯ, ಆಹಾರ ಪದಾರ್ಥಗಳ ವೇಸ್ಟೇಜ್‌ಗಳನ್ನು ಹಾಕುವಂತೆ ಯೋಜನೆ ರೂಪಿಸಲಾಗಿದೆ. ಅಲ್ಲದೆ ಮುಂದಿನ ದಿನಗಳಲ್ಲಿ ತಪ್ಪಿತಸ್ಥರನ್ನು ಗುರುತಿಸಿ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಸ್ಥಾಪನೆಯಾಗಲಿವೆ 59 ಕೇಂದ್ರಗಳು

ಪ್ರಥಮ ಹಂತದಲ್ಲಿ ಜಿಲ್ಲೆಯಲ್ಲಿ ಒಟ್ಟು 59 ಕೇಂದ್ರಗಳು ಸ್ಥಾಪನೆ ಯಾಗಲಿದ್ದು, ಅವುಗಳಲ್ಲಿ 51 ಕೇಂದ್ರಗಳ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದೆ. ಈ ಎಲ್ಲಾ ಕೇಂದ್ರಗಳನ್ನು ಸಾರ್ವಜನಿಕರಿಗಾಗಿ ತೆರೆಯಲಾಗಿದೆ. ಪ್ರಸ್ತುತ ಕಾಞಂಗಾಡು ಮತ್ತು ಕಾಸರಗೋಡು ನಗರಸಭೆಗಳಲ್ಲಿ ತಲಾ ಮೂರು ಮತ್ತು ಗ್ರಾಮ ಪಂಚಾಯತ್‌ಗಳಲ್ಲಾಗಿ 45 ಟೇಕ್ ಎ ಬ್ರೇಕ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಮಧ್ಯೆ, ಜಿಲ್ಲೆಯಲ್ಲಿ 8 ಕೇಂದ್ರಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಉತ್ತಮ ಗುಣಮಟ್ಟದ ಶೌಚಾಲಯ ಸ್ಥಾಪನೆ

ಜಿಲ್ಲೆಯಲ್ಲಿ ಟೇಕ್ ಎ ಬ್ರೇಕ್ ಸೆಂಟರ್‌ಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಶೌಚಾಲಯಗಳ ನವೀಕರಿಸಲು ಯೋಜನೆ ರೂಪಿಸಲಾಗಿದೆ. ಮಹಿಳೆಯರು, ಮಕ್ಕಳು ಯಾವುದೇ ಸಂದರ್ಭ ಸುರಕ್ಷಿತವಾಗಿ ಬಳಸಬಹುದಾದ ಉತ್ತಮ ಗುಣಮಟ್ಟದ ಶೌಚಾಲಯ ಸಮುಚ್ಚಯಗಳು, ವಿಶ್ರಾಂತಿ ಕೇಂದ್ರಗಳನ್ನು ನಿರ್ಮಿಸುವ ಉದ್ದೇಶ ಹೊಂದಲಾಗಿದೆ. ಜೊತೆಗೆ ಮಹಿಳೆಯರಿಗೆ, ಪುರುಷರಿಗೆ, ವಯೋವೃದ್ಧರಿಗೆ ಮತ್ತು ಮಕ್ಕಳಿಗೆ ಪ್ರಯಾಣದ ಸಂದರ್ಭ ಯಾವುದೇ ರೀತಿಯ ತೊಂದರೆಗಳಾಗದಂತೆ ಕಾರ್ಯಯೋಜನೆ ತಯಾರಿಸಲಾಗಿದೆ.

● ಪಿ.ಜಯನ್, ಜಿಲ್ಲಾ ಸಂಯೋಜಕ, ಶುಚಿತ್ವ ಮಿಷನ್, ಕಾಸರಗೋಡು

ಕೇರಳ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಅಂತಾರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ



ಕಾಸರಗೋಡು: ಆರೋಗ್ಯ ಕ್ಷೇತ್ರದಲ್ಲಿ ಮುಂದುವರಿದ ತಂತ್ರಜ್ಞಾನಗಳ ಕುರಿತು 2 ದಿನಗಳ ಅಂತಾರಾಷ್ಟ್ರೀಯ ಕಾರ್ಯಾಗಾರ ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿವಿಯಲ್ಲಿ ಸೋಮವಾರ ಉದ್ಘಾಟಿಸಲಾಯಿತು.

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಅಧೀನದಲ್ಲಿ ಎಎನ್‌ಆರ್‌ಎಫ್ – ಪಿಎಐಆರ್ ಸಹಯೋಗದೊಂದಿಗೆ ಕೇರಳ ಕೇಂದ್ರ ವಿಶ್ವವಿದ್ಯಾಲಯ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಜಂಟಿಯಾಗಿ ವೈದ್ಯಕೀಯ ತಂತ್ರಜ್ಞಾನಗಳ ವಿಷಯದ ಕುರಿತು ಆಯೋಜಿಸಲಾದ ಈ ಕಾರ್ಯಾಗಾರ ಭವಿಷ್ಯದ ಸಂಶೋಧನಾ ಯೋಜನೆಗಳ ಮೌಲ್ಯಮಾಪನಕ್ಕೆ ವೇದಿಕೆಯಾಗಿ ಮಾರ್ಪಟ್ಟಿತು.

ಉಪಕುಲಪತಿ ಪ್ರೊ.ಸಿದ್ದು ಪಿ.ಅಲ್ಗೂರ್ ಕಾರ್ಯಕ್ರಮ ಉದ್ಘಾಟಿಸಿ, ಆರೋಗ್ಯ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಬಯೋಮೆಡಿಕಲ್ ಇಂಜಿನಿಯರಿಂಗ್, ನ್ಯಾನೊತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ವಸ್ತು ವಿಜ್ಞಾನ ದಲ್ಲಿನ ಪ್ರಗತಿಗಳು ನಾವು ರೋಗ ಪತ್ತೆಹಚ್ಚುವ, ಮೇಲ್ವಿಚಾರಣೆ ಮಾಡುವ ಮತ್ತು ಎದುರಿಸುವ ವಿಧಾನ ಮರು ರೂಪಿಸುತ್ತವೆ ಎಂದರು.

ಪಾಯಿಂಟ್-ಆಫ್-ಕೇರ್ ರೋಗ ನಿರ್ಣಯ ತಂತ್ರಜ್ಞಾನ ಮಹತ್ವದ ಪಾತ್ರ ವಹಿಸುತ್ತವೆ. ಇದು ರೋಗನಿರ್ಣಯ ಮತ್ತು ಚಿಕಿತ್ಸೆಯ ನಡುವಿನ ಸಮಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಇದರ ಹಿಂದಿನ ಪ್ರಮುಖ ಪ್ರೇರಕ ಶಕ್ತಿ ಸಂವೇದಕ ತಂತ್ರಜ್ಞಾನಗಳಲ್ಲಿನ ಪ್ರಗತಿಯಾಗಿದೆ ಎಂದು ಅವರು ವಿವರಿಸಿದರು.

ಭೌತ ವಿಜ್ಞಾನ ಶಾಲೆ ಡೀನ್ ಪ್ರೊ.ಎ. ಶಕ್ತಿವೇಲ್, ವಿದ್ಯಾರ್ಥಿಗಳ ಕಲ್ಯಾಣ ವಿಭಾಗದ ಡೀನ್ ಪ್ರೊ.ರಾಜೇಂದ್ರ ಪಿಲಾಂಕಟ್ಟೆ, ಕಾರ್ಯಕ್ರಮ ಸಂಚಾಲಕರಾದ ಪ್ರೊ.ಸ್ವಪ್ನಾ ಎಸ್.ನಾಯರ್, ಡಾ.ಸುಚಂದ್ ಸಂದೀಪ್ ಮಾತನಾಡಿದರು.

ಜೋಡುಕಲ್ಲು: ಹೈಮಾಸ್ಕ್ ಬೀದಿದೀಪ ಅಳವಡಿಕೆಗೆ ಅನುದಾನ ಮಂಜೂರು

ಮಂಜೇಶ್ವರ: ಮಂಗಲ್ಪಾಡಿ ಗ್ರಾ.ಪಂ. ವ್ಯಾಪ್ತಿಯ ಜೋಡುಕಲ್ಲು ಮುಖ್ಯ ಪೇಟೆಯ ಬಹುಕಾಲದ ಬೇಡಿಕೆಯಾಗಿದ್ದ ಹೈಮಾಸ್ಕ್ ವಿದ್ಯುದ್ದೀಪ ಅಳವಡಿಸಲು ಚಾಲನೆ ಲಭಿಸಿದೆ.

ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ ಸಿ.ಸದಾನಂದ ಮಾಸ್ತರ್ ಅವರ ಸಂಸದೀಯ ನಿಧಿಯಿಂದ ಈ ಯೋಜನೆಗೆ 3 ಲಕ್ಷ ರೂ. ಅನುದಾನ ಮಂಜೂರು ಮಾಡಲಾಗಿದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಅಧಿಕೃತ ಅನುಮತಿ ದೊರೆತಿದೆ. ಈ ಮೂಲಕ ಜೋಡುಕಲ್ಲು ಭಾಗದ ದೀರ್ಘಕಾಲದ ಕತ್ತಲೆ ಸಮಸ್ಯೆಗೆ ಪರಿಹಾರ ಸಿಕ್ಕಂತಾಗಿದೆ.

ಕೆ.ಸುರೇಂದ್ರನ್‌ಗೆ ಅಭಿನಂದನೆ

ಈ ಯೋಜನೆ ಸಾಕಾರಗೊಳ್ಳಲು ವಿಶೇಷ ಆಸಕ್ತಿ ವಹಿಸಿ ಶ್ರಮಿಸಿದ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಪ್ರಯತ್ನಕ್ಕೆ ಬಿಜೆಪಿ ಕಾರ್ಯಕರ್ತರು ಮತ್ತು ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಯೋಜನೆಗೆ ಅನುದಾನ ಒದಗಿಸಿದ ಸಿ.ಸದಾನಂದ ಮಾಸ್ತರ್ ಅವರಿಗೆ ಹಾಗೂ ಈ ನಿಟ್ಟಿನಲ್ಲಿ ಸಹಕರಿಸಿದ ಬಿಜೆಪಿ ಜಿಲ್ಲಾ ಸಮಿತಿ, ಮಂಡಲ ಸಮಿತಿ ಮತ್ತು ಬೂತ್ ಸಮಿತಿಗಳಿಗೆ ಅಭಿನಂದನೆ ಸಲ್ಲಿಸಲಾಗಿದೆ.

ಬಹಳ ದಿನಗಳಿಂದ ಈ ಭಾಗದಲ್ಲಿ ಬೀದಿದೀಪದ ಆವಶ್ಯಕತೆಯಿತ್ತು. ಇದೀಗ ಅನುದಾನ ಲಭಿಸಿರುವುದು ವ್ಯಾಪಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಹೆಚ್ಚಿನ ಸುರಕ್ಷೆ ದೊರಕಿದಂತಾಗಿದೆ ಎಂದು ಬಿಜೆಪಿ ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿದ್ದಾರೆ.



ಪ್ರಕಾಶಮಾನವಾಗಲಿದೆ

ಮಂಗಲ್ಪಾಡಿ ಗ್ರಾಪಂನ 9ನೇ ವಾರ್ಡ್ ವ್ಯಾಪ್ತಿಯ ಕುಬಣೂರು ಗ್ರಾಮದ ಜೋಡು ಕಲ್ಲು ಜಂಕ್ಷನ್‌ನಲ್ಲಿ (ಉಪ್ಪಳ – ಕೈಕಂಬ – ಬಾಯಾರು ರಸ್ತೆ) 12 ಮೀ.ಎತ್ತರದ ಮಿನಿಮಾಸ್ಟ್ ಲೈಟ್ ಸ್ಥಾಪಿಸಲಾಗುವುದು. ಇದರಲ್ಲಿ 120 ವೋಲ್ಟೇಜ್ ಸಾಮರ್ಥ್ಯದ 6 ಎಲ್‌ಇಡಿ ಫ್ಲಡ್ ಲೈಟ್‌ಗಳನ್ನು ಅಳವಡಿಸಲಾಗುವುದು. ಇದರಿಂದ ಇಡೀ ಜಂಕ್ಷನ್ ಪ್ರಕಾಶಮಾನವಾಗಿ ಬೆಳಗಲಿದೆ.

ಪೆರಿಯ ವಿವಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಚರ್ಚೆ



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ವಿವಿಧ ಕಾರ್ಯಕ್ರಮ ಗಳೊಂದಿಗೆ ಆಚರಿಸಲಾಯಿತು.

ಮಂಗಳೂರು ವಿವಿ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಿಕೆ ಡಾ.ಪರಿಣಿತ ಕಾರ್ಯಕ್ರಮ ಉದ್ಘಾಟಿಸಿ, ಮಹಿಳಾ ದಿನದ ಮಹತ್ವವನ್ನು ವಿವರಿಸಿದರು. ಮಹಿಳೆಯರು ಸ್ವಾವಲಂಬಿಗಳಾಗಬೇಕು. ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಬೇಕು ಎಂದರು.

ಪ್ರಭಾರ ಕುಲಸಚಿವ ಪ್ರೊ.ವಿ. ಬಿ.ಸಮೀರ್ ಕುಮಾರ್, ಡೀನ್ ಅಕಾಡೆಮಿಕ್ ಪ್ರೊ.ಜೋಸೆಫ್ ಕೊಯಿಪಲ್ಲಿ, ಡಾ.ದೇವಿ ಪಾರ್ವತಿ, ಡಾ.ಎಸ್. ಆಶಾ, ಡಾ.ತೇಜಸ್ವಿನಿ ವೆಂಕಟೇಶ್, ವಕೀಲೆ ಮನೀಷಾ ಮಾಧವನ್ ಮಾತನಾಡಿದರು.

ಡಾ.ಉಮ್ಮೈಬನ್ ಪಿ.ಎ., ಮೃದುಲಾ ದೇವಿ ಎಸ್. ಭಾಷಣ ಮಾಡಿದರು. ನಂತರ ನಡೆದ ಪ್ಯಾನಲ್ ಚರ್ಚೆಯಲ್ಲಿ ಪ್ರೊ.ಅಮೃತ್ ಜಿ. ಕುಮಾರ್, ಪ್ರೊ. ಅಶ್ವತಿ ಆರ್.ನಾಯರ್, ಶಾಲಿನಿ ಎಸ್., ಮುಬಾಶಿರಾ, ಅಜಿನ್‌ಪ್ರಭಾ ಮತ್ತಿತರರಿದ್ದರು. ಡಾ.ಜಿಲ್ಲಿ ಜೋನ್ ಮಾಡರೇಟರ್ ಆಗಿ ಕಾರ್ಯನಿರ್ವಹಿಸಿದರು.



ಮಂಜೇಶ್ವರ ತಾಲೂಕಿನ ಕುಂಬಳೆ ನಿವಾಸಿ ವಿಶಾಲಾಕ್ಷಿ ಅವರ ಆರೋಗ್ಯ ಸಮಸ್ಯೆಗೆ ಧರ್ಮಾಧಿಕಾರಿ, ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳ ಶ್ರೀ ಕ್ಷೇತ್ರದಿಂದ ಮಂಜೂರು ಮಾಡಿರುವ ಸಹಾಯ ಧನ ಮೊತ್ತದ ಮಂಜೂರಾತಿ ಪತ್ರವನ್ನು ತಾಲೂಕಿನ ಯೋಜನಾಧಿಕಾರಿ ಶಶಿಕಲಾ ಸುವರ್ಣ ಅವರು ವಿತರಿಸಿದರು.

ಸದಾಶಿವ ಬಾಲಮಿತ್ರರ ನಿರೂಪಣೆಯಲ್ಲಿ ಮೂಡಿಬಂದ 'ಜೀವನ ಯಾತ್ರೆ' ನಾಟಕ



ಕುಂಬಳೆ: ಗಡಿನಾಡದ ಕಾಸರಗೋಡಿನ ಮಕ್ಕಳ ರಂಗಭೂಮಿಯನ್ನು ಸದಾ ಜಾಗೃತವಾಗಿಡುವಲ್ಲಿ ಸದಾಶಿವ ಬಾಲಮಿತ್ರ ಎಂಬ ಅಧ್ಯಾಪಕನ ಕಲಾತ್ಮಕ ಕೈಚಳಕ ಮೆಚ್ಚುವಂತದ್ದು. ಅವರು ರಚಿಸುವ, ನಿರ್ದೇಶಿಸುವ ನಾಟಕಗಳು ಗಡಿ- ಭಾಷೆ- ದೇಶ ದಾಟಿ ರಂಗಭೂಮಿಯಲ್ಲೊಂದು ಸಂಚಲನ ಸೃಷ್ಟಿಗೆ ಮತ್ತು ಮಕ್ಕಳ ನಡುವೆ ಕನ್ನಡತನದ ಅಳಿವು ಉಳಿವಿಗೊಂದು ಸದ್ದಿಲ್ಲದೆ ಉದಾತ್ತ ಕೊಡುಗೆಯಾಗುತ್ತಾ ಬಂದಿದೆ.

ಇದೀಗ ಕಿದೂರು ಎಎಲ್‌ಪಿ ಶಾಲೆಯ 4ನೇ ತರಗತಿಯ ಎಲ್ಲಾ ಮಕ್ಕಳನ್ನು ಜೊತೆಗೂಡಿಸಿ ರಂಗಾಭಿನಯದ ಮಹಾ ಸಮುದ್ರಕ್ಕೆ ಧುಮ್ಮಿಕ್ಕಿಸಿದ ಈ ರಂಗತಜ್ಞ ಮಕ್ಕಳಿಗಾಗಿ 'ಜೀವನ ಯಾತ್ರೆ' ಎಂಬ ನಾಟಕವನ್ನು ನಿರೂಪಿಸಿ ಮಕ್ಕಳ ನಟನಾ ಕೌಶಲ್ಯವನ್ನು ಹೊರತೆಗೆಯುವಲ್ಲಿ ಸೈ ಎನಿಸಿಕೊಂಡಿದ್ದಾರೆ. ತರಗತಿಯೊಂದರ ಎಲ್ಲಾ ಮಕ್ಕಳ ಹಾಗೂ ತರಗತಿ ಶಿಕ್ಷಕನ ಅಭಿನಯ ರಂಗಯಾತ್ರೆಯ ನವ್ಯಾನುಭವಗಳಲ್ಲಿ ಮತ್ತೊಂದು ಮೈಲುಗಲ್ಲಾಗಿ ಈ ನಾಟಕದಲ್ಲಿ ಹೊರಹೊಮ್ಮಿದೆ. ತರಗತಿ ಅಧ್ಯಾಪಕನ ಪ್ರಮುಖ ಪಾತ್ರದಲ್ಲಿ ವಸಂತ ಮಾಸ್ಟರ್ ಮೂಡಂಬೈಲು ಅನುಭವಿ ನಟನಾಗಿ ಪಾತ್ರ ನಿರ್ವಹಿಸಿದ್ದರೆ ಇನ್ನುಳಿದಂತೆ ಎಲ್ಲಾ ಮಕ್ಕಳು ತಮ್ಮ ಪಾತ್ರ ವೈಖರಿಗೆ ಜೀವ ತುಂಬಿರುವುದು ಪುಟಾಣಿ ರಂಗ ಪ್ರಪಂಚಕ್ಕೊಂದು ಮಾದರಿಯಾಗಿದೆ.

ಕಾಸರಗೋಡಿನ ಮಕ್ಕಳ ಖ್ಯಾತ ರಂಗತಜ್ಞ, ಪೆರ್ಮುದೆ ಶಾಲಾ ಮುಖ್ಯೋಪಾಧ್ಯಾಯ ಸದಾಶಿವ ಬಾಲಮಿತ್ರ ನಿರ್ದೇಶಿಸಿದ ನಾಟಕ ನಿರ್ದೇಶನದ ಜೊತೆಗೆ ರಂಗಪರಿಕರ ವ್ಯವಸ್ಥೆಗೂ ವಸಂತ ಮಾಸ್ಟರ್ ಮೂಡಂಬೈಲು ಕೈ ಜೋಡಿಸಿದ್ದಾರೆ.

ಎಸ್.ಪಿ.ರಾವ್ ಪೈವಳಿಕೆ, ಸನತ್ ಮಾಸ್ಟರ್ ಕಿದೂರು, ರಂಗಚೇತನ ಕಾಸರಗೋಡು ಇದರ ಪದಾಧಿಕಾರಿಗಳು ಸಹಕಾರ ನೀಡಿದ್ದಾರೆ. ಸರಕಾರಿ ಕಿ.ಪ್ರಾ.ಶಾಲೆ ಕಿದೂರು ಇದರ ಮುಖ್ಯ ಶಿಕ್ಷಕಿ ಮತ್ತು ಅಧ್ಯಾಪಕ ವೃಂದ, ರಕ್ಷಕ ಶಿಕ್ಷಕ ವೃಂದ, ಮಕ್ಕಳ ರಂಗಭೂಮಿಗೆ ಪ್ರೋತ್ಸಾಹದಾಯಕರಾಗಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ: 'ವಾತ್ಸಲ್ಯ' ಮನೆ ಕೊಡುಗೆ



ಮಂಜೇಶ್ವರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಂಜೇಶ್ವರ ತಾಲೂಕು ವತಿಯಿಂದ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಮಾತೃಶ್ರೀ ಹೇಮಾವತಿ ಅಮ್ಮನವರ ಕನಸಿನ ಕಾರ್ಯಕ್ರಮ ವಾತ್ಸಲ್ಯ ಕಾರ್ಯಕ್ರಮದಡಿ ಮಂಜೇಶ್ವರ ತಾಲೂಕಿನ ತಲಪಾಡಿ ವಲಯದ ಕುಂಜತ್ತೂರು ಪಾದೆಯ ಈಗಾಗಲೇ ಪ್ರತಿ ತಿಂಗಳು ಮಾಶಾಸನ ಪಡೆಯುತ್ತಿರುವ ವಾತ್ಸಲ್ಯ ಸದಸ್ಯೆ ಪುಷ್ಪಾ ಅವರಿಗೆ ನೀಡಲಾಯಿತು.

ಕೀಲಿ ಕೈ ಹಸ್ತಾಂತರ

ವಾತ್ಸಲ್ಯ ಮನೆಯ ಕೀಲಿಕೈಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಬಾಬು ನಾಯ್ಕ ಅವರು ಹಸ್ತಾಂತರಿಸಿ ಶುಭಕೋರಿದರು.

ಉದ್ಯಾವರ ಮಾಡ ಶ್ರೀ ಅಣ್ಣ ದೈವದ ಪಾತ್ರಿ ರಾಜು ಬೆಳ್ಚಪ್ಪಾಡ ಅವರು ಮನೆ ಕೀಲಿಕೈ ಹಸ್ತಾಂತರದ ವಿಧಿ ವಿಧಾನಗಳನ್ನು ನೆರವೇರಿಸಿ ಶುಭಾಶೀರ್ವಾದ ಕೋರಿದರು. ಜನಜಾಗೃತಿ ವೇದಿಕೆಯ ಸ್ಥಾಪಕ ಅಧ್ಯಕ್ಷ ಗೋಪಾಲ ಶೆಟ್ಟಿ ಅರಿಬೈಲು, ಜನಜಾಗೃತಿ ವೇದಿಕೆ ಮಂಜೇಶ್ವರ ತಾಲೂಕು ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಧಾರ್ಮಿಕ ಹಾಗೂ ಸಾಮಾಜಿಕ ಮುಂದಾಳು ಶ್ರೀಕೃಷ್ಣ ಶಿವಕೃಪಾ ಕುಂಜತ್ತೂರು ಶುಭಹಾರೈಸಿದರು.

ತಾಲೂಕು ಯೋಜನಾಧಿಕಾರಿ ಶಶಿಕಲಾ ಸುವರ್ಣ, ಜನಜಾಗೃತಿ ಸದಸ್ಯ ಹರೀಶ್ ಶೆಟ್ಟಿ ಮಾಡ, ಕೇಂದ್ರ ಒಕ್ಕೂಟದ ಅಧ್ಯಕ್ಷ ಉದಯಕುಮಾರ್ ಆನೆಬಾಗಿಲು, ತಲಪಾಡಿ ವಲಯ ಮೇಲ್ವಿಚಾರಕಿ ವಾರಿಜಾ, ಸೇವಾ ಪ್ರತಿನಿಧಿಗಳಾದ ಕುಶಾಲಾಕ್ಷಿ, ಧನ್ಯಶ್ರೀ, ಭಾಗ್ಯಶ್ರೀ, ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಶೌರ್ಯ ವಿಪತ್ತು ನಿರ್ವಹಣಾ ತಂಡದ ಸಂಯೋಜಕಿ ಸುಮನಾ ಮತ್ತು ಸದಸ್ಯರು ಅಲ್ಲದೆ ಊರಿನ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸೇವಾ ಪ್ರತಿನಿಧಿ ಕುಶಾಲಾಕ್ಷಿ ಸ್ವಾಗತಿಸಿ, ಜ್ಞಾನವಿಕಾಸ ಸಮನ್ವಯಾಧಿಕಾರಿ ಸುನೀತಾ ವಂದಿಸಿದರು. ವಲಯ ಮೇಲ್ವಿಚಾರಕಿ ವಾರಿಜಾ ಕಾರ್ಯಕ್ರಮ ನಿರೂಪಿಸಿದರು.

ಕಾಟುಕುಕ್ಕೆ: ಪ್ರಾಕೃತಿಕ ಕೃಷಿ ತರಬೇತಿ



ಪೆರ್ಲ: ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಐಸಿಎಆರ್ – ಸಿಪಿಸಿಆರ್‌ಐ ಕಾಸರಗೋಡು ಹಾಗೂ ಪೆರ್ಲ ಕೃಷಿ ಭವನದ ಆಶ್ರಯದಲ್ಲಿ ಕಾಟುಕುಕ್ಕೆ ಕೊಲ್ಯದ ಸದಾಶಿವ ನಾಯ್ಕ ಅವರ ಮನೆ ಪರಿಸರದಲ್ಲಿ ಪ್ರಾಕೃತಿಕ ಕೃಷಿ ಅಧ್ಯಯನದ ಭಾಗವಾಗಿ ಅಗ್ನಿ ಅಸ್ತ್ರ ನೀಮ್ ಅಸ್ತ್ರದ ತಯಾರಿ ಹಾಗೂ ಬಳಕೆಯ ಪ್ರಾತ್ಯಕ್ಷಿಕೆ ನೀಡಲಾಯಿತು.

ಕೆವಿಕೆ ವಿಜ್ಞಾನಿ ಡಾ.ಸರಿತಾ ಹೆಗ್ಗಡೆ ಮತ್ತು ಡಾ.ದಿನೇಶ್ ಕುಮಾರ್ ಯಾದವ್ ಮತ್ತು ಕೆವಿಕೆ ಮಾಸ್ಟರ್ ಟ್ರೈನರ್, ಸಾವಯವ ಕೃಷಿಕ ಶಿವಪ್ರಸಾದ್ ಹೊಸಮನೆ ನೀರ್ಚಾಲು, ನೈಸರ್ಗಿಕ ಕೀಟ ನಿಯಂತ್ರಣಕ್ಕಾಗಿ ಅಗ್ನಿ ಅಸ್ತ್ರ ನೀಮ್ ಅಸ್ತ್ರದ ತಯಾರಿ ಹಾಗೂ ಬಳಸುವ ವಿಧಾನದ ಕುರಿತು ಮಾಹಿತಿ ನೀಡಿದರು. ಪೆರ್ಲ ಕೃಷಿ ಭವನದ ಕೃಷಿ ಅಧಿಕಾರಿ ನಿತಿನ್ ಬಿ.ಕೆ., ಕೃಷಿ ಸಹಾಯಕ ಸುರೇಶ್ ಉಪಸ್ಥಿತರಿದ್ದರು.

ಇಡಿಯಡ್ಕ ವಿಷ್ಣುಮೂರ್ತಿ ದೇವಳ ಸಭಾಭವನದಲ್ಲಿ ಡಾ.ಸತೀಶ್ ಪುಣಿಂಚತ್ತಾಯರಿಗೆ ಗುರುವಂದನೆ ಕಾರ್ಯಕ್ರಮ
ಗುರು ಪರಂಪರೆಯಿಂದ ಸಂಸ್ಕೃತಿ -ಸಂಸ್ಕಾರ ಬೆಳೆಯುವುದು: ಎಡನೀರು ಶ್ರೀ

ಕಾಸರಗೋಡು: ಗುರು ಪರಂಪರೆಯಿಂದ ಸಂಸ್ಕೃತಿ ಉಳಿದು ಸಂಸ್ಕಾರ ಬೆಳೆಯುವುದು. ಗುರುಗಳ ಮೇಲಿನ ಭಕ್ತಿ ಹಾಗೂ ಶ್ರದ್ಧೆ ನಿಜವಾದ ಗುರುಭಕ್ತಿ. ಗುರುಕೃಪೆ ಹಾಗೂ ಗುರು ಬಲವಿದ್ದರೆ ಜೀವನ ಉಜ್ವಲವಾಗುವುದು. ಅಧ್ಯಾಪಕ ವೃತ್ತಿ ಶ್ರೇಷ್ಠ ವೃತ್ತಿ. ಅಧ್ಯಾಪಕರಿಗೆ ವೃತ್ತಿ ಹಾಗೂ ನಿವೃತ್ತಿಯ ಬಳಿಕವೂ ಸಮಾನ ಗೌರವವಿದೆ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ಪೆರ್ಲ ಶ್ರೀ ಸತ್ಯನಾರಾಯಣ ಶಾಲೆಯ ಶಿಕ್ಷಕ ಡಾ. ಸತೀಶ್ ಪುಣಿಂಚತ್ತಾಯರ ನೇತೃತ್ವದಲ್ಲಿ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರಿ (ಉಳ್ಳಾಲ್ತಿ) ವಿಷ್ಣುಮೂರ್ತಿ ದೇವಸ್ಥಾನದ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಗುರುವಂದನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.



ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಸ್ವಾಮೀಜಿ ಆಶೀರ್ವಚನ ನೀಡಿದರು.

ಗೌರವ

ಪುಣಿಂಚತ್ತಾಯರ ಬೆಳವಣಿಗೆಯಲ್ಲಿ ಹೆಗಲು ನೀಡಿದ ಯಕ್ಷಗಾನ ಕಲಾವಿದರಾದ ದಿವಾಣ ಶಿವಶಂಕರ ಭಟ್, ಸುಬ್ರಹ್ಮಣ್ಯ ಶಗ್ರಿತ್ತಾಯ, ಅಂಬೆಮೂಲೆ ಶಿವಶಂಕರ ಭಟ್, ಬಟ್ಯಮೂಲೆ ಲಕ್ಷ್ಮೀನಾರಾಯಣ ಭಟ್, ಶ್ರೀರಾಮ ಭಟ್ ಪೊಯ್ಯೆ, ದರ್ಬೆ ರಾಮ ಭಟ್, ಶಿವಗಿರಿ ಸೌಂಡ್ಸ್‌ನ ಮಹಾಲಿಂಗ ನಾಯ್ಕ್ ಅವರನ್ನು ಗೌರವಿಸಲಾಯಿತು.

ಕಲೆಯನು ಉಳಿಸಿ ಬೆಳೆಸಬೇಕು

ಗುರುಗಳು ಜೀವನದ ದಾರಿದೀಪ. ಓರ್ವ ಶಿಕ್ಷಕ ಹಾಗೂ ಯಕ್ಷಗಾನದ ಕಲಾವಿದನಾಗಿ ಕಲೆಯನ್ನು ಉಳಿಸಲು ಡಾ.ಸತೀಶ್ ಪುಣಿಂಚತ್ತಾಯರು ಸಾಧನೆ ಮಾಡಿದ್ದಾರೆ. ಕಲೆಯನ್ನು ಉಳಿಸಿ ಬೆಳೆಸಲು ನಾವೆಲ್ಲರೂ ಶ್ರಮಿಸಬೇಕು.

● ಮಾಣಿಲ ಶ್ರೀ

ಮಾರ್ಚ್ ತಿಂಗಳ ಕೊನೆಯಲ್ಲಿ ನಿವೃತ್ತಿ ಹೊಂದಲಿರುವ ಡಾ.ಸತೀಶ್ ಪುಣಿಂಚತ್ತಾಯರನ್ನು ಅಭಿಮಾನಿ ಬಳಗದಿಂದ ಸನ್ಮಾನಿಸಲಾಯಿತು.

ಸನ್ಮಾನಿತರು

ಡಾ.ಸತೀಶ್ ಪುಣಿಂಚತ್ತಾಯರ ಗುರುಗಳಾದ ಬಳ್ಳಂಬೆಟ್ಟು ಈಶ್ವರ ಭಟ್, ಎಸ್.ಪಿ. ಖಂಡಿಗೆ, ವಿ.ಬಿ.ಕುಳಮರ್ವ, ಎಚ್.ಎನ್. ಪರಮೇಶ್ವರ ಹೆಬ್ಬಾರ್, ಶಿವಕುಮಾರ್ ಕೆ., ಪ್ರಭಾವತಿ ಎಚ್.ವಿ., ಕಿಳಿಂಗಾರು ಸುಬ್ರಹ್ಮಣ್ಯ ಭಟ್, ಕುಸುಮಾವತಿ, ಪಾರ್ವತಿ ಸಹಿತ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಶಿಕ್ಷಕ ಉದಯಶಂಕರ ಅಮ್ಮೈ ಕಾರ್ಯಕ್ರಮ ನಿರೂಪಿಸಿದರು. ಬೆಳಗ್ಗೆ ಯಕ್ಷಗಾನ ವೈಭವ, ಮಧ್ಯಾಹ್ನ ಚೌತಣಕೂಟ, ಸಂಜೆ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಬೇಡರ ಕಣ್ಣಪ್ಪ ಯಕ್ಷಗಾನ ಬಯಲಾಟ ಪ್ರದರ್ಶನಗೊಂಡಿತು.

ಸುತ್ತಮುತ್ತ

ಮಾ.29: ಅಡ್ವಳ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ

ಮುಳ್ಳೇರಿಯ: ಹಿಂದೂ ಸಾಮಂತ ಅರಸು ಬಲ್ಲಾಳ್ ಸಮಾಜ ಸೇವಾ ಸಂಘ ಅಡ್ವಳ ವಲಯದ ಆಶ್ರಯದಲ್ಲಿ ಕ್ರಿಕೆಟ್ ಪಂದ್ಯಾಟ ಅಡ್ವಳ ಮೈದಾನದಲ್ಲಿ ಮಾ.29ರಂದು ನಡೆಯಲಿದೆ. ವಿಜೇತರಿಗೆ ಪ್ರಥಮ ಬಹುಮಾನವಾಗಿ 10 ಸಾವಿರ ರೂ., ಟ್ರೋಫಿ, ದ್ವಿತೀಯ ಬಹುಮಾನವಾಗಿ 7 ಸಾವಿರ ರೂ. ಮತ್ತು ಟ್ರೋಫಿ, ಅಲ್ಲದೆ ಉತ್ತಮ ಬೌಲರ್, ಉತ್ತಮ ಬ್ಯಾಟ್ಸ್‌ಮೆನ್, ಮ್ಯಾನ್ ಆಫ್ ದಿ ಮ್ಯಾಚ್, ಮ್ಯಾನ್ ಆಫ್‌ದ ಟೂರ್ನಮೆಂಟ್ ಪ್ರಶಸ್ತಿ ನೀಡಲಾಗುವುದು. 29ರಂದು ಬೆಳಿಗ್ಗೆ 8 ಗಂಟೆಗೆ ಸಂಘಟನೆಯ ಕೇಂದ್ರ ಸಮಿತಿ ಅಧ್ಯಕ್ಷ ಎ.ಬಿ.ಗಂಗಾಧರ ಬಲ್ಲಾಳ್ ಪಂದ್ಯಾಟವನ್ನು ಉದ್ಘಾಟಿಸುವರು. ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ.

ಮಾ19ರಿಂದ ಇಚ್ಲಂಗೋಡು ಶ್ರೀ ದೈವಸ್ಥಾನದಲ್ಲಿ ನೇಮ

ಉಪ್ಪಳ: ಇಚ್ಲಲಂಗೋಡು ಶ್ರೀ ನಾಗಬ್ರಾಹ್ಮ ಕೋಮಾರು ಚಾಮುಂಡೇಶ್ವರಿ ದೈವಸ್ಥಾನದಲ್ಲಿ ವರ್ಷಾವಧಿ ನೇಮ ಮಾ.19 ಮತ್ತು 20ರಂದು ನಡೆಯಲಿದೆ. ಮಾ.19ರಂದು ಬೆಳಿಗ್ಗೆ ಗಂಟೆ 8ಕ್ಕೆ ಬಡಾಜೆ ಶ್ರೀ ಗೋಪಾಲಕೃಷ್ಣ ತಂತ್ರಿಗಳ ಪೌರೋಹಿತ್ಯದಲ್ಲಿ ಗಣಪತಿಹೋಮ, ಸಂಜೆ 4.30ಕ್ಕೆ ಸ್ಥಳ ಶುದ್ಧಿ, ಸಾಮೂಹಿಕ ಪ್ರಾರ್ಥನೆ, ಸಂಜೆ ಸಂಜೆ 6ಕ್ಕೆ ದೈವಗಳ ಭಂಡಾರ ಏರುವುದು, ರಾತ್ರಿ 7.30ಕ್ಕೆ ಅನ್ನಸಂತರ್ಪಣೆ, 8 ಗಂಟೆಗೆ ಶ್ರೀ ಉಳ್ಳಾಲ್ತಿ ದೈವದ ನೇಮ, ಪೂಮಾಣಿ, ಕಿನ್ನಿಮಾಣಿ, ಮೈಸಂದಾಯ, ಪಿಲಿಚಾಮುಂಡಿ ನಂತರ ಧರ್ಮದೈವ ಅಣ್ಣಪ್ಪ ಪಂಜುರ್ಲಿ ದೈವದ ನೇಮ, ಪ್ರಸಾದ ವಿತರಣೆ, ಬೆಳಗ್ಗೆ 6.30ಕ್ಕೆ ಭಂಡಾರ ಇಳಿಯುವುದು. ಮಾ.20ರಂದು ಬೆಳಿಗ್ಗೆ 7.30ಕ್ಕೆ ನಾಗಬನದಲ್ಲಿ ತಂಬಿಲ ಸೇವೆ,10.30ಕ್ಕೆ ಭಂಡಾರ ಏರುವುದು, ಮಧ್ಯಾಹ್ನ ಅನ್ನಸಂತರ್ಪಣೆ, 12 ಗಂಟೆಗೆ ಶ್ರೀ ಬಬ್ಬರ್ಯ ದೈವದ ನೇಮ, ರಾಜಂದೈವ ಶ್ರೀ ಕೋಮಾರು ಚಾಮುಂಡಿ, ಬಂಟ ದೈವಗಳ ನೇಮ, ಕಲಾಲ್ದ ಗುಳಿಗ, ಜಾಗದ ಗುಳಿಗ ನೇಮ, ಕೊರತಿ ದೈವಗಳ ನೇಮ, ಪ್ರಸಾದ ವಿತರಣೆ, ಭಂಡಾರ ಇಳಿಯುವುದು.

ಏ.18: ಐಲ ತರುಣ ಕಲಾ ವೃಂದದ ವಾರ್ಷಿಕೋತ್ಸವ

ಉಪ್ಪಳ: ಐಲ ತರುಣ ಕಲಾ ವೃಂದದ 58ನೇ ವಾರ್ಷಿಕೋತ್ಸವ ಏಪ್ರಿಲ್ 18ರಂದು ರಾತ್ರಿ 7ಕ್ಕೆ ಐಲ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ವಿಷು ಜಾತ್ರೆಯ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ರಾತ್ರಿ 7ರಿಂದ 7.30ರ ತನಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಉದ್ಯಮಿ ಪುರುಷೋತ್ತಮ ಐಲ ಅಧ್ಯಕ್ಷತೆ ವಹಿಸುವರು. ಬೆಂಗಳೂರು ಹಿರಿಯ ಪತ್ರ ಕರ್ತ ಜಯಪ್ರಕಾಶ್ ಶೆಟ್ಟಿ ಉಪ್ಪಳ, ನಟ ನಿರ್ದೇಶಕ ಜೆ.ಪಿ.ತೂಮಿನಾಡು, ನಿವೃತ್ತ ಮುಖ್ಯ ಶಿಕ್ಷಕಿ, ವಿಶ್ವ ಹಿಂದೂ ಪರಿಷತ್, ಕಾಸರಗೋಡು ಜಿಲ್ಲಾ ಉಪಾಧ್ಯಕ್ಷೆ, ಪದ್ಮ ಮೋಹನ್ ದಾಸ್ ಐಲ, ಮಂಗಲ್ಪಾಡಿ ಗ್ರಾಮ ಪಂಚಾಯತ್ ಸದಸ್ಯ ವಸಂತಕುಮಾರ್ ಮಯ್ಯ ತಿಂಬರ ಮೊದಲಾದ ಗಣ್ಯರು ಭಾಗವಸುವರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಾತ್ರಿ 7.30ರಿಂದ ಶಾರದಾ ಆರ್ಟ್ಸ್ ತಂಡದ ಜೈ ಭಜರಂಗ ಬಲಿ ನಾಟಕ ಪ್ರದರ್ಶನಗೊಳ್ಳಲಿದೆ

ಬಿಜೆಪಿಯ ಅಭಿವೃದ್ಧಿ ಮಾದರಿ ಕೇರಳ ಜನತೆಯ ಆಗ್ರಹ: ಅಬ್ದುಲ್ಲಕುಟ್ಟಿ



ಕಾಞಂಗಾಡು: ಬಿಜೆಪಿಯ ಅಭಿವೃದ್ಧಿ ಮಾದರಿಯನ್ನು ಕೇರಳದಲ್ಲೂ ಜಾರಿಗೊಳಿಸಬೇಕೆಂಬುದು ಇಲ್ಲಿನ ಜನತೆಯ ಆಗ್ರಹವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಎ.ಪಿ. ಅಬ್ದುಲ್ಲಕುಟ್ಟಿ ಹೇಳಿದ್ದಾರೆ. ಎನ್‌ಡಿಎ ತಳಿಪರಂಬ ವಿಧಾನಸಭಾ ಕ್ಷೇತ್ರ ಚುನಾವಣಾ ಸಮಿತಿ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೇರಳದಲ್ಲಿ ಅದಲು ಬದಲಾಗಿ ಆಡಳಿತ ನಡೆಸಿದ ಎಡ ಮತ್ತು ಐಕ್ಯರಂಗಗಳು ರಾಜ್ಯವನ್ನು ಹಿಂದಕ್ಕೆ ಕೊಂಡೊಯ್ದಿವೆ. ರಾಷ್ಟ್ರೀಯ ಹೆದ್ದಾರಿ ಸಹಿತ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಪಿಣರಾಯಿ ವಿಜಯನ್ ಹಾಗೂ ಸಿಪಿಎಂ ನೇತಾರರು ಸುಳ್ಳು ಪ್ರಚಾರ ನಡೆಸುತ್ತಿದ್ದಾರೆ ಎಂದು ಅವರು ಆರೋಪಿಸಿದರು. ಹಿರಿಯ ಪ್ರಜೆಗಳಿಗೆ ಐದು ಲಕ್ಷ ರೂಪಾಯಿ ವರೆಗಿನ ಚಿಕಿತ್ಸಾ ಯೋಜನೆ ಸಹಿತ ಹಲವು ಸಾಮಾಜಿಕ ಕ್ಷೇಮ ಯೋಜನೆಗಳನ್ನು ಕೇಂದ್ರ ಸರಕಾರ ಜಾರಿಗೊಳಿಸುತ್ತಿದೆ ಎಂದು ಅಬ್ದುಲ್ಲಕುಟ್ಟಿ ತಿಳಿಸಿದರು.

ಸಾರಿಗೆ ಸಂಚಾರ ನಿಯಂತ್ರಣ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ 66ರ ನಿರ್ಮಾಣ ಕಾರ್ಯದ ಭಾಗವಾಗಿ ಚಟ್ಟಂಚಾಲ್ ಪ್ರದೇಶದ ರಸ್ತೆಯಲ್ಲಿ ಅಗೆಯುವ ಕೆಲಸ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಮಾ.19ರಂದು ಬೆಳಗ್ಗೆಯಿಂದ ಮುಂದಿನ ಸೂಚನೆ ಬರುವವರೆಗೆ ಕಣ್ಣೂರಿನಿಂದ ಕಾಸರಗೋಡಿಗೆ ಹೋಗುವ ವಾಹನಗಳು ಚಟ್ಟಂಚಾಲ್‌ನಿಂದ ಸರ್ವೀಸ್ ರಸ್ತೆಯನ್ನು ಪ್ರವೇಶಿಸಿ ಚಟ್ಟಂಚಾಲ್ – ಪರವನಡ್ಕ ರಸ್ತೆ ಮತ್ತು ಕೆಎಸ್‌ಟಿಪಿ ರಸ್ತೆ ಮೂಲಕ ಸಾಗಬೇಕಾಗುತ್ತದೆ.

ಮಂಗಳೂರಿನಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ಬರುವ ವಾಹನಗಳು ಕಾಸರಗೋಡು ಸಿಪಿಸಿಆರ್‌ಐ ಬಳಿಯ ಸರ್ವೀಸ್ ರಸ್ತೆಯನ್ನು ಪ್ರವೇಶಿಸಿ ಹಳೆಯ ಪ್ರೆಸ್ ಕ್ಲಬ್ ಜಂಕ್ಷನ್‌ನಿಂದ ಕೆಎಸ್‌ಟಿಪಿ ರಸ್ತೆ ಮೂಲಕ ಕಾಞಂಗಾಡು ಕಡೆಗೆ ತೆರಳಬೇಕು ಎಂದು ಬೇಕಲ ಉಪ ಪೊಲೀಸ್ ವರಿಷ್ಠಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತ ಮುತ್ತ

ಮಾ.22ರಂದು ಹರ್ತಟ್ಟು ಪರಿಸರದಲ್ಲಿ ಆರೋಗ್ಯ ತಪಾಸಣಾ ಶಿಬಿರ

ಕೋಟ: ನವೋದಯ ಫ್ರೆಂಡ್ಸ್ ಹರ್ತಟ್ಟು ಗಿಳಿಯಾರು ಕೋಟ ಇವರ ಆಶ್ರಯದಲ್ಲಿ ಸಿ.ಎಸ್.ಐ ಲೋಂಬಾರ್ಡ್ ಸ್ಮಾರಕ (ಮಿಷನ್) ಆಸ್ಪತ್ರೆ ಉಡುಪಿ ,ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್, ಮಣಿಪಾಲ ಜಯಂಟ್ಸ್ ಗ್ರೂಪ್ ಬ್ರಹ್ಮಾವರ ಹಾಗೂ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಮಾ.22ರಂದು ಪೂರ್ವಾಹ್ನ 9ರಿಂದ ಅಪರಾಹ್ನ 1ರವರೆಗೆ ಎನ್.ಎಫ್.ಎಚ್ ಮೈದಾನದ ಹ್ಯಾಗುಳಿ ಅಜ್ಜಯ್ಯ ಹಾಗೂ ಪರಿವಾರ ದೈವಸ್ಥಾನದ ಹತ್ತಿರ ಉಚಿತ ಆರೋಗ್ಯ ಶಿಬಿರ ನಡೆಯಲಿದ್ದು, ಶಿಬಿರದಲ್ಲಿ ದಂತ ತಪಾಸಣೆ ಶಿಬಿರ ನೇತ್ರ, ಸ್ತ್ರೀ ರೋಗ, ಸಾಮಾನ್ಯ ಆರೋಗ್ಯ, ಕೀಲು ಮತ್ತು ಎಲುಬು, ಕಿವಿ, ಮೂಗು, ಗಂಟಲು ಹಾಗೂ ಮಧುಮೇಹ ತಪಾಸಣೆ ಶಿಬಿರ ಕಾರ್ಯಕ್ರಮ ನಡೆಯಲಿದೆ. ಮಿಷನ್ ಆಸ್ಪತ್ರೆಯ ತಜ್ಞ ವೈದ್ಯರುಗಳು, ನೇತ್ರ ತಪಾಸಣೆ, ಸ್ತ್ರೀ ರೋಗ ತಜ್ಞರು, ಸಾಮಾನ್ಯ ಆರೋಗ್ಯ ತಜ್ಞರು, ಕೀಲು ಮತ್ತು ಎಲುಬು ತಜ್ಞರು,ಇಎನ್‌ಟಿ ತಜ್ಞರು, ಮೂಳೆ ಸಾಂದ್ರತೆ, ಥೈರಾಯ್ಡ್ ಸಂಬಂಧಿಸಿದ ಚಿಕಿತ್ಸೆಗಳು ದೊರಕಲಿವೆ ಎಂದು ಸಂಘಟಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9164802547 ದೂ.ಸಂ. ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಕೋಟೇಶ್ವರ ದೇವಸ್ಥಾನದಲ್ಲಿ ಏಕಾಹ ಭಜನೆ

ಕುಂದಾಪುರ: ಶ್ರೀ ಕಾಶೀ ಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಗುರುವರ್ಯರ ಜನ್ಮ ನಕ್ಷತ್ರ ಮಹೋತ್ಸವದ ಅಂಗವಾಗಿ ಕೋಟೇಶ್ವರ ಶ್ರೀ



ಪಟ್ಟಾಭಿ ರಾಮಚಂದ್ರ ದೇವಸ್ಥಾನದಲ್ಲಿ ಏಕಾಹ ಭಜನೆ ಭಾನುವಾರ ವಿಜೃಂಭಣೆಯಿಂದ ನಡೆಯಿತು.

ಸ್ಥಾನೀಯ ಶ್ರೀ ಪಟ್ಟಾಭಿ ರಾಮಚಂದ್ರ ಹಾಗೂ ಭಜನೆಗೆ ಸ್ಥಾಪಿತ ವಿಠಲ ರಕುಮಾಯಿ ದೇವರಿಗೆ ದೇವತಾ ಪ್ರಾರ್ಥನೆಯ ಬಳಿಕ ದೀಪ ಪ್ರಜ್ವಲನೆಯೊಂದಿಗೆ ಭಜನೆ ಆರಂಭಗೊಂಡಿತು. ಸ್ಥಳೀಯ ಹಾಗೂ ಪರವೂರ ಭಜನಾ ಮಂಡಳಿಯವರು ಅಹೋ ರಾತ್ರಿ ಭಜನಾ ಸೇವೆ ಸಲ್ಲಿಸಿದರು. ವಿಠಲ ರಕುಮಾಯಿ ದೇವರಿಗೆ ವಿಶೇಷ ಹೂವಿನ ಅಲಂಕಾರ, ಶನಿವಾರ ಪ್ರಾತಕಾಲದಲ್ಲಿ ಕಾಕಡ ಆರತಿ ನಡೆಯಿತು. ಮಧ್ಯಾಹ್ನ ಮಂಗಲೋತ್ಸವ, ಮಹಾಪೂಜೆ, ಮಹಾಸಂತರ್ಪಣೆ ನಡೆಯಿತು. ದೇವಳದ ಮೊಕ್ತೇಸರರು, ಊರ ಪರ ಊರ ಸಮಾಜ ಬಾಂಧವರು ಭಾಗವಹಿಸಿದ್ದರು.

ನೋಟಿಫಿಕೇಶನ್ ಜಾರಿಗೆ ವಿಳಂಬ: ಸರ್ಕಾರದ ಗಮನ ಸೆಳೆದ ಕೊಡ್ಗಿ

ಕುಂದಾಪುರ: ಮುಕಾಂಬಿಕಾ ವೈಲ್ಡ್ ಲೈಫ್ ಸ್ಯಾಂಚುರಿ ನೋಟಿಫಿಕೇಶನ್ 2017ರಲ್ಲಿ ಜಾರಿ ಮಾಡಿದ್ದಾರೆ. ಅದೇ ರೀತಿ ಕುದುರೆಮುಖ ನ್ಯಾಶನಲ್



ಪಾರ್ಕ್ ನೋಟಿಫಿಕೇಶನ್‌ನ್ನು 2020ರಲ್ಲಿ ಜಾರಿ ಮಾಡಿದ್ದಾರೆ. ಸೋಮೇಶ್ವರ ಸ್ಯಾಂಚುರಿಗೆ 2020ರಲ್ಲಿ ಅಧಿಸೂಚನೆಯನ್ನ ಹೊರಡಿಸಿದ್ದಾರೆ. ಈ ಅಧಿಸೂಚನೆ ಹೊರಡಿಸಿದ ನಂತರ 2 ವರ್ಷದಲ್ಲಿ ಈ ಎಲ್ಲಾ ಪ್ರದೇಶಗಳಿಗೆ ಒಂದು ಝೋನಲ್ ಮಾಸ್ಟರ್ ಪ್ಲ್ಯಾನ್ ಮಾಡಬೇಕು ಎನ್ನುವುದು ಅಧಿಸೂಚನೆಯಲ್ಲಿ ಸ್ಪಷ್ಟ ಇದೆ. ಆದರೆ ಇದು ಒಂದು 8 ವರ್ಷವಾಯಿತು. ಉಳಿದಿದ್ದೆಲ್ಲಾ 6ನೇ ವರ್ಷವಾದರೂ ಇನ್ನೂ ಈ ಬಗ್ಗೆ ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿನ ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಕುಂದಾಪುರ ಕ್ಷೇತ್ರದ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅಧಿವೇಶನದಲ್ಲಿ ಪ್ರಸ್ತಾಪಿಸಿದರು. ಇದರಲ್ಲಿ ನಿರ್ಬಂಧಿತ, ನಿಯಂತ್ರಿತ ಹಾಗೂ ಅನುಮತಿಸಲಾದ ಮೂರು ಕೆಟಗೇರಿಯಲ್ಲಿ ಮಾಡಿರುತ್ತಾರೆ. ಈ ಮೂರು ಕೆಟಗೇರಿಯಲ್ಲಿ ಕೆಲವು ಚಟುವಟಿಕೆಗಳಿಗೆ ಈ ಝೋನಲ್ ಮಾಸ್ಟರ್ ಪ್ಲ್ಯಾನ್ ಅನುಮೋದನೆಗೊಂಡರೆ ಪಶ್ಚಿಮ ಘಟ್ಟದ ಪ್ರದೇಶಗಳಿಗೆ ಕೆಲವು ಅನುಕೂಲಗಳು ಆಗುತ್ತದೆ ಎಂದರು. ಇದಕ್ಕೆ ಪೂರಕವಾಗಿ ಸ್ಪಂದಿಸಿದ ಸಚಿವರು ಝೋನಲ್ ಮಾಸ್ಟರ್ ಪ್ಲ್ಯಾನ್‌ಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಕರ್ನಾಟಕ ಸರಕಾರದ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಗೆ ವಹಿಸಿಕೊಡಲಾಗುವುದು ಎಂದರು.

ಮೊದಲನೇ ಪುಟದಿಂದ

ವಿದ್ಯುತ್ ಬೇಲಿ

ಲೋಕೋಪಯೋಗಿ ಇಲಾಖೆಯು ವಿವಿಧ ಜಿಲ್ಲೆಗಳಲ್ಲಿರುವ ಜೈಲುಗಳ ಸುರಕ್ಷಾ ಗೋಡೆಯನ್ನು ಪರಿಶೀಲಿಸಿದ ಬಳಿಕ 4.79 ಕೋಟಿ ರೂ.ನ ಪ್ರತ್ಯೇಕ ಅಂದಾಜು ಪಟ್ಟಿ ತಯಾರಿಸಿ ಜೈಲು ಇಲಾಖೆಗೆ ಸಲ್ಲಿಸಲಾಗಿದೆ. ಕಣ್ಣೂರು ಸೆಂಟ್ರಲ್ ಜೈಲು, ವಿಯೂರ್ ಜಿಲ್ಲಾ ಜೈಲು ಅಲ್ಲದೆ ವಿವಿಧ ಕಡೆಗಳಲ್ಲಿ ಅಸ್ತಿತ್ವದಲ್ಲಿರುವ ವಿದ್ಯುತ್ ಬೇಲಿ ದುರಸ್ತಿ ನಡೆಸಿ ಮರು ಅಳವಡಿಕೆ ಮಾಡಲಾಗುವುದು. ವಿಯೂರ್ ಅತೀ ಸುರಕ್ಷಾ ಜೈಲಿನಲ್ಲಿ ಈಗಾಗಲೇ ಸ್ಥಾಪಿಸಿದ ವಿದ್ಯುತ್ ಬೇಲಿ ವ್ಯವಸ್ಥೆಯ ವಾರ್ಷಿಕ ನಿರ್ವಹಣಾ ಗುತ್ತಿಗೆಯನ್ನು ನವೀಕರಿಸಲು ಅನುಮತಿ ನೀಡಲಾಗಿದೆ.

ದಂಡದ ಬಿಸಿ

ಉಲ್ಲಂಘನೆಗಳ ಕುರಿತು ಬಂದ ದೂರಿನ ಆಧಾರದ ಮೇಲೆ ನಡೆಸಿದ ತಪಾಸಣೆಯಲ್ಲಿ ಜಿಲ್ಲಾ ಜಾರಿ ದಳದ ಅಧಿಕಾರಿ ಕೆ.ವಿ.ಮುಹಮ್ಮದ್ ಮದನಿ, ಸ್ಕ್ವಾಡ್ ಸದಸ್ಯ ವಿ.ಎಂ.ಜೋಸ್, ಆರೋಗ್ಯ ಅಧಿಕಾರಿಗಳಾದ ಕೆ.ರಶ್ಮಿ, ಡಾನ್ ಕುರಿಯಾಕೋಸ್ ಮತ್ತು ಕೆ.ರೆಗಿಶಾ ಭಾಗವಹಿಸಿದ್ದರು.

ಉಡುಪಿ ಜಿಲ್ಲಾ ಮಟ್ಟದ 'ಸಿರಿಧಾನ್ಯ ಹಬ್ಬ' ಉದ್ಘಾಟಿಸಿ ಡಾ. ಉದಯ್ ಕುಮಾರ್ ಶೆಟ್ಟಿ ಅಭಿಪ್ರಾಯ

ಸಿರಿಧಾನ್ಯಗಳು ಆರೋಗ್ಯಕ್ಕೆ ಪೋಷಕಾಂಶಗಳ ಸಂಜೀವಿನಿ

ಉಡುಪಿ: ಇಂದಿನ ಯಾಂತ್ರಿಕ ಜೀವನಶೈಲಿಯಲ್ಲಿ ಸಿರಿಧಾನ್ಯಗಳು ಕೇವಲ ಆಹಾರವಲ್ಲ, ಅವು ಪೋಷಕಾಂಶಗಳ ಸಂಜೀವಿನಿಗಳಿದ್ದಂತೆ. ಇವುಗಳಲ್ಲಿ ಹೇರಳವಾಗಿರುವ ನಾರಿನಂಶ ಹಾಗೂ ಕಬ್ಬಿಣಾಂಶವು ದೈನಂದಿನ ಆರೋಗ್ಯದ ಸಮತೋಲನ ಕಾಯ್ದುಕೊಳ್ಳಲು ಅತ್ಯಂತ ಅವಶ್ಯಕ ಎಂದು ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ. ಉದಯ್ ಕುಮಾರ್ ಶೆಟ್ಟಿ ಪ್ರತಿಪಾದಿಸಿದರು.

ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ- ಎಣ್ಣೆಕಾಳು ಯೋಜನೆ ಅಡಿ ಜಿಲ್ಲಾ ಮಟ್ಟದ ಕಾರ್ಯಾಗಾರ ಹಾಗೂ ಜಿಲ್ಲಾ ಮಟ್ಟದ 'ಸಿರಿಧಾನ್ಯ ಹಬ್ಬ'ವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕೃಷಿ ಕ್ಷೇತ್ರದ ಜಿ.ಡಿ.ಪಿ ಕೊಡುಗೆ ಹೆಚ್ಚಾಗಲಿ

ಭಾರತದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ಕ್ಷೇತ್ರದ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, ನಮ್ಮದು ಕೃಷಿ ಪ್ರಧಾನ ದೇಶವಾಗಿದ್ದು, ಶೇ. 60 ರಷ್ಟು ಜನಸಂಖ್ಯೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಆದರೂ, ದೇಶದ ಒಟ್ಟು ಜಿ.ಡಿ.ಪಿ ಗೆ ಕೃಷಿ ವಲಯದಿಂದ ದೊರೆಯುತ್ತಿರುವ ಕೊಡುಗೆ ಕೇವಲ ಶೇ. 17–18 ರಷ್ಟು ಮಾತ್ರ. ಸ್ವಾತಂತ್ರ್ಯ ಪೂರ್ವದಲ್ಲಿ ಕೃಷಿ ಆಧಾರಿತ ಆರ್ಥಿಕತೆ ಹೊಂದಿದ್ದ ನಾವು ಇಂದು ದೇಶದ ಒಟ್ಟು 343 ಲಕ್ಷ ಕೋಟಿ ಜಿ.ಡಿ.ಪಿ ಪೈಕಿ ಕೇವಲ 45–50 ಲಕ್ಷ ಕೋಟಿಗಳಷ್ಟು ಮಾತ್ರ ಕೃಷಿಯಿಂದ ಪಡೆಯುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಕೃಷಿ ಕ್ಷೇತ್ರವು ಕೈಗಾರಿಕಾ ಹಾಗೂ ಸೇವಾ ವಲಯಗಳೊಂದಿಗೆ ಸ್ಪರ್ಧಿಸುವಂತೆ ಬೆಳೆಯುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.



ಸಾಂಪ್ರದಾಯಿಕ ಆಹಾರದ ಮೌಲ್ಯ

ಜಿಲ್ಲಾ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಪ್ರದೀಪ್ ಹೆಬ್ಬಾರ್ ಮಾತನಾಡಿ, ಸದೃಢ ಆರೋಗ್ಯಕ್ಕಾಗಿ ಜನರು ಸಾಂಪ್ರದಾಯಿಕ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವ ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು. ಪ್ರಗತಿಪರ ರೈತ ಹಾಗೂ ಬ್ರಹ್ಮಾವರ ರೈತಧ್ವನಿ ಸಂಘದ ಅಧ್ಯಕ್ಷ ಜಯರಾಮ ಶೆಟ್ಟಿ ಮಾತನಾಡಿ, ರೈತರು ಕೇವಲ ಬೆಳೆ ಬೆಳೆಯುವುದಷ್ಟೇ ಅಲ್ಲದೆ, ಉತ್ಪನ್ನಗಳ ಮೌಲ್ಯವರ್ಧನೆ ಕೈಗೊಳ್ಳುವ ಮೂಲಕ ಆರ್ಥಿಕ ಲಾಭ ಪಡೆಯಬೇಕು. ದೇಸಿ ತಳಿಗಳ ಸಂರಕ್ಷಣೆ ಮತ್ತು ಪೌಷ್ಟಿಕಾಂಶದ ಮಹತ್ವ ತಿಳಿಸುವುದು ಈ ಸಿರಿಧಾನ್ಯ ಹಬ್ಬದ ಮುಖ್ಯ ಉದ್ದೇಶವಾಗಿದೆ ಎಂದರು.

ಸಾವಯವ ಕೃಷಿಗೆ ಒತ್ತು ನೀಡಿ

ಯುವ ರೈತರು ಸಾವಯವ ಕೃಷಿಯತ್ತ ಹೆಚ್ಚು ಒಲವು ತೋರಬೇಕು. ಗುಣಮಟ್ಟದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಸದಾ ಹೆಚ್ಚಿನ ಬೇಡಿಕೆ ಇರುತ್ತದೆ. ಕೃಷಿ ವಲಯವು ಕೈಗಾರಿಕಾ ವಲಯವನ್ನು ಮೀರಿ ಬೆಳೆಯಲು ಆಧುನಿಕ ತಂತ್ರಜ್ಞಾನಗಳ ಸಮರ್ಪಕ ಬಳಕೆ ಮತ್ತು ವೈಜ್ಞಾನಿಕ ಚಿಂತನೆ ಅತ್ಯಗತ್ಯ. ಇಂತಹ ಕಾರ್ಯಾಗಾರಗಳು ಕೃಷಿ ಉತ್ಪನ್ನಗಳ ಗುಣಮಟ್ಟದ ಉತ್ಪಾದನೆ ಮತ್ತು ಕ್ರಿಯಾಶೀಲ ನಿರ್ವಹಣೆಗೆ ಉತ್ತಮ ವೇದಿಕೆಯಾಗಲಿವೆ.

● ಡಾ. ಉದಯ್ ಕುಮಾರ್ ಶೆಟ್ಟಿ

ವಿವಿಧ ಕಾರ್ಯಕ್ರಮಗಳ ಆಕರ್ಷಣೆ:

ಕಾರ್ಯಕ್ರಮಕ್ಕೂ ಮುನ್ನ ಕೃಷಿ ಉತ್ಪನ್ನಗಳ ವಸ್ತು ಪ್ರದರ್ಶನ ಮಳಿಗೆಗಳನ್ನು ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ್ ಉದ್ಘಾಟಿಸಿದರು. ಸಭೆಯಲ್ಲಿ ಬೈಂದೂರು ಕೃಷಿಕ ಸಮಾಜದ ಅಧ್ಯಕ್ಷ ವೆಂಕಟೇಶ್ ಹೆಬ್ಬಾರ್ ಮಾತನಾಡಿದರು. ಸಂಶೋಧನಾ ಸಂಸ್ಥೆಯ ಶ್ರೀದೇವಿ ಜಕ್ಕೆರಾಳ್ ಅವರು ನೆಲಗಡಲೆ ತಳಿಗಳ ಬಗ್ಗೆ ಮತ್ತು ಡಾ. ಧನಂಜಯ ಅವರು ಸಿರಿಧಾನ್ಯದ ಬಳಕೆ ಬಗ್ಗೆ ಮಾಹಿತಿ ನೀಡಿದರು. ಇದೇ ವೇಳೆ ಕೃಷಿ ಸಾಧಕರು ಹಾಗೂ ಪಾಕ ಸ್ಪರ್ಧೆಯ ವಿಜೇತರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬ್ರಹ್ಮಾವರ ತಾಲೂಕು ಕೃಷಿ ಸಮಾಜದ ಸದಸ್ಯ ದಿನೇಶ್ ಕಾಮತ್, ಕೃಷಿ ಇಲಾಖೆಯ ಸಿಬ್ಬಂದಿಗಳು, ಜಿಲ್ಲೆಯ ರೈತರು, ರೈತ ಮಹಿಳೆಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಜಂಟಿ ಕೃಷಿ ನಿರ್ದೇಶಕಿ ಪೂರ್ಣಿಮಾ ಜಿ.ಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕಿ ಪೂಜಾ ನಾಯ್ಕ್ ಎಂ. ಕಾರ್ಯಕ್ರಮ ನಿರೂಪಿಸಿ, ಉಪಕೃಷಿ ನಿರ್ದೇಶಕ ಚಂದ್ರಶೇಖರ ನಾಯ್ಕ್ ವಂದಿಸಿದರು.

ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಪ್ರಶ್ನೆಗೆ ಸಚಿವ ಸತೀಶ್ ಜಾರಕಿಹೊಳಿ ಉತ್ತರ

ಕಾಪು ಕ್ಷೇತ್ರದ ಹಲವು ಕಾಮಗಾರಿ ಶೀಘ್ರ ಆರಂಭ

ಕಾಪು: ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರು ವಿಧಾನ ಸಭಾ ಅಧಿವೇಶನದಲ್ಲಿ ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸೇತುವೆ ಕಾಮಗಾರಿ ಅವಶ್ಯಕತೆ ಇರುವುದು ಸರಕಾರದ ಗಮನದಲ್ಲಿದೆಯೇ..? ಗಮನಕ್ಕೆ ಬಂದಿದ್ದಲ್ಲಿ ಸೇತುವೆ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುದಾನ ಮಂಜೂರು ಮಾಡಲು ಸರಕಾರದ ನಿಲುವೇನು..? ಅಗತ್ಯ ಅನುದಾನ ಮಂಜೂರು ಮಾಡಿ ಯಾವ ಕಾಲಮಿತಿಯಲ್ಲಿ ಸೇತುವೆ ನಿರ್ಮಾಣ ಹಾಗೂ ಸೇತುವೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಸರ್ಕಾರವನ್ನು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, 2025–26 ನೇ ಸಾಲಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಬಂಡವಾಳ ವೆಚ್ಚದಡಿಯಲ್ಲಿ ಕಟಪಾಡಿ–ಮಣಿಪುರ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 1.30 ಕಿ.ಮೀ ರಲ್ಲಿ ಸೇತುವೆ ದುರಸ್ತಿ ಕಾಮಗಾರಿಗೆ 95 ಲಕ್ಷ ಅನುದಾನ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. ವೇತ್ರಿ–ಹಿರಿಯಡ್ಕ–ಕಾರ್ಕಳ ರಸ್ತೆ ಕಿ.ಮೀ 12.15 ರಲ್ಲಿ ಸೇತುವೆ ಮರು ನಿರ್ಮಾಣ ಹಾಗೂ ಕೂಡು ರಸ್ತೆ ಅಗಲೀಕರಣ (ಕಾಜಾರಗುತ್ತು ಹಳ್ಳ) ಕಾಮಗಾರಿಗೆ 500 ಲಕ್ಷ ಅನುದಾನ ಒದಗಿಸಲಾಗಿದ್ದು, ಅಂದಾಜು ಪಟ್ಟಿ ತಯಾರಿಕೆಯ ಹಂತದಲ್ಲಿದ್ದು ಟೆಂಡರ್ ಪ್ರಕ್ರಿಯೆ ಶೀಘ್ರದಲ್ಲಿ ಕೈಗೊಂಡು ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ಸೇತುವೆಗಳ ನಿರ್ಮಾಣ/ಮರು ನಿರ್ಮಾಣಕ್ಕೆ ರೂ 2150 ಲಕ್ಷಗಳ ಅವಶ್ಯಕತೆ ಇದ್ದು, ಪ್ರಸ್ತುತ ಲೋಕೋಪಯೋಗಿ ಇಲಾಖೆಯಲ್ಲಿ ಅಧಿಕ ಕಾರ್ಯಭಾರದ ಒತ್ತಡ ಇರುವುದರಿಂದ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮನೆಗಳಿಗೆ ಬೇಡಿಕೆ ಹಾಗೂ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಸರಕಾರ ನೀಡುವ ಪ್ರೋತ್ಸಾಹ ಧನ ರೂ 1.20 ಲಕ್ಷವನ್ನು ರೂ 5 ಲಕ್ಷಕ್ಕೆ ಏರಿಸುವಲ್ಲಿ ಪ್ರಸ್ತಾವನೆಗಳು ಸರಕಾರ ಮುಂದಿದೆಯೇ..? ಮುಂದಿದ್ದಲ್ಲಿ ಘಟಕ ವೆಚ್ಚವನ್ನು ಹೆಚ್ಚಿಸುವಲ್ಲಿ ಸರಕಾರ ಕೈಗೊಂಡಿರುವ ಕ್ರಮಗಳೇನು..? ಎಂಬ ಶಾಸಕರ ಪ್ರಶ್ನೆಗೆ ಉತ್ತರಿಸಿದ ಮೀನುಗಾರಿಕಾ ಸಚಿವ ಮಾಂಕಾಳ್ ಎಸ್. ವೈದ್ಯ, ಯೋಜನೆಯಡಿ 1 ನೇ ಹಂತದಲ್ಲಿ 25 ಮನೆಗಳು ನಂತರ 2 ನೇ ಹಂತದಲ್ಲಿ 50 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಹೆಚ್ಚುವರೀ ಬೇಡಿಕೆ ಬಂದಲ್ಲಿ ಮನೆಗಳನ್ನು ಮಂಜೂರು ಮಾಡಲಾಗುವುದು. ಮತ್ಸ್ಯಾಶ್ರಯ ಯೋಜನೆಯಡಿ ಸರಕಾರ ನೀಡುವ ಪ್ರೋತ್ಸಾಹಧನ 1.20 ಲಕ್ಷವನ್ನು ರೂ 5.00 ಲಕ್ಷಕ್ಕೆ ಏರಿಸುವ ಪ್ರಸ್ತಾವನೆ ಸರಕಾರದ ಮುಂದಿರುವುದಿಲ್ಲ, 2026–27 ನೇ ಸಾಲಿನಲ್ಲಿ ಘಟಕ ವೆಚ್ಚವನ್ನು ಹೆಚ್ಚಿಸಲು ಕ್ರಮವಹಿಸಲಾಗುವುದು ಎಂದು ಉತ್ತರ ನೀಡಿರುತ್ತಾರೆ.

ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಸಣ್ಣ ಕೈಗಾರಿಕೆಗಳು ಎಷ್ಟು? ಹಾಗೂ ಸರೋಜಿನಿ ಮಹಿಷಿ ವರದಿಯಂತೆ



ಸಣ್ಣ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಲಾಗಿದೆಯೇ..? ಕಲ್ಪಿಸಿದ್ದಲ್ಲಿ ಯಾವ ಮಾನದಂಡಗಳ ಆಧಾರದ ಮೇಲೆ ಕಲ್ಪಿಸಲಾಗಿದೆ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು.ಇದಕ್ಕೆ ಸಣ್ಣ ಕೈಗಾರಿಕಾ ಮತ್ತು ಸಾರ್ವಜನಿಕ ಉದ್ದಿಮೆ ವಲಯಗಳ ಸಚಿವರಾದ ಶರಣ ಬಸಪ್ಪ ದರ್ಶನಾಪುರ ಉತ್ತರಿಸಿ, ಕ್ಷೇತ್ರ ವ್ಯಾಪ್ತಿಯಲ್ಲಿ 1332 ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿ ಆಗಿದೆ. ಶೇ. 70 ಉದ್ಯೋಗವಾಕಾಶ ಕಲ್ಪಿಸಲಾಗಿರುತ್ತದೆ ಎಂದು ಉತ್ತರಿಸಿದರು.

ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

ಸಂಶೋಧನೆಯಿಂದ ಆವಿಷ್ಕಾರ ಸಾಧ್ಯ: ಪ್ರೊ.ಯಾಜಿ

ಕಾರ್ಕಳ: ನಿಟ್ಟೆ ಪರಿಗಣಿತ ವಿಶ್ವ ವಿದ್ಯಾಲಯದ ಅಂಗ ಸಂಸ್ಥೆಯಾದ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಸಿವಿಲ್ ಇಂಜಿನಿಯರಿಂಗ್ ವಿಭಾಗವು ಇಂಡಿಯನ್ ಜಿಯೋಟೆಕ್ನಿಕಲ್ ಸೊಸೈಟಿ (IGS), ಸುರತ್ಕಲ್ ಚಾಪ್ಟರ್ ಸಹಯೋಗದಲ್ಲಿ "Insights for Resilient Soil Mechanics: IRSM–2026 ಎಂಬ ರಾಷ್ಟ್ರೀಯ ಸಿಂಪೋಸಿಯಂ ಅನ್ನು ಇತ್ತೀಚೆಗೆ ನಿಟ್ಟೆಯ ಸಂಭ್ರಮ ಆಡಿಟೋರಿಯಂನಲ್ಲಿ ಆಯೋಜಿಸಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎನ್.ಐ.ಟಿ.ಕೆ ಸುರತ್ಕಲ್‌ನ ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಕೆ. ಯಾಜಿ ಕಾರ್ಯಕ್ರಮ ಉದ್ಘಾಟಿಸಿ, ಭೂವಿಜ್ಞಾನ ಮತ್ತು ಜಿಯೋಟೆಕ್ನಿಕಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ತಾಂತ್ರಿಕ ಅನ್ವಯಿಕತೆಗಳ ಮಹತ್ವ ವಿವರಿಸಿದರು. ಸದೃಢ ಮೂಲ ಸೌಕರ್ಯ ನಿರ್ಮಾಣಕ್ಕೆ ಮಣ್ಣು ಮೆಕ್ಯಾನಿಕ್ಸ್ ಅಧ್ಯಯನ, ಆವಿಷ್ಕಾರಗಳು ಪ್ರಮುಖ ಪಾತ್ರವಹಿಸುತ್ತವೆ. ನಿರಂತರ ಸಂಶೋಧನೆಯಿಂದ ಆವಿಷ್ಕಾರ ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಟ್ಟೆ ತಾಂತ್ರಿಕ ಕಾಲೇಜಿನ ಉಪಪ್ರಾಂಶುಪಾಲ ಡಾ. ನಾಗೇಶ್ ಪ್ರಭು ವಹಿಸಿದ್ದರು. ಈ ಸಂದರ್ಭದಲ್ಲಿ ಐಜಿಎಸ್ ಸುರತ್ಕಲ್ ಚಾಪ್ಟರ್ ಅಧ್ಯಕ್ಷರು ಹಾಗೂ ಎನ್‌ಐಟಿಕೆ ಸುರತ್ಕಲ್‌ನ ಪ್ರಾಧ್ಯಾಪಕ ಪ್ರೊ. ಸುನಿಲ್ ಬಿ.ಎಂ., ಐಜಿಎಸ್ ಸುರತ್ಕಲ್ ಚಾಪ್ಟರ್‌ನ ಕಾರ್ಯದರ್ಶಿ ಡಾ. ಬಬ್ಲು ಚೌದರಿ ಮತ್ತು ನಿಟ್ಟೆ ತಾಂತ್ರಿಕ ಕಾಲೇಜಿನ ಡೀನ್ ಅಕಾಡೆಮಿಕ್ಸ್ ಪ್ರೊ. ಐ.ಆರ್. ಮಿತ್ತಂತಾಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿಂಪೋಸಿಯಂನಲ್ಲಿ ಜಿಯೋಟೆಕ್ನಿಕಲ್ ಇಂಜಿನಿಯರಿಂಗ್ ಕ್ಷೇತ್ರದ ಇತ್ತೀಚಿನ ಸಂಶೋಧನೆಗಳು, ತಾಂತ್ರಿಕ ಅಭಿವೃದ್ಧಿಗಳು ಹಾಗೂ ಕ್ಷೇತ್ರ ಅನುಭವಗಳ ಕುರಿತು ವಿವಿಧ ತಜ್ಞರು ಉಪನ್ಯಾಸ ನೀಡಿದರು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಸಂಶೋಧಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಂಶೋಧನಾ ಪ್ರಬಂಧ ಮಂಡಿಸಿದರು. ಕಾರ್ಯಕ್ರಮದ ಮುಖ್ಯ ಸಂಯೋಜಕರಾಗಿ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಅರುಣ್ ಕುಮಾರ್ ಭಟ್ ಸ್ವಾಗತಿಸಿದರು. ಡಾ. ಶ್ರೀನಾಥ್ ಶೆಟ್ಟಿ ಕೆ. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘಟನಾ ಕಾರ್ಯದರ್ಶಿ ಡಾ. ಶ್ರೀರಾಮ್ ಮರಾಠೆ ಸಿಂಪೋಸಿಯಂ ಬಗೆಗೆ ವಿವರಿಸಿದರು.

ಸಂಯೋಜಕ ಪ್ರದೀಪ್ ಕಾರಂತ್ ವಂದಿಸಿ, ಎಂ.ಸಿ.ಎ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರೇಮಿತಾ ಕಾಮತ್ ಕಾರ್ಯಕ್ರಮ ನಿರೂಪಿಸಿದರು.



40 ವರ್ಷದ ಸೇವೆ ಪರಿಗಣಿಸಿ ಸನ್ಮಾನ

ಇದೇ ಸಂದರ್ಭದಲ್ಲಿ ಪ್ರೊ. ಐ.ಆರ್. ಮಿತ್ತಂತಾಯ ಅವರ ಸಿವಿಲ್ ವಿಭಾಗದಲ್ಲಿನ 40 ವರ್ಷಗಳ ಸೇವೆಯನ್ನು ಗುರುತಿಸಿ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

'ಕಡಲೂರ ಸನ್ಮಾನ'ಕ್ಕೆ ಭಾಜನರಾದ ಭಾಗವತ, ಭಜಕ ಪ್ರಶಾಂತ್ ಪಡುಕರೆ



ಕೋಟ: ನಮ್ಮ ದೇಶ ಸಾಂಸ್ಕೃತಿಕವಾಗಿ ಗಟ್ಟಿ ನೆಲೆಯಾಗಿ ಕಲಾವಿದರ ಸೃಷ್ಟಿಯ ತಾಣವಾಗಿದೆ ಎಂದು ವಿಶ್ವ ವಿಖ್ಯಾತ ಸಾಲಿಗ್ರಾಮ ಮಕ್ಕಳ ಮೇಳದ ನಿರ್ದೇಶಕ ಎಚ್. ಸುಜಯೀಂದ್ರ ಹಂದೆ ಹೇಳಿದರು.

ಕೋಟತಟ್ಟು ಪಡುಕರೆ ಅರಮ ದೇಗುಲದ ಸಮೀಪ ಟೀಮ್ ಭವಾಬ್ಧಿ ಪಡುಕರೆ ಇವರ ಐದನೇ ವರ್ಷದ ವರ್ಷೋತ್ಸವ ಕಡಲೂರ ಸನ್ಮಾನ ಕಾರ್ಯಕ್ರಮದಲ್ಲಿ ಅಭಿನಂದನಾ ನುಡಿಗಳನ್ನಾಡಿ, ದೇಶದ ಯಾವುದೇ ವ್ಯವಸ್ಥೆಯನ್ನು ಹಾಳುಗೆಡವಬಹುದು. ಆದರೆ ಇಲ್ಲಿನ ಸಂಸ್ಕೃತಿ ನಾಶಮಾಡಲು ಯಾರಿಂದಲೂ ಸಾಧ್ಯವಿಲ್ಲ, ಇದು ಶ್ರೀಮಂತ ಪರಂಪರೆಯ ದೇಶ ಎಂದರು.

ಕರಾವಳಿ ಸಂಘ ಸಂಸ್ಥೆ, ಕಲೆಯ ತವರು. ಕಲಾವಿದರಿಗೆ ಗರ್ವವಿರಬಾರದು. ಗರ್ವ ಇದ್ದವರು ಕಲಾವಿದರಾಗಿ ಉಳಿಯಲು ಸಾಧ್ಯವಿಲ್ಲ ಎಂದರು.

ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ. ಕುಂದರ್ ಭಾಗವತ, ಭಜಕ ಪ್ರಶಾಂತ್ ಪಡುಕರೆ ಇವರಿಗೆ ಕಡಲೂರ ಸನ್ಮಾನ ನೀಡಿ ಗೌರವಿಸಿದರು. ಸಾಲಿಗ್ರಾಮದ ಹೊಸಬದುಕು ಆಶ್ರಮಕ್ಕೆ ವಾಟರ್ ಫಿಲ್ಟರ್ ಅನ್ನು ಹಸ್ತಾಂತರಿಸಲಾಯಿತು. ಟೀಮ್ ಭವಾಬ್ಧಿ ಪ್ರಮುಖ ಶಿವಾನಂದ ಕುಂದರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಕುಂದಾಪುರ ಶ್ರೀ ಮಾತಾ ಆಸ್ಪತ್ರೆಯ ಆಡಳಿತ ವೈದ್ಯ ಡಾ.ಪ್ರಕಾಶ್ ಸಿ ತೋಳಾರ್, ಕೋಟ ಸಹಕಾರಿ ವ್ಯವಸಾಯಕ ಸಂಘದ ಉಪಾಧ್ಯಕ್ಷ ಎಚ್. ನಾಗರಾಜ್ ಹಂದೆ, ಕೋಟತಟ್ಟು ಪಂ. ಮಾಜಿ ಸದಸ್ಯ ಪ್ರಕಾಶ್ ಹಂದಟ್ಟು, ಮಣೂರು ಮೀನಗಾರರ ಪ್ರಾಥಮಿಕ ಸಂಘದ ಅಧ್ಯಕ್ಷ ರಾಮ ಬಂಗೇರ ಇದ್ದರು. ಟೀಮ್ ಭವಾಬ್ಧಿಯ ದೇವೇಂದ್ರ ಶ್ರೀಯಾನ್ ಸ್ವಾಗತಿಸಿ, ರವೀಂದ್ರ ತಿಂಗಳಾಯ ಸಂಯೋಜಿಸಿದರು. ಹನುಮಗಿರಿ ಮೇಳದ ಕಲಾವಿದರಿಂದ ವರ್ಣ ಪಲ್ಲಟ ಯಕ್ಷಗಾನ ಪ್ರದರ್ಶನಗೊಂಡಿತು.

ಕೃತಕ ಬುದ್ಧಿಮತ್ತೆಯಿಂದ ಉದ್ಯೋಗ ನಷ್ಟ ಭೀತಿಯಿದೆ: ಲೋಕೇಶ್ ಕಳವಳ



ಉಡುಪಿ: ಇಲ್ಲಿನ ಉಡುಪಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ನಗರದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕರಿಯರ್ ಮೇಳ ಆಯೋಜಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಲೋಕೇಶ್ ಸಿ. ಮಾತನಾಡಿ, ಕೃತಕ ಬುದ್ಧಿಮತ್ತೆಯ ಈ ಕಾಲಘಟ್ಟದಲ್ಲಿ ಉದ್ಯೋಗ ನಷ್ಟದ ಭೀತಿ ಎದುರಾಗಿದೆ. ವಿದ್ಯಾರ್ಥಿಗಳು ಯಾವುದೋ ಒಂದು ಕ್ಷೇತ್ರವನ್ನು ನೆಚ್ಚಿಕೊಳ್ಳದೆ ತಂತ್ರಜ್ಞಾನಾಧಾರಿತ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡಲ್ಲಿ ಭವಿಷ್ಯದಲ್ಲಿ ಒಳ್ಳೆಯದಾಗಲಿದೆ. ಐಟಿಐ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳಿದ್ದು ವಿದ್ಯಾರ್ಥಿಗಳು ಈ ಕ್ಷೇತ್ರಗಳತ್ತವೂ ಗಮನ ಹರಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ವಿಜಯಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲ ಅಶೋಕ್ ಕಾಮತ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹತ್ತನೇ ತರಗತಿ ಮತ್ತು ಪಿಯುಸಿ ಮುಗಿಸಿದ ವಿದ್ಯಾರ್ಥಿಗಳು ಉದ್ಯೋಗ ಆಧಾರಿತ ಕ್ಷೇತ್ರಗಳಲ್ಲಿ ತಮ್ಮ ಮುಂದಿನ ವಿದ್ಯಾಭ್ಯಾಸವನ್ನು ಕಂಡುಕೊಳ್ಳಲು ಸಹಾಯಕವಾಗುವ ನಿಟ್ಟಿನಲ್ಲಿ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕರಿಯರ್ ಮೇಳವನ್ನು ಆಯೋಜಿಸಲಾಗಿದೆ ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾರಾಯಣ ಸ್ವಾಮಿ, ಡಯಟ್ ಸದಸ್ಯ ಮನೋಜ್ ಕಡಬ ವಿದ್ಯಾಸಂಸ್ಥೆಗಳ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನ್ಯಾಸಕ ಡಾ. ಕಿಶೋರ್ ಕುಮಾರ್ ಶೆಟ್ಟಿ ನಿರೂಪಿಸಿ, ವಂದಿಸಿದರು.

ಜ್ಞಾನ ಸಂಪಾದನೆಯಿಂದ ವ್ಯಕ್ತಿತ್ವ ವಿಕಸನ: ದಿನೇಶ್ ಕೊಡವೂರು ಸಲಹೆ



ಕುಂದಾಪುರ: ಜೀವನದಲ್ಲಿ ಕಷ್ಟ ಅಂತ ಯಾವುದು ಇಲ್ಲ, ಅದು ನಾವು ನೋಡುವ ದೃಷ್ಟಿಕೋನದಲ್ಲಿದೆ. ಜ್ಞಾನ ಸಂಪಾದನೆಗೆ ಶ್ರಮಿಸಿದಷ್ಟು ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಉಜ್ವಲ ಭವಿಷ್ಯವನ್ನು ಹೊಂದಲು ನಾಂದಿ ಯಾಗುತ್ತದೆ ಎಂದು ಜ್ಞಾನಸುಧಾ ಸಂಸ್ಥೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ದಿನೇಶ್ ಎಂ. ಕೊಡವೂರು ಹೇಳಿದರು.

ಶ್ರೀ ವೆಂಕಟರಮಣ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ಜರಗಿದ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ದಲ್ಲಿ ಭಾಗವಹಿಸಿ, ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವೆಂಕಟರಮಣ ದೇವ್ ಎಜುಕೇಶನಲ್ ಕಲ್ಚರಲ್ ಟ್ರಸ್ಟ್‌ನ ಕಾರ್ಯದರ್ಶಿ ಕೆ. ರಾಧಾಕೃಷ್ಣ ಶೆಣೈ ಶುಭ ಹಾರೈಸಿದರು. ಕಾಲೇಜಿನ ಪ್ರಾಂಶುಪಾಲ ಸಂದೀಪ್ ಗಾಣಿಗ, ಉಪ ಪ್ರಾಂಶುಪಾಲ ಸುಜೇಯ್ ಕೋಟೆಗಾರ್, ಶ್ರೀ ವೆಂಕಟರಮಣ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ರೇಷ್ಮಾ ಡಿಸೋಜಾ, ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಪ್ರಮೀಳಾ ಡಿಸೋಜಾ, ಹಿರಿಯ ರಸಾಯನ ಶಾಸ್ತ್ರ ಉಪನ್ಯಾಸಕ ರಮಾಕಾಂತ್ ರೇವಣ್‌ಕರ್ ಇದ್ದರು.

ಈ ಸಂದರ್ಭ ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿದ ಕರಾಟೆ ಪಟು ವಿದ್ಯಾರ್ಥಿ ಅಕ್ಷಯ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಉಪನ್ಯಾಸಕರು ತಮ್ಮ ಹಿತನುಡಿಗಳ ಮೂಲಕ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ವಿದ್ಯಾರ್ಥಿನಿ ಆಯಿಷಾ ಅಕ್ಸಾ ಸ್ವಾಗತಿಸಿ, ಮಾನ್ಯ ವಂದಿಸಿದರು. ಸುರಕ್ಷಾ ಅತಿಥಿಯನ್ನು ಪರಿಚಯಿಸಿದರು. ಮಂಜುಶ್ರೀ ನಿರೂಪಿಸಿದರು.

ಹೇನ್‌ಬೇರುವಿನಲ್ಲಿ ಬೆನ್ನಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರದಲ್ಲಿ ಸವಲತ್ತು ವಿತರಿಸಿ ಗಂಟಿಹೊಳೆ ಮಾಹಿತಿ

ಅಪಘಾತದಿಂದ ವಿಕಲತೆಗೆ ತುತ್ತಾದವರ ಮನೆಗಳಿಗೆ ತೆರಳಿ ಖುದ್ದು ಪರಿಶೀಲನೆ

ಬೈಂದೂರು: ಅಪಘಾತ ಪ್ರಕರಣಗಳಲ್ಲಿ ದೇಹ ವೈಕಲ್ಯತೆಯಿಂದ ಹಾಸಿಗೆ ಹಿಡಿದು ಇನ್ನು ಜೀವನವೇ ಮುಗಿಯಿತು ಎಂಬ ನಿರಾಶಾ ಭಾವನೆ ಹೊಂದಿದವರಿಗೆ ಬದುಕುವ ಆಸೆ ಮೂಡಿಸುವ ಜತೆಗೆ ಅವರ ನೋವಿನಲ್ಲಿ ಭಾಗಿಯಾಗುವ ನಿಟ್ಟಿನಲ್ಲಿ ಪುನಶ್ಚೇತನ ಕೇಂದ್ರ ಆರಂಭಿಸಬೇಕೆಂಬ ಕನಸು ಈಗ ಸಾಕಾರಗೊಂಡಿದೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.

ಸಮೃದ್ಧ ಬೈಂದೂರು ಪರಿಕಲ್ಪನೆಯ ಸೇವಾಸೇತು ಯೋಜನೆಯಡಿಯಲ್ಲಿ ಸೇವಾಭಾರತಿ ಕನ್ಯಾಡಿ ಸಹಯೋಗದಲ್ಲಿ ಬೆಂಗಳೂರು ಎಪಿಡಿ ಸಂಸ್ಥೆಯ ಸಹಕಾರದೊಂದಿಗೆ ಬೈಂದೂರು ಹೇನ್‌ಬೇರುವಿನಲ್ಲಿ ಬೆನ್ನಹುರಿ ಅಪಘಾತಕ್ಕೊಳಗಾದವರ ಪುನರ್‌ಶ್ಚೇತನ ಕೇಂದ್ರದಲ್ಲಿ ಅರ್ಹ ಫಲಾನುಭವಿಗಳಿಗೆ ಗಾಲಿಕುರ್ಚಿ ವಿತರಿಸಿ, ಅವರು ಮಾತನಾಡಿದರು.

ಈಗಾಗಲೇ ಕ್ಷೇತ್ರದಲ್ಲಿ ಅಪಘಾತದಿಂದ ವೈಕಲ್ಯತೆ ಇರುವ ಸುಮಾರು ಜನರ ಪ್ರಸ್ತುತ ಸ್ಥಿತಿ–ಗತಿಗಳನ್ನು ಖುದ್ದಾಗಿ ಹೋಗಿ ಪರಿಶೀಲಿಸಲಾಗಿದೆ. ಇವರಿಗೂ ನ್ಯಾಯ ಕೊಡಿಸುವಲ್ಲಿ ಸಮಾಜವೂ ಕೂಡ ಜತೆಯಾಗಿ ನಿಲ್ಲುವ ಮೂಲಕ ಅವರ ಮುಖದಲ್ಲಿ ಭವಿಷ್ಯದ ಭರವಸೆಯ ಬೆಳಕು ಮೂಡಿಸಬೇಕು ಎಂದು ಹೇಳಿದರು.

ಬೆನ್ನುಹುರಿ ಅಪಘಾತಕ್ಕೊಳಗಾದವರನ್ನು ಗುರುತಿಸಿ, ದ್ವಿತೀಯ ಹಂತದ ತೊಡಕುಗಳನ್ನು ತಡೆಗಟ್ಟಿ, ಅಗತ್ಯ ವೈದ್ಯಕೀಯ ನೆರವನ್ನು ನೀಡಿ ದಿವ್ಯಾಂಗರಲ್ಲಿ ಹಾಗೂ ಅವರ ಕುಟುಂಬದವರಲ್ಲಿ ಆತ್ಮವಿಶ್ವಾಸವನ್ನು ತುಂಬಿಸುವುದು. ಸ್ವಾವಲಂಬಿ ಬದುಕಿಗೆ ಅಗತ್ಯವಾದ ವ್ಯಕ್ತಿ ಕೌಶಲಗಳನ್ನು ನೀಡಿ, ಚಲನಶೀಲತೆಯನ್ನು ಹೆಚ್ಚಿಸುವ ಮೂಲಕ ಸಮಾಜದೊಂದಿಗೆ ಪುನರ್ ಸಂಯೋಜನೆ ಮಾಡುವುದು ಹಾಗೂ ಹಾಗೂ ಜೀವನೋಪಾಯದ ಬೆಂಬಲದ ಮೂಲಕ ಆರೋಗ್ಯಕರ ಹಾಗೂ ಗೌರವಾನ್ವಿತ ಜೀವನವನ್ನು ನಡೆಸುವಂತೆ ಸಬಲೀಕರಣಗೊಳಿಸುವುದು ನಮ್ಮ ಮೊದಲ ಗುರಿಯಾಗಿದೆ ಎಂದು ಹೇಳಿದರು.

ಪ್ರಮುಖರಾದ ಚಂದ್ರಶೇಖರ್ ಶೆಟ್ಟಿ ಬೈಂದೂರು, ಶಹಾಜಿ ಜಡ್ಕಲ್, ಕುಂದಾಪುರದ ಗಿರೀಶ್ ಶೆಟ್ಟಿ ನಿತೀಶ್ ನಾಯ್ಕ್, ಬೆಳ್ತಂಗಡಿಯ ಬಾಲಚಂದ್ರ ಇವರಿಗೆ ಶಾಸಕರು ಗಾಲಿಕುರ್ಚಿಯನ್ನು ಹಸ್ತಾಂತರಿಸಿ ಶುಭಹಾರೈಸಿದರು. ಉದ್ಯಮಿ ಯು. ಪಾಂಡುರಂಗ ಪಡಿಯಾರ್, ಡಾ. ಕೆ. ಪಿ. ನಂಬಿಯಾರ್, ಗೋಪಾಲ ಪೂಜಾರಿ ವಸ್ತ್ರೆ, ಸುರೇಶ್ ಬಟ್ವಾಡಿ ಇದ್ದರು.



ಸೇವಾಧಾಮವು ಬೆಂಗಳೂರು ಎಪಿಡಿ ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು, ಅದರಂತೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು. ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದಂತೆ ವಿತರಣೆ ಮಾಡಲಾಗುತ್ತಿದೆ.

● ಗುರುರಾಜ ಗಂಟಿಹೊಳೆ